ಬೆಂಗಳೂರು ವಿಶ್ವವಿದ್ಯಾಲಯ
ಬೆಂಗಳೂರು

ಸಾಧನೆ

ಸಂಪುಟ 12
ಸಂಚಿಕೆ 1
ಜನವರಿ-ಮಾರ್ಚ್-1983

ಸಾಧನೆ

ಪ್ರಸಾರಾಂಗ
ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು

SADHANE: Kannada Quarterly of the Bangalore University, Bangalore
Vol. 12. No. 1, January-March 1983

ವಾರ್ಷಿಕ ಚಂದಾ : ರೂ. 8-00
ರೂ. 5-00 (ವಿದ್ಯಾರ್ಥಿಗಳಿಗೆ)

ಆಜೀವ ಸದಸ್ಯತ್ವ : ರೂ. 100-00

ಪ್ರಕಾಶಕರು : ಕೆ. ಸಿ. ಶಿವಪ್ಪ
ನಿರ್ದೇಶಕ (ಕಾರ್ಯನಿರ್ವಾಹಕ), ಪ್ರಸಾರಾಂಗ,
ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು 560 056

ಮುದ್ರಣ : ಬೆಂಗಳೂರು ವಿಶ್ವವಿದ್ಯಾಲಯ ಮುದ್ರಣಾಲಯ, ಬೆಂಗಳೂರು 560 056

ಪರಿವಿಡಿ

ಮಂಥನ

ಪ್ರಗತಿ

ಜಿ. ಎಸ್. ಶಿವರುದ್ರಪ್ಪ

ಎಲ್ಲಿಗೆ, ಇನ್ನೆಲ್ಲಿಗೆ
ಇಷ್ಟು ದಿವಸ ನಡೆದೂ ನಾವು
ಬಂದು ನಿಂದುದೆಲ್ಲಿಗೆ ?

ಗತವೈಭವದಿತಿಹಾಸದ
ನೆನಪ ತಳ್ಳಿ ಮೂಲೆಗೆ
ವಾಸ್ತವದಲಿ ಬೇರೂರುತ
ನಾವು ಬೆಳೆವುದೆಂದಿಗೆ ?

ಸಾಲು ಸಾಲು ಹಸಿದ ಹೊಟ್ಟೆ
ನಿರಕ್ಷರದ ನಾಲಗೆ,
ಸಮೃದ್ಧಿಯ ಹೆಗಲ ಮೇಲೆ
ಭಿಕ್ಷಾನ್ನದ ಜೋಳಿಗೆ,
ಇದೇ ನಮ್ಮ ಪ್ರಗತಿಯೆಂದು
ಭ್ರಮಿಸಬಹುದೆ ತಣ್ಣಗೆ ?

ಮುಂಗ್ಧರೆದೆಯ ಗದ್ದೆಗಳಲಿ
ಮತ-ಮೌಢ್ಯದ ಬೀಜವ,
ಸದಾ ಬಿತ್ತಿ ಬೆಳೆಯ ತೆಗೆವ
ಚಾಣಾಕ್ಷರ ವೈಭವ.
ಇವರ ನಡುವೆ ಪಠಿಸಬಹುದೆ
ಸರ್ವೋದಯ ಮಂತ್ರವ ?

ಜನಗಣಮನ ದೇಗುಲದಲಿ
ಮಾನವತೆಯ ಮೂರ್ತಿಗೆ
ಅಗ್ರ ಪೂಜೆ ಸಲ್ಲದಿರಲು
ಅರ್ಥವುಂಟೆ ಪ್ರಗತಿಗೆ ?

ದ.ಕ. ಜಿಲ್ಲೆಯಲ್ಲಿ ಉದ್ಯೋಗ ಸೃಷ್ಟಿಗಾಗಿ ಯೋಜನೆ ಮತ್ತು ಅವಕಾಶಗಳು

ಯಶವಂತ ಡೋಂಗ್ರೆ

ನಮ್ಮ ಅರ್ಥವ್ಯವಸ್ಥೆಯನ್ನು ಬಂಧಿಸಿರುವ ಹಲವಾರು ಸಮಸ್ಯೆಗಳಲ್ಲಿ ನಿರುದ್ಯೋಗ ಸಮಸ್ಯೆ ಅತ್ಯಂತ ಗಂಭೀರವಾದುದು. ಇಂತಹ ಸಮಸ್ಯೆಗೆ ಪ್ರಮುಖ ಕಾರಣವೆಂದರೆ ಆರ್ಥಿಕಾಭಿವೃದ್ಧಿಗಿಂತ ವೇಗವಾಗಿ ಬೆಳೆಯುತ್ತಿರುವ ಜನಸಾಂದ್ರತೆ. "ಉದ್ಯೋಗಂ ಪುರುಷ ಲಕ್ಷಣಂ" ಎಂಬುದೊಂದು ಹಳೆಯ ಉಕ್ತಿ. ಉದ್ಯೋಗಾರ್ಹತೆ ಇದ್ದೂ ಕೆಲಸವಿಲ್ಲದಿದ್ದರೆ ಅವಲಕ್ಷಣ ಸಹಜವೇ. ನಮ್ಮಲ್ಲಿಂದು ಕೇವಲ ಲಕ್ಷಣಕ್ಕಾಗಿಯೇ ಉದ್ಯೋಗ ಹಿಡಿದಿರುವ ಸ್ತ್ರೀ/ಪುರುಷರು ಬಹಳಷ್ಟಿದ್ದರೂ, ದೇಶದ ಉದ್ಯೋಗಾರ್ಹ ಜನಸಂಖ್ಯೆಯ ಸುಮಾರು ಶೇ. 30ರಷ್ಟು ಜನರಿಗೆ ಈ ಅವಲಕ್ಷಣದ ಜಾಡ್ಯ ಅಂಟಿದೆ. ಅಂತೆಯೇ ಅಭಿವೃದ್ಧಿ ಇಲ್ಲದೆ ಉದ್ಯೋಗವಿಲ್ಲ, ಉದ್ಯೋಗವಿಲ್ಲದೆ ಅಭಿವೃದ್ಧಿ ಸಾಧ್ಯವಿಲ್ಲ, ಎಂಬಂತಾಗಿರುವ ಇಂದಿನ ಪರಿಸ್ಥಿತಿಯಲ್ಲಿ, ಆರ್ಥಿಕಾಭಿವೃದ್ಧಿ ಯೋಜನೆ ಮತ್ತು ಉದ್ಯೋಗ ಸೃಜನೆಗಾಗಿ ಯೋಜನೆಗಳು ಜೊತೆ ಜೊತೆಯಲ್ಲೇ ಮುಂದುವರೆಯುವುದು ಅಗತ್ಯ.

ರಾಷ್ಟ್ರೀಯ ಹಾಗು ರಾಜ್ಯಮಟ್ಟದಲ್ಲಿ ನಿಗದಿತ ಯೋಜನೆಗಳಿಂದ ಉದ್ಯೋಗ ಸೃಜನೆಯ ಕಾರ್ಯ ಈಗಾಗಲೇ ನಡೆಯುತ್ತಿದೆ. ಈ ಕಾರ್ಯಕ್ಕಾಗಿಯೇ ಹಲವಾರು ಸಂಸ್ಥೆಗಳ ಶ್ರಮವೂ, ಹಲವಾರು ಕೋಟಿ ರೂಪಾಯಿಗಳೂ ವ್ಯಯವಾಗುತ್ತಿವೆ. ಆದರೂ ಜಿಲ್ಲೆಯನ್ನು ಆರ್ಥಿಕಾಭಿವೃದ್ಧಿ ಯೋಜನೆಯ ಘಟಕವನ್ನಾಗಿ ಆರಿಸಿ ಕೊಂಡಿರುವ ಹಿನ್ನೆಲೆಯಲ್ಲಿ, ಜಿಲ್ಲಾ ಮಟ್ಟದಲ್ಲೂ ಇಂತಹ ಯೋಜನೆಗಳು ಅನಿವಾರ್ಯವಾಗುತ್ತದೆ. ನಿರುದ್ಯೋಗ ಸಮಸ್ಯೆಗೆ ಪ್ರಾಥಮಿಕ ಹಂತಗಳಲ್ಲೇ ಪರಿಹಾರ ಕಂಡುಕೊಳ್ಳಲು, ಕೇಂದ್ರ ಮತ್ತು ರಾಜ್ಯಸರಕಾರಗಳು ಪ್ರತಿ ಜಿಲ್ಲೆಗೂ ಅನ್ವಯಿಸುವಂತೆ ಹಲವಾರು ವಿಶಿಷ್ಟ ಉದ್ಯೋಗ ಯೋಜನೆಗಳನ್ನು ರೂಪಿಸಿವೆ. ದ.ಕ. ಜಿಲ್ಲೆಯಲ್ಲಿನ ಇಂತಹ ಕೆಲವು ಪ್ರಮುಖ ಯೋಜನೆಗಳನ್ನು ವಿಶ್ಲೇಷಿಸುವುದು ಮತ್ತು ಉದ್ಯೋಗ ಸೃಜನೆಗೆ ಅವಕಾಶವಿರುವ ಕ್ಷೇತ್ರಗಳನ್ನು ಪರಿಚಯಿಸುವುದು ಇಲ್ಲಿಯ ಉದ್ದೇಶ.

ಒಂದು ಜಿಲ್ಲೆಯ ಔದ್ಯೋಗಿಕ ಬೆಳವಣಿಗೆ ಅಲ್ಲಿ ಲಭ್ಯವಿರುವ ನೈಸರ್ಗಿಕ ಸಂಪತ್ತು, ಜನಸಾಂದ್ರತೆ, ಶೈಕ್ಷಣಿಕ ವ್ಯವಸ್ಥೆ, ಜನರ ವೃತ್ತಿಮನೋಭಾವ ಮುಂತಾದ

ಹಲವಾರು ಅಂಶಗಳ ಮೇಲೆ ಅವಲಂಬಿತವಾಗುತ್ತದೆ. ಈ ಹಿನ್ನೆಲೆಯಲ್ಲಿ ಜಿಲ್ಲೆಯ ಪರಿಸ್ಥಿತಿಯನ್ನು ಅಧ್ಯಯನ ಮಾಡುವಾಗ ಮೂರು ಮುಖ್ಯ ಅಂಶಗಳನ್ನು ವಿವೇಚಿಸುವುದು ಅವಶ್ಯಕ. ಅವುಗಳೆಂದರೆ

(ಅ) ಜಿಲ್ಲೆಯಲ್ಲಿ ಉದ್ಯೋಗದ ವಿತರಣೆ ಮತ್ತು ನಿರುದ್ಯೋಗದ ಪ್ರಮಾಣ.

(ಆ) ಉದ್ಯೋಗ ಸೃಜನೆಗಾಗಿ ಈವರೆಗಿನ ಯೋಜನೆಗಳು ಮತ್ತು ಅವುಗಳ ಫಲಿತಾಂಶ ಹಾಗೂ

(ಇ) ಮುಂಬರುವ ವರ್ಷಗಳಲ್ಲಿ ಹೆಚ್ಚಿನ ಉದ್ಯೋಗ ಸೃಜನೆಗಿರುವ ಅವಕಾಶ.

ಜನಸಂಖ್ಯೆ ಮತ್ತು ಉದ್ಯೋಗ ವಿತರಣೆ

1981ರ ಜನಗಣತಿಯ ಪ್ರಕಾರ ದ.ಕ. ಜಿಲ್ಲೆಯ ಒಟ್ಟು ಜನಸಂಖ್ಯೆ 23,73,359. ಇದರಲ್ಲಿ 11,52,107 ಪುರುಷರೂ ಮತ್ತು 12,21,252 ಮಹಿಳೆಯರೂ ಸೇರಿದ್ದಾರೆ. ರಾಜ್ಯದ ಒಟ್ಟು ಜನಸಂಖ್ಯೆಯ ಸುಮಾರು ಶೇ. 7 ರಷ್ಟನ್ನು ಹೊಂದಿರುವ ಜಿಲ್ಲೆಯಲ್ಲಿ ಶೇ. 75ರಷ್ಟು ಜನ ಗ್ರಾಮಾಂತರ ಪ್ರದೇಶಗಳಲ್ಲಿ ವಾಸಿಸುತ್ತಿದ್ದಾರೆ. ಈ ಒಟ್ಟು ಜನಸಂಖ್ಯೆಯಲ್ಲಿ ಯಾವುದಾದರೊಂದು ಉದ್ಯೋಗ ದಲ್ಲಿರುವವರು ಸುಮಾರು ಶೇ. 40ರಷ್ಟು ಮಾತ್ರ.

ದೇಶದ ಬಹುತೇಕ ಎಲ್ಲ ರಾಜ್ಯ ಮತ್ತು ಜಿಲ್ಲೆಗಳಲ್ಲಿರುವಂತೆ, ದ.ಕ. ಜಿಲ್ಲೆಯಲ್ಲಿಯೂ, ಒಟ್ಟಾರೆ ಉದ್ಯೋಗನಿರತ ಜನಸಂಖ್ಯೆಯ ಬಹುಭಾಗ, ಅಂದರೆ ಸುಮಾರು ಶೇ. 54ರಷ್ಟು ಜನ ಕೃಷಿ ಮತ್ತು ಅದಕ್ಕೆ ಸಂಬಂಧಿಸಿದ ವೃತ್ತಿಯನ್ನವ ಲಂಬಿಸಿದ್ದಾರೆ. [1977-78ರ ಅಂಕಿ ಅಂಶಗಳ ಪ್ರಕಾರ ಜಿಲ್ಲೆಯ ಉದ್ಯೋಗ ವಿತರಣೆಯ ಮಾದರಿಯನ್ನು 'ಪಟ್ಟಿ 1'ರಲ್ಲಿ ಗಮನಿಸಬಹುದು.] ಕೃಷಿಯನ್ನುಳಿದಂತೆ, ಉತ್ಪಾದನೆ, ವಿತರಣೆ ಮತ್ತಿತರ ಸೇವಾ ಚಟುವಟಿಕೆಗಳು, ವ್ಯಾಪಾರೋದ್ಯಮ ಮತ್ತು ಪಶುಪಾಲನೆ, ಜಿಲ್ಲೆಯ ಪ್ರಮುಖ ಉದ್ಯೋಗಗಳಾಗಿರುವುದನ್ನು ಗಮನಿಸ ಬಹುದು. ಒಟ್ಟಾರೆ ಉದ್ಯೋಗನಿರತ ಜನಸಂಖ್ಯೆಯನ್ನು ಗಮನಿಸಿದಾಗ ಸುಮಾರು 34,000 ಜನ ಸರಕಾರೀ ವಲಯದಲ್ಲೂ, 33,000 ಜನ ಖಾಸಗೀ ವಲಯದಲ್ಲೂ ಉದ್ಯೋಗನಿರತರಾಗಿರುವುದು ಕಂಡುಬರುತ್ತದೆ. ಜಿಲ್ಲೆಯ ಒಟ್ಟು ಜನಸಂಖ್ಯೆಯಲ್ಲಿ ಹೆಂಗಸರ ಸಂಖ್ಯೆಯೇ ಅಧಿಕವಾಗಿದ್ದರೂ (1000 : 1060-1981ರ ಜನಗಣತಿಯ ಪ್ರಕಾರ ರಾಜ್ಯದಲ್ಲಿ ಕೇವಲ ದ.ಕ. ಜಿಲ್ಲೆಯಲ್ಲಿ ಮಾತ್ರ ಹೆಂಗಸರು ಅಧಿಕ ಸಂಖ್ಯೆ ಯಲ್ಲಿದ್ದಾರೆ) ಉದ್ಯೋಗನಿರತ ಜನಸಂಖ್ಯೆಯಲ್ಲಿ ಅವರ ಪ್ರಮಾಣ ಸುಮಾರು ಶೇ. 38ರಷ್ಟು ಮಾತ್ರ.

ಪಟ್ಟಿ 1

ದ.ಕ. ಜಿಲ್ಲೆಯಲ್ಲಿ ಉದ್ಯೋಗ ವಿತರಣೆಯ ಮಾದರಿ

ಕ್ರಮ ಸಂಖ್ಯೆ	ಕ್ಷೇತ್ರಗಳು	ಉದ್ಯೋಗನಿರತ ಜನಸಂಖ್ಯೆಯ ಶೇಕಡವಾರು
1.	ಕೃಷಿ	
	(ಅ) ಸಾಗುವಳಿದಾರರು	29.38
	(ಆ) ಕೃಷಿ ಕಾರ್ಮಿಕರು	24.78
2.	ಪಶುಪಾಲನೆ, ಅರಣ್ಯಸಂಪತ್ತು	4.70
3.	ಗಣಿ ಮತ್ತು ಸಂಬಂಧಿತ ಚಟುವಟಿಕೆ	0.28
4.	ಉತ್ಪಾದನೆ, ಪ್ರಕ್ರಿಯ ಘಟಕಗಳು, ದುರಸ್ತಿ ಮತ್ತಿತರ ಸೇವಾ ಚಟುವಟಿಕೆಗಳು	20.42
5.	ನಿರ್ಮಾಣ ಕಾರ್ಯಗಳು	1.80
6.	ವ್ಯಾಪಾರ ಮತ್ತು ವಾಣಿಜ್ಯ	7.55
7.	ಸಾರಿಗೆ ಮತ್ತು ಸಂಪರ್ಕ	2.77
8.	ಇತರ ಚಟುವಟಿಕೆಗಳು	8.32

ಮೂಲ: ಕರ್ನಾಟಕ ಸರಕಾರ–ದಕ್ಷಿಣ ಕನ್ನಡ ಜಿಲ್ಲಾ ಆರ್ಥಿಕ ಸಮೀಕ್ಷೆ, 1977-78.

ನಿರುದ್ಯೋಗದ ಪ್ರಮಾಣ

ಜಿಲ್ಲೆಯಲ್ಲಿ ಅಭಿವೃದ್ಧಿಪರ ಚಟುವಟಿಕೆಗಳು ಸಾಕಷ್ಟು ತೀವ್ರಗತಿಯಿಂದ ನಡೆಯುತ್ತಿದ್ದಾಗ್ಯೂ, ನಿರುದ್ಯೋಗಿಗಳ ಸಂಖ್ಯೆ ಗಮನಾರ್ಹವಾಗಿ ಏರಿದೆ. ಈ ನಿರುದ್ಯೋಗಿಗಳಲ್ಲಿ ಹೆಚ್ಚಿನವರು ಯುವಕರೂ, ವಿದ್ಯಾವಂತರೂ ಆಗಿದ್ದಾರೆಂಬುದು ಗಮನಿಸಬೇಕಾದ ಅಂಶ. ಜೊತೆಗೆ ವ್ಯವಸಾಯವೇ ಪ್ರಾಥಮಿಕ ವೃತ್ತಿಯಾದ್ದರಿಂದ ತಾತ್ಕಾಲಿಕ ನಿರುದ್ಯೋಗವೂ ಗಣನೀಯ ಪ್ರಮಾಣದಲ್ಲಿದೆ. ವಿವಿಧ ರೀತಿಯ ನಿರುದ್ಯೋಗಗಳಿಂದಾಗಿ, ನಿರುದ್ಯೋಗಿ ಜನತೆ ಜಿಲ್ಲೆಯ ವಿವಿಧ ಪ್ರದೇಶಗಳಲ್ಲಿ ಮತ್ತು ಜಿಲ್ಲೆಯ ಹೊರಗೆ ಹಂಚಿಹೋಗಿರುವುದರಿಂದಾಗಿ ಮತ್ತು ಅಂಕಿಅಂಶಗಳ ಅಭಾವದಿಂದಾಗಿ ಜಿಲ್ಲೆಯ ಒಟ್ಟು ನಿರುದ್ಯೋಗಿಗಳ ಸ್ಪಷ್ಟ ಚಿತ್ರಣವನ್ನು ಪಡೆಯುವುದು ಕಷ್ಟಸಾಧ್ಯ. ಆದರೂ ಉದ್ಯೋಗ ವಿನಿಮಯ ಕೇಂದ್ರದ ಅಂಕಿಅಂಶಗಳ ಆಧಾರದ ಮೇಲೆ ನಿರುದ್ಯೋಗದ ತೀವ್ರತೆಯ ಒಂದು ಮುಖದ ಪರಿಚಯ ಮಾಡಿಕೊಳ್ಳಬಹುದು.

1981ರ ಆಗಸ್ಟ್ ಕೊನೆಯ ವೇಳೆಗೆ 9443 ಮಹಿಳೆಯರೂ ಸೇರಿದಂತೆ 29,187 ಜನ ಉದ್ಯೋಗ ವಿನಿಮಯ ಕೇಂದ್ರದಲ್ಲಿ ತಮ್ಮ ಹೆಸರುಗಳನ್ನು ನೊಂದಾಯಿಸಿಕೊಂಡು, ಉದ್ಯೋಗಕ್ಕಾಗಿ ಕಾಯುತ್ತಿದ್ದರು. (ಉದ್ಯೋಗಕ್ಕಾಗಿ ಹೆಸರು ನೊಂದಾಯಿಸಿಕೊಂಡ ವಿವಿಧ ವರ್ಗದ ನಿರುದ್ಯೋಗಿಗಳ ಪರಿಚಯುವನ್ನು ಪಟ್ಟಿ 2ರ ರಿಂದ ಮಾಡಿಕೊಳ್ಳಬಹುದು) ಇದೇ ಅವಧಿಯಲ್ಲಿ ಕೇಂದ್ರದಿಂದ ಉದ್ಯೋಗ ದೊರಕಿಸಿಕೊಂಡವರ ಸಂಖ್ಯೆ 1747. ಉದ್ಯೋಗಾರ್ಥಿಗಳ ಬೇಜವಾಬ್ದಾರಿ, ಆಡಳಿತ ನ್ಯೂನತೆ, ಮತ್ತಿತರ ಕಾರಣಗಳಿಂದಾಗಿ ಈಗಾಗಲೇ ಕೆಲಸದಲ್ಲಿರುವವರ ಹೆಸರುಗಳೂ ನೊಂದಾಣಿ ಪಟ್ಟಿಯಲ್ಲಿ ಸೇರಿರಬಹುದು. ಹಾಗೆಯೇ ನಿರುದ್ಯೋಗಿಗಳಾಗಿದ್ದೂ ಹೆಸರು ನೊಂದಾಯಿಸದವರೂ ಅಧಿಕ ಸಂಖ್ಯೆಯಲ್ಲಿದ್ದಾರೆಂಬುದನ್ನು ಮರೆಯುವಂತಿಲ್ಲ. ಅಂತೆಯೇ ಈ ಅಂಕಿ ಅಂಶಗಳಿಂದ ವಿದ್ಯಾವಂತ ನಿರುದ್ಯೋಗಿಗಳ ಒಂದು ಭಾಗದ ಪರಿಚಯ ಮಾತ್ರವೇ ಆದಂತಾಗುತ್ತದೆ.

ಪಟ್ಟಿ 2

ಜಿಲ್ಲೆಯಲ್ಲಿ ನೊಂದಾಯಿಸಲ್ಪಟ್ಟ ನಿರುದ್ಯೋಗಿಗಳು ಮತ್ತು ಉದ್ಯೋಗ ವಿನಿಮಯ ಕೇಂದ್ರದ ಮೂಲಕ ಉದ್ಯೋಗ ಪಡೆದವರ, ವರ್ಗವಾರು ಸಂಖ್ಯೆ : 1981 ಆಗಸ್ಟ್ ಅಂತ್ಯಕ್ಕೆ.

ಕ್ರಮ ಸಂಖ್ಯೆ	ವರ್ಗ ವಿಂಗಡಣೆ	ನಿರುದ್ಯೋಗಿಗಳು	ಉದ್ಯೋಗ 1-4-80 ರಿಂದ 31-8-81 ವರಗೆ
1	ನೊಂದಣಿ ಪಟ್ಟಿಯಲ್ಲಿನ ಒಟ್ಟು ಸಂಖ್ಯೆ	29,187	1747
2	ಮಹಿಳೆಯರು	9,443	354
3	ಪರಿಶಿಷ್ಟ ಜಾತಿ	1,433	393
4	ಪರಿಶಿಷ್ಟ ಬುಡಕಟ್ಟು	695	163
5	ಅಂಗವಿಕಲರು	192	30
6	ಮಾಜಿ ಯೋಧರು	142	52

ಮೂಲ: ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರ–ಮಂಗಳೂರು (ದ.ಕ.)

ಯೋಜನೆಗಳು–ಫಲಿತಾಂಶ

ರಾಜ್ಯದ ನಿರುದ್ಯೋಗಿಗಳಿಗೆ ಔದ್ಯೋಗಿಕ ಅವಕಾಶಗಳನ್ನು ಒದಗಿಸುವುದು ಕರ್ನಾಟಕ ಸರಕಾರದ ಕಾರ್ಯನೀತಿಯ ಪ್ರಾಥಮಿಕ ಗುರಿಗಳಲ್ಲೊಂದು. 1981–82ನೇ ಸಾಲಿನಲ್ಲಿ ಗ್ರಾಮೀಣ ಉದ್ಯೋಗ ಸೃಜನೆಗಾಗಿ 12 ಕೋಟಿ ರೂಗಳನ್ನು ವೆಚ್ಚ ಮಾಡಲು ಸರಕಾರ ಉದ್ದೇಶಿಸಿದೆ. ಜೊತೆಯಲ್ಲೇ ಹಲವಾರು ವಿಶಿಷ್ಟ ಯೋಜನೆಗಳೂ ಕಾರ್ಯಾರಂಭ ಮಾಡಿವೆ. ದ.ಕ. ಜಿಲ್ಲೆಯಲ್ಲಿಯೂ ಈ ಕಾರ್ಯಕ್ರಮಗಳು ಅನುಷ್ಠಾನದಲ್ಲಿದ್ದು ಹೆಚ್ಚಿನ ಔದ್ಯೋಗೀಕರಣ ಸಾಧ್ಯವಾಗಿದೆ. ವ್ಯವಸಾಯ, ಪಶುಪಾಲನೆ, ರೇಷ್ಮೆ ಸಾಕಣೆ, ಸಣ್ಣ ಕೈಗಾರಿಕೆ, ವ್ಯಾಪಾರಾಭಿವೃದ್ಧಿ ಮೊದಲಾದ ಕ್ಷೇತ್ರಗಳಿಗೆ ನಿಗದಿತ ಧನಸಹಾಯವನ್ನೊದಗಿಸುತ್ತಾ ಬಂದಿರುವುದರಿಂದ ಜಿಲ್ಲೆಯಲ್ಲಿ ಸ್ವಂತ ಉದ್ಯೋಗ ಹುಡುಕಿಕೊಳ್ಳುವವರ ಪ್ರಮಾಣ ಹೆಚ್ಚಿದೆ. ಈ ದಿಶೆಯಲ್ಲಿ ಉದ್ಯೋಗವಿನಿಮಯ ಕೇಂದ್ರ, ಜಿಲ್ಲಾ ಕೈಗಾರಿಕಾ ಕೇಂದ್ರ, ಕರ್ನಾಟಕ ರಾಜ್ಯ ಹಣಕಾಸು ನಿಗಮ, ಸಣ್ಣಕೈಗಾರಿಕಾ ಅಭಿವೃದ್ಧಿ ನಿಗಮ ಮುಂತಾದುವುಗಳು ಜಿಲ್ಲೆಯ ಯುವಕರನ್ನು ಉತ್ತೇಜಿಸುವ ವಿಶಿಷ್ಟ ಯೋಜನೆಗಳನ್ನು ಹೊಂದಿವೆ. ಪಶುಪಾಲನೆ, ಸಣ್ಣಕೈಗಾರಿಕೆ ಮುಂತಾದ ಚಟುವಟಿಕೆಗಳಲ್ಲಿ ತೊಡಗಬಯಸುವ ನಿರುದ್ಯೋಗಿ ಪದವೀಧರರಿಗೆ ಶೇ. 90 ರಷ್ಟು ಸಾಲ ಸೌಲಭ್ಯ ನೀಡುವ ಯೋಜನೆಗಳೂ ಕಾರ್ಯಗತವಾಗುತ್ತಿವೆ.

ಲೀಡ್ ಬ್ಯಾಂಕ್ [Lead Bank] ಯೋಜನೆಯನ್ವಯ ಜಿಲ್ಲೆಯ ಆರ್ಥಿಕ ಬೆಳವಣಿಗೆಯ ಜವಾಬ್ದಾರಿ ಹೊತ್ತಿರುವ ಸಿಂಡಿಕೇಟ್ ಬ್ಯಾಂಕ್, ಜಿಲ್ಲಾ ಉದ್ದರಿ ಯೋಜನೆ (District credit plan) ಯಡಿಯಲ್ಲಿ, ಆರ್ಥಿಕಾಭಿವೃದ್ಧಿ ಮತ್ತು ಉದ್ಯೋಗ ಸೃಜನೆಗೆ ಸಹಾಯವಾಗುವ ಹಲವಾರು ಕಾರ್ಯಕ್ರಮಗಳನ್ನು ಹಾಕಿಕೊಂಡಿದೆ. 1980–82ರ ಯೋಜನೆಯಲ್ಲಿ ಬೆಳವಣಿಗೆಯ ವಿವಿಧ ವಿಭಾಗಗಳಿಗೆ ಒದಗಿಸಬಹುದಾದ ಧನಸಹಾಯಕ್ಕಾಗಿ ಯೋಜನೆ ಸಿದ್ಧವಾಗಿದೆ (ಪಟ್ಟಿ 3). ಈ ಎಲ್ಲ ಯೋಜನೆಗಳು ಕಾರ್ಯಾಚರಣೆಯಲ್ಲಿ ಉದ್ದೇಶಿತ ಫಲ ನೀಡಿದರೆ ಜಿಲ್ಲೆಯ ನಿರುದ್ಯೋಗ ಸಮಸ್ಯೆಗೆ ಸೂಕ್ತ ಉತ್ತರವೊಂದು ದೊರೆತೀತು.

ಪಟ್ಟಿ 3

1980–82ರ ಜಿಲ್ಲಾ ಉದ್ಧರಿ ಯೋಜನೆಯನ್ವಯ ವಿವಿಧ ವಿಭಾಗಕ್ಕೆ ನಿಗದಿಪಡಿಸಿರುವ ಸಾಲ ಸೌಲಭ್ಯ (ಕೋಟಿ ರೂ. ಗಳಲ್ಲಿ)

ಕ್ರಮ ಸಂಖ್ಯೆ	ವಿಭಾಗ	ಉದ ರಿ ಯೋಜನೆ 1980–82	ಉದ್ಧರಿ ಯೋಜನೆ 1980
1	ಕೃಷಿ ಮತ್ತು ಸಂಬಂಧಿತ ಚಟುವಟಿಕೆಗಳು		
	ಅ) ಬೆಳೆ ಸಾಲ	27.95	19.33
	ಆ) ತೋಟಗಾರಿಕೆ ಅಭಿವೃದ್ಧಿ	1.98	0.66
	ಇ) ನೀರಾವರಿ	2.55	0.85
	ಈ) ಉಪಕರಣಗಳು	4.16	1.33
	ಉ) ಭೂ ಮತ್ತು ಅರಣ್ಯಾಭಿವೃದ್ಧಿ	3.28	1.05
	ಊ) ದಾಸ್ತಾನು	0.30	0.12
	ಋ) ಸಗಣಿ ಅನಿಲ ಯಂತ್ರ	0.50	0.18
	ೠ) ಪಶು ಸಂಗೋಪನೆ	1.16	0.41
	ಎ) ಕೋಳಿ ಸಾಕಣೆ	0.25	0.09
	ಏ) ಹಂದಿ ಸಾಕಣೆ	0.24	0.09
	ಐ) ಮೀನುಗಾರಿಕೆ ಅಭಿವೃದ್ಧಿ	4.56	1.60
	ಒ) ರೇಷ್ಮೆ ಸಾಕಣೆ	0.05	0.002
2	ಸಣ್ಣ ಕೈಗಾರಿಕಾವಲಯ		
	ಅ) ಗ್ರಾಮೀಣ ಮತ್ತು ಗುಡಿ ಕೈಗಾರಿಕೆ	1.48	0.83
	ಆ) ಸಣ್ಣ ಕೈಗಾರಿಕಾ ಘಟಕಗಳು	22.38	19.00
3	ತೃತೀಯ ವಲಯ		
	ಅ) ಸಾರಿಗೆ ಸಂಚಾಲಕರು	8.59	1.93
	ಆ) ಚಿಲ್ಲರೆ ವ್ಯಾಪಾರ ಮತ್ತು ಸಣ್ಣ ವ್ಯವಹಾರಗಳು	6.59	2.13
	ಇ) ಕಸುಬುದಾರರು ಮತ್ತು ಸ್ವಂತ ಉದ್ದಿಮೆದಾರರು	2.96	0.83
	ಈ) ಇತರೆ (ವಿದ್ಯಾಭ್ಯಾಸ, ಗೃಹನಿರ್ಮಾಣ, ಅಂತ್ಯೋದಯ, 20 ಅಂಶದ ಕಾರ್ಯಕ್ರಮಗಳು ಇತ್ಯಾದಿ)	4.71	1.48
	ಒಟ್ಟು	93.69	51.96

ಮೂಲ : ಜಿಲ್ಲಾ ಉದ್ಧರಿ ಯೋಜನೆ (ದ. ಕ. ಜಿಲ್ಲೆ) 1980–82 ಮತ್ತು ವಾರ್ಷಿಕ ಕ್ರಿಯಾ ಯೋಜನೆ 1980

ಸಿಂಡಿಕೇಟ್ ಬ್ಯಾಂಕ್

ರಾಜ್ಯ ಸರಕಾರದ ದಿಟ್ಟಹೆಜ್ಜೆಯೆಂಬಂತೆ ಪ್ರಾರಂಭವಾದ ಪದವೀಧರ ನಿರುದ್ಯೋಗಿಗಳ ಸ್ಟೈಫಂಡರಿ ಯೋಜನೆಯು ಜಿಲ್ಲೆಯಲ್ಲಿ ಸಾಕಷ್ಟು ಉದ್ಯೋಗಾವಕಾಶಗಳನ್ನು ಒದಗಿಸಿವೆ. 1980ರ ಕೊನೆಯ ವೇಳೆಗೆ ಈ ಯೋಜನೆಯನ್ವಯ, ಜಿಲ್ಲೆಯ 428 ಜನರಿಗೆ ಉದ್ಯೋಗ ಲಭಿಸಿದೆ. ಹಾಗೆಯೇ ಉದ್ಯೋಗ ದೃಢೀಕರಣ ಯೋಜನೆಯ ಲಾಭ ಪಡೆದ ಜಿಲ್ಲೆಯ ನಿರುದ್ಯೋಗಿಗಳ ಸಂಖ್ಯೆ 11,176. ಗ್ರಾಮೀಣ ಅಭಿವೃದ್ಧಿಗಾಗಿ ರಚಿತವಾದ ಸಣ್ಣ ಹಿಡುವಳಿದಾರರ ಅಭಿವೃದ್ಧಿ ನಿಯೋಗ, ಸಮಗ್ರ ಗ್ರಾಮಾಭಿವೃದ್ಧಿ ಯೋಜನೆ, ಚಿಕ್ಕ ರೈತರ ಅಭಿವೃದ್ಧಿ ಕಾರ್ಯಕ್ರಮ ಮುಂತಾದುವುಗಳು ಆರ್ಥಿಕಾಭಿವೃದ್ಧಿಯ ಜೊತೆಗೆ ಉದ್ಯೋಗಾವಕಾಶಗಳನ್ನೂ ಒದಗಿಸಿವೆ. 1980ರ ಮಾರ್ಚಿ ಅಂತ್ಯದ ವೇಳೆಗೆ ಜಿಲ್ಲೆಯ 14,371 ಜನ ಈ ಎಲ್ಲ ಕಾರ್ಯಕ್ರಮಗಳ ಪ್ರಯೋಜನ ಪಡೆದಿದ್ದಾರೆ. ಜಿಲ್ಲಾಭಿವೃದ್ಧಿಗಾಗಿ ಪ್ರಾರಂಭಿಸಲಾದ ಸಮಗ್ರ ಜಿಲ್ಲಾಭಿವೃದ್ಧಿ ಕಾರ್ಯಕ್ರಮದಲ್ಲೂ ಉದ್ಯೋಗ ಸೃಜನೆಗಾಗಿ ಹಲವಾರು ಚಟುವಟಿಕೆಗಳನ್ನು ರೂಢಿಸಲಾಗಿದೆ. 1971ರ ಏಪ್ರಿಲ್‌ನಲ್ಲಿ ಪ್ರಾರಂಭವಾದ Crash Scheme for Rural Employment ಯೋಜನೆಯನ್ವಯ 1973-74ರ ವರೆಗೆ ಒಂದು ಸಾವಿರಕ್ಕೂ ಮಿಕ್ಕಿ ಉದ್ಯೋಗಗಳನ್ನು ಕಲ್ಪಿಸಿದ್ದು ಈಗ ಇಂತಹುದೇ ಯೋಜನೆಯನ್ನು ಹೊಂದಿರುವ ರಾಜ್ಯವಲಯವು 1983–84ರ ವೇಳೆಗೆ ಇನ್ನೂ 6500 ಜನರಿಗೆ ಉದ್ಯೋಗ ಕಲ್ಪಿಸಲು ಉದ್ದೇಶಿಸಿದೆ.

ಉದ್ಯೋಗಾವಕಾಶಕ್ಕೆ ಪರಿಪಕ್ವ ಕ್ಷೇತ್ರಗಳು

ಈ ಹಿಂದೆ ಹೇಳಿದ ವಿವಿಧ ಯೋಜನೆಗಳಿಂದಾಗಿ ಹೊಸಹೊಸ ಉದ್ಯೋಗಾವಕಾಶಗಳು ಹುಟ್ಟಿಕೊಳ್ಳುತ್ತಿದ್ದಾಗ್ಯೂ, ನಿರುದ್ಯೋಗಿಗಳ ಅದರಲ್ಲೂ ವಿದ್ಯಾವಂತ ನಿರುದ್ಯೋಗಿಗಳ ಸಂಖ್ಯೆಯಲ್ಲಿ ಗಮನಾರ್ಹ ಹೆಚ್ಚಳ ಕಂಡು ಬಂದಿದೆ. ಇದಕ್ಕೆ ಪ್ರಮುಖ ಕಾರಣವೆಂದರೆ ಎಲ್ಲಾ ಯೋಜನೆಗಳೂ ಸಾಮಾನ್ಯ ಜನತೆಯನ್ನು ಮುಟ್ಟದಿರುವುದು ಮತ್ತು ನಿರುದ್ಯೋಗಿ ಜನತೆಗೆ ಹೆಚ್ಚಿನ ಉದ್ಯೋಗಾವಕಾಶಗಳು ಲಭ್ಯವಿರುವ ಕ್ಷೇತ್ರಗಳ ಪೂರ್ಣ ಪರಿಚಯ ಇಲ್ಲದಿರುವುದು. ಆದ್ದರಿಂದ ಜಿಲ್ಲೆಯಲ್ಲಿ ಹೆಚ್ಚಿನ ಉದ್ಯೋಗ ಅರಸಬಹುದಾದ ಕ್ಷೇತ್ರಗಳ ಪರಿಚಯ ಮಾಡಿಕೊಳ್ಳುವುದು ಸೂಕ್ತ.

(1) ಕೃಷಿ ಮತ್ತು ಸಂಬಂಧಿಸಿದ ಚಟುವಟಿಕೆಗಳು

ಮುಂದಿನ ಹಲವಾರು ವರ್ಷಗಳವರೆಗೂ ಜಿಲ್ಲೆಯಲ್ಲಿ ಹೆಚ್ಚಿನ ಉದ್ಯೋಗ ಸೃಜನೆಗೆ ಅವಕಾಶವಿರುವ ಕ್ಷೇತ್ರವೆಂದರೆ ವ್ಯವಸಾಯ. ಈಗಾಗಲೇ ಶೇ 50ಕ್ಕಿಂತ ಹೆಚ್ಚು ಜನ ಕೃಷಿಯನ್ನೇ ಅವಲಂಬಿಸಿದ್ದರೂ, ಅಗತ್ಯಕ್ಕಿಂತ ಹೆಚ್ಚು ಜನ ಈ ರಂಗದಲ್ಲಿದ್ದಾರೆಂಬ ಕಲ್ಪನೆ ತಪ್ಪು. ಜಿಲ್ಲೆಯ ಒಟ್ಟು ಭೂವಿಸ್ತೀರ್ಣದಲ್ಲಿ ಈಗ ಸಾಗುವಳಿಯಾಗುತ್ತಿರುವುದು ಶೇ. 21.40 ಯಷ್ಟು (1,88,026 ಹೆಕ್ಟೇರ್) ಮಾತ್ರ. ರಾಜ್ಯದಲ್ಲೇ ಅಧಿಕ ಫಲವತ್ತತೆಯನ್ನು ಹೊಂದಿರುವ ಜಿಲ್ಲೆಯ ವ್ಯವಸಾಯ ಯೋಗ್ಯ ಭೂಮಿಯಲ್ಲಿ, ಸುಮಾರು ಶೇ 5.70 ಯಷ್ಟು (47.485 ಹೆಕ್ಟೇರುಗಳು) ಭೂಮಿ ಪಾಳು ಬಿಡಲ್ಪಟ್ಟಿತ್ತು (ಅಂಕಿಅಂಶ–1978–79).

ಅವಕಾಶವಿದ್ದೂ ಅಧಿಕ ಉತ್ಪಾದನೆ ಮತ್ತು ಉದ್ಯೋಗಾವಕಾಶಗಳನ್ನು ಒದಗಿಸಲು ಸಾಧ್ಯವಾಗದಿರುವುದಕ್ಕೆ, ಕೃಷಿಯ ಮೇಲೆ ಅಧಿಕ ಅವಲಂಬನೆಯೇ ಕಾರಣವೆಂಬುದು ಸಾಮಾನ್ಯ ತಿಳುವಳಿಕೆ. ಆದರೆ ಇದಕ್ಕಿಂತ ನೈಜವಾದ ಕಾರಣಗಳು ಬೇರೆಯೇ ಇವೆ. ಜಿಲ್ಲೆಯಲ್ಲಿ ಅಗತ್ಯ ನೀರಾವರಿ ಸೌಲಭ್ಯವಿಲ್ಲದಿರುವುದು, ಕೃಷಿ ಲಾಭದಾಯಕ ಉದ್ಯಮವಲ್ಲವೆಂಬ ತಿಳುವಳಿಕೆ ಬೆಳೆಯುತ್ತಿರುವುದು, ವಿದ್ಯಾವಂತ ತರುಣರು ಕೃಷಿಯ ಮೇಲಿನ ಆಸಕ್ತಿ ಕಳೆದುಕೊಳ್ಳುತ್ತಿರುವುದು, ಭೂ ನ್ಯಾಯ ನೀತಿಯಿಂದಾಗಿ ಚಿಕ್ಕಚಿಕ್ಕ ಭೂಮಿಯ ಒಡೆತನ ಹೊಂದಿದ ರೈತರನೇಕರು ಸಾಗುವಳಿ ಮಾಡಲಾರದೆ ನೆಲವನ್ನು ಬೀಳು ಬಿಡುತ್ತಿರುವುದು, ಕೃಷಿಯ ಭೂಮಿಯನ್ನು ವ್ಯವಸಾಯೇತರ ಚಟುವಟಿಕೆಗಳಿಗೆ ಉಪಯೋಗಿಸುತ್ತಿರುವುದು ಹೀಗೆ ಹಲವಾರು ಕಾರಣಗಳು ಕೃಷಿ ಕ್ಷೇತ್ರವನ್ನು ಬಡವಾಗಿಸಿವೆ.

ಆದರೂ ಈಚಿನ ದಿನಗಳಲ್ಲಿ ಕೃಷಿ ಕ್ಷೇತ್ರದಲ್ಲಿ ಸಾಕಷ್ಟು ಹಿತಕರ ಬೆಳವಣಿಗೆಗಳನ್ನು ಕಾಣಬಹುದು. ಸಣ್ಣ ರೈತರ ಅಭಿವೃದ್ಧಿ ಯೋಜನೆ, ಸಮಗ್ರ ಗ್ರಾಮಾಭಿವೃದ್ಧಿ ಯೋಜನೆ ಮುಂತಾದುವುಗಳಿಂದಾಗಿ ಹೆಚ್ಚಿನ ಜನ ಕೃಷಿಯತ್ತ ಆಸಕ್ತಿ ವಹಿಸುವಂತಾಗಿದೆ. ಜೊತೆಗೆ ಭೂನ್ಯಾಯ ನೀತಿಯ ಕೊಡುಗೆಯಾಗಿ ಬಹಳಷ್ಟು ರೈತ ಕುಟುಂಬಗಳಿಗೆ ಭೂಮಿಯ ಒಡೆತನ ಸಿಕ್ಕಿದೆ. ಇವಕ್ಕೆಲ್ಲ ಪೂರಕವೆಂಬಂತೆ ಜಿಲ್ಲೆಯಲ್ಲಿ ವಾಣಿಜ್ಯ ಬೆಳೆಗಳ ಕಡೆ ಒಲವು ಹೆಚ್ಚುತ್ತಿದೆ. ಕಬ್ಬು, ಅಡಿಕೆ, ತೆಂಗು, ರಬ್ಬರ್, ಗೇರುಬೀಜ ಮುಂತಾದ ಬೆಳೆಗಳು ವರ್ಷಂಪ್ರತಿ ವೃದ್ಧಿಯಾಗುತ್ತಿರುವುದನ್ನು ಗಮನಿಸಬಹುದು. ಇವೆಲ್ಲ ವ್ಯವಸಾಯ ಕ್ಷೇತ್ರದಲ್ಲಿ ಹೆಚ್ಚಿನ ಉದ್ಯೋಗಾವಕಾಶಗಳಿರುವುದಕ್ಕೆ ಸೂಚನೆಗಳು. ಮುಂಬರುವ ವರ್ಷಗಳಲ್ಲಿ ರೈತನ ಉತ್ಪಾದನೆಗಳಿಗೆ ನಿಗದಿತ ವಾಣಿಜ್ಯಬೆಲೆ ಬರುವ ನಿರೀಕ್ಷೆಯಿರುವುದರಿಂದ, ಈ ಕ್ಷೇತ್ರ ಹೆಚ್ಚಿನ ಆಕರ್ಷಣೆ ಪಡೆಯುತ್ತದೆ. ಒಟ್ಟಿನಲ್ಲಿ ಹೇಳುವುದಾದರೆ, ಲಭ್ಯವಿರುವ ಅವಕಾಶಗಳ

ಪೂರ್ಣಪ್ರಮಾಣದ ಉಪಯೋಗ ಪಡೆಯುವಂತಹ ಯೋಜನೆಗಳು ಕಾರ್ಯಗತ ವಾಗುವುದಾದರೆ ಮುಂಬರುವ ಕೆಲವು ವರ್ಷಗಳಲ್ಲಿ ವ್ಯವಸಾಯಕ್ಷೇತ್ರ ಜಿಲ್ಲೆಯ ಕನಿಷ್ಟ 3–4 ಸಾವಿರ ಮಂದಿಗಾದರೂ ಉದ್ಯೋಗ ಕಲ್ಪಿಸೀತು.

ಕೃಷಿಗೆ ಪೂರಕವಾಗಿರುವ ಇನ್ನೊಂದು ಕ್ಷೇತ್ರವೆಂದರೆ ತೋಟಗಾರಿಕೆ. ವಿಪುಲ ಅವಕಾಶಗಳಿದ್ದೂ, ಜಿಲ್ಲೆಯಲ್ಲಿ ಈ ಕ್ಷೇತ್ರ ಅಪೇಕ್ಷಿತ ಆದ್ಯತೆ ಪಡೆದಿಲ್ಲ. ಕೃಷಿಗೆ ಪೂರ್ಣಯೋಗ್ಯವಲ್ಲದ ಭೂಮಿ, ತೋಟಗಾರಿಕಾ ಉತ್ಪನ್ನಗಳಿಗೆ ಯೋಗ್ಯವಾಗು ತ್ತದೆ. ಇಂತಹ ಭೂಮಿಯ ಜೊತೆಗೆ ಉತ್ತಮ ಹವಾಗುಣ ಮತ್ತು ಮಳೆಯೂ ಜಿಲ್ಲೆಯಲ್ಲಿ ಲಭ್ಯವಿದೆ. ಮಾರುಕಟ್ಟೆಯಲ್ಲಿ ಲಭ್ಯವಿರುವ ಹಣ್ಣು ತರಕಾರಿಗಳ ಹೆಚ್ಚಿನ ಭಾಗ ಇತರ ಜಿಲ್ಲೆಗಳಿಂದ ಆಮದಾಗುತ್ತಿರುವುದು ವಿಷಾದನೀಯವಷ್ಟೇ ಅಲ್ಲ, ಹೆಚ್ಚಿನ ಬೆಲೆಗೂ ಕಾರಣವಾಗಿದೆ. ತೋಟಗಾರಿಕೆ ಬೆಳೆಗೆ ಅಗತ್ಯ ಗಮನವೀಯುವು ದಾದರೆ ಜಿಲ್ಲೆಯು ಹಣ್ಣು, ತರಕಾರಿಗಳಲ್ಲಿ ಸ್ವಾವಲಂಬನೆ ಸಾಧಿಸಲೂ ಸಾಧ್ಯವಾ ದೀತು. ಜೊತೆಗೆ ಹೆಚ್ಚಿನ ಉದ್ಯೋಗಾವಕಾಶಗಳೂ ಸಹಜವಾಗಿಯೇ ಲಭ್ಯ ವಾಗುತ್ತವೆ.

ಮಾವು, ಬಾಳೆ, ಸಪೋಟ, ಪಪ್ಪಾಯಿ, ಅನಾನಸ್, ಹಲಸು ಮುಂತಾದ ಹಣ್ಣುಗಳಿಗೂ ಮರಗೆಣಸು, ಬದನೆ, ಬೆಂಡೆ, ಗೆಣಸು, ಕುಂಬಳ, ಬಟಾಣಿ, ತೊಂಡೆ ಮುಂತಾದ ತರಕಾರಿ ಬೆಳೆಗಳಿಗೂ ಜಿಲ್ಲೆ ಪ್ರಶಸ್ತ ಕ್ಷೇತ್ರವಾಗಿದೆ. ಆದರೂ ತೋಟ ಗಾರಿಕೆ ಅಭಿವೃದ್ಧಿಗೆ ಸಂಬಂಧಿಸಿದಂತೆ ಜಿಲ್ಲೆಯಲ್ಲಿರುವುದು 14 ಫಾರಂಗಳು ಮತ್ತು 8 ನರ್ಸರಿಗಳು ಮಾತ್ರ. ಇದು ತೋಟಗಾರಿಕೆಯತ್ತ ಜಿಲ್ಲೆಯ ಉದ್ಯಮಶೀಲ ಜನತೆ ತಳೆದಿರುವ ತಟಸ್ಥ ಧೋರಣೆಯ ಧ್ಯೋತಕ. ಜಿಲ್ಲಾ ತೋಟಗಾರಿಕಾ ಇಲಾಖೆಯು ಇತ್ತೀಚಿನ ದಿನಗಳಲ್ಲಿ ಈ ಕ್ಷೇತ್ರದತ್ತ ಹೆಚ್ಚಿನ ಒಲವು ತೋರಿಸುತ್ತಿದ್ದು 6ನೇ ಪಂಚವಾರ್ಷಿಕ ಯೋಜನೆಯಲ್ಲಿಯೂ ಈ ಕ್ಷೇತ್ರದ ಬೆಳವಣಿಗೆಗೆ ವಿಶೇಷ ಆದ್ಯತೆ ನೀಡಲಾಗಿದೆ. ಕೇವಲ ಗುಲಾಬಿ, ಮಲ್ಲಿಗೆ ಮುಂತಾದ ಹೂಗಿಡಗಳ ಮತ್ತು ಕ್ರೋಟನ್, ಬೋಗನ್‌ವಿಲ್ಲಾ ಮುಂತಾದ ಅಲಂಕಾರಿಕ ಗಿಡಗಳ ಸಾಧಾರಣ ನರ್ಸರಿ ಗಳಿಂದ ತಿಂಗಳೊಂದಕ್ಕೆ ರೂ. 6001 ಹೆಚ್ಚು ವರಮಾನವಿದೆಯೆಂದರೆ, ಈ ಕ್ಷೇತ್ರದ ಪ್ರಾಮುಖ್ಯತೆಯು ಅರಿವಾದೀತು. ಅಂತೆಯೇ ಜಿಲ್ಲೆಯ ಅಶಿಕ್ಷಿತ ನಿರುದ್ಯೋಗಿಗಳಿಗೆ ತೋಟಗಾರಿಕೆ ಬಹಳಷ್ಟು ಉದ್ಯೋಗಾವಕಾಶಗಳನ್ನು ಒದಗಿಸ ಬಹುದಲ್ಲದೆ, ತಾತ್ಕಾಲಿಕ ನಿರುದ್ಯೋಗದ ತೊಂದರೆ ಇರುವವರಿಗೆ ಉತ್ತಮ ಪೂರಕ ಉದ್ದಿಮೆಯಾಗಬಲ್ಲದು.

ಜಿಲ್ಲೆಯಲ್ಲಿ ಹೆಚ್ಚಿನ ಉದ್ಯೋಗಕ್ಕೆ, ಅದರಲ್ಲೂ ಸ್ವಂತ ಉದ್ದಿಮೆ ಕೈಗೊಳ್ಳ ಬಯಸುವವರಿಗೆ ವಿಪುಲ ಅವಕಾಶಗಳಿರುವ ಕ್ಷೇತ್ರವೆಂದರೆ ಕೃಷಿ ಮತ್ತು ತೋಟ ಗಾರಿಕಾ ಉತ್ಪನ್ನಗಳ ಸಂಸ್ಕರಣ ಘಟಕಗಳ ಸ್ಥಾಪನೆ. ಸಿದ್ಧವಸ್ತುಗಳ ಉಪ

ಯೋಗದತ್ತ ಜನತೆಯ ಒಲವು ಹೆಚ್ಚುತ್ತಿರುವ ಈ ದಿನಗಳಲ್ಲಿ, ಇಂತಹ ಘಟಕಗಳ ಸ್ಥಾಪನೆ ಅಧಿಕ ಲಾಭಾಂಶ ಕೊಡುವ ಉದ್ದಿಮೆಯಾಗುವುದರಲ್ಲಿ ಸಂದೇಹವಿಲ್ಲ.

ಮಾವು, ಬಾಳೆ, ಸಪೋಟ ಮುಂತಾದ ಹಣ್ಣುಗಳಿಂದ ಒಣಗಿಸಿದ ಹಣ್ಣುಗಳು ಜಾಮ್, ಜೆಲ್ಲಿ, ಮಾರ್ಮಲೇಡ್ಸ್, ಹಣ್ಣಿನರಸ ಮುಂತಾದ ವಸ್ತುಗಳನ್ನೂ, ಹಲಸಿನಿಂದ ಹಪ್ಪಳವನ್ನು, ಮಾವಿನ ಉಪ್ಪಿನಕಾಯಿ, ಹುಳಿಮಾವಿನ ರಸ, ಮುಂತಾದುವನ್ನು ಸುಲಭವಾಗಿ ತಯಾರಿಸಬಹುದು. ಜೊತೆಗೆ ಒಣಗಿಸಿ ಸಿದ್ಧಪಡಿಸಿದ ತರಕಾರಿಗಳನ್ನೂ ತಯಾರಿಸಬಹುದು. ಈ ಎಲ್ಲ ವಸ್ತುಗಳಿಗೆ ಕೇವಲ ಆಂತರಿಕ ಮಾರುಕಟ್ಟೆಯಲ್ಲದೆ ವಿದೇಶೀ ಮಾರುಕಟ್ಟೆಯೂ ಲಭ್ಯವಿರುವುದು ಹೆಚ್ಚಿನ ಆಕರ್ಷಣೆಗೆ, ಲಾಭಕ್ಕೆ ಕಾರಣವಾಗಿದೆ. ಇಷ್ಟರ ಜೊತೆಗೆ ಇಂತಹ ಘಟಕಗಳ ಸ್ಥಾಪನೆಗೆ ಬ್ಯಾಂಕುಗಳು ಮತ್ತಿತರ ಉದ್ದರಿ ಸಂಸ್ಥೆಗಳಿಂದ ರಿಯಾಯಿತಿ ದರದ ಉದ್ದರಿ ಸೌಲಭ್ಯವೂ ಇರುವುದರಿಂದ, ಪದವೀಧರ ನಿರುದ್ಯೋಗಿಗಳು ಈ ಕ್ಷೇತ್ರದತ್ತ ಹೆಚ್ಚಿನ ಗಮನ ಹರಿಸಬಹುದು.

ಸಣ್ಣ ಕೈಗಾರಿಕೆ : ಆರ್ಥಿಕ ಬೆಳವಣಿಗೆ ಮತ್ತು ಉದ್ಯೋಗ ಸೃಜನೆಯ ದೃಷ್ಟಿಯಿಂದ ಅತ್ಯಂತ ಫಲವತ್ತಾದ ಇನ್ನೊಂದು ಕ್ಷೇತ್ರವೆಂದರೆ, ಸಣ್ಣಕೈಗಾರಿಕೆ. 1979-80ರಲ್ಲಿ ಜಿಲ್ಲೆಯಲ್ಲಿ ಒಟ್ಟು ಸುಮಾರು 1260ಕ್ಕೂ ಮಿಕ್ಕಿ ಸಣ್ಣಕೈಗಾರಿಕೆ ಘಟಕಗಳಿದ್ದು ಸುಮಾರು 20,000 ಜನ ಈ ಘಟಕಗಳಲ್ಲಿ ಉದ್ಯೋಗಿಗಳಾಗಿದ್ದರು. ವಿದ್ಯಾಭ್ಯಾಸ, ವ್ಯಾಪಾರ ಮತ್ತು ಬ್ಯಾಂಕಿಂಗ್ ಕ್ಷೇತ್ರಗಳಲ್ಲಿ ಹೆಚ್ಚಿನ ಬೆಳವಣಿಗೆ ಇದ್ದೂ, ಜಿಲ್ಲೆ ಕೈಗಾರಿಕಾ ರಂಗದಲ್ಲಿ ಹಿಂದುಳಿದಿರುವುದು ವಿರೋಧಾಭಾಸವೇ ಸರಿ. ಅಂತೆಯೇ ಈ ಕ್ಷೇತ್ರ ಅಪಾರ ಉದ್ಯೋಗಾವಕಾಶಗಳನ್ನೊದಗಿಸಬಹುದಷ್ಟೆ ಅಲ್ಲ, ಕೈಗಾರಿಕಾ ಬೆಳವಣಿಗೆ ಜಿಲ್ಲೆಯ ಜನತೆಯ ಕರ್ತವ್ಯವೂ ಆಗಿದೆ. ಈಗಂತೂ ಜಿಲ್ಲೆಯನ್ನು ಕೈಗಾರಿಕೆಯಲ್ಲಿ ಹಿಂದುಳಿದಿರುವ ರಾಜ್ಯದ 11 ಜಿಲ್ಲೆಗಳಲ್ಲಿ ಒಂದೆಂದು ಘೋಷಿಸಿರುವುದರಿಂದ, ಕೈಗಾರಿಕಾ ಘಟಕಗಳ ಬೆಳವಣಿಗೆಗೆ ವಿಶೇಷ ರಿಯಾಯಿತಿಗಳೂ, ಸಾಲ ಸೌಲಭ್ಯಗಳೂ ಲಭ್ಯವಿವೆ. ಎಯ್ಯಾಡಿ ಮತ್ತು ಪಣಂಬೂರುಗಳಲ್ಲಿರುವ ಕೈಗಾರಿಕಾ ಎಸ್ಟೇಟುಗಳು ಸಣ್ಣ ಕೈಗಾರಿಕಾ ಘಟಕಗಳಿಗಾಗಿಯೇ ಮೀಸಲಾಗಿವೆ. ಈ ಎಸ್ಟೇಟುಗಳಲ್ಲಿ ಘಟಕಗಳನ್ನು ಸ್ಥಾಪಿಸಲ್ಪಟ್ಟಿರುವ ಯೋಗ್ಯ ಉದ್ಯಮಿಗಳಿಗೆ ಸಾಲ ಸೌಲಭ್ಯ, ಅಗತ್ಯ ಭೂಮಿಯ ಹಂಚಿಕೆ, ತಾಂತ್ರಿಕ ಜ್ಞಾನ ಸೌಲಭ್ಯ ತೆರಿಗೆ ವಿನಾಯಿತಿ, ಅತಿಕಡಿಮೆ ಮತ್ತು ಬಡ್ಡಿರಹಿತ ಸಾಲ ಯೋಜನೆಗಳು, ಮಾರುಕಟ್ಟೆ ಸೌಲಭ್ಯ ಮುಂತಾಗಿ ಹಲವಾರು ಸೌಲಭ್ಯಗಳಿವೆ.

ಜಿಲ್ಲಾ ಕೈಗಾರಿಕಾ ಕೇಂದ್ರ, ಸಣ್ಣ ಕೈಗಾರಿಕಾ ಅಭಿವೃದ್ಧಿ ನಿಗಮ, ಕರ್ನಾಟಕ ರಾಜ್ಯ ಹಣಕಾಸು ನಿಗಮ ಮುಂತಾದ ಸಂಸ್ಥೆಗಳು, ಕೈಗಾರಿಕಾ ಬೆಳವಣಿಗೆಗಾಗಿಯೇ

ಕಂಕಣ ಬದ್ಧವಾಗಿವೆ. ಜಿಲ್ಲೆಯ ಯಾವುದೇ ಪದವೀಧರ ನಿರುದ್ಯೋಗಿಯಾಗಲೀ ನೇರವಾಗಿ ಈ ಸಂಸ್ಥೆಗಳ ಕಛೇರಿಗೆ ಭೇಟಿ ಇತ್ತು ಸಹಾಯ ಪಡೆಯಬಹುದು.

ಸಣ್ಣ ಕೈಗಾರಿಕೆ, ಸಾಲ ಸೌಲಭ್ಯ ಮತ್ತು ಸ್ವಂತ ಉದ್ಯೋಗದ ಬಗ್ಗೆ ಹೇಳುವಾಗ ಒಂದು ವಿಷಯ ಗಮನಿಸಲೇ ಬೇಕಾಗುತ್ತದೆ. ಅದೆಂದರೆ, "ಈ ಎಲ್ಲ ಯೋಜನೆಗಳೂ, ಸಹಾಯಗಳೂ ಬರೀ ಕಾಗದದ ಕಡತಗಳು ಮಾತ್ರ, ನಿಜ ಜೀವನದಲ್ಲಿ ಇವೆಲ್ಲ ಸಾಮಾನ್ಯ ಪದವೀಧರನೊಬ್ಬನಿಗೆ, ಯಾವುದೇ ಶಿಫಾರಸು ಇಲ್ಲದವರಿಗೆ ಕೈಗೆಟಕದ ಕುಸುಮಗಳು" ಎಂಬ ತಿಳುವಳಿಕೆ. ಆದರೆ ವಿರೋಧಾಭಾಸವೆಂದರೆ ನಿರುದ್ಯೋಗಿಗಳು ಇಂತಹ ಭಾವನೆ ತಳೆದಿರುವಾಗ ಸಂಸ್ಥೆಗೆ ಸಂಬಂಧಪಟ್ಟವರು, ತಮಗೆ ನಿಗದಿಪಡಿಸಿರುವ ಗುರಿತಲುಪಲು ಹೆಣಗುತ್ತಿದ್ದಾರೆ. "ತಮ್ಮೆಲ್ಲ ಪ್ರಯತ್ನಗಳ ನಡುವೆಯೂ, ಭರವಸೆಗಳ, ಸೌಲಭ್ಯಗಳ ನಂತರವೂ, ಸ್ವಂತ ಸಾಹಸದ ಮೇಲೆ ಉದ್ದಿಮೆ ನಡೆಸಲು ತರುಣರು ಮುಂಬರುತ್ತಿಲ್ಲ" ಎಂಬುದು ಇವರ ಕೊರಗು. ಅಂತೆಯೇ ಇಂತಹ ಸಂಸ್ಥೆಗಳಿಂದ ಸಹಾಯ ಪಡೆದು ಸ್ವಂತ ಉದ್ದಿಮೆದಾರನಾಗುವುದು ತನ್ನ ಹಕ್ಕು ಎಂಬ ಭಾವನೆಯಿಂದ ನಿರುದ್ಯೋಗಿ ಪದವೀಧರರು ಮುಂದೆ ಬರುವುದಾದರೆ, ಸಣ್ಣ ಕೈಗಾರಿಕಾರಂಗ ನಿರುದ್ಯೋಗಿಗಳಿಗೆ ಭಾಗ್ಯದ ಬಾಗಿಲಾದೀತು.

ಮೀನುಗಾರಿಕೆ

ರಾಜ್ಯದ ಬೊಕ್ಕಸಕ್ಕೆ ಹಣ ಸೇರಿಸುವ ಮತ್ತು ನಿರುದ್ಯೋಗಿಗಳಿಗೆ ಉದ್ಯೋಗ ಒದಗಿಸುವ ದೃಷ್ಟಿಯಿಂದ, ಮುಂಬರುವ ವರ್ಷಗಳಲ್ಲಿ, ಮೀನುಗಾರಿಕೆ ಗಮನಾರ್ಹ ಪಾತ್ರವಹಿಸಲಿದೆ. ರಾಜ್ಯದ ಆದಾಯಕ್ಕೆ ಜಿಲ್ಲೆಯ ಕೊಡುಗೆಯಲ್ಲಿ ಶೇ. 6ಕ್ಕೂ ಹೆಚ್ಚಿನ ಭಾಗ ನೀಡುತ್ತಿರುವ ಈ ಕ್ಷೇತ್ರ ಸುಮಾರು 50,000ಕ್ಕೂ ಮಿಕ್ಕಿ ಮೀನುಗಾರರಿಗೂ ಮತ್ತು ಅಧಿಕ ಪ್ರಮಾಣದಲ್ಲಿ ಇತರ ಅವಲಂಬಿತರಿಗೂ ಉದ್ಯೋಗ ಒದಗಿಸಿದೆ. ಈ ಕ್ಷೇತ್ರದ ವಿಶೇಷತೆಯೆಂದರೆ ವಿದ್ಯಾವಂತ ಮತ್ತು ಅವಿದ್ಯಾವಂತರಿಬ್ಬರಿಗೂ ಸಮಾನ ಉದ್ಯೋಗಾವಕಾಶಗಳು ಲಭ್ಯವಿರುವುದು.

ಮೀನುಗಾರಿಕಾ ರಂಗದಲ್ಲಿ ನಡೆದಿರುವ ಹೊಸ ಹೊಸ ಸಂಶೋಧನೆಗಳು, ಮೀನುಗಾರಿಕಾ ಫಾರಂಗಳು, ಮೀನುಗಾರಿಕಾ ಸಹಕಾರಿ ಸಂಘಗಳು ಇವುಗಳ ಜೊತೆಗೆ ಮಲ್ಪೆ ಬಂದರಿನ ಅಭಿವೃದ್ಧಿ ಮತ್ತು ಯಾಂತ್ರೀಕೃತ ದೋಣಿಗಳ ಉಪಯೋಗದಿಂದಾಗಿ ಈ ಕ್ಷೇತ್ರ ವೇಗವಾಗಿ ಬೆಳೆಯುತ್ತಿದೆ. ಆದರೂ, ಮಂಗಳೂರು, ಕುಂದಾಪುರ, ಉಡುಪಿ ತಾಲ್ಲೂಕುಗಳುದ್ದಕ್ಕೂ ಹಮ್ಮಿಕೊಂಡಿರುವ, ಜಿಲ್ಲೆಯ 148 ಕಿ.ಮೀ. ಉದ್ದದ ತೀರ ಪ್ರದೇಶದಲ್ಲಿ ಮೀನುಗಾರಿಕಾ ಅಭಿವೃದ್ಧಿಗೆ ಸಾಕಷ್ಟು ಅವಕಾಶವಿದೆ. ಇವೆಲ್ಲಕ್ಕೂ ಪೂರಕವೆಂಬಂತೆ, ಈ ಕ್ಷೇತ್ರದ ರಫ್ತು ವ್ಯವಹಾರದ ಪ್ರಾಮುಖ್ಯತೆ ದಿನೇದಿನೇ ಅಧಿಕಗೊಳ್ಳುತ್ತಿದೆ.

ಈ ಎಲ್ಲ ಬೆಳವಣಿಗೆಗಳಿಂದಾಗಿ ಸಹಜವಾಗಿಯೇ ಈ ಕ್ಷೇತ್ರದಲ್ಲಿ ಹೆಚ್ಚಿನ ಉದ್ಯೋಗಾವಕಾಶಗಳು ಹುಟ್ಟಿಕೊಳ್ಳಲಿವೆ. ಆದರೂ ವಿದ್ಯಾವಂತ ಜನತೆಯ ಪ್ರವೇಶದಿಂದಾಗಿ ಮತ್ತು ಯಾಂತ್ರೀಕೃತ ದೋಣಿಗಳ ಹೆಚ್ಚುವರಿ ಉಪಯೋಗ ದಿಂದಾಗಿ, ಆರ್ಥಿಕವಾಗಿ ದುರ್ಬಲರಾಗಿದ್ದ ಬೆಸ್ತರಿಗೆ ಪೆಟ್ಟು ಬೀಳುವ ಸಂಭವವಿಲ್ಲದೆ ಇಲ್ಲ. ಮೀನುಗಾರಿಕೆ ಕ್ಷೇತ್ರದಲ್ಲಿನ ಯಾವುದೇ ಬೆಳವಣಿಗೆಯೂ ಇಂತಹ ಪರಿಣಾಮ ಕ್ಕೆಡೆಯಾಗದಂತೆ ನೋಡುವುದೂ ಅಗತ್ಯ.

ಪಶುಪಾಲನೆ :

ಹೆಚ್ಚಿನ ಆದಾಯಕ್ಕೆ ಮತ್ತು ಉದ್ಯೋಗಕ್ಕೆ ಅವಕಾಶವಿರುವ ಇನ್ನೊಂದು ಕ್ಷೇತ್ರವೆಂದರೆ ಪಶುಪಾಲನೆ. ಜಿಲ್ಲೆಯ ಭೂಮಿ ಮತ್ತು ಹವಾಗುಣಗಳು ಹೈನು ಗಾರಿಕೆ, ಕೋಳಿ ಮತ್ತು ಹಂದಿಗಳ ಸಾಕುವಿಕೆಗೆ ಪ್ರಶಸ್ತವಾಗಿದೆ.

ಹೈನುಗಾರಿಕೆ ಎಂದೂ ಬೇಡಿಕೆ ಕಳೆದುಕೊಳ್ಳದ, ಲಾಭದಾಯಕ ಉದ್ದಿಮೆ. ಕೇವಲ 3–4 ಹಸು ಅಥವಾ ಎಮ್ಮೆಗಳಿಂದ ತಿಂಗಳೊಂದಕ್ಕೆ ರೂ. 500 ರಿಂದ 700 ರಷ್ಟು ನಿವ್ವಳ ವರಮಾನ ಸಾಧ್ಯ. ಜೊತೆಗೆ ಈ ಕ್ಷೇತ್ರದಲ್ಲಿ ಪದವೀಧರ ನಿರುದ್ಯೋಗಿಗಳಿಗೆ, ಅಗತ್ಯ ತರಬೇತಿ ಪಡೆದ ಪ್ರಮಾಣ ಪತ್ರ ಒದಗಿಸಿದಲ್ಲಿ, ರಿಯಾಯಿತಿ ದರದ ಬ್ಯಾಂಕ್ ಸಾಲವೂ, ವೈದ್ಯಕೀಯ ಸಹಾಯವೂ ದೊರೆಯು ತ್ತದೆ. ಜಿಲ್ಲೆಯಲ್ಲಿ ಹಾಲು ಮತ್ತು ಹಾಲಿನ ಸಾಮಗ್ರಿಗಳಿಗೆ ವಿಶೇಷ ಬೇಡಿಕೆ ಇರು ವುದರಿಂದ, ಹೆಚ್ಚಿನ ಜನ ಈ ಉದ್ದಿಮೆ ಕೈಗೆತ್ತಿಕೊಳ್ಳಬಹುದು.

ಕೋಳಿ ಸಾಕಣೆಯೂ ಕೂಡ ಸಾಕಷ್ಟು ಆಕರ್ಷಣೆಯಿರುವ ಕ್ಷೇತ್ರ. ಕೋಳಿ ಸಾಕಣೆಯ ಬಗ್ಗೆ ಸಾಮಾನ್ಯ ಜನತೆಯಲ್ಲಿರುವ ತಪ್ಪು ಕಲ್ಪನೆಯೆಂದರೆ, ಅದಕ್ಕೆ ಹೆಚ್ಚಿನ ಆರಂಭಿಕ ಬಂಡವಾಳವೂ, ತಾಂತ್ರಿಕ ಜ್ಞಾನವೂ ಅಗತ್ಯ ಎಂಬ ತಿಳುವಳಿಕೆ. ಆದರೆ ಹಳ್ಳಿಗಳಲ್ಲಿ ಲಭ್ಯವಿರುವ ಆಂತರಿಕ ಸಂಪನ್ಮೂಲಗಳನ್ನು ಉಪಯೋಗಿಸಿ ಕೊಂಡು ಅತಿ ಕಡಿಮೆ ಹಣ ಮತ್ತು ಬುದ್ಧಿಮತ್ತೆಯ ವೆಚ್ಚದಲ್ಲಿ ಈ ಉದ್ದಿಮೆ ನಡೆಸುವುದು ಸಾಧ್ಯ. ಅತಿ ಅಗತ್ಯವಿರುವ ಒಂದೇ ಅಂಶವೆಂದರೆ ಹತ್ತಿರದ ಪಶು ವೈದ್ಯರಿಂದ ನೆರವು ಪಡೆಯುವುದು. ಕೋಳಿ ಸಾಕಣೆ ಪ್ರಾರಂಭಿಸುವವರಿಗಾಗಿಯೇ ರಾಜ್ಯದ ಹಲವೆಡೆಗಳಲ್ಲಿ 15–20 ದಿನಗಳ ತರಬೇತಿ ಶಿಬಿರಗಳನ್ನು ನಡೆಸಲಾಗುತ್ತಿದೆ. ಇಂತಹ ತರಬೇತಿಯ, ಪ್ರಮಾಣಪತ್ರವಿದ್ದಲ್ಲಿ ಆಕರ್ಷಕ ದರದಲ್ಲಿ ಸಾಲ ಸೌಲಭ್ಯವೂ ಲಭ್ಯವಿದೆ. ಈಚಿನ ದಿನಗಳಲ್ಲಿ ಹೊಸ ರೀತಿಯ ಕೋಳಿ ತಳಿಗಳ ಅಭಿ ವೃದ್ಧಿ, ವೈಜ್ಞಾನಿಕ ಉಪಕರಣಗಳ ಉಪಯೋಗದಿಂದಾಗಿ, ಅತಿ ಕಡಿಮೆ ನೈಸರ್ಗಿಕ ಬೆಂಬಲದಲ್ಲೂ ಕೋಳಿಸಾಕಣೆ ಸಾಧ್ಯವಾಗಿದೆ. ಜೊತೆಗೆ ಜಿಲ್ಲೆಯಲ್ಲಿ ಹಾಗೂ ಜಿಲ್ಲೆಯ ಹೊರಗೆ ಮೊಟ್ಟೆ ಮತ್ತಿತರ ಸಂಬಂಧಿತ ವಸ್ತುಗಳಿಗೆ ಯಾವತ್ತೂ ಬೇಡಿಕೆ

ಯಿದೆ. ಈ ಕ್ಷೇತ್ರದಲ್ಲಿ ಹೆಚ್ಚಿನ ಉದ್ಯೋಗ ಲಭ್ಯವಾಗಬೇಕಾದರೆ ಅಗತ್ಯವಿರುವ ಒಂದೇ ಅಂಶವೆಂದರೆ, ಜನತೆ ಮೈಚಳಿಬಿಟ್ಟು, ಸ್ವಲ್ಪವಾದರೂ ಸಾಹಸಶೀಲರಾಗಿ ಇಂತಹ ಉದ್ದಿಮೆ ಪ್ರಾರಂಭಿಸಲು ಮುಂದೆ ಬರುವುದು.

ಒಟ್ಟಾರೆ ಬೇಡಿಕೆಯ ದೃಷ್ಟಿಯಿಂದ ಮತ್ತು ಸಾಮಾಜಿಕ ಸ್ಥಾನಮಾನದ ದೃಷ್ಟಿಯಿಂದ, ಅತ್ಯಂತ ಆಕರ್ಷಿತವಲ್ಲದಿದ್ದರೂ, ಫಲಪ್ರದ ಉದ್ದಿಮೆಯಾಗಬಲ್ಲದು ಹಂದಿ ಸಾಕುವಿಕೆ. ಈ ಕ್ಷೇತ್ರದ ವಿಶೇಷತೆಯೆಂದರೆ, ಯಾವುದೇ ಬೆಳೆ ಬೆಳೆಯುಲಾಗದ, ಯಾವುದೇ ಪ್ರಾಣಿಗಳನ್ನು ಪೋಷಿಸಲಾಗದ ಭೂಮಿಯಲ್ಲಿಯೂ ಇದನ್ನು ಕೈಗೆತ್ತಿಕೊಳ್ಳಬಹುದು. ಜೊತೆಗೆ ಆಹಾರ, ವೈದ್ಯಕೀಯ ಸೌಲಭ್ಯಗಳ ರೂಪದಲ್ಲಿ ಅತಿಕಡಿಮೆ ವೆಚ್ಚ ಸಾಕಾಗುತ್ತದೆ. ಇಷ್ಟಕ್ಕೂ ಪೂರಕವೆಂಬಂತೆ ಹಂದಿಗಳ ಬೆಳವಣಿಗೆಯ ವೇಗ ಅತಿ ಕಡಿಮೆ ಅವಧಿಯಲ್ಲಿ ಹೆಚ್ಚಿನ ಲಾಭಕ್ಕೆ ಸಹಕರಿಸುತ್ತದೆ. ಹಲವಾರು ಸಾಮಾಜಿಕ ಮತ್ತು ಧಾರ್ಮಿಕ ಕಾರಣಗಳಿಂದಾಗಿ ಈ ಕ್ಷೇತ್ರ ವಿಶೇಷ ಪ್ರಗತಿ ಹೊಂದಿಲ್ಲವಾದರೂ, ಜಿಲ್ಲೆಯ ಪ್ರಶಸ್ತ ಹವಾಗುಣದ ಹಿನ್ನೆಲೆಯಲ್ಲಿ ಇದನ್ನು ಲಾಭದಾಯಕ, ಉದ್ಯೋಗ ಶೀಲ ಉದ್ದಿಮೆಯಾಗಿ ಬೆಳೆಸಬಹುದು.

ಮೇಲೆ ಹೇಳಿದ ಎಲ್ಲ ರೀತಿಯ ಪಶುಪಾಲನಾ ಚಟುವಟಿಕೆಗಳಿಗೂ ಸರಕಾರ ವಿಶೇಷ ಗಮನವೀಯುತ್ತಿದೆ. 6ನೇ ಪಂಚವಾರ್ಷಿಕ ಯೋಜನೆಯಲ್ಲಿಯೂ ಇವುಗಳಿಗೆ ವೈಯಕ್ತಿಕ ಪ್ರಾಮುಖ್ಯತೆ ನೀಡಲಾಗಿದೆ. ಜೊತೆಗೆ ಪ್ರತಿಯೊಂದು ಕ್ಷೇತ್ರಕ್ಕೂ ನಿಗದಿಪಡಿಸಿದ ಧನಸಹಾಯ ಲಭ್ಯವಿದೆಯೆಂಬುದನ್ನು ನಾವು ಹಿಂದೆಯೇ ಗಮನಿಸಿದ್ದೇವೆ. (ಪಟ್ಟಿ 3) ಅಂತೆಯೇ ಜಿಲ್ಲೆಯ ಉದ್ಯೋಗ ಸೃಜನೆಯಲ್ಲಿ ಈ ಕ್ಷೇತ್ರ ಗಣನೀಯ ಪಾತ್ರ ವಹಿಸಲಿದೆ.

ಅರಣ್ಯ ಸಂಪತ್ತು

ಜಿಲ್ಲೆಯ ಒಟ್ಟು ಭೂ ವಿಸ್ತೀರ್ಣದ ಶೇ 27 ಕ್ಕೂ ಹೆಚ್ಚು (ಸುಮಾರು 2,30,440 ಹೆಕ್ಟೇರುಗಳು) ಭಾಗವನ್ನು ಹಮ್ಮಿಕೊಂಡಿರುವ ನಮ್ಮ ಅಪಾರ ಅರಣ್ಯ ಸಂಪತ್ತು ಕೂಡ ಹೆಚ್ಚಿನ ಉದ್ಯೋಗಾವಕಾಶಗಳನ್ನು ಒದಗಿಸಬಲ್ಲದು. ಸದಾ ಹಸಿರಿನ ಆರಣ್ಯಗರ್ಭದಲ್ಲಿ ನಿರ್ಮಾಣ ಕಾರ್ಯಗಳಿಗಾಗುವ ಗಟ್ಟಿಮರಗಳೂ, ಪೀಠೋಪಕರಣಗಳು, ಪ್ಲೇವುಡ್ ಮುಂತಾದುವುಗಳಿಗಾಗುವ ಮೆದು ಮರಗಳೂ ಅಧಿಕವಾಗಿ ಲಭ್ಯವಿವೆ. ಮರಮುಟ್ಟಿನ ಕೆಲಸಗಳಲ್ಲಿ ಸಾಕಷ್ಟು ಹೆಸರು ಸಾಧಿಸಿರುವ ಜಿಲ್ಲೆಯಲ್ಲಿ ಈ ಎಲ್ಲ ಸಂಪನ್ಮೂಲಗಳ ಪೂರ್ಣ ಪ್ರಮಾಣದ ಉಪಯೋಗ ನಡೆದಿಲ್ಲ. ದಿನೇ ದಿನೇ ವೃದ್ಧಿಸುತ್ತಿರುವ ಆರ್ಥಿಕ ಪ್ರಾಮುಖ್ಯತೆಯ ಹಿನ್ನೆಲೆಯಲ್ಲಿ ನೋಡಿದಾಗ ಈ ಕ್ಷೇತ್ರದಲ್ಲಿ ವಿಪುಲ ಉದ್ಯೋಗಾವಕಾಶಗಳು ಗೋಚರಿಸುತ್ತವೆ. ಆದರೆ ಮರಮುಟ್ಟಿನ ಕೆಲಸಕ್ಕೆ ವಿಶೇಷ ಶ್ರಮ ಮತ್ತು ಕೌಶಲ್ಯದ

ಅಗತ್ಯವಿರುವುದರಿಂದ ಪರಿಣಿತಿಯಿಲ್ಲದ ನಿರುದ್ಯೋಗಿಗಳಿಗೆ ಈ ಕ್ಷೇತ್ರ ಹೆಚ್ಚು ಫಲಕಾರಿಯಾಗದಿರಬಹುದು.

ತಾತ್ಕಾಲಿಕ ನಿರುದ್ಯೋಗ

ಪೂರ್ಣ ನಿರುದ್ಯೋಗದಷ್ಟೇ ಗಂಭೀರವಾದ ಇನ್ನೊಂದು ಸಮಸ್ಯೆಯೆಂದರೆ ತಾತ್ಕಾಲಿಕ ಮತ್ತು ಅಲ್ಪಾವಧಿ ನಿರುದ್ಯೋಗ. ಸಾಮಾನ್ಯವಾಗಿ ಕೃಷಿ, ತೋಟಗಾರಿಕೆ ಮತ್ತು ಮೀನುಗಾರಿಕೆಗಳನ್ನವಲಂಬಿಸಿರುವ ಜನರಲ್ಲಿ ಈ ತೊಂದರೆಯನ್ನು ಗಮನಿಸಬಹುದು. ಇಂತಹ ನಿರುದ್ಯೋಗದಿಂದಾಗಿ ಒಟ್ಟಾರೆ ವರಮಾನ ಪ್ರಮಾಣದಲ್ಲಿ ಮತ್ತು ಜೀವನಮಟ್ಟದಲ್ಲಿ ಇಳಿತ ಉಂಟಾಗುತ್ತದೆ.

ಅಲ್ಪಾವಧಿ ನಿರುದ್ಯೋಗ ಒಂದು ಗಂಭೀರ ಸಮಸ್ಯೆಯಾಗಿದ್ದರೂ ಇದರಲ್ಲಿನ ಬಹುಪಾಲು, ಜನರ ಸೋಮಾರಿತನ ಮತ್ತು ಪೂರಕ ವೃತ್ತಿಗಳ ಬಗೆಗಿನ ಅಜ್ಞಾನದ ಪರಿಣಾಮ. ಜಿಲ್ಲೆಯಲ್ಲಿ ಇಂತಹ ಪೂರಕ ಉದ್ದಿಮೆಗಳಿಗೆ ಹೇರಳ ಅವಕಾಶವಿದೆ. ಪಶುಪಾಲನೆ, ರೇಶ್ಮೆ ಸಾಕಣೆ, ತರಕಾರಿಗಳ ಬೆಳವಣಿಗೆ ಮುಂತಾದುವುಗಳನ್ನು ಪೂರ್ಣಾವಧಿಯಲ್ಲೂ ಹಾಗೂ ಪೂರಕ ಉದ್ದಿಮೆಗಳಾಗಿಯೂ ಬಳಸಿಕೊಳ್ಳಬಹುದು. ಜೊತೆಗೆ ಬೀಡಿಕಟ್ಟುವುದು, ಜೇನು ಸಾಕಣೆ, ಬುಟ್ಟಿ ಮತ್ತು ಚಾಪೆಗಳನ್ನು ಹೆಣೆಯುವುದು, ಹೊಲಿಗೆ ಮತ್ತು ನೇಯ್ಗೆ ಕೆಲಸ ಮುಂತಾದುವುಗಳನ್ನು ಪೂರಕ ವೃತ್ತಿಗಳಾಗಿ ಕೈಗೆತ್ತಿಕೊಳ್ಳಬಹುದು. ಈ ಎಲ್ಲ ಚಟುವಟಿಕೆಗಳಿಗೆ ಅಗತ್ಯವಿರುವ ಕಚ್ಚಾ ಸಾಮಗ್ರಿಗಳು ಜಿಲ್ಲೆಯಲ್ಲಿಯೇ ದೊರೆಯುವುದಲ್ಲದೆ, ಉತ್ಪಾದಿತ ಸರಕಿಗೆ ಸಿದ್ಧ ಮಾರುಕಟ್ಟೆಯೂ ಲಭ್ಯವಿದೆ.

ಪೂರ್ಣಾವಧಿ ಉದ್ಯೋಗವಾಗಿ ಹಾಗೂ ಉಪಕಸುಬುಗಳಾಗಿ ನಡೆಸಬಹುದಾದ ಈ ಎಲ್ಲ ಉದ್ದಿಮೆಗಳಿಗೆ ಖಾದಿ ಮತ್ತು ಗ್ರಾಮೋದ್ಯೋಗ ಭಂಡಾರದಿಂದ ತಾಂತ್ರಿಕ ಜ್ಞಾನ ಮತ್ತು ಧನಸಹಾಯದ ವ್ಯವಸ್ಥೆ ಇದೆ. ನಿಗದಿಪಡಿಸಿರುವ ಸುಮಾರು 24 ಕ್ಷೇತ್ರಗಳನ್ನು ಈ ಸಂಸ್ಥೆಯ ಸಹಾಯದಿಂದ ಪ್ರಾರಂಭಿಸಬಹುದಾಗಿದೆ. ಕುಟುಂಬದ ಎಲ್ಲಾ ಸದಸ್ಯರೂ ಇರುವ ಒಂದು ತುಂಡು ಭೂಮಿಯನ್ನೇ ಅವಲಂಬಿಸಿದೆ. ಅದರೊಡನೆ ಮೇಲೆ ಹೇಳಿದ ಯಾವುದೇ ಉಪಕಸುಬನ್ನಾದರೂ ಪ್ರಾರಂಭಿಸಿದಲ್ಲಿ ಉತ್ತಮ ಜೀವನಮಟ್ಟ ಕಷ್ಟಸಾಧ್ಯವೇನಲ್ಲ.

ಸರಕಾರೀ ರಂಗದಲ್ಲಿ ಉದ್ಯೋಗವಕಾಶಗಳು

1979-80ರಲ್ಲಿ ಜಿಲ್ಲೆಯಲ್ಲಿ, ಸರಕಾರೀ ವಲಯದ ವಿವಿಧ ಕೇಂದ್ರಗಳಲ್ಲಿ ಉದ್ಯೋಗ ಹಿಡಿದಿದ್ದವರ ಸಂಖ್ಯೆ ಸುಮಾರು 40,000. ಉದ್ಯೋಗ ಭದ್ರತೆ ಮತ್ತು ವಿಶ್ರಾಂತಿ ವೇತನಗಳ ಆಕರ್ಷಣೆಯಿಂದಾಗಿ ಬಹುತೇಕ ಜನ ಸರಕಾರೀ

ವಲಯುದಲ್ಲಿಯೇ ಉದ್ಯೋಗ ಬಯಸುತ್ತಾರೆ. ಜಿಲ್ಲೆಯ ನಿರುದ್ಯೋಗಿಗಳಿಗೆಲ್ಲ ಈ ಕ್ಷೇತ್ರದಲ್ಲಿ ಉದ್ಯೋಗಾವಕಾಶಗಳಿರಲು ಸಾಧ್ಯವಿಲ್ಲವಾದರೂ, ಮುಂಬರುವ ವರ್ಷಗಳಲ್ಲಿ ಸಾಕಷ್ಟು ಸ್ಥಾನಗಳು ಲಭ್ಯವಾಗುವ ನಿರೀಕ್ಷೆ ಇದೆ. ಆದರೆ ಸರಕಾರೀ ಕ್ಷೇತ್ರದ ಉದ್ಯೋಗಾವಕಾಶಗಳನ್ನು ಜಿಲ್ಲೆಯ ಜನತೆಗಾಗಿ ಮಾತ್ರ ಮೀಸಲಿಡುವುದು ಅಸಾಧ್ಯ ಮತ್ತು ಅಸಮಂಜಸವಾದ್ದರಿಂದ ಎಲ್ಲಾ ಅವಕಾಶಗಳೂ ಜಿಲ್ಲೆಗೆ ಅನುಕೂಲ ಎನ್ನಲು ಸಾಧ್ಯವಿಲ್ಲ.

ಹಲವಾರು ಬ್ಯಾಂಕುಗಳಿಗೆ ಜನ್ಮಸ್ಥಾನವಾದ ಜಿಲ್ಲೆ ಒಟ್ಟಾರೆ ಬ್ಯಾಂಕುಗಳ ಸಂಖ್ಯೆಯಲ್ಲಿ ರಾಜ್ಯದಲ್ಲೇ ಎರಡನೆಯ ಸ್ಥಾನ ಪಡೆದಿದ್ದು, ಜಿಲ್ಲೆಯ ವ್ಯಾಪಾರಾಭಿವೃದ್ಧಿಯಿಂದಾಗಿ ಇನ್ನೂ ಹೆಚ್ಚಿನ ಬೆಳವಣಿಗೆ ಸಾಧ್ಯವಿದೆ. ಹಾಗೆಯೇ ಹೊಸ ವಿಶ್ವವಿದ್ಯಾನಿಲಯ ಮತ್ತು ಬೆಳೆಯುತ್ತಿರುವ ಇನ್ನಿತರ ಶಿಕ್ಷಣ ಸಂಸ್ಥೆಗಳಲ್ಲಿ, ಸದಾ ಬೆಳೆಯುತ್ತಿರುವ ಲೋಕೋಪಯೋಗಿ ಚಟುವಟಿಕೆಗಳಲ್ಲಿ ಉದ್ಯೋಗಾವಕಾಶಗಳು ಲಭ್ಯವಿವೆ. ಜಿಲ್ಲೆಯಲ್ಲಿ ಮಂಗಳೂರು ರಾಸಾಯನಿಕ ಕಾರ್ಖಾನೆಯನ್ನುಳಿದಂತೆ ದೊಡ್ಡ ಕೈಗಾರಿಕಾ ಘಟಕಗಳಿಲ್ಲದಿದ್ದರೂ ಈಗ ಉದ್ದೇಶಿಸಲಾಗಿರುವ ಮಂಗಳೂರು ತೈಲ ಶುದ್ಧೀಕರಣ ಕೇಂದ್ರ ಮತ್ತು ಕುದುರೆಮುಖದ ಕಬ್ಬಿಣದ ಅದಿರನ್ನು ಉಂಡೆ ಮಾಡುವ ಕಾರ್ಖಾನೆ ಇವುಗಳು ಪ್ರಾರಂಭವಾದಾಗ ನಿರ್ಮಾಣ ಕಾರ್ಯದಲ್ಲೂ ಮತ್ತು ನಂತರವು ಕೆಲವು ಸಾವಿರ ಉದ್ಯೋಗಾವಕಾಶಗಳಾದರೂ ಲಭ್ಯವಾಗುವವು.

ಸರಕಾರೀ ರಂಗದಲ್ಲಿನ ಈ ಎಲ್ಲ ಉದ್ಯೋಗಾವಕಾಶಗಳಿಗಿಂತ ಹೆಚ್ಚಿನ ವೇಗದಲ್ಲಿ ನಿರುದ್ಯೋಗ ಬೆಳೆಯುತ್ತಿದೆ ಎಂಬುದು ಸತ್ಯವಾದರೂ, ಒಟ್ಟಾರೆ ನಿರುದ್ಯೋಗದ ಪ್ರಮಾಣವನ್ನು ತಗ್ಗಿಸುವಲ್ಲಿ ಇದು ಸಹಕಾರಿ ಎಂಬುದನ್ನು ಅಲ್ಲಗಳೆಯುವಂತಿಲ್ಲ. ಅಂತೆಯೇ ಮುಂಬರುವ ವರ್ಷಗಳ ಉದ್ಯೋಗ ಸೃಜನೆಯ ಯೋಜನೆಗಳಲ್ಲಿ ಈ ಕ್ಷೇತ್ರಕ್ಕೂ ಹೆಚ್ಚಿನ ಆದ್ಯತೆ ಕೊಡಬೇಕಾಗುತ್ತದೆ.

ಉದ್ಯೋಗ ಸೃಜನೆಗೆ ಪೂರಕ ಪ್ರಯತ್ನಗಳು

ಜಿಲ್ಲೆಯಲ್ಲಿ ಹೆಚ್ಚಿನ ಉದ್ಯೋಗ ಸೃಜನೆಗೆ ಸಾಕಷ್ಟು ಅವಕಾಶಗಳಿವೆಯೆಂಬುದು ಮೇಲಿನ ಅಂಶಗಳಿಂದ ವೇದ್ಯವಾಗುತ್ತದೆ. ಜೊತೆಗೆ ಈ ಎಲ್ಲ ಕ್ಷೇತ್ರಗಳ ಉಪಯೋಗ ಬೇಕಾದ ಪ್ರಮಾಣದಲ್ಲಿ ನಡೆದಿಲ್ಲವೆಂಬುದೂ ತಿಳಿಯುತ್ತದೆ. ಈಗ ಉಳಿಯುವ ಪ್ರಶ್ನೆಯೆಂದರೆ, ಉದ್ಯೋಗ ಸೃಜನೆಗಾಗಿ ಎಂತಹ ಪ್ರಯತ್ನ ನಡೆಯಬೇಕು ? ಎಂಬುದು. ಸರಕಾರವೇನೋ ಯೋಜನೆಗಳ ಮೇಲೆ ಯೋಜನೆ ತಯಾರಿಸುತ್ತಿದೆ. ಆದರೆ ಈ ಯೋಜನೆಗಳು ತಕ್ಕಸಮಯದಲ್ಲಿ ಶ್ರೀಸಾಮಾನ್ಯನನ್ನು ತಲುಪುತ್ತಿಲ್ಲ. ಆದ್ದರಿಂದ ಸರಕಾರದ ಯೋಜನೆಗಳ ಜೊತೆಗೆ ಅವುಗಳು ಸುಲಭವಾಗಿ

ಕಾರ್ಯಗತವಾಗುವಂತೆ ನೋಡಲು, ನಿರುದ್ಯೋಗಿಗಳಿಗೆ ಅಂತಹ ಯೋಜನೆಗಳ ಅರಿವುಂಟು ಮಾಡಲು ಹಲವಾರು ಪೂರಕ ಪ್ರಯತ್ನಗಳು ಅತ್ಯವಶ್ಯಕ.

ಮೊದಲನೆಯದಾಗಿ ಉದ್ಯೋಗ ಸೃಜನೆಯ ಯೋಜನೆಗಳ ಜವಾಬ್ದಾರಿ ಹೊತ್ತ ಸರಕಾರೀ ಸಂಸ್ಥೆಗಳು, ಅವುಗಳನ್ನು ಜನಪ್ರಿಯಗೊಳಿಸುವತ್ತ ಪ್ರಾಮಾಣಿಕ ಪ್ರಯತ್ನ ನಡೆಸಬೇಕು. ಕಳೆದೊಂದು ದಶಕದಿಂದ ಯೋಜಿಸಿದ ಯಾವುದೇ ಯೋಜನೆಯೂ ನಿರೀಕ್ಷಿತ ಗುರಿಮುಟ್ಟಿಲ್ಲವೆಂಬುದಕ್ಕೆ ಜನತೆಯೇ ಕಾರಣ ಎನ್ನುವುದಕ್ಕಾಗುವುದಿಲ್ಲ. ವಿವಿಧ ಸಂಸ್ಥೆಗಳಲ್ಲಿನ ಉದ್ಯೋಗಾವಕಾಶಗಳ ಬಗ್ಗೆ, ಅವು ನೀಡುವ ಸಹಾಯದ ಬಗ್ಗೆ ತಿಳುವಳಿಕೆ ಇರುವ ಜನ ಕೇವಲ ಬೆರಳೆಣಿಕೆಯಷ್ಟು ಮಂದಿ. ಇದರಿಂದಾಗಿಯೇ ಈ ಸಂಸ್ಥೆಗಳು ತಮ್ಮ ಗುರಿ ಮುಟ್ಟಲು ಹೆಣಗುತ್ತಿವೆ. ಅಂತೆಯೇ ಸರಕಾರೀ ಸಂಸ್ಥೆಗಳು ಜಿಲ್ಲೆಯ ವಿವಿಧ ಪ್ರದೇಶಗಳಲ್ಲಿ ವಿವಿಧ ಪ್ರಚಾರ ಮಾಧ್ಯಮಗಳ ಮೂಲಕ, ತಮ್ಮ ಸಂಸ್ಥೆಯಿಂದ ಒದಗಬಹುದಾದ ಸಹಾಯಗಳ ಬಗ್ಗೆ, ಜಿಲ್ಲೆಯಲ್ಲಿನ ಉದ್ಯೋಗಾವಕಾಶಗಳ ಬಗ್ಗೆ, ಜನರಲ್ಲಿ ತಿಳುವಳಿಕೆ ಮೂಡಿಸುವ ಪ್ರಯತ್ನ ನಡೆಸುವುದು ಅವಶ್ಯಕ.

ತಮ್ಮ ಎಲ್ಲ ಕಾರ್ಯಭಾರಗಳ ನಡುವೆ ಈ ಜವಾಬ್ದಾರಿಯನ್ನೂ ಸಂಪೂರ್ಣವಾಗಿ ಕೈಗೆತ್ತಿಕೊಳ್ಳುವುದು ಸರಕಾರೀ ಸಂಘಟನೆಗಳಿಗೆ ಅಸಾಧ್ಯವಾಗಬಹುದು. ಅಂತೆಯೇ ಜಿಲ್ಲೆಯ ಕೈಗಾರಿಕೋದ್ಯಮಿಗಳ ಮತ್ತು ವಾಣಿಜ್ಯೋದ್ಯಮಿಗಳ ಸಂಘಟನೆಗಳು ಮತ್ತಿತರ ಐಚ್ಛಿಕ ಸಂಘಟನೆಗಳು ಈ ಕಾರ್ಯಭಾರ ಹೊರುವುದು ಒಳ್ಳೆಯದು. ಜಿಲ್ಲೆಯ ಕೆನರಾ ಛೇಂಬರ್ ಆಫ್ ಕಾಮರ್ಸ್, ಮಂಗಳೂರು ಪ್ರೊಡಕ್ಟಿವಿಟಿ ಕೌನ್ಸಿಲ್, ಮ್ಯಾನೇಜ್‌ಮೆಂಟ್ ಅಸೋಸಿಯೇಶನ್ ಮುಂತಾದುವುಗಳು ವೃತ್ತಿನಿರತ ಹಾಗೂ ಪರಿಣತಿ ಪಡೆದ ಸದಸ್ಯರನ್ನು ಹೊಂದಿದ ಸಂಸ್ಥೆಗಳು. ಅಂತೆಯೇ ಜಿಲ್ಲೆಯಲ್ಲಿ ಲಭ್ಯವಿರುವ ಉದ್ಯೋಗಾವಕಾಶಗಳು, ಸ್ವಂತ ಉದ್ಯೋಗದ ಅಗತ್ಯ, ಉದ್ಯಮ ಶೀಲತೆಯ ಬೆಳವಣಿಗೆ ಮುಂತಾದ ವಿಷಯಗಳ ಬಗ್ಗೆ ವಿದ್ಯಾವಂತ ನಿರುದ್ಯೋಗಿಗಳಿಗೆ ತರಬೇತು ನೀಡುವುದು, ಪರಿಣತ ಸಲಹೆ ನೀಡುವುದು, ಸರಕಾರೀ ಸಂಸ್ಥೆಗಳಿಂದ ಸಹಾಯ ಪಡೆಯುವ ಬಗ್ಗೆ ಜ್ಞಾನ ಮತ್ತು ಅಗತ್ಯವಿದ್ದಾಗ ಅಭ್ಯರ್ಥಿಯನ್ನು ಸಂಬಂಧಪಟ್ಟ ಇಲಾಖೆಗೆ ಪರಿಚಯಿಸುವುದು ಮುಂತಾದ ಚಟುವಟಿಕೆಗಳನ್ನು ಸುಲಭವಾಗಿ ರೂಪಿಸಿಕೊಳ್ಳಬಹುದು. ಹಾಗೆಯೇ ಐಚ್ಛಿಕ ಸೇವಾ ಸಂಘಟನೆಗಳಾದ ರೋಟರಿ, ಲಯನ್ಸ್ ಕ್ಲಬ್ ಮುಂತಾದುವುಗಳೂ ಈ ಕ್ಷೇತ್ರದತ್ತ ಗಮನ ಹರಿಸಬಹುದು.

ಉದ್ಯೋಗಾವಕಾಶಗಳ ಬಗ್ಗೆ ಮಾಹಿತಿ ನೀಡುವಲ್ಲಿ ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರವೂ ಮಹತ್ತರ ಪಾತ್ರವಹಿಸಬಲ್ಲದು. ಪ್ರಸ್ತುತ, ಉದ್ಯೋಗ

ವಿನಿಮಯ ಕೇಂದ್ರವೆಂದರೆ ನಿರುದ್ಯೋಗಿಗಳ ಹೆಸರು ನೊಂದಾಯಿಸಿಕೊಳ್ಳುವ ಕೇಂದ್ರ ಮಾತ್ರ, ಎಂಬ ಭಾವನೆ ಸಾಧಾರಣವಾಗಿಬಿಟ್ಟಿದೆ. ಜೊತೆಗೆ ಹೆಚ್ಚಿನ ನೇಮಕಾತಿಗಳೆಲ್ಲ ನೇರವಾಗಿ ನಡೆಯುವುದರಿಂದ 'ಕೇಂದ್ರ'ದ ಚಟುವಟಿಕೆ ಬಹಳಷ್ಟು ಕಮ್ಮಿಯಾಗಿದೆ. ಆದ್ದರಿಂದ ಕೇವಲ ಹೆಸರು ನೊಂದಾಯಿಸಿಕೊಂಡು, ವಿವಿಧ ವಿಷಯಗಳಲ್ಲಿ ಪದವಿ ಪಡೆದವರಿಗೆ ಉದ್ಯೋಗಾವಕಾಶಗಳ ಬಗ್ಗೆ ಪುಸ್ತಕ ಹಂಚುವು ದಕ್ಕಿಂತ, ಹೆಚ್ಚಿನದನ್ನು 'ಕೇಂದ್ರ' ಮಾಡಬಹುದು. ಯಾವ ಯಾವ ವಿಭಾಗಕ್ಕೆ ಸೇರಿದ ನಿರುದ್ಯೋಗಿಗಳು ಎಷ್ಟು ಇದ್ದಾರೆ, ಅವರುಗಳು ಎಂತಹ ಉದ್ಯೋಗ ಅಪೇಕ್ಷಿಸುತ್ತಾರೆ, ಅವರ ಅರ್ಹತೆಯೇನು ಎಂಬ ಬಗ್ಗೆ ಉದ್ಯೋಗ ವಿನಿಮಯ ಕೇಂದ್ರದ ಬಳಿ ಮಾಹಿತಿ ಇರುವುದರಿಂದ, ವಿವಿಧ ಯೋಜನೆಗಳನ್ನು ಹೊಂದಿರುವ ಸಂಸ್ಥೆಗಳಿಗೆ ಮಾಹಿತಿಗಳನ್ನು ಒದಗಿಸಿ ನೇರವಾಗಿ ಅಭ್ಯರ್ಥಿಗಳು ಆ ಸಂಸ್ಥೆಗಳನ್ನು ಸಂಪರ್ಕಿಸುವಂತೆ ಮಾಡಬಹುದು. ಜೊತೆಗೆ ನೊಂದಾಯಿಸಿದ ನಿರುದ್ಯೋಗಿಗಳಿಗೆ ವಿವಿಧ ಕ್ಷೇತ್ರಗಳ ಪರಿಚಯ ಮಾಡಿಕೊಟ್ಟು, ಪೂರಕ ಅರ್ಹತೆ ಪಡೆಯುವಂತೆ, ಸ್ವಂತ ಉದ್ಯೋಗ ಪ್ರಾರಂಭಿಸುವಂತೆ ಪ್ರೋತ್ಸಾಹಿಸಬಹುದು.

ಉದ್ಯೋಗ ಸೃಜನೆಯ ಕಾರ್ಯದಲ್ಲಿ ಪೂರಕ ಸಂಘಟನೆಗಳಾಗಿ ಕೆಲಸ ನಿರ್ವ ಹಿಸುವ ಜವಾಬ್ದಾರಿ ಶಿಕ್ಷಣ ಸಂಸ್ಥೆಗಳ ಮೇಲೂ ಇದೆ. ಒಟ್ಟಾರೆ ಶೈಕ್ಷಣಿಕ ಬೆಳವಣಿಗೆ ಯಲ್ಲಿ ಹೆಚ್ಚಿನ ಪ್ರಗತಿ ತೋರಿಸಿರುವ ಜಿಲ್ಲೆಯಲ್ಲಿ ವೃತ್ತಿಪರ ಶಿಕ್ಷಣ ನೀಡುವ ಸಂಸ್ಥೆ ಗಳು ಬಹಳ ಕಡಿಮೆ. ಆದ್ದರಿಂದ ಹೆಚ್ಚಿನ ಉದ್ಯೋಗಕ್ಕೆ ಅವಕಾಶವಿರುವ ಕ್ಷೇತ್ರ ಗಳಾದ ಸಣ್ಣ ಕೈಗಾರಿಕೆ, ಪ್ರಕ್ರಿಯ ಘಟಕಗಳು, ಪಶುಪಾಲನೆ, ತೋಟಗಾರಿಕೆ, ಮುಂತಾದವುಗಳಲ್ಲಿ ವಿಶೇಷ ತರಬೇತಿ ನೀಡುವ ಶಿಕ್ಷಣ ಸಂಸ್ಥೆಗಳು ತೀರ ಅಗತ್ಯ. ಹೊಸ ವಿಶ್ವವಿದ್ಯಾನಿಲಯವು ಇಂತಹ ಸಂಸ್ಥೆಗಳನ್ನು ಪ್ರಾರಂಭಿಸುವತ್ತ ಗಮನ ಹರಿಸಿದರೆ ನಿರುದ್ಯೋಗ ಸಮಸ್ಯೆಯ ಪರಿಹಾರಕ್ಕೆ ಉತ್ತಮ ಕೊಡುಗೆಯಾಗುತ್ತದೆ.

ವಿವಿಧ ಸಂಸ್ಥೆಗಳ ಗುರುತರ ಕೊಡುಗೆಯ ಅಗತ್ಯದ ಜೊತೆಗೆ, ತನಗೊಂದು ಉದ್ಯೋಗ ದೊರಕಿಸಿಕೊಳ್ಳುವಲ್ಲಿ, 'ನಿರುದ್ಯೋಗಿ' ಮಿತ್ರನದೂ ಸಾಕಷ್ಟು ಜವಾ ಬ್ದಾರಿ ಇದೆ ಎಂಬುದನ್ನು ಮರೆಯಲಾಗದು. ನಮ್ಮಲ್ಲಿ ಬಹಳ ಜನ ಈ ದೇಶದಲ್ಲಿ ಜನ್ಮ ತಳೆದಿದ್ದಕ್ಕೆ, ಕೆಲಸ ಒದಗಿಸಲಾಗದ ಸರಕಾರಕ್ಕೆ, ಕೆಲಸಕ್ಕೆ ಬಾರದ ಶಿಕ್ಷಣಕ್ಕೆ ಶಾಪ ಹಾಕುವುದರಲ್ಲೇ ಕಾಲ ಕಳೆಯುತ್ತೇವೆ. ಹಾಗೆಂದಮಾತ್ರಕ್ಕೆ ಪ್ರಯತ್ನ ಮಾಡಿದವರಿಗೆಲ್ಲಾ ತಾವೆಣಿಸಿದ ಉದ್ಯೋಗ ಲಭಿಸಿಬಿಟ್ಟಿದೆ ಎಂದಲ್ಲ. ಎಲ್ಲ ಪ್ರಯತ್ನಗಳ ನಡುವೆ ಕಾಡುವ ರಾಜಕೀಯ, ಶಿಫಾರಸು, ಲಂಚಗಳು ದಿನನಿತ್ಯ ಸಹ ಸ್ರಾರು ನಿರುದ್ಯೋಗಿಗಳನ್ನು ಹತಾಶೆಗೊಳಿಸುತ್ತವೆ ಎಂಬುದು ಸತ್ಯ. ಆದರೂ, ನಾವು ಇಚ್ಛೆಪಟ್ಟ ಉದ್ಯೋಗ ಹಿಡಿಯುವ ಕಾಲ ಈಗ ದೂರವಾಗಿದೆ ಎಂಬುದನ್ನು ಅರಿಯುವುದು ಸೂಕ್ತ. ಅಂತೆಯೇ ಉದ್ಯೋಗಿಗಳಾಗುವ ಮೊದಲ ಪ್ರಯತ್ನ

ವೆಂದರೆ ಉದ್ಯೋಗಾವಕಾಶಗಳಿರುವ ಕ್ಷೇತ್ರಗಳತ್ತ ಆಸ್ಥೆ ತಳೆಯುವುದು, ಆ ದಿಶೆಯಲ್ಲಿ ಪ್ರಾಮಾಣಿಕ ಪ್ರಯತ್ನ ನಡೆಸುವುದು, ಸ್ವಂತ ಉದ್ಯೋಗದತ್ತ ಗಮನ ಹರಿಸುವುದು. ಈ ಪ್ರಯತ್ನ ಸ್ವಲ್ಪ ಕಾಲ ತೆಗೆದುಕೊಳ್ಳಬಹುದು, ಆದರೂ ಫಲವಿಲ್ಲದೆ ಹೋಗುವುದಿಲ್ಲ.

ಒಟ್ಟಿನಲ್ಲಿ ಹೇಳುವುದಾದರೆ, ರಾಜ್ಯದ ಬಹಳಷ್ಟು ಜಿಲ್ಲೆಗಳಿಗೆ ಹೋಲಿಸಿದಲ್ಲಿ, ದ.ಕ. ಜಿಲ್ಲೆ ಸಂಪದ್ಭರಿತವೂ, ಅಭಿವೃದ್ಧಿ ಶೀಲವೂ ಆಗಿದೆ. ಶಿಕ್ಷಣ, ವ್ಯಾಪಾರ, ಬ್ಯಾಂಕಿಂಗ್ ಮುಂತಾದ ಪ್ರಮುಖ ರಂಗಗಳಲ್ಲಿ ಹೆಚ್ಚಿನ ಪ್ರಗತಿ ಸಾಧಿಸಿದೆಯುಷ್ಟೇ ಅಲ್ಲದೆ ಮುಂಬರುವ ವರ್ಷಗಳಲ್ಲಿ ಇನ್ನೂ ಹೆಚ್ಚಿನ ಬೆಳವಣಿಗೆಯ ನಿರ್ದಿಷ್ಟ ಕುರುಹುಗಳಿವೆ. ಅಂತೆಯೇ ಹೆಚ್ಚಿನ ಉದ್ಯೋಗಾವಕಾಶಗಳ ಸಾಧ್ಯತೆಯೂ ಇದೆ. ಲಭ್ಯವಿರುವ ಲಭ್ಯವಾಗುವ ಈ ಎಲ್ಲ ಅವಕಾಶಗಳನ್ನು ಪೂರ್ಣ ಪ್ರಮಾಣದಲ್ಲಿ ಉಪಯೋಗಿಸಿಕೊಳ್ಳಬಲ್ಲ ಯೋಜನೆಗಳು ಕಾರ್ಯಗತವಾದರೆ ಮತ್ತು ಮೂಲತಃ ಔದ್ಯೋಗಿಕ ಮನೋವೃತ್ತಿಯುವರಾದ ಜಿಲ್ಲೆಯ ಜನತೆ ಮುಂದಾಗಿ ಸ್ವಂತ ಉದ್ಯೋಗಾವಕಾಶಗಳ ಪ್ರಯೋಜನ ಪಡೆಯಲೆತ್ನಿಸಿದರೆ, ಜಿಲ್ಲೆಯ ನಿರುದ್ಯೋಗ ಸಮಸ್ಯೆಯ ತೀಕ್ಷ್ಣತೆ ಅಲ್ಪಾವಧಿಯಲ್ಲೇ ಕಡಿಮೆಯಾಗಬಹುದು.

ಕರ್ನಾಟಕದಲ್ಲಿ ಸಮಾಜವಾದಿಗಳು ಮತ್ತು ಚುನಾವಣೆಗಳು

ಹನುಮಂತ

ಭಾರತದಲ್ಲಿರುವ ಆರ್ಥಿಕ ಮತ್ತು ಸಾಮಾಜಿಕ ಅಸಮಾನತೆಗಳನ್ನು ತೊಡೆದು ಹಾಕಿ ಶೋಷಣೆರಹಿತ ಸಮಾಜವಾದಿ ಸಮಾಜವನ್ನು ಕಟ್ಟುವುದೇ ಸಮಾಜವಾದದ ಮುಖ್ಯ ಉದ್ದೇಶ. ತಮ್ಮ ಈ ಉದ್ದೇಶ ಸಾಧನೆಗಾಗಿ ಸಮಾಜವಾದಿಗಳು ಪ್ರಮುಖವಾಗಿ ಮೂರು ವಿಧಾನಗಳನ್ನು ಬಳಸಿದ್ದಾರೆ. ಶೋಷಣೆಯನ್ನು ತಪ್ಪಿಸಿ ಸಮಾನತೆಯೆಡೆ ಮುಂದುವರಿಯಲು ಅವರು ರಚನಾತ್ಮಕ ಕಾರ್ಯಕ್ರಮಗಳನ್ನು ಕೈಗೊಂಡಿದ್ದಾರೆ. ಶೋಷಣೆ ಹಾಗೂ ಅನ್ಯಾಯಗಳ ವಿರುದ್ಧ ಹಾಗೂ ಬಡ ಜನತೆಯ ನ್ಯಾಯೋಚಿತ ಅಧಿಕಾರಗಳಿಗಾಗಿ ಸಮಾಜವಾದಿಗಳು ಹೋರಾಟಗಳನ್ನು ನಡೆಸಿದ್ದಾರೆ. ಆದರೆ ಈ ವಿಧಾನಗಳಿಗಿಂತ ಹೆಚ್ಚಾಗಿ ರಾಜಕೀಯ ಅಧಿಕಾರವನ್ನು ಬಳಸಿ ಸಮಾಜವಾದಿ ಸಮಾಜವನ್ನು ಕಟ್ಟಲು ಪ್ರಯತ್ನಿಸುವ ಉದ್ದೇಶದಿಂದ ಅವರು ಚುನಾವಣೆಗಳಲ್ಲಿ ಸಕ್ರಿಯವಾಗಿ ಪಾಲುಗೊಂಡಿದ್ದಾರೆ.

ಸಮಾಜವಾದಿ ಪಕ್ಷ ಹಾಗೂ ಆಂದೋಲನಗಳು ಬಲಿಷ್ಠವಾಗಿ ಬೆಳೆಯುವವರೆಗೆ ಸಮಾಜವಾದಿಗಳು ಚುನಾವಣೆಗಳಿಂದ ದೂರವಿರಬೇಕೆಂದು ಹಲವು ಸಮಾಜವಾದಿಗಳು ವಾದಿಸಿದರೂ ಇದುವರೆಗೆ ಭಾರತದಲ್ಲಿ ನಡೆದ ಎಲ್ಲ ಚುನಾವಣೆಗಳಲ್ಲಿ ಸಮಾಜವಾದಿಗಳು ಭಾಗವಹಿಸಿದ್ದು ಅವರು ಚುನಾವಣೆಗಳನ್ನು ಸಮಾಜವಾದಿ ಸಮಾಜ ರಚನೆಯ ಒಂದು ಸಾಧನವೆಂದು ಗಂಭೀರವಾಗಿ ಪರಿಗಣಿಸುತ್ತಾರೆ ಎನ್ನುವುದನ್ನು ರುಜುವಾತುಪಡಿಸುತ್ತದೆ.

ಪ್ರಥಮ ಸಾರ್ವತ್ರಿಕ ಚುನಾವಣೆಗಳು

1952ರಲ್ಲಿ ಪ್ರಪ್ರಥಮ ಸಾರ್ವತ್ರಿಕ ಚುನಾವಣೆಗಳನ್ನು ಘೋಷಿಸಲಾಯಿತು. ಕಾಂಗ್ರೆಸ್ಸಿನಷ್ಟೇ ಜಯ ಸಿಕ್ಕುವುದೆಂಬ ನಂಬಿಕೆಯಿಂದ ಸಮಾಜವಾದಿ ಪಕ್ಷ ಚುನಾವಣಾ ಕಣಕ್ಕಿಳಿಯಿತು.

ರಾಷ್ಟ್ರೀಯ ಸಮಾಜವಾದಿ ಪಕ್ಷ "ಕಟ್ಟುವೆವು ನಾವು ಸಮಾಜವಾದವನ್ನು" ಎಂಬ ಚುನಾವಣಾ ಪ್ರಣಾಳಿಕೆಯನ್ನು, 1951ರ ಡಿಸೆಂಬರ್ ತಿಂಗಳಲ್ಲಿ ಬಿಡುಗಡೆ ಮಾಡಿತು. ಘೋಷಣಾ ಪತ್ರದಲ್ಲಿ ಭೂಸಮಸ್ಯೆಗೆ ಹೆಚ್ಚು ಪ್ರಾಮುಖ್ಯತೆಯನ್ನು ಕೊಡಲಾಗಿತ್ತು. ಯಾವ ಪರಿಹಾರಧನವಿಲ್ಲದೆಯೇ ಜಮೀನುದಾರಿ ಪದ ತಿಯನ್ನು

ರದ್ದುಗೊಳಿಸಲಾಗುವುದೆಂದೂ ಅವಶ್ಯಕತೆ ಬಿದ್ದಲ್ಲಿ ಮಾತ್ರ ಜಮೀನುದಾರರಿಗೆ ಪುನರ್‌ವಸತಿ ನೆರವನ್ನು ನೀಡಲಾಗುವುದೆಂದೂ ಇದರಲ್ಲಿ ಹೇಳಲಾಗಿತ್ತು. ನಮ್ಮ ದೇಶದಲ್ಲಿರುವ 15 ಕೋಟಿ ಎಕರೆ ಪಾಳುಭೂಮಿಯನ್ನು ವ್ಯವಸಾಯಯೋಗ್ಯ ಮಾಡುವುದಕ್ಕಾಗಿ ಬಡವರ ಮತ್ತು ಭೂಹೀನರ ಒಂದು ಅನ್ನಸೇನೆಯನ್ನು ಕಟ್ಟ ಬೇಕೆಂದೂ ಅನ್ನಸೇನೆಯ ಮೂಲಕ ವ್ಯವಸಾಯಯೋಗ್ಯ ಮಾಡಲಾದ ಭೂಮಿ ಯಲ್ಲಿ ಸಾಮೂಹಿಕ ಕೃಷಿ ಪದ್ಧತಿಯನ್ನು ಜಾರಿಗೆ ತರಬೇಕೆಂದೂ ಘೋಷಣಾ ಪತ್ರ ಹೇಳಿತು. ಮುಂದುವರಿದು ಘೋಷಣಾ ಪತ್ರ ಯಾವುದೇ ಕುಟುಂಬವು 30 ಎಕರೆ ಗಳಿಗಿಂತ ಹೆಚ್ಚು ಭೂಮಿಯನ್ನು ಹೊಂದಲು ಅವಕಾಶವನ್ನು ಕೊಡಲಾಗುವುದಿಲ್ಲ ವೆಂದೂ ರೈತರ ಒಕ್ಕಲೆಬ್ಬಿಸುವುದರ ವಿರುದ್ಧ ಸಂಪೂರ್ಣ ರಕ್ಷಣೆಯನ್ನು ನೀಡ ಲಾಗುತ್ತದೆಯೆಂದು ಹೇಳಿತು. ಉಳುವವನೇ ಭೂಮಿಯ ಒಡೆಯನಾಗಬೇಕು ಎಂಬುದು ಸಮಾಜವಾದದ ತಿರುಳು ಎಂದು ಘೋಷಣಾ ಪತ್ರ ಸಾರಿತು. ರೈತರಿಗೆ ಸಾಲಸೌಲಭ್ಯಗಳು, ಬೀಜ ಮತ್ತು ಗೊಬ್ಬರ, ಹಾಗೂ ತರಬೇತಿಯ ಸವಲತ್ತುಗಳನ್ನು ಕೊಡಬೇಕು ; ನಿರುದ್ಯೋಗ ಸಮಸ್ಯೆಯನ್ನು ಹೋಗಲಾಡಿಸಲು ಗ್ರಾಮೀಣ ಮತ್ತು ಲೋಕೋಪಯೋಗಿ ಕೆಲಸಗಳಿಗೆ ಹೆಚ್ಚು ಪ್ರೋತ್ಸಾಹ ಕೊಡಬೇಕು ; ಭಾರೀ ಕೈಗಾರಿಕೆಗಳನ್ನು ರಾಷ್ಟ್ರೀಕರಣಗೊಳಿಸಿ, ಅದರಿಂದ ಬಂದ ಲಾಭಾಂಶವನ್ನು ಜನರ ಕಲ್ಯಾಣಕಾರೀ ಯೋಜನೆಗಳಿಗೇ ವಿನಿಯೋಗಿಸಬೇಕು ; ಕಾರ್ಖಾನೆಗಳಲ್ಲಿ ಕಾರ್ಮಿಕರ ಭಾಗವಹಿಸುವಿಕೆಗೆ ಅನುಕೂಲಗಳನ್ನು ಕಲ್ಪಿಸಿಕೊಡಬೇಕು, ಹಾಗೂ ಆರ್ಥಿಕ ಸಮಾನತೆ ಸಾಧಿಸಲು ಆದಾಯದಲ್ಲಿಯ ಅಂತರವನ್ನು 1 : 10ರ ಪ್ರಮಾಣಕ್ಕೆ ತರಬೇಕು ಮುಂತಾಗಿ ಘೋಷಣಾಪತ್ರದಲ್ಲಿ ಹೇಳಲಾಯಿತು.

ರಾಷ್ಟ್ರೀಯ ಸಮಾಜವಾದಿ ಪಕ್ಷದ ಘೋಷಣಾ ಪತ್ರಕ್ಕೆ ಪೂರಕವಾಗಿ ರಾಜ್ಯದ ವಿಶಿಷ್ಟ ಸಮಸ್ಯೆಗಳ ಬಗ್ಗೆ ತನ್ನ ನಿಶ್ಚಿತ ನಿಲುವನ್ನು ನಿರೂಪಿಸುವ ಒಂದು ಉಪ ಘೋಷಣಾಪತ್ರವನ್ನು ರಾಜ್ಯದ ಸಮಾಜವಾದಿ ಪಕ್ಷದ ಅಧ್ಯಕ್ಷರಾದ ಸಿ. ಜಿ. ಕೆ. ರೆಡ್ಡಿ ಅವರು 26 ಡಿಸೆಂಬರ್ 1951ರಂದು ಬಿಡುಗಡೆ ಮಾಡಿದರು. ರಾಜ್ಯದ ನಾನ್- ಗೆಜೆಟೆಡ್ ನೌಕರರಿಗೆ ಕನಿಷ್ಟ ಸಂಬಳ 100 ರೂ.ಗಳಿಗೆ ನಿಗದಿ ಮಾಡಿ, ಅವರಿಗೆ ಹೆಚ್ಚು ಅನುಕೂಲಗಳನ್ನು ಮಾಡಿಕೊಡುವುದಾಗಿ ಪಕ್ಷ ಈ ಉಪಘೋಷಣಾಪತ್ರದಲ್ಲಿ ಹೇಳಿತು. ಸರಕಾರವು ನೇಮಿಸಿದ ಚೌಂದರ್ ಕಮೀಷನನ್ನು ಪಕ್ಷವು ಮಾನ್ಯ ಮಾಡಿತ್ತು.

ಮಲೆನಾಡು ಪ್ರದೇಶದ ಹಿಂದುಳಿದಿರುವಿಕೆ ಹಾಗು ಅದರ ಜನತೆಯ ವಿಶಿಷ್ಟ ಸಮಸ್ಯೆಗಳ ತೀವ್ರತೆಯ ಆಳವನ್ನು ಗಮನಿಸಿದ ಪಕ್ಷವು ಮಲೆನಾಡಿನ ಸರ್ವಾಂಗೀಣ ಅಭಿವೃದ್ಧಿಗಾಗಿ ಒಂದು ಮಲೆನಾಡು ಅಭಿವೃದ್ಧಿ ಮಂಡಳಿಯನ್ನು ರಚಿಸಬೇಕೆಂದು ಉಪಪ್ರಣಾಳಿಕೆಯಲ್ಲಿ ಹೇಳಿತು. ಆರೋಗ್ಯ ಹಾಗೂ ಸಂಚಾರ ಸೌಲಭ್ಯಗಳನ್ನು

ಉತ್ತಮಗೊಳಿಸಲು ತೀವ್ರ ಗಮನ ಕೊಡಲಾಗುವುದು ಎಂದು ಹೇಳಿದ ಉಪ ಪ್ರಣಾಳಿಕೆ ಮುಂದುವರೆದು ಉಚಿತ ವಿದ್ಯಾಭ್ಯಾಸ ಮತ್ತು ಹಿಂದುಳಿದವರ ಪ್ರಗತಿ ಗಾಗಿ ಪಕ್ಷ ದುಡಿಯುವುದಾಗಿ ಭರವಸೆ ನೀಡಿತು. ಜನತೆಯ ಸಹಕಾರದೊಂದಿಗೆ ಆ ಪ್ರದೇಶದ ಸಾಧನ ಸಂಪತ್ತುಗಳನ್ನು ಪೂರ್ಣವಾಗಿ ಬಳಸಲಾಗುವುದು, ವಿವಿಧೋ ದ್ದೇಶ ಸಹಕಾರ ಸಂಘಗಳನ್ನು ಹೆಚ್ಚು ಹೆಚ್ಚು ಪ್ರಜಾಸತ್ತಾತ್ಮಕಗೊಳಿಸುವುದು, ಎಲ್ಲೆಲ್ಲಿ ಸಾಧ್ಯವೋ ಅಲ್ಲಲ್ಲಿ ಎತ್ತು ನೀರಾವರಿ ಸೌಕರ್ಯಗಳನ್ನು ರೈತರಿಗೆ ಕಲ್ಪಿಸಿ ಕೊಡಲಾಗುವುದು ಹಾಗೂ ಹಳ್ಳಿಗಳಿಗೆ ವಿದ್ಯುತ್‌ಶಕ್ತಿಯನ್ನು ಹೆಚ್ಚು ಸರಬರಾಜು ಮಾಡಲಾಗುವುದು ಎಂದು ಉಪಪ್ರಣಾಳಿಕೆ ಹೇಳಿತು. ಶಿಕ್ಷಣದ ಬಗ್ಗೆ ಉಪ ಪ್ರಣಾಳಿಕೆ ಪಕ್ಷದ ಸ್ಪಷ್ಟನೀತಿಯನ್ನು ನಿರೂಪಿಸಿತು. ಉನ್ನತ ಶಿಕ್ಷಣ ನೀಡುವ ವಿಶ್ವವಿದ್ಯಾಲಯಗಳಿಗೆ ಸ್ವಾಯತ್ತತೆಯನ್ನು ನೀಡಲಾಗುವುದು ಹಾಗೂ ಅವುಗಳಿಗೆ ಹೆಚ್ಚು ಹಣವನ್ನು ಒದಗಿಸಿಕೊಡಲಾಗುವುದು, ಕಡ್ಡಾಯ ಮತ್ತು ಉಚಿತ ಪ್ರಾಥಮಿಕ ಶಿಕ್ಷಣವನ್ನು ಪರಿಣಾಮಕಾರಿಯಾಗಿ ಜಾರಿಗೆ ತರಲಾಗುವುದು ಎಂದು ಇದರಲ್ಲಿ ಹೇಳಲಾಯಿತು. ರಾಜ್ಯದಲ್ಲಿರುವ ಚಿನ್ನದ ಗಣಿಗಳನ್ನು ತಕ್ಷಣ ರಾಷ್ಟ್ರೀ ಕರಣ ಮಾಡಿ ಅದರಿಂದ ಬರುವ ಲಾಭವನ್ನು ಸಂಪೂರ್ಣವಾಗಿ ದೇಶಾಭಿವೃದ್ಧಿ ಕಾರ್ಯಗಳಿಗೆ ಬಳಸಲಾಗುವುದು ಇವೇ ಮೊದಲಾದ ಕಾರ್ಯಕ್ರಮಗಳನ್ನು ಉಪ ಪ್ರಣಾಳಿಕೆ ನಿರೂಪಿಸಿತು.

ಕಾಂಗ್ರೆಸ್ ಸರಕಾರವು ಸಾರ್ವಜನಿಕರ ಜ್ವಲಂತ ಸಮಸ್ಯೆಗಳ ಬಗ್ಗೆ ಗಮನ ಕೊಡದೆ ಉದಾಸೀನವಾಗಿದೆ. ಅದರ ಆಡಳಿತದಲ್ಲಿ ಕೋಮುವಾರುಭಾವನೆ, ಸ್ವಜನ ಪಕ್ಷಪಾತ, ಲಂಚಗುಳಿತನ ಹಾಗೂ ದುರಾಡಳಿತಗಳು ತಡೆಯಿಲ್ಲದೆ ನಡೆಯುತ್ತಿವೆ. ಆದ್ದರಿಂದ ಈ ಚುನಾವಣೆಯಲ್ಲಿ ಅದನ್ನು ಅಧಿಕಾರದಿಂದ ಇಳಿಸಿ, ಸ್ವಚ್ಛ ಆಡಳಿತ, ಹಾಗೂ ಸಾರ್ವಜನಿಕರ ಸಮಸ್ಯೆಗಳನ್ನು ಪರಿಹರಿಸಿ ಸಮಾಜವಾದಿ ಸಮಾಜವನ್ನು ರಚಿಸಲು ಬಯಸುವ ಸಮಾಜವಾದಿ ಪಕ್ಷಕ್ಕೆ ಜನರು ಮತ ನೀಡಬೇಕೆಂದು ಪಕ್ಷವು ಮತದಾರರಲ್ಲಿ ಮನವಿ ಮಾಡಿಕೊಂಡಿತು. ಚುನಾವಣೆಗಳಲ್ಲಿ ಬಹುಮುಖಸ್ಪರ್ಧೆ ಏರ್ಪಟ್ಟು ಮತಗಳು ಹರಿದು ಹಂಚಿಹೋಗಿ ಕಾಂಗ್ರೆಸ್ ಪಕ್ಷವು ಅಧಿಕಾರಕ್ಕೆ ಬರುವ ಸಾಧ್ಯತೆಗಳಿದ್ದ ಕಾರಣದಿಂದ ರಾಷ್ಟ್ರೀಯ ಸಮಾಜವಾದಿ ಪಕ್ಷ ಕಿಸಾನ್ ಮಜದೂರ್ ಪ್ರಜಾಪಕ್ಷದೊಂದಿಗೆ ರಾಷ್ಟ್ರೀಯ ಮಟ್ಟದಲ್ಲಿ ಹೊಂದಾಣಿಕೆಗಳನ್ನು ಮಾಡಿಕೊಳ್ಳಲು ಪ್ರಯತ್ನಿಸಿತು. ಆದರೆ ಹೊಂದಾಣಿಕೆ ಸಾಧ್ಯವಾಗಲಿಲ್ಲ. ಇದೇ ರೀತಿ ಕರ್ನಾಟಕ ದಲ್ಲಿ ಸಮಾಜವಾದಿ ಪಕ್ಷ ಹಾಗೂ ಮೈಸೂರಿನ ಜನತಾ ಪಕ್ಷಗಳ ನಡುವೆ ಚುನಾವಣೆ ಗಳಲ್ಲಿ ''ಸ್ಪರ್ಧೆಯ ಸಹಕಾರ''ವನ್ನು ಕುದುರಿಸಲು ಪ್ರಯತ್ನಗಳು ನಡೆದವು. ಆದರೆ ಮೈತ್ರಿಯ ಪ್ರಯತ್ನಗಳು ಮುರಿದುಬಿದ್ದವು. ಆದರೆ ರಾಷ್ಟ್ರೀಯ ಸಮಾಜವಾದಿ ಪಕ್ಷವು ಡಾ: ಅಂಬೇಡಕರ್ ಅವರ ಷೆಡ್ಯೂಲ್ಡ್ ಕ್ಯಾಸ್ಟ್ ಮತ್ತು ಷೆಡ್ಯೂಲ್ಡ್ ಟ್ರೈಬ್ಸ್ ಫೆಡರೇಷನ್ ಜೊತೆಯಲ್ಲಿ ಚುನಾವಣಾ ಮೈತ್ರಿಯನ್ನು ಮಾಡಿಕೊಂಡಿತ್ತು.

ಈ ಚುನಾವಣೆಗಳಲ್ಲಿ ಜಯಪ್ರಕಾಶನಾರಾಯಣ, ಡಾ: ರಾಮಮನೋಹರ ಲೋಹಿಯಾ ಮೊದಲಾದ ರಾಷ್ಟ್ರೀಯ ನಾಯಕರು ಹಾಗೂ ಕನ್ನಡದ ಪ್ರಸಿದ್ಧ ಕಾದಂಬರಿಕಾರ ತ. ರಾ. ಸುಬ್ಬರಾವ್ ಅವರು ಭಾಷಣಗಳನ್ನು ಮಾಡಿದರು.

ಸಮಾಜವಾದಿ ಪಕ್ಷವು ಮೈಸೂರು ರಾಜ್ಯದ ಲೋಕಸಭೆಯ 11 ಸ್ಥಾನಗಳಲ್ಲಿ 4 ಸ್ಥಾನಗಳಿಗೆ ಸ್ಪರ್ಧಿಸಿತು. ಸಿ. ಜಿ. ಕೆ. ರೆಡ್ಡಿ ಬೆಂಗಳೂರು–ಉತ್ತರ ಕ್ಷೇತ್ರದಿಂದ, ಎಸ್. ಶಿವಪ್ಪ ಹಾಸನ–ಚಿಕ್ಕಮಗಳೂರು ಕ್ಷೇತ್ರದಿಂದ, ಟಿ. ಎಲ್. ಕಲ್ಲಯ್ಯ, ಶಿವಮೊಗ್ಗ ಕ್ಷೇತ್ರದಿಂದ ಹಾಗೂ ಖಾದ್ರಿ ಶಾಮಣ್ಣ ಅವರು ತುಮಕೂರು ಕ್ಷೇತ್ರ ಗಳಿಂದ ಸ್ಪರ್ಧಿಸಿದರು. ಲೋಕಸಭೆಗೆ ಒಟ್ಟು 54,39,098 ಮತದಾರರಿದ್ದರು. ಈ ಚುನಾವಣೆಯಲ್ಲಿ ಶೇಕಡಾ 51.9 ರಷ್ಟು ಮತದಾನ ನಡೆಯಿತು. ಸಮಾಜವಾದಿ ಪಕ್ಷವು ಶೇಕಡಾ ಬಿದ್ದ ಮತಗಳಲ್ಲಿ 6.2 ರಷ್ಟು ಮತಗಳನ್ನು ಗಳಿಸಿದರೂ ಒಂದು ಸ್ಥಾನವನ್ನು ಪಡೆಯಲು ಸಾಧ್ಯವಾಗಲಿಲ್ಲ.

ಸಮಾಜವಾದಿ ಪಕ್ಷವು ಮೈಸೂರಿನ ಶಾಸನ ಸಭೆಯ ಒಟ್ಟು 208 ಸ್ಥಾನಗಳಲ್ಲಿ 44 ಸ್ಥಾನಗಳಿಗೆ ಸ್ಪರ್ಧಿಸಿ 13 ಸ್ಥಾನಗಳಲ್ಲಿ ಜಯಗಳಿಸಿತು. ಸಮಾಜವಾದಿ ಪಕ್ಷಕ್ಕೆ ಬೆಂಬಲ ನೀಡಿದ ನಾಲ್ಕು ಜನ ಪಕ್ಷೇತರ ಅಭ್ಯರ್ಥಿಗಳಲ್ಲಿ ಒಬ್ಬರು ಜಯಗಳಿಸಿದರು. ಒಟ್ಟು ಬಿದ್ದ 49,28,207 ಮತಗಳಲ್ಲಿ ಪಕ್ಷ 11,11,320 ಮತಗಳನ್ನು ಅಂದರೆ ಶೇಕಡಾ 22.54 ರಷ್ಟು ಮತಗಳನ್ನು ಪಡೆಯಿತು. ಮುಲ್ಕಗೋವಿಂದ ರೆಡ್ಡಿ ಚಿತ್ರದುರ್ಗದಿಂದ, ಎಸ್. ಗೋಪಾಲಗೌಡ ಸಾಗರ–ಹೊಸದುರ್ಗದ ಜಂಟಿ ಕ್ಷೇತ್ರ ಗಳಿಂದ ಜೆ. ಮೊಹಮದ್ ಇಮಾಮ್‌ಸಾಬ್ ಜಗಳೂರಿನಿಂದ, ಬಿ. ರಾಚಯ್ಯ ಯಳಂದೂರು ಕ್ಷೇತ್ರದಿಂದ ಹಾಗೂ ಬಿ. ಹುಚ್ಚೇಗೌಡ ತುರುವೇಕೆರೆ ಕ್ಷೇತ್ರದಿಂದ ಜಯಗಳಿಸಿದರು.

ಎರಡನೆಯ ಸಾರ್ವತ್ರಿಕ ಚುನಾವಣೆಗಳು

ಸೋಲಿನ ಕಹಿಯ ತೀವ್ರತೆ ಹಾಗೂ ರಾಷ್ಟ್ರದಲ್ಲಿ ಉಂಟಾದ ರಾಜಕೀಯ ವಿಚ್ಛಿದ್ರತೆಯ ಆಳವನ್ನು ಮನವರಿಕೆ ಮಾಡಿಕೊಂಡು ಕಾಂಗ್ರೆಸ್ ಪಕ್ಷಕ್ಕೆ ಪರ್ಯಾಯ ವನ್ನು ಒದಗಿಸಿಕೊಡಲು ಸಮಾಜವಾದಿ ಪಕ್ಷ ಹಾಗೂ ಕಿಸಾನ್ ಮಜದೂರ್ ಪ್ರಜಾ ಪಕ್ಷಗಳು ದಿನಾಂಕ 26, 27 ಸೆಪ್ಟೆಂಬರ್ 1952 ರಲ್ಲಿ ವಿಲೀನ ಹೊಂದಿದವು. ಹೊಸ ಪಕ್ಷವನ್ನು ಪ್ರಜಾಸಮಾಜವಾದಿ ಪಕ್ಷ ಎಂದು ಹೆಸರಿಸಲಾಯಿತು. ಕರ್ನಾಟಕದಲ್ಲಿಯೂ ಈ ಎರಡು ಪಕ್ಷಗಳು ವಿಲೀನ ಹೊಂದಿ ಪ್ರಜಾಸಮಾಜವಾದಿ ಪಕ್ಷ ರಚಿತವಾಯಿತು. ಆದರೆ ಎರಡನೆಯ ಸಾರ್ವತ್ರಿಕ ಚುನಾವಣೆಗಳ ಹೊತ್ತಿಗೆ ಪಕ್ಷ ಒಡೆದು ಇಬ್ಭಾಗವಾಯಿತು. ಒಡೆದುಹೋದ ಗುಂಪು ಸಮಾಜವಾದಿ

ಪಕ್ಷವನ್ನು ರಚಿಸಿಕೊಂಡಿತು. ಇದರಿಂದಾಗಿ ಕರ್ನಾಟಕದಲ್ಲಿಯೂ ಪಕ್ಷ ಒಡೆದು ಇಬ್ಭಾಗವಾಯಿತು. ಪ್ರಜಾಸಮಾಜವಾದಿ ಪಕ್ಷವು ಕರ್ನಾಟಕದಲ್ಲಿ ಅತ್ಯಂತ ಪ್ರಮುಖ ಪಕ್ಷವಾಗಿತ್ತು. ಈ ಎರಡು ಪಕ್ಷಗಳು ಎರಡನೆಯ ಸಾರ್ವತ್ರಿಕ ಚುನಾವಣೆಗಳಲ್ಲಿ ಪ್ರತ್ಯೇಕವಾಗಿ ಸ್ಪರ್ಧಿಸಲು ನಿರ್ಧರಿಸಿದವು.

ನವೆಂಬರ್ 1, 1956ರಂದು ಕನ್ನಡ ರಾಜ್ಯೋದಯವಾಯಿತು. ಎರಡನೆಯ ಸಾರ್ವತ್ರಿಕ ಚುನಾವಣೆಗೆ ಹೊಸದಾಗಿ 10 ದಶಲಕ್ಷ ಕನ್ನಡಿಗರು ಮತದಾರರಾಗಿ ಸೇರ್ಪಡೆಯಾದರು. ಕನ್ನಡಿಗರು ಭಾಷಾ ಹಾಗೂ ಭೌಗೋಳಿಕವಾಗಿ ಒಂದಾಗುವ ಕೆಲಸ ನಡೆದರೂ ಅವರನ್ನು ರಾಜಕೀಯವಾಗಿ ಒಂದಾಗಿಸುವ ಹೊಣೆಗಾರಿಕೆ ಹಾಗೆಯೇ ಉಳಿದಿತ್ತು. ಈ ಹೊಣೆಗಾರಿಕೆಯನ್ನು ಪೂರೈಸಲು ಈ ಸಾರ್ವತ್ರಿಕ ಚುನಾವಣೆಗಳು ಸಹಾಯ ಮಾಡಿದವು. ಹೊಸದಾಗಿ ರೂಪುಗೊಂಡ ಕರ್ನಾಟಕದ ಸಮಗ್ರ ಅಭಿವೃದ್ಧಿಗಾಗಿ ಸುಭದ್ರ ಸರ್ಕಾರ ಅನಿವಾರ್ಯವೆಂದು ನಂಬಿದ ಪಕ್ಷ ಅಂಥ ಸರಕಾರ ನೀಡುವ ಆತ್ಮವಿಶ್ವಾಸದಿಂದ ರಾಜ್ಯದ ಚುನಾವಣೆಗಳಲ್ಲಿ ಭಾಗವಹಿಸಿತು. ರಾಷ್ಟ್ರೀಯ ಪ್ರಜಾಸಮಾಜವಾದಿ ಪಕ್ಷದ ಚುನಾವಣಾ ಘೋಷಣಾ ಪತ್ರವನ್ನೇ ರಾಜ್ಯಪಕ್ಷವು ಅಂಗೀಕರಿಸಿತು. ಈ ಚುನಾವಣಾ ಘೋಷಣಾ ಪತ್ರ ಈ ರೀತಿ ಹೇಳಿತು : ಕಾಂಗ್ರೆಸ್ ಸರಕಾರದ ದುರಾಡಳಿತದ ಪರಿಣಾಮವಾಗಿ ಜನತೆಯಲ್ಲಿ ವ್ಯಾಪಕವಾಗಿ ಬೆಳೆಯುತ್ತಿರುವ ಸರ್ವಾಧಿಕಾರ ಅಥವಾ ಅನಾಯಕತ್ವದ ಭೀತಿಯ ನಿವಾರಣೆಗಾಗಿ ಪಕ್ಷವು ಶ್ರಮಿಸುವುದು. ಸರಕಾರಿ ಹಾಗೂ ರಾಜಕೀಯ ಮಟ್ಟದಲ್ಲಿ ದಿನೇ ದಿನೇ ರಾಜಾರೋಷವಾಗಿ ಬೆಳೆಯುತ್ತಿರುವ ಲಂಚಗುಳಿತನ ಹಾಗೂ ಪ್ರಭಾವಗಳಿಂದ ಮುಕ್ತವಾದ ದಕ್ಷ ಆಡಳಿತವನ್ನು ಒದಗಿಸಿಕೊಡುವುದು. ದೇಶದಲ್ಲಿ ಪ್ರಜಾಪ್ರಭುತ್ವ ಭದ್ರವಾಗಿ ನೆಲೆಗೊಳಿಸುವುದಕ್ಕಾಗಿ ಅಧಿಕಾರವನ್ನು ವಿಕೇಂದ್ರೀಕರಣಗೊಳಿಸುವುದು, ಕಾಂಗ್ರೆಸ್ ಸರಕಾರ ರೂಪಿಸಿದ ದೋಷಯುಕ್ತ ಪ್ರಥಮ ಮತ್ತು ದ್ವಿತೀಯ ಪಂಚವಾರ್ಷಿಕ ಯೋಜನೆಗಳ ಪರಿಣಾಮವಾಗಿ ಬೆಲೆಗಳು ಗಗನಕ್ಕೇರಿವೆ. ಅದರ ಫಲಗಳು ಬಡವರಿಗೆ ಸಿಗದೆ ಶ್ರೀಮಂತರಿಗೆ ಸಿಕ್ಕಿವೆ. ಪಕ್ಷವು ಬಡವರ ಜೀವನ ಮಟ್ಟವನ್ನು ಸುಧಾರಿಸುವಂತಹ ಹಳ್ಳಿಗಳ ರಸ್ತೆ ನಿರ್ಮಾಣ, ಹಾಗೂ ಹಳ್ಳಿಗಳ ಗೃಹ ನಿರ್ಮಾಣ ಮತ್ತು ಸಣ್ಣ ಕೈಗಾರಿಕೆ ಕಾರ್ಯಗಳಿಗೆ ಆದ್ಯತೆಯನ್ನು ಕೊಡುವುದು. ಗೇಣಿದಾರರಿಗೆ ಭೂಮಿ ದಕ್ಕುವುದಕ್ಕಾಗಿ 'ಉಳುವವನೇ ಭೂಮಿಯ ಒಡೆಯ' ಎಂಬ ತತ್ವವನ್ನಾಧರಿಸಿದ ಕಾನೂನನ್ನು ರೂಪಿಸುವುದು. ಸಣ್ಣ ಹಿಡುವಳಿದಾರರನ್ನು ಒಟ್ಟುಗೂಡಿಸಿ ಸಹಕಾರಿ ಕೃಷಿಗೆ ಪ್ರೋತ್ಸಾಹ ನೀಡುವುದು. ಹಳ್ಳಿ ಜನತೆಗೆ ಉಚಿತ ವೈದ್ಯಕೀಯ ಸವಲತ್ತುಗಳನ್ನು ಕೊಡುವುದಕ್ಕಾಗಿ ವೈದ್ಯ ವೃತ್ತಿಯನ್ನು ರಾಷ್ಟ್ರೀಕರಣ ಮಾಡುವುದು. ಕಾಂಗ್ರೆಸ್ ಸರಕಾರವು ಪ್ರಥಮ ಮತ್ತು ದ್ವಿತೀಯ ಪಂಚವಾರ್ಷಿಕ ಯೋಜನೆಗಳಲ್ಲಿ ನಗರ ಹಾಗೂ ಗ್ರಾಮೀಣ ಕೈಗಾರಿಕೆಗಳ

ನಡುವೆ ಹೆಚ್ಚು ಅಸಮಾನತೆಯನ್ನು ಸೃಷ್ಟಿಸಿತ್ತು. ಈ ಅಸಮಾನತೆಯನ್ನು ತೊಡೆದುಹಾಕಲು ಗ್ರಾಮಾಂತರ ಕೈಗಾರಿಕೆಗಳಿಗೆ ಆದ್ಯತೆ ಕೊಡಲಾಗುವುದು. ರಾಷ್ಟ್ರೀಕೃತ ಕೈಗಾರಿಕೆಯಲ್ಲಿ ಕೆಲಸ ಮಾಡುತ್ತಿರುವ ನೌಕರರ ನಡುವೆಯಿರುವ ವೇತನಗಳ ಅಸಮಾನತೆಯನ್ನು ಪಕ್ಷ ನಿವಾರಿಸುತ್ತದೆ. ಕನಿಷ್ಠ ದರ್ಜೆಯ ನೌಕರರಿಗೆ ಪಕ್ಷ ಹೆಚ್ಚು ಸವಲತ್ತುಗಳನ್ನು ಕೊಡುತ್ತದೆ. ದಿನೇ ದಿನೇ ಬೆಳೆಯುತ್ತಿರುವ ವಿದ್ಯಾವಂತರ ನಿರುದ್ಯೋಗ ಸಮಸ್ಯೆ ತೊಡೆದು ಹಾಕಲು ತೀವ್ರ ಗಮನ ಕೊಡುತ್ತದೆ. ವಸಾಹತುಶಾಹಿಯ ಕಪಿಮುಷ್ಠಿಯಿಂದ ಬಿಡುಗಡೆ ಹೊಂದಿ ಸ್ವತಂತ್ರವಾಗಿರುವ ಏಷ್ಯಾದ ಕೆಲವು ದೇಶಗಳಲ್ಲಿ ಸರ್ವಾಧಿಕಾರ ಅಥವಾ ಅನಾಯಕತ್ವವು ತಲೆದೋರಿರುವುದನ್ನು ಗಮನಿಸಿ ಅಂಥ ದುರಂತವು ನಮ್ಮ ರಾಷ್ಟ್ರದಲ್ಲಿ ಸಂಭವಿಸುವ ಮೊದಲೇ ಒಂದು ಸಮರ್ಥ ವಿರೋಧ ಪಕ್ಷವಾಗಿ ಪ್ರಜಾಸಮಾಜವಾದಿ ಪಕ್ಷ ರೂಪಗೊಳ್ಳ ಬಯಸುತ್ತದೆ ಎಂದು ಪ್ರಣಾಳಿಕೆ ಘೋಷಿಸಿತು.

ರಾಷ್ಟ್ರೀಯ ಮಟ್ಟದಲ್ಲಿ ಪ್ರಜಾಸಮಾಜವಾದಿ ಪಕ್ಷವು ಅನೇಕ ಕಾಂಗ್ರೆಸ್ಸೇತರ ಪಕ್ಷಗಳೊಂದಿಗೆ ಚುನಾವಣಾ ಮೈತ್ರಿಯನ್ನು ಮಾಡಿಕೊಂಡಿತು. ಹಾಗೆಯೇ ಕರ್ನಾಟಕದಲ್ಲೂ ಕೂಡ ಪಕ್ಷವು ಅನೇಕ ಚುನಾವಣಾ ಕ್ಷೇತ್ರಗಳಲ್ಲಿ ಬಹುಮುಖ ಸ್ಪರ್ಧೆಯಿದ್ದರೂ ಕಮ್ಯುನಿಸ್ಟ್ ಪಕ್ಷ ಹಾಗೂ ಪಕ್ಷೇತರ ಅಭ್ಯರ್ಥಿಗಳೊಂದಿಗೆ ಚುನಾವಣಾ ಹೊಂದಾಣಿಕೆಯನ್ನು ಮಾಡಿಕೊಂಡಿತು. ಕರ್ನಾಟಕ ರಾಜ್ಯಕ್ಕೆ ಒಟ್ಟು 23 ಚುನಾವಣಾ ಕ್ಷೇತ್ರಗಳಿಂದ 26 ಲೋಕಸಭೆಯ ಸ್ಥಾನಗಳಿದ್ದವು. ಪಕ್ಷವು 12 ಅಭ್ಯರ್ಥಿಗಳನ್ನು ನಿಲ್ಲಿಸಿತು. ಸ್ಪರ್ಧಿಸಿದ ಅಭ್ಯರ್ಥಿಗಳಲ್ಲಿ ಚಿತ್ರದುರ್ಗ ಕ್ಷೇತ್ರದಿಂದ ಮಹಮದ್ ಜೆ. ಇಮಾಮ್ ಮಾತ್ರ ಆಯ್ಕೆಗೊಂಡರು. ಪಕ್ಷವು ಬಿದ್ದ ಮತಗಳಲ್ಲಿ ಶೇಕಡಾ 18.7ರಷ್ಟು ಮತಗಳನ್ನು ಪಡೆಯಿತು. ರಾಜ್ಯದಲ್ಲಿ 179 ಚುನಾವಣಾ ಕ್ಷೇತ್ರಗಳಿಂದ ಒಟ್ಟು 208 ಅಭ್ಯರ್ಥಿಗಳನ್ನು ವಿಧಾನಸಭೆಗೆ ಆರಿಸಿ ಕಳಿಸಬೇಕಾಗಿತ್ತು. ಕರ್ನಾಟಕದಲ್ಲಿ ಒಟ್ಟು 101,23,618 ಮತದಾರರಿದ್ದರು. ಫೆಬ್ರವರಿ ದಿನಾಂಕ 25, 26, 28 ಹಾಗೂ ಮಾರ್ಚ್ 1 ರಿಂದ 12ರ ವರೆಗೆ ಚುನಾವಣೆಗಳು ನಡೆದವು. ಪಕ್ಷವು 85 ಅಭ್ಯರ್ಥಿಗಳನ್ನು ನಿಲ್ಲಿಸಿತು. ಇವರಲ್ಲಿ ಕೇವಲ 18 ಅಭ್ಯರ್ಥಿಗಳು ಮಾತ್ರ ಆಯ್ಕೆಗೊಂಡರು. ಕೆ. ಕೆಂಚಪ್ಪ, ಜೆ. ಮಾಧವರಾವ್, ಯು. ಎಸ್. ನಾಯಕ, ಸಿ. ಕೆ. ರಾಜಯ್ಯ ಶೆಟ್ಟಿ, ಎಂ. ಎಂ. ಜೆ. ಸದ್ಯೋಜಾತಪ್ಪ, ಕೆ. ಪಿ. ರೇವಣಸಿದ್ದಪ್ಪ, ಮೊದಲಾದ ನಾಯಕರು ಆಯ್ಕೆಗೊಂಡರು. ಪಕ್ಷದ ಪ್ರಧಾನ ಕಾರ್ಯದರ್ಶಿಗಳಾದ, ಮುಲ್ಕಾಗೋವಿಂದರೆಡ್ಡಿಯವರು ಚಳ್ಳಕೆರೆ ಚುನಾವಣಾ ಕ್ಷೇತ್ರದಿಂದ ಸೋತರು. ಒಟ್ಟು ಬಿದ್ದ 64,20,159 ಮತಗಳ ಪೈಕಿ ಪಕ್ಷವು 9,02,373 ಮತಗಳನ್ನು ಪಡೆಯಿತು. ಅಂದರೆ ಬಿದ್ದ ಮತಗಳಲ್ಲಿ ಶೇಕಡಾ 14.05ರಷ್ಟು ಮತಗಳನ್ನು ಪಡೆಯಿತು.

ರಾಷ್ಟ್ರೀಯ ಸಮಾಜವಾದಿ ಪಕ್ಷ (ಲೋಹಿಯಾ ಗುಂಪು)ವು ಭಾರತದಲ್ಲಿ ಹೊಸ ನಾಗರಿಕತೆಯ ನಿರ್ಮಾಣದ ದೃಢ ಸಂಕಲ್ಪವನ್ನು ಹೊತ್ತು ಎರಡನೆಯ ಸಾರ್ವತ್ರಿಕ ಚುನಾವಣೆಯ ಕಣಕ್ಕೆ ಇಳಿಯಿತು. ಸಮಾಜವಾದಿ ಪಕ್ಷವು ತಾನು ಅಧಿಕಾರಕ್ಕೆ ಬಂದರೆ ಏನೇನು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕು ಹಾಗೂ ಒಂದು ವೇಳೆ ಅಧಿಕಾರಕ್ಕೆ ಬಾರದಿದ್ದಲ್ಲಿ ಪಕ್ಷದ ಕಾರ್ಯಕರ್ತರು ಹಾಗೂ ಶಾಸಕರು ಯಾವ ಯಾವ ಹೊಣೆಗಳನ್ನು ಹೊರಬೇಕೆಂದು ನಿರೂಪಿಸುವ ಒಂದು ಚುನಾವಣಾ ಘೋಷಣಾ ಪತ್ರವನ್ನು ಹೊರಡಿಸಿತು:

ಕಾಂಗ್ರೆಸ್ ಸರಕಾರದ ಆಡಳಿತದಲ್ಲಿ ಬಡತನ ದಿನೇ ದಿನೇ ಹೆಚ್ಚುತ್ತಿದೆ. ಆದಾಯದಲ್ಲಿರುವ ಅಸಮಾನತೆಯ ಅಂತರವನ್ನು 1:10 ರ ಪ್ರಮಾಣಕ್ಕೆ ತರಲು ಪಕ್ಷವು ಸಿದ್ಧವಿದೆ. ಬಡಬಗ್ಗರಿಗೆ ಕಂಟಕ ಪ್ರಾಯವಾಗಿರುವ ತೆರಿಗೆಗಳನ್ನು ತೆಗೆದು ಹಾಕಲಾಗುವುದು. ರಾಜರಿಗೆ ಕೊಡುವ ರಾಜಧನವನ್ನು ನಿಲ್ಲಿಸಲಾಗುವುದು. ಧನಿಕರ ಮೇಲೆ ಭಾರಿ ತೆರಿಗೆಗಳನ್ನು ವಿಧಿಸಿ ಅದರಿಂದ ಬಂದ ಹಣವನ್ನು ಅಭಿವೃದ್ಧಿಪರ ಯೋಜನೆಗಳಲ್ಲಿ ತೊಡಗಿಸುವುದು. ಆಡಳಿತದ ವಿಕೇಂದ್ರೀಕರಣಕ್ಕೆ ಪಕ್ಷ ಬದ್ಧವಾಗಿದೆ. ಸಶಸ್ತ್ರ ಬಂಡಾಯ ಇಲ್ಲವೆ ಕೊಲೆಗೆ ಕೈಹಾಕುವ ಗುಂಪುಗಳ ಮೇಲೆ ಮಾತ್ರ ಗೋಲಿಬಾರು ನಡೆಸಬೇಕು. ವಾರೆಂಟು ಇಲ್ಲದೆ ಜನತೆಯನ್ನು ಪೋಲಿಸ್ ಠಾಣೆಗೆ ಎಳೆದೊಯ್ಯುವ ಅತ್ಯಾಚಾರ ಕೂಡಲೆ ನಿಲ್ಲಬೇಕು. ಸವಿನಯ ಕಾನೂನು ಉಲ್ಲಂಘನೆಯ ಹಕ್ಕು ಜನತೆಗೆ ಸಿಗಬೇಕು. ಅಸ್ತಿತ್ವದಲ್ಲಿರುವ ಮುನ್ನಚ್ಚರಿಕೆಯ ಸ್ಥಾನಬದ್ಧತೆಯ ಕಾನೂನು ಕೂಡಲೆ ರದ್ದಾಗಬೇಕು. ಸೇನೆ ಮತ್ತು ಸಶಸ್ತ್ರ ಪೋಲಿಸ್ ದಳವನ್ನು ಬಿಟ್ಟು ಉಳಿದ ಎಲ್ಲ ಸರಕಾರಿ ನೌಕರರಿಗೆ ರಾಜಕೀಯ ಹಕ್ಕುಗಳನ್ನು ನೀಡುವ ಭರವಸೆಯನ್ನು ಪಕ್ಷ ನೀಡುತ್ತದೆ.

ಪಾಳು ಬಿದ್ದ ವ್ಯವಸಾಯಯೋಗ್ಯ ಭೂಮಿಯನ್ನು ಭೂ ಹೀನ ರೈತರಿಗೆ ಮಾತ್ರ ಹಂಚುವುದು. ಹೆಚ್ಚು ಭೂಮಿಯನ್ನು ಸಾಗುವಳಿಗೆ ತರುವುದಕ್ಕಾಗಿ ಕೃಷಿ ಸೇನೆಯನ್ನು ರಚಿಸಲಾಗುವುದು. ಹಳ್ಳಿಗಾಡಿನ ಅತಿ ಬಡಜನರ ಸಾಲಗಳನ್ನು ರದ್ದುಮಾಡಿ ಸಾಲಸೋಲಗಳನ್ನು ಸುಲಭ ರೀತಿಯಲ್ಲಿ ದೊರೆಯುವ ವ್ಯವಸ್ಥೆಯನ್ನು ಮಾಡಲಾಗುವುದು. ಭೋಗ ವಸ್ತುಗಳ ಉತ್ಪಾದನೆಯನ್ನು ನಿಲ್ಲಿಸಿ ನಿತ್ಯಾವಶ್ಯಕ ವಸ್ತುಗಳ ಉತ್ಪಾದನೆಗೆ ಹೆಚ್ಚು ಆದ್ಯತೆ ನೀಡಲಾಗುವುದು. ಸಮಾಜದ ಶ್ರಮವನ್ನು ಕೊಳ್ಳಬೇಕಾಗುವ ಎಲ್ಲ ಉದ್ಯಮಗಳು ಸಮಾಜದ ಒಡೆತನಕ್ಕೆ ಸೇರಬೇಕೆಂಬುದು ಸಮಾಜವಾದಿ ಪಕ್ಷದ ನಂಬಿಕೆ. ಹಂತ ಹಂತವಾಗಿ ಪರಿಹಾರಧನವಿಲ್ಲದೆ ಉದ್ಯಮಗಳನ್ನು ರಾಷ್ಟ್ರೀಕರಿಸಲಾಗುವುದು. ಅವಶ್ಯಕವೆನಿಸಿದಲ್ಲಿ ಪುನರ್ವಸತಿ ಪರಿಹಾರಧನವನ್ನು ನೀಡಲಾಗುವುದು.

ಪಕ್ಷವು ಸಾಮಾಜಿಕ ಕಲ್ಯಾಣಕಾರಿ ಕಾರ್ಯಗಳಿಗೆ ಹೆಚ್ಚು ಆದ್ಯತೆ ನೀಡುತ್ತದೆ. ಅಸಮಾನತೆಯ ಬೀಜವನ್ನು ಮಕ್ಕಳಲ್ಲಿ ಬಿತ್ತುವ ದುಬಾರಿ ಶಿಕ್ಷಣ ಸಂಸ್ಥೆಗಳನ್ನು (ಡೆಹರಾಡೂನ್, ಲಕ್ನೋ, ದೆಹಲಿ, ಉದಕಮಂಡಲದ ಶಾಲೆಗಳು) ರದ್ದುಗೊಳಿಸ ಬೇಕು. ಇಂಗ್ಲೀಷ್ ಭಾಷೆಯನ್ನು ಕೂಡಲೆ ಕಿತ್ತೊಗೆಯಬೇಕು. ರಾಜ್ಯಗಳು ಕೇಂದ್ರದ ಜತೆಯಲ್ಲಿ ರಾಜ್ಯ ಭಾಷೆಗಳಲ್ಲಿ ವ್ಯವಹರಿಸಬಹುದು ಹಾಗೂ ಕೇಂದ್ರವು ರಾಜ್ಯಗಳ ಜತೆಯಲ್ಲಿ ಹಿಂದಿಯಲ್ಲಿ ವ್ಯವಹರಿಸಬಹುದು. ಪಾನನಿರೋಧ ನೀತಿ ಯನ್ನು ಸಾರ್ವತ್ರಿಕವಾಗಿ ಅಂಗೀಕರಿಸಬೇಕು. ಶಾಸಕರನ್ನು ವಾಪಸ್ಸು ಕರೆಸುವ ಹಕ್ಕನ್ನು ಜನರಿಗೆ ನೀಡಬೇಕು.

ಪಕ್ಷವು "ಹೀಗೆ ಸಮಾನ ಮಾನವರ ಸಮಾನ ಸಮಾಜ ಹಾಗೂ ಜಗತ್ತುಗಳ ನಿರ್ಮಾಣಕ್ಕಾಗಿ, ಸಮೃದ್ಧಿ ಸೃಷ್ಟಿಗಾಗಿ, ಸತ್ಯಕ್ಕಾಗಿ, ಅಚಲವಾಗಿ ಹೋರಾ ಡುವ, ಹೆಚ್ಚಿನ ನಿರ್ಮಾಣಕ್ಕಾಗಿ ಸಮಾನ ಮನುಷ್ಯನ ಸಾರ್ವಭೌಮತ್ವದ ಪ್ರತಿಷ್ಠಾ ಪನೆಗಾಗಿ ಎಲ್ಲಕ್ಕಿಂತ ಮಿಗಿಲಾಗಿ ನೂತನ ನಾಗರಿಕತೆಯೊಂದರ ನಿರ್ಮಾಣಕ್ಕಾಗಿ ಸಮಾಜವಾದಿ ಪಕ್ಷ ಜನತೆಯ ವಿಶ್ವಾಸವನ್ನು ಯಾಚಿಸುತ್ತದೆ" ಎಂದು ಪ್ರಣಾಳಿಕೆ ಯಲ್ಲಿ ಘೋಷಿಸಿತು.

ಕರ್ನಾಟಕದಲ್ಲಿ ಸಮಾಜವಾದಿ ಪಕ್ಷವು ಇದೇ ಪ್ರಣಾಳಿಯನ್ನು ಜನತೆಯ ಮುಂದಿಟ್ಟು ಚುನಾವಣಾ ಕಣಕ್ಕಿಳಿಯಿತು. ಪಕ್ಷವು ರಾಷ್ಟ್ರೀಯ ಪಕ್ಷದ ನಿರ್ದೇ ಶನದ ಮೇರೆಗೆ ಇಲ್ಲಿಯೂ ಯಾವ ರಾಜಕೀಯ ಪಕ್ಷಗಳ ಜತೆಯಲ್ಲಿ ಚುನಾವಣಾ ಹೊಂದಾಣಿಕೆಯನ್ನು ಮಾಡಿಕೊಳ್ಳದೆ, ರಾಜ್ಯ ವಿಧಾನ ಸಭೆಯ 208 ಸ್ಥಾನಗಳಲ್ಲಿ ಕೇವಲ 14 ಸ್ಥಾನಗಳಿಗೆ ಮಾತ್ರ ಅಭ್ಯರ್ಥಿಗಳನ್ನು ನಿಲ್ಲಿಸಿತ್ತು. ಲೋಕಸಭೆಗೆ ಪಕ್ಷವು ಸ್ಪರ್ಧಿಸಲಿಲ್ಲ. ಚುನಾವಣಾ ಆಯೋಗವು ಸಮಾಜವಾದಿ ಪಕ್ಷಕ್ಕೆ ರಾಷ್ಟ್ರೀಯ ಪಕ್ಷ ವೆಂದು ಮಾನ್ಯತೆ ನೀಡಿರಲಿಲ್ಲ. ಆದುದರಿಂದ ಪಕ್ಷವು ಪಕ್ಷದ ಚಿನ್ಹೆಯ ಮೇಲೆ ಸ್ಪರ್ಧಿಸಲಾಗಲಿಲ್ಲ. ಪಕ್ಷದ ಅಭ್ಯರ್ಥಿಗಳು ಬೇರೆ ಬೇರೆ ಚಿನ್ಹೆಗಳನ್ನು ಪಡೆದು ಚುನಾವಣೆಯಲ್ಲಿ ಸ್ಪರ್ಧಿಸಿದರು. ಆದುದರಿಂದ ಪಕ್ಷವು ಒಟ್ಟು ಪಡೆದ ಮತಗಳು ಹಾಗೂ ಪಡೆದ ಶೇಕಡಾವಾರು ಮತಗಳನ್ನು, ಅಂಕಿ ಅಂಶಗಳನ್ನು ಚುನಾವಣಾ ಆಯೋಗವು ತನ್ನ ವರದಿಯಲ್ಲಿ ತಿಳಿಸಲು ಸಾಧ್ಯವಾಗಲಿಲ್ಲ. ಆದುದರಿಂದ ಪಕ್ಷ ಚುನಾವಣೆಯಲ್ಲಿ ಪಡೆದ ಮತಗಳ ಅಂಕಿ ಅಂಶಗಳು ಸಿಗುವುದಿಲ್ಲ. ಆದರೆ ಪಕ್ಷದ ಯಾವ ಅಭ್ಯರ್ಥಿಯೂ ಚುನಾವಣೆಯಲ್ಲಿ ಜಯಗಳಿಸಲಿಲ್ಲ.

ಮೂರನೆಯ ಸಾರ್ವತ್ರಿಕ ಚುನಾವಣೆಗಳು

ಕಾಂಗ್ರೆಸ್ ಸರಕಾರದಿಂದ ದೇಶದಲ್ಲಿ ಸರ್ವಾಧಿಕಾರ ಅಥವಾ ಅನಾಯಕತ್ವ ಸಂಭವಿಸುವ ಮುನ್ಸೂಚನೆಯನ್ನು ಗಮನಿಸಿ, ಅದನ್ನು ತಡೆಯಲು ಒಂದು

'ಸಮರ್ಥವಿರೋಧ ಪಕ್ಷ' ಅನಿವಾರ್ಯವೆಂದು ಭಾವಿಸಿ, ಅಂಥ ವಿರೋಧ ಪಕ್ಷವು ಪ್ರಜಾ ಸಮಾಜವಾದಿ ಪಕ್ಷವೇ ಎಂದು ಸಾಧಿಸಿತೋರಿಸಲು ಪಕ್ಷವು (1957) ರ ಎರಡನೇ ಸಾರ್ವತ್ರಿಕ ಚುನಾವಣೆಯಲ್ಲಿ ಭಾಗವಹಿಸಿತು. ರಾಷ್ಟ್ರ ಮಟ್ಟದಲ್ಲಿಲ್ಲ ದಿದ್ದರೂ ಕರ್ನಾಟಕದಲ್ಲಿ ಪಕ್ಷ ಒಂದು ಸಮರ್ಥ ವಿರೋಧ ಪಕ್ಷವಾಗಿ ರೂಪು ಗೊಂಡಿತು. ಈ ಚುನಾವಣೆಗಳ ನಂತರ ಪಕ್ಷವು ಕ್ರಮ ಕ್ರಮವಾಗಿ ತನ್ನ ಬಲ ವನ್ನು ಹೆಚ್ಚಿಸಿಕೊಂಡಿತು. 1961 ರಲ್ಲಿ ಅದರ ಸದಸ್ಯತ್ವದ ಸಂಖ್ಯೆ 30,000 ಆಗಿತ್ತು. ಮೊದಲು ಪ್ರಜಾ ಸಮಾಜವಾದಿ ಪಕ್ಷ ಒಡೆದಾಗ ಅದರಿಂದ ಸಿಡಿದು ಹೋಗಿದ್ದ ಸಮಾಜವಾದಿ ಪಕ್ಷಕ್ಕೆ (ಲೋಹಿಯಾ ಗುಂಪು) ಸೇರಿದ್ದ ಅನೇಕ ಕಾರ್ಯ ಕರ್ತರು ಪ್ರಜಾ ಸಮಾಜವಾದಿ ಪಕ್ಷಕ್ಕೆ ವಾಪಸ್ಸು ಬಂದರು. ಪಕ್ಷದ ಬೆಂಬಲ ಪಡೆದು ಗೆದ್ದಿದ್ದ ಪಕ್ಷೇತರ ಅಭ್ಯರ್ಥಿಗಳು ಪಕ್ಷಕ್ಕೆ ಸೇರಿದರು. ಪಕ್ಷವು ವಿಧಾನ ಸಭೆಯಲ್ಲಿ ಒಟ್ಟು 24 ಸದಸ್ಯರನ್ನು ಹೊಂದಿತ್ತು. ವಿಶೇಷವಾಗಿ ಚಿತ್ರದುರ್ಗ, ಮೈಸೂರು, ತುಮಕೂರು ಮಂಡ್ಯ, ಕೊಡಗು ಹಾಸನ ಜಿಲ್ಲೆಗಳಲ್ಲಿ ಪಕ್ಷ ಬಹಳ ಬಲಿಷ್ಟವಾಗಿತ್ತು.

ಕರ್ನಾಟಕದ ವಿಧಾನ ಸಭೆಯಲ್ಲಿ ಪ್ರಜಾ ಸಮಾಜವಾದಿ ಪಕ್ಷವನ್ನು ವಿರೋಧ ಪಕ್ಷವೆಂದು ಅಧಿಕೃತವಾಗಿ ಘೋಷಿಸಿ, ಅದಕ್ಕೆ ಮನ್ನಣೆ ನೀಡಲಾಗಿತ್ತು. ಅದು ವಿಧಾನ ಸಭೆಯ ಒಳಗೆ ಹಾಗೂ ಹೊರಗೆ ಸಮರ್ಥ ವಿರೋಧ ಪಕ್ಷ ವಾಗಿ ಕಾರ್ಯನಿರ್ವಹಿಸಿ ತನ್ನ ಸ್ಥಾನವನ್ನು ಉಳಿಸಿಕೊಂಡಿತ್ತು. ಪಕ್ಷವು ಕರ್ನಾ ಟಕದ ಜನತೆಯ ಜ್ವಲಂತ ಸಮಸ್ಯೆಗಳನ್ನು ಕುರಿತು ಸರಕಾರದ ಹಾಗೂ ಜನತೆಯ ಗಮನವನ್ನು ಸೆಳೆಯಲು ವ್ಯಾಪಕವಾದ ಕಾರ್ಯಕ್ರಮಗಳನ್ನು ರೂಪಿಸಿಕೊಂಡು ಹೋರಾಟ ನಡೆಸಿತು. ಪಕ್ಷದ ಈ ಕಾರ್ಯತಂತ್ರದಿಂದ ಹೆಚ್ಚು ಹೆಚ್ಚು ಕಾರ್ಯ ಕರ್ತರು ಪಕ್ಷಕ್ಕೆ ಸೇರಿದರು.

ಎರಡನೆಯ ಸಾರ್ವತ್ರಿಕ ಚುನಾವಣೆಗಳಲ್ಲಿ ನಂತರ ರಾಷ್ಟ್ರೀಯ ಮಟ್ಟದಲ್ಲಿ ಪ್ರಜಾಸಮಾಜವಾದಿ ಪಕ್ಷ ಹಾಗೂ ಸಮಾಜವಾದಿ ಪಕ್ಷಗಳನ್ನು ವಿಲೀನ ಗೊಳಿಸುವ ಪ್ರಯತ್ನಗಳನ್ನು ಜಯಪ್ರಕಾಶ ನಾರಾಯಣ ಅವರು ನಡೆಸಿದರೂ ಸಫಲವಾಗಲಿಲ್ಲ. ಆದುದರಿಂದ ಎರಡೂ ಪಕ್ಷಗಳು ಮತ್ತೆ ಪ್ರತ್ಯೇಕವಾಗಿ ಮೂರನೆಯ ಸಾರ್ವತ್ರಿಕ ಚುನಾವಣೆಗಳಲ್ಲಿ ಭಾಗವಹಿಸ ಬೇಕಾಯಿತು.

ಕರ್ನಾಟಕದಲ್ಲಿಯೂ ಪ್ರಜಾ ಸಮಾಜವಾದಿ ಪಕ್ಷವು ಮೂರನೆಯ ಸಾರ್ವತ್ರಿಕ ಚುನಾವಣೆಯಲ್ಲಿ ಲೋಕಸಭೆ ಮತ್ತು ವಿಧಾನಸಭೆಯ ಚುನಾವಣೆಗಳಿಗೆ ಸ್ಪರ್ಧಿಸಿತು. ರಾಜ್ಯದಲ್ಲಿ ಪಕ್ಷವು ರಿಪಬ್ಲಿಕನ್ ಪಕ್ಷದೊಂದಿಗೆ ಚುನಾವಣಾ ಹೊಂದಾಣಿಕೆಗಳನ್ನು ಮಾಡಿಕೊಂಡಿತು. ರಾಷ್ಟ್ರೀಯ ಪಕ್ಷವು "ಅಸಮಾನತೆಯ ಅಂತ್ಯ ; ಆರ್ಥಿಕ,

ಸಾಮಾಜಿಕ ಪರಿವರ್ತನೆ'' ಎಂಬ ಧ್ಯೇಯದೊಂದಿಗೆ ಒಂದು ಚುನಾವಣಾ ಪ್ರಣಾಳಿಕೆಯನ್ನು ಘೋಷಿಸಿತು:

ಇಲ್ಲಿಯವರೆಗೆ ಕಾಂಗ್ರೆಸ್ ಅನುಸರಿಸಿಕೊಂಡು ಬಂದಿರುವ ಭೇದಭಾವನೆಯಿಂದ ಭಾಷಾ ಅಲ್ಪಸಂಖ್ಯಾತರಲ್ಲಿ ಮೂಡಿರುವ ಅಸಮಾಧಾನದ ಪರಿಹಾರಕ್ಕಾಗಿ ಕಾರ್ಯಕ್ರಮಗಳನ್ನು ರೂಪಿಸಬೇಕು. ಹಳ್ಳಿಗಳ ಸರ್ವತೋಮುಖ ಏಳಿಗೆಗೆ ಆದ್ಯತೆ ನೀಡಬೇಕು. ಭೂಸುಧಾರಣೆಯಲ್ಲಿರುವ ಲೋಪಗಳನ್ನು ಹೋಗಲಾಡಿಸಬೇಕು. ಸ್ತ್ರೀಯರ ನೈಜ ಸಮಾನತೆಯನ್ನು ಸಾಧಿಸಬೇಕು. ಕಾರ್ಮಿಕರಿಗೆ ಕೈಗಾರಿಕೆಗಳಲ್ಲಿ ಸಹಭಾಗಿತ್ವವನ್ನು ಕೊಡಬೇಕು. ಎಲ್ಲರ ಆದಾಯವನ್ನು 1:10 ರ ಪ್ರಮಾಣಕ್ಕೆ ತರಬೇಕು. ದೇಶದ ಸಮೃದ್ಧಿಗಾಗಿ ಜನತೆಯಿಂದಲೆ ಯೋಜನೆಗಳನ್ನು ರೂಪಿಸಬೇಕು. ದಿನಕ್ಕೆ 25 ಪೈಸೆ ಆದಾಯವಿರುವ ಹಳ್ಳಿಗರಿಗೆ ವಿಶೇಷ ಯೋಜನೆಗಳನ್ನು ರೂಪಿಸಬೇಕು. ನಿರುದ್ಯೋಗ ಸಮಸ್ಯೆಯನ್ನು ಹೋಗಲಾಡಿಸಿ ಎಲ್ಲರಿಗೂ ಕೆಲಸವನ್ನು ಕೊಡಬೇಕು. ಹರಿಜನ ಮತ್ತು ಗಿರಿಜನರಲ್ಲಿ ತಾಂಡವಾಡುತ್ತಿರುವ ನಿರುದ್ಯೋಗ ಸಮಸ್ಯೆಯನ್ನು ಪರಿಹರಿಸಲು ಆರಿಸಿದ ಕ್ಷೇತ್ರಗಳಲ್ಲಿ ಹೆಚ್ಚು ಉದ್ಯೋಗಾವಕಾಶಗಳನ್ನುಂಟುಮಾಡುವ ಯೋಜನೆಗಳನ್ನು ಹಾಕಿಕೊಳ್ಳಬೇಕು. "ಭಾರತದಲ್ಲಿ ಅಪಾರವಾಗಿರುವ ಜನಬಲದ ಪೂರ್ಣ ಪ್ರಯೋಜನ ಪಡೆಯುವುದರ ಮೂಲಕ ಮಾತ್ರ ಬಡತನ ನಿವಾರಿಸಲು ಸಾಧ್ಯವಾಗುತ್ತದೆ"ಯೆಂದು ಪ್ರಜಾಸಮಾಜವಾದಿ ಪಕ್ಷ ಭಾವಿಸುತ್ತದೆ. ರಾಷ್ಟ್ರದ ಹಿತ ರಕ್ಷಿಸುವ ವಿದೇಶನೀತಿಯನ್ನು ಪಕ್ಷ ಅಂಗೀಕರಿಸುತ್ತದೆ, ಎಂದು ಮುಂತಾಗಿ ರಾಷ್ಟ್ರೀಯ ಪಕ್ಷದ ಚುನಾವಣಾ ಘೋಷಣಾ ಪತ್ರ ಹೇಳಿತು. ರಾಜ್ಯಪಕ್ಷವು ರಾಷ್ಟ್ರೀಯ ಪಕ್ಷದ ಪ್ರಣಾಳಿಕೆಗೆ ಪೂರಕವಾಗಿ ರಾಜ್ಯದ ಜನತೆಯ ವಿಶಿಷ್ಟ ಸಮಸ್ಯೆಗಳನ್ನು ಕುರಿತು ಹಾಗೂ ಅವುಗಳನ್ನು ಹೋಗಲಾಡಿಸಲು ಹಮ್ಮಿಕೊಂಡಿರುವ ಕಾರ್ಯಕ್ರಮಗಳನ್ನು ನಿರೂಪಿಸುವ ಒಂದು ಉಪಪ್ರಣಾಳಿಕೆಯನ್ನು ಘೋಷಿಸಿತು. ಇದರಲ್ಲಿ ಹೀಗೆ ಹೇಳಲಾಯಿತು:

ರಾಜ್ಯದಲ್ಲಿ ಜನರಿಗೆ ಕಿರುಕುಳವಾಗಿರುವ ಆಕ್ಕಾಯಿ ತೆರಿಗೆಯ ಪದ್ಧತಿಯನ್ನು ರದ್ದುಗೊಳಿಸಲು ಪಕ್ಷವು ಆದ್ಯತೆ ನೀಡುವುದು. ಕರ್ನಾಟಕದ ರಾಜ್ಯೋದಯವಾಗಿ 6 ವರ್ಷಗಳು ಸಂದರೂ ರಾಜ್ಯಕ್ಕೆ ಕರ್ನಾಟಕ ಎಂದು ನಾಮಕರಣ ಮಾಡಬೇಕೆಂಬ ಜನತೆಯ ಕನಸು ನನಸಾಗಲಿಲ್ಲ. ಜನತೆಯ ಆ ಕನಸನ್ನು ಪಕ್ಷವು ಕೂಡಲೇ ನನಸು ಮಾಡುತ್ತದೆ. ರಾಜ್ಯದ ಆಡಳಿತದ ಎಲ್ಲ ಮಟ್ಟಗಳಲ್ಲಿ ಕನ್ನಡ ಭಾಷೆ ಆಡಳಿತ ಭಾಷೆಯಾಗಬೇಕು. ರಾಜ್ಯದಲ್ಲಿ ಶಿಕ್ಷಣವು ಕನ್ನಡ ಭಾಷಾ ಮಾಧ್ಯಮದಲ್ಲಿ ನಡೆಯಬೇಕು. "ಭಾರತದ ಭೂಭಾಗದ ಮೇಲಿನ ವಿದೇಶಿ ಆಕ್ರಮಣವನ್ನು ತೆರವು ಮಾಡಲು, ಅನೀತಿಯ ಆಡಳಿತವನ್ನು ನಿವಾರಿಸಲು ಮಾನವನ ಮೂಲಭೂತ ಹಕ್ಕುಗಳನ್ನು ಎತ್ತಿಹಿಡಿಯಲು, ನೈಜ ಸಮಾಜವಾದವನ್ನು ಸ್ಥಾಪಿಸಲು, ಕನ್ನಡ

ಜನರ ಕನಸನ್ನು ನನಸು ಮಾಡಲು, ಪ್ರಜಾಸಮಾಜವಾದಿ ಪಕ್ಷ ಕಂಕಣಬದ್ಧವಾಗಿದೆಯೆಂದು ಜನತೆಯಲ್ಲಿ ವಿನಯದಿಂದ ವಿನಂತಿಸಿಕೊಳ್ಳುತ್ತದೆ" ಎಂದು ಉಪಪ್ರಣಾಳಿಕೆ ಹೇಳಿತು. ಈ ಉಪಪ್ರಣಾಳಿಕೆಯನ್ನು ದಿನಾಂಕ 21–1–1962 ರಂದು ಪಕ್ಷದ ನಾಯಕ ಮುಲ್ಕ ಗೋವಿಂದ ರೆಡ್ಡಿ ಅವರು ಬಿಡುಗಡೆ ಮಾಡಿದರು.

ರಾಜ್ಯದಲ್ಲಿ ಚುನಾವಣಾ ಪ್ರಚಾರವನ್ನು ವ್ಯಾಪಕವಾಗಿ ರಾಷ್ಟ್ರೀಯ ಪಕ್ಷದ ಅಧ್ಯಕ್ಷ ಅಶೋಕ ಮೆಹತಾ ಸಮಾಜವಾದಿ ನಾಯಕ ಪ್ರೇಮ್‌ಭಾಸಿನ್ ಹಾಗೂ ಕನ್ನಡ ಸಾಹಿತಿ ತ.ರಾ.ಸು. ಅವರು ಕೈಗೊಂಡರು. ಪಕ್ಷದ ಧ್ಯೇಯಧೋರಣೆಗಳನ್ನು ಹಾಗೂ ಜನತೆಯ ವಿಶಿಷ್ಟ ಸಮಸ್ಯೆಗಳ ಬಗ್ಗೆ ಹೋರಾಟ ಮೊದಲಾದ ಕಾರ್ಯಗಳನ್ನು ಪಕ್ಷದ ಕಾರ್ಯಕರ್ತರಿಗೆ ತಿಳಿಸುವ ಸಲುವಾಗಿ ಪಕ್ಷದ ಮುಖವಾಣಿಯಾದ 'ಸಮಾಜವಾದಿ' ಪತ್ರಿಕೆಯನ್ನು ಈ ಚುನಾವಣೆಗಳ ಸಂದರ್ಭದಲ್ಲಿ ದಿನಾಂಕ 26–1–61 ರಂದು ಪಕ್ಷದ ಅಧ್ಯಕ್ಷ ಎಸ್. ಶಿವಪ್ಪ ಅವರು ಉದ್ಘಾಟಿಸಿದರು. ಈ ಚುನಾವಣೆಗಳಲ್ಲಿ ಒಟ್ಟು 120 ದಶಲಕ್ಷ ಮತದಾರರಿದ್ದರು. ಲೋಕಸಭೆಗೆ ಕರ್ನಾಟಕದಿಂದ 26 ಸ್ಥಾನಗಳಿದ್ದವು. ಪಕ್ಷವು ಲೋಕಸಭೆಗೆ 12 ಅಭ್ಯರ್ಥಿಗಳನ್ನು ನಿಲ್ಲಿಸಿತು. ಎರಡನೇಯ ಸಾರ್ವತ್ರಿಕ ಚುನಾವಣೆಯಲ್ಲಿ ಲೋಕಸಭೆಗೆ ಒಬ್ಬ ಅಭ್ಯರ್ಥಿಯನ್ನು ಕಳಿಸಿತ್ತಾದರೂ ಈ ಚುನಾವಣೆಯಲ್ಲಿ ಒಬ್ಬ ಅಭ್ಯರ್ಥಿಯನ್ನು ಕಳಿಸಲೂ ಸಾಧ್ಯವಾಗಲಿಲ್ಲ. ಅದು ಬಿದ್ದ ಮತಗಳಲ್ಲಿ ಶೇಕಡಾ 14.5 ರಷ್ಟು ಮತಗಳನ್ನು ಪಡೆಯಿತು.

ವಿಧಾನಸಭೆಯ ಒಟ್ಟು 208 ಸ್ಥಾನಗಳ ಪೈಕಿ ಪಕ್ಷವು 85 ಸ್ಥಾನಗಳಿಗೆ ಮಾತ್ರ ಅಭ್ಯರ್ಥಿಗಳನ್ನು ನಿಲ್ಲಿಸಿತ್ತು. ಚುನಾವಣೆಯು ದಿನಾಂಕ ಫೆಬ್ರವರಿ 19, 22 ಮತ್ತು 25 ರಂದು ನಡೆಯಿತು. ಪಕ್ಷವು 20 ಸ್ಥಾನಗಳಲ್ಲಿ ಜಯಗಳಿಸಿತು. ಒಟ್ಟು ಬಿದ್ದ 63,01,778ರಷ್ಟು ಮತಗಳಲ್ಲಿ ಪಕ್ಷವು 8,60,048ರಷ್ಟು ಮತಗಳನ್ನು ಗಳಿಸಿತು. ಅಂದರೆ ಶೇಕಡಾ 13.65 ರಷ್ಟು ಮತಗಳನ್ನು ಪಡೆಯಿತು. ಬಿ. ಭಾಸ್ಕರಶೆಟ್ಟಿ, ದಯಾನಂದ ಕಲ್ಲೆ, ಬಿ. ಎಲ್. ಗೌಡ, ಶ್ರೀಮತಿ ಎಂ. ಎಸ್. ಕಮಲ, ಎಸ್. ಎಂ. ಕೃಷ್ಣ, ಕೆ. ಲಕ್ಕಪ್ಪ, ಕೆ. ಹೆಚ್. ರಂಗನಾಥ, ಕೆ. ಪಿ. ರೇವಣಸಿದ್ದಪ್ಪ, ಸಂಜೀವನಾಥ ಪಕಳ, ಎಸ್. ಶಿವಪ್ಪ, ಮೊದಲಾದ ನಾಯಕರು ಆಯ್ಕೆಗೊಂಡರು. ಹೊಸದುರ್ಗದಿಂದ ಮಾಜಿ ಮುಖ್ಯಮಂತ್ರಿ ನಿಜಲಿಂಗಪ್ಪನವರನ್ನು ಸೋಲಿಸಿ ಪಕ್ಷದ ಅಭ್ಯರ್ಥಿ ಟಿ. ಟಿ. ರಂಗಪ್ಪ ಆಯ್ಕೆಗೊಂಡರು.

ಸಮಾಜವಾದಿ ಪಕ್ಷ (ಲೋಹಿಯಾ ಗುಂಪು)ವು ಹೈದರಾಬಾದ್ ಸಮ್ಮೇಳನದಲ್ಲಿ "ಅಧಿಕಾರ ಪಡೆಯಲು 7 ವರ್ಷಗಳ ಯೋಜನೆ"ಎಂಬ ನಿರ್ಣಯವನ್ನು ತೆಗೆದುಕೊಂಡಿತು. ಆದರೆ 1962 ರ ಸಾರ್ವತ್ರಿಕ ಚುನಾವಣೆಯ ಹೊತ್ತಿಗೆ ಆ ಆತ್ಮ

ವಿಶ್ವಾಸವನ್ನು ಕಳೆದುಕೊಂಡಿತು. ಪಕ್ಷವು ತನ್ನ ಚುನಾವಣಾ ಪ್ರಣಾಳಿಕೆಯ ಪ್ರಾರಂಭದಲ್ಲಿ ಕಾಂಗ್ರೆಸ್ಸು ಈ ಸಲವೂ ಗೆಲ್ಲಲಿದೆ ಎಂದು ಹೇಳಿತು. ಸಮಾಜವಾದಿ ಪಕ್ಷವು ರಾಷ್ಟ್ರದಲ್ಲಿ ಅಂಥ ಗಮನಾರ್ಹವಾದ ಪಕ್ಷವಾಗಿರಲಿಲ್ಲ. ಆದ್ದರಿಂದ ಈ ಚುನಾವಣೆಯಲ್ಲಿ "ಸಮಾಜವಾದಿ ಪಕ್ಷ ಅತಿ ಹೆಚ್ಚು ರಾಜ್ಯಗಳಲ್ಲಿ ಮನ್ನಣೆ ಪಡೆಯುವಂತೆಯೂ ಸುಮಾರು 50 ಲೋಕಸಭಾ ಸದಸ್ಯರನ್ನು ಜನಆಯ್ಕೆ ಮಾಡಬೇಕು" ಎಂದು ತನ್ನ ಸೀಮಿತ ಧ್ಯೇಯವನ್ನು ಪ್ರಣಾಳಿಕೆಯಲ್ಲಿ ನಿರೂಪಿಸಿತು. ರಾಷ್ಟ್ರೀಯ ಪಕ್ಷವು ಹೊರಡಿಸಿದ ಚುನಾವಣಾ ಪ್ರಣಾಳಿಕೆಯನ್ನೇ ರಾಜ್ಯ ಪಕ್ಷವು ಅಂಗೀಕರಿಸಿತು.

ಜಾತಿವ್ಯವಸ್ಥೆಯನ್ನು ಬಂಡಸಹಿತ ಕಿತ್ತುಹಾಕಲು ಪಕ್ಷ ತೀವ್ರಕ್ರಮಗಳನ್ನು ಕೈಗೊಳ್ಳುವುದು, ಅಂತರಜಾತೀಯ ವಿವಾಹಕ್ಕೆ ಪ್ರೋತ್ಸಾಹ ಕೊಡಬೇಕು. ಭೂಮಿಯ ಪುನರ್ವಿತರಣೆಗೆ ಆದ್ಯತೆ ಕೊಡಲಾಗುವುದು. ಕಾರ್ಮಿಕರಿಗೆ ಅದರಲ್ಲೂ ಕೃಷಿ ಕಾರ್ಮಿಕರಿಗೆ ಹೆಚ್ಚು ವೇತನವನ್ನು ಕೊಡಬೇಕು. ಹಿಂದುಳಿದವರಿಗೆ ಶೇಕಡಾ 60 ರಷ್ಟು ಮೀಸಲಾತಿಯನ್ನು ಜಾರಿಗೆ ತರಬೇಕು. ಉತ್ಪಾದನಾ ವಸ್ತುಗಳ ಬೆಲೆಯು ಅವುಗಳಿಗೆ ತಗಲಿದ ಖರ್ಚಿನ ಒಂದೂವರೆ ಪಟ್ಟಿಗಿಂತ ಹೆಚ್ಚಿಗೆ ಇರಬಾರದು. 6¼ ಎಕರೆಗಿಂತ ಕಡಿಮೆ ಭೂಹಿಡುವಳಿಗಳ ಭೂಕಂದಾಯವನ್ನು ರದ್ದುಪಡಿಸಬೇಕು, ಉಳುವವನೇ ಭೂಮಿಯ ಒಡೆಯನಾಗಬೇಕು. ಆಹಾರ ಸೇನೆಯನ್ನು ಕಟ್ಟಬೇಕು. ಯಾರ ಆದಾಯವೂ 1000 ರೂ.ಗಳಿಗೆ ಮೀರಬಾರದು. ಹಿಂದಿ ರಾಜ್ಯಗಳಲ್ಲಿ ಇಂಗ್ಲೀಷ್ ಭಾಷೆಯ ಬಳಕೆಯನ್ನು ತಕ್ಷಣ ನಿಲ್ಲಿಸಬೇಕು. ಕೇಂದ್ರದಲ್ಲಿ ಹಿಂದಿಯನ್ನಾಗಲಿ ಅಥವಾ ವಿವಿಧ ರಾಜ್ಯಭಾಷೆಗಳನ್ನು ಬಳಸಲು ತಕ್ಷಣ ಪ್ರಾರಂಭಿಸಬೇಕು. ಇವೆ ಮೊದಲಾದ ಕಾರ್ಯಕ್ರಮಗಳನ್ನು ಪ್ರಣಾಳಿಕೆಯಲ್ಲಿ ಘೋಷಿಸಲಾಗಿತ್ತು.

ರಾಷ್ಟ್ರೀಯ ಸಮಾಜವಾದಿ ಪಕ್ಷ ಇತರ ಪಕ್ಷಗಳೊಂದಿಗೆ ಚುನಾವಣಾ ಮೈತ್ರಿಯನ್ನು ಮಾಡಿಕೊಳ್ಳಲಿಲ್ಲ. ಈ ರಾಜ್ಯದಲ್ಲಿಯೂ ಪಕ್ಷವು ಚುನಾವಣಾ ಮೈತ್ರಿಯನ್ನು ಮಾಡಿಕೊಳ್ಳಲಿಲ್ಲ. ಪಕ್ಷವು ಈ ಸಾರಿಯೂ ಲೋಕಸಭೆಯ 26 ಸ್ಥಾನಗಳಲ್ಲಿ ಒಂದು ಸ್ಥಾನಕ್ಕೂ ಸ್ಪರ್ಧಿಸಲಿಲ್ಲ. ವಿಧಾನಸಭೆಯ ಒಟ್ಟು 208 ಸ್ಥಾನಗಳ ಪೈಕಿ ಸ್ಪರ್ಧಿಸಿದವರಲ್ಲಿ ಪಕ್ಷದ ಅಧ್ಯಕ್ಷರಾದ ಎಸ್. ಗೋಪಾಲಗೌಡರು ಮಾತ್ರ ಜಯಶೀಲರಾದರು. ಪಕ್ಷದ ಇನ್ನಿತರ ಪ್ರಮುಖ ಅಭ್ಯರ್ಥಿಗಳಾದ ಜೆ. ಹೆಚ್. ಪಟೇಲ್ ಮತ್ತು ಕಾಗೋಡು ತಿಮ್ಮಪ್ಪ ಅವರು ಸೋತರು. ಪಕ್ಷವು ಬಿದ್ದ ಒಟ್ಟು 63,01,778 ಮತಗಳ ಪೈಕಿ ಕೇವಲ 64,829 ಮತಗಳನ್ನು ಅಂದರೆ ಬಿದ್ದ ಮತಗಳಲ್ಲಿ ಶೇಕಡಾ 1.3 ರಷ್ಟು ಮತಗಳನ್ನು ಪಡೆದಿತ್ತು.

ನಾಲ್ಕನೆಯ ಸಾರ್ವತ್ರಿಕ ಚುನಾವಣೆಗಳು

ಮೂರನೆಯ ಸಾರ್ವತ್ರಿಕ ಚುನಾವಣೆಗಳ ನಂತರ ಪ್ರಜಾಸಮಾಜವಾದಿ ಪಕ್ಷ ಹಾಗೂ ಸಮಾಜವಾದಿ ಪಕ್ಷಗಳು (ಲೋಹಿಯಾ ಗುಂಪು) 7, ಜೂನ್ 1964 ರಲ್ಲಿ

ವಿಲೀನವಾಗಿ ಸಂಯುಂಕ್ತ ಸಮಾಜವಾದಿ ಪಕ್ಷವಾಗಿ ರೂಪಗೊಂಡಿತು. ಆದರೆ ನಾಲ್ಕನೆಯ ಸಾರ್ವತ್ರಿಕ ಚುನಾವಣೆಗಳ ಹೊತ್ತಿಗೆ ಹೊಸದಾಗಿ ರೂಪುಗೊಂಡ ಸಂಯುಂಕ್ತ ಸಮಾಜವಾದಿ ಪಕ್ಷವು ಒಡೆದು ಪ್ರಜಾಸಮಾಜವಾದಿ ಪಕ್ಷ ಹಾಗೂ ಸಂಯುಕ್ತ ಸಮಾಜವಾದಿ ಪಕ್ಷಗಳಾಗಿ ವಿಭಜಿತವಾಗಿತ್ತು. ಆದ್ದರಿಂದ ಕರ್ನಾಟಕದಲ್ಲಿ ಈ ಎರಡು ಪಕ್ಷಗಳು ಪ್ರತ್ಯೇಕವಾಗಿ ಚುನಾವಣೆಗಳಲ್ಲಿ ಸ್ಪರ್ಧಿಸಿದವು.

ಇಡೀ ರಾಷ್ಟ್ರದಲ್ಲಿ ನಾಲ್ಕನೆಯ ಸಾರ್ವತ್ರಿಕ ಚುನಾವಣೆಗಳು ಮಹತ್ವಪೂರ್ಣವಾದವುಗಳು. ಈ ಚುನಾವಣೆಗಳಲ್ಲಿ ರಾಷ್ಟ್ರದಲ್ಲಿ ಸುಭದ್ರವಾಗಿದ್ದ ಕಾಂಗ್ರೆಸ್ ಕೋಟೆ ಅನೇಕ ರಾಜ್ಯಗಳಲ್ಲಿ ಕುಸಿದುಬಿತ್ತು. ರಾಷ್ಟ್ರದಲ್ಲಿ ಮೊಟ್ಟಮೊದಲಿಗೆ ಅನೇಕ ರಾಜ್ಯಗಳಲ್ಲಿ ಕಾಂಗ್ರೆಸ್ಸೇತರ ಸರಕಾರಗಳು ರಚಿತವಾದವು.

ರಾಷ್ಟ್ರೀಯ ಪ್ರಜಾಸಮಾಜವಾದಿ ಪಕ್ಷವು ಕಾಂಗ್ರೆಸ್ ಪಕ್ಷ ಭಾರತಕ್ಕೆ ತಂದ ದುಃಸ್ಥಿತಿಯನ್ನು ಹಾಗೂ ತಾನು ಅಧಿಕಾರಕ್ಕೆ ಬಂದರೆ ಆ ಸ್ಥಿತಿಯನ್ನು ತೊಡೆದು ಹಾಕಲು ಕೈಗೊಳ್ಳುವ ಕ್ರಮಗಳನ್ನು ನಿರೂಪಿಸುವ ಒಂದು ಚುನಾವಣಾ ಪ್ರಣಾಳಿಕೆಯನ್ನು ಹೊರಡಿಸಿತು. ಪಂಚವಾರ್ಷಿಕ ಯೋಜನೆಗಳ ಫಲಗಳು ನೇರವಾಗಿ ಹಳ್ಳಿಯ ಬಡಬಗ್ಗರಿಗೆ ದೊರೆಯುವಂತೆ ಯೋಜನೆಗಳನ್ನು ಪುನರ್‌ರೂಪಿಸಲಾಗುವುದು. ಭೂಸುಧಾರಣೆಗಳಲ್ಲಿ ತೀವ್ರ ತಿದ್ದುಪಡಿಗಳನ್ನು ಮಾಡಿ ಹೆಚ್ಚು ಹೆಚ್ಚು ಭೂಮಿಯು ಹಳ್ಳಿಯ ಬಡಜನರಿಗೆ ಬೇಗನೆ ದಕ್ಕುವಂತೆ ಮಾಡಲಾಗುವುದು. ಸಂಪತ್ತು ಮತ್ತು ಅಧಿಕಾರಗಳ ವಿಕೇಂದ್ರಿಕರಣವನ್ನು ನಿವಾರಿಸಲಾಗುವುದು. ಆಹಾರಧಾನ್ಯಗಳ ವಿಕ್ರಯದಲ್ಲಿರುವ ದಳ್ಳಾಳಿ ಪದ್ಧತಿಯನ್ನು ನಿವಾರಿಸಿ, ಅದರ ಬದಲು ಸಹಕಾರಿ ಪದ್ಧತಿಯನ್ನು ಜಾರಿಗೆ ತರಲಾಗುವುದು. ರೈತರು ಬೆಳೆಯುವ ಬೆಳೆಗಳಿಗೆ ಲಾಭದಾಯಕ ಬೆಲೆಗಳನ್ನು ನೀಡಬೇಕು. ಔದ್ಯೋಗಿಕ ಮತ್ತು ವ್ಯವಸಾಯೋತ್ಪನ್ನ ವಸ್ತುಗಳ ಬೆಲೆಗಳ ನಡುವೆ ಸಮತೋಲನವನ್ನು ಸ್ಥಾಪಿಸಲಾಗುವುದು. ಕನಿಷ್ಠ ಹಾಗೂ ಗರಿಷ್ಠ ಆದಾಯದ ಮಿತಿಯನ್ನು 1:10 ರ ಪ್ರಮಾಣಕ್ಕೆ ನಿಗದಿಗೊಳಿಸಲಾಗುವುದು. ನಗರ ಆಸ್ತಿಯ ಮೇಲೆ ಮಿತಿ ವಿಧಿಸಲಾಗುವುದು. ಮಹಾರಾಜರ ರಾಜಧನವನ್ನು ರದ್ದುಗೊಳಿಸಬೇಕು. ಮಹಿಳೆಯರಲ್ಲಿರುವ ಅಸಮಾನತೆ ಮತ್ತು ಮೂಢನಂಬಿಕೆಗಳನ್ನು ತೊಡೆದು ಹಾಕಲಾಗುವುದು. ಬ್ಯಾಂಕು ಹಾಗೂ ವಿಮಾ ಕಂಪನಿಗಳನ್ನು ರಾಷ್ಟ್ರೀಕರಣ ಮಾಡಲಾಗುವುದು. ವ್ಯವಸಾಯ ಹಾಗೂ ಕೈಗಾರಿಕೆ ಕ್ಷೇತ್ರಗಳಲ್ಲಿ ಸಹಕಾರಿ ಸಂಘಗಳನ್ನು ಸ್ಥಾಪಿಸಲಾಗುವುದು. ರಾಷ್ಟ್ರವು ಎಲ್ಲರೀತಿಯ ಸೈನಿಕ ಒಪ್ಪಂದಗಳನ್ನು ವಿರೋಧಿಸುವುದು. ಮತದಾರರಿಗೆ ಭ್ರಷ್ಟ ಶಾಸಕರನ್ನು ವಾಪಸ್ಸು ಕರೆಸಿಕೊಳ್ಳುವ ಹಕ್ಕನ್ನು ಕೊಡಲಾಗುವುದು. ಇದೇ ಪ್ರಣಾಳಿಕೆಯನ್ನು ರಾಜ್ಯಪಕ್ಷವು ಅಂಗೀಕರಿಸಿ ಚುನಾವಣೆಯಲ್ಲಿ ಧುಮಿಕಿತು.

ಪಕ್ಷವು ಲೋಕಸಭೆಯ 27 ಸ್ಥಾನಗಳಲ್ಲಿ 5 ಸ್ಥಾನಗಳಿಗೆ ಸ್ಪರ್ಧಿಸಿ 3 ಸ್ಥಾನಗಳಲ್ಲಿ ಜಯಗಳಿಸಿತು. ಒಟ್ಟು 1,27,78,996 ಮತದಾರರಿದ್ದರು. ಈ ಚುನಾವಣೆಯಲ್ಲಿ ಒಟ್ಟು 74,94,419 ರಷ್ಟು ಮತದಾರರು ಮತ ಚಲಾಯಿಸಿ

ದರು. ಅಂದರೆ ಶೇಕಡಾ 63.10 ರಷ್ಟು ಮತದಾನ ನಡೆಯಿತು. ಪಕ್ಷವು ಬಿದ್ದ ಮತಗಳಗಲ್ಲಿ ಶೇಕಡಾ 5.1 ರಷ್ಟು ಮತಗಳನ್ನು ಗಳಿಸಿತು. ತುಮಕೂರು ಲೋಕ ಸಭಾ ಕ್ಷೇತ್ರದಿಂದ ಕೆ. ಲಕ್ಕಪ್ಪ ಮತ್ತು ಮಂಡ್ಯ ಕ್ಷೇತ್ರದಿಂದ ಎಸ್. ಎಂ. ಕೃಷ್ಣ ಚಿಕ್ಕಮಗಳೂರು ಕ್ಷೇತ್ರದಿಂದ ಎಂ. ಹುಚ್ಚೇಗೌಡ ರವರು ಆಯ್ಕೆಗೊಂಡರು. ಪಕ್ಷದ ಬೆಂಬಲ ಪಡೆದ ಪಕ್ಷೇತರ ಅಭ್ಯರ್ಥಿ ದಿನಕರ ದೇಸಾಯಿ ಅವರು ಉತ್ತರ ಕರ್ನಾಟಕ ದಿಂದ ಆಯ್ಕೆಗೊಂಡರು.

ಕರ್ನಾಟಕದ ವಿಧಾನಸಭೆಯಲ್ಲಿ ಒಟ್ಟು 214 ಕ್ಷೇತ್ರಗಳಿದ್ದವು. ಪಕ್ಷವು ಒಟ್ಟು 20 ಸ್ಥಾನಗಳಲ್ಲಿ ಜಯಗಳಿಸಿತು. ಈ ಚುನಾವಣೆಯಲ್ಲಿ ಒಟ್ಟು 74,94,419 ರಷ್ಟು ಬಿದ್ದ ಮತಗಳಲ್ಲಿ ಪಕ್ಷವು ಶೇಕಡಾ 14 ರಷ್ಟು ಮತಗಳನ್ನು ಪಡೆಯಿತು, ಅಬ್ದುಲ್ ಖುದ್ದುಸ್ ಅನವರ್, ಐ. ವಿ. ಐತಾಳ, ಬಿ. ಭಾಸ್ಕರ್ ಶೆಟ್ಟಿ, ಶ್ರೀಮತಿ ಡಬ್ಲ್ಯೂ. ಐ. ಫರ್ನಾಂಡಿಸ್, ಬಿ. ಪಿ. ಗಂಗಾಧರ, ಡಿ. ಎನ್. ನಾಡಕರ್ಣಿ, ಕೆ. ಹೆಚ್. ರಂಗನಾಥ, ಸಿ. ಎಂ. ಎಸ್. ಶಾಸ್ತ್ರಿ, ಎಸ್. ಶಿವಪ್ಪ ಮೊದಲಾದ ನಾಯಕರು ಜಯಶೀಲರಾದರು.

ನಾಲ್ಕನೆಯ ಸಾರ್ವತ್ರಿಕ ಚುನಾವಣೆಗಳಲ್ಲಿ ಸಂಯುಕ್ತ ಸಮಾಜವಾದಿ ಪಕ್ಷವು ತನ್ನ ಶಕ್ತಿಯ ಮೇಲಿಯೇ ಸ್ಪರ್ಧಿಸಲು ನಿರ್ಧರಿಸಿತು. ಈ ಚುನಾವಣೆಗಳ ನಂತರ ಕೆಲವು ರಾಜ್ಯಗಳಲ್ಲಿ ಕಾಂಗ್ರೆಸ್ಸೇತರ ಸರಕಾರಗಳು ಅಸ್ತಿತ್ವಕ್ಕೆ ಬರುವುವೆಂದು, ಅವು ಗಳು ಒಂದು ಪಕ್ಷದ ಸರಕಾರವಾಗಿರದೆ ಅನೇಕ ಪಕ್ಷಗಳು ಸೇರಿದ ಸರಕಾರಗಳಾಗಿರುವು ವೆಂದು ಪಕ್ಷವು ಮುಂಗಾಣಿತ್ತು. ಆದ್ದರಿಂದ ಇದನ್ನು ಅರಿತ ಪಕ್ಷವು ಕಾಂಗ್ರೆಸ್ಸೇತರ ಸರಕಾರ ಯಾವಯಾವ ಕಾರ್ಯಕ್ರಮಗಳನ್ನು ನೆರವೇರಿಸಬೇಕೆಂಬ ವಿವರಗಳನ್ನು ತನ್ನ ಚುನಾವಣೆಯ ಪ್ರಣಾಳಿಕೆಯಲ್ಲಿ ಘೋಷಿಸಿತು.

ಕಾಂಗ್ರೆಸ್ ಸರಕಾರವು ಇದುವರೆಗೂ ತನ್ನ ಭರವಸೆಗಳನ್ನು ಕೃತಿಗೆ ಇಳಿಸದೆ ಜನತೆಗೆ ಬರಿ ನಿರಾಶೆಗಳನ್ನು ಬಳುವಳಿಯಾಗಿ ಕೊಟ್ಟಿದೆ. ಮುಂಬರುವ "ಕಾಂಗ್ರೆಸ್ಸೇತರ ಸರಕಾರವು ಕೃತಿಯ ಮೂಲಕ ಮಾತಾಡಬೇಕು. ಇಂತಹ ಸರಕಾರ ಜನತೆಯ ನಿರಾಶೆಯನ್ನು ದೂರಗೊಳಿಸಬಲ್ಲದು" ಎಂದು ಪ್ರಣಾಳಿಕೆ ಹೇಳಿತು. ಕನಿಷ್ಠ ಹಾಗೂ ಗರಿಷ್ಟ ಆದಾಯಗಳು 1:10ರಷ್ಟು ಇರಬೇಕು. ಖರ್ಚಿನಮೇಲೆ ಮಿತಿ ವಿಧಿಸಬೇಕು. ಕಾಂಗ್ರೆಸ್ಸೇತರ ಸರಕಾರ ಅಧಿಕಾರ ವಹಿಸಿಕೊಂಡ 6 ತಿಂಗಳಲ್ಲಿಯೇ ದುಬಾರಿ ಶಿಕ್ಷಣ ಸಂಸ್ಥೆಗಳನ್ನು ಮುಚ್ಚಬೇಕು. ರಾಷ್ಟ್ರಾಧ್ಯಕ್ಷರಿಂದ ಪ್ರಾರಂಭಿಸಿ ಜಾಡಮಾಲಿಯ ವರೆಗಿನ ಎಲ್ಲ ನಾಗರೀಕರ ಮಕ್ಕಳು ಒಂದೇ ತರಹದ ಶಾಲೆಗೆ ಹೋಗುವಂಥ ಶಿಕ್ಷಣ ವ್ಯವಸ್ಥೆಯನ್ನು ಕೂಡಲೇ ಜಾರಿಗೆ ತರಬೇಕು. ಮಾತೃಭಾಷೆಯನ್ನೇ ಶಿಕ್ಷಣದ ಮಾಧ್ಯಮವನ್ನಾಗಿ ಮಾಡಬೇಕು. ಇಂಗ್ಲಿಷನ್ನು ಶಿಕ್ಷಣಮಾಧ್ಯಮದಿಂದ ಕೂಡಲೆ

ಕಿತ್ತುಹಾಕಬೇಕು. ಶತಮಾನಗಳಿಂದ ತುಳಿಯಲ್ಪಟ್ಟಿರುವ ಮಹಿಳೆಯರು, ಶೂದ್ರರು, ಹರಿಜನರು, ಗಿರಿಜನರು, ಹಿಂದುಳಿದ ಜಾತಿಗಳು ಅಲ್ಪಸಂಖ್ಯಾತರಿಗೆ ವಿಶೇಷಾವಕಾಶ ಗಳ ಮೀಸಲಾತಿಯನ್ನು ಜಾರಿಗೆ ತರಬೇಕು. ಇವೆ ಮೊದಲಾದ ಕಾರ್ಯಕ್ರಮ ಗಳನ್ನು ಜನತೆಯ ಮುಂದಿಟ್ಟು 'ಜನತೆಯು ಈ ಪಕ್ಷವನ್ನು ತನ್ನ ಸೇವಕ ಹಾಗೂ ರಕ್ಷಕನನ್ನಾಗಿ ಮಾಡಬೇಕೆಂದು' ಪ್ರಣಾಳಿಕೆ ಬೇಡಿಕೊಂಡಿತು. ಇದೇ ಪ್ರಣಾಳಿಕೆ ಯನ್ನು ರಾಜ್ಯ ಸಂಯುಕ್ತ ಸಮಾಜವಾದಿ ಪಕ್ಷವು ರಾಜ್ಯದ ಜನತೆಯ ಮುಂದಿಟ್ಟು ಚುನಾವಣಾ ಕಣಕ್ಕಿಳಿಯಿತು.

ಲೋಕಸಭೆಯ 27 ಸ್ಥಾನಗಳಲ್ಲಿ ಸಂಯುಕ್ತ ಸಮಾಜವಾದಿ ಪಕ್ಷವು ಎರಡು ಸ್ಥಾನಗಳಿಗೆ ಸ್ಪರ್ಧಿಸಿತು. ಕೇವಲ ಜೆ. ಹೆಚ್. ಪಟೇಲರು ಶಿವಮೊಗ್ಗದಿಂದ ಲೋಕ ಸಭೆಗೆ ಆಯ್ಕೆಗೊಂಡರು. ಬಿದ್ದ ಮತಗಳಲ್ಲಿ ಪಕ್ಷವು ಶೇಕಡಾ 2.6 ರಷ್ಟು ಮತ ಗಳನ್ನು ಗಳಿಸಿತು. ರಾಜ್ಯದ ವಿಧಾನ ಸಭೆಯ 214 ಸ್ಥಾಗಳ ಪೈಕಿ ಪಕ್ಷವು 16 ಅಭ್ಯರ್ಥಿಗಳನ್ನು ನಿಲ್ಲಿಸಿತ್ತು. ನಿಲ್ಲಿಸಿದ ಅಭ್ಯರ್ಥಿಗಳಲ್ಲಿ ಎಸ್. ಗೋಪಾಲಗೌಡ, ಎಸ್. ಬಂಗಾರಪ್ಪ, ಎಂ. ನಾಗಪ್ಪ, ಅಜೀಜ್ ಸೇಠ್ ಹಾಗೂ ಎನ್. ಜಿ. ಜಾಲಪ್ಪ ಅವರು ಪಕ್ಷದಿಂದ ಆಯ್ಕೆಗೊಂಡರು. ಶಿವಮೊಗ್ಗ ಜಿಲ್ಲೆಯಿಂದ ಮೂವರು ಅಭ್ಯರ್ಥಿಗಳು, ರಾಯಚೂರು ಜಿಲ್ಲೆಯಿಂದ ಹಾಗೂ ಮೈಸೂರು ಜಿಲ್ಲೆಯಿಂದ ಒಬ್ಬೊಬ್ಬ ಅಭ್ಯರ್ಥಿಯು ಆಯ್ಕೆಗೊಂಡರು. ಈ ಫಲಿತಾಂಶದಿಂದ ಪಕ್ಷವು ಶಿವಮೊಗ್ಗ ಜಿಲ್ಲೆಯಲ್ಲಿ ಪ್ರಬಲವಾಗಿತ್ತೆಂದು ಕಂಡುಬರುತ್ತದೆ.

ಲೋಕಸಭೆಯ ಮಧ್ಯಕಾಲೀನ ಚುನಾವಣೆಗಳು

ಕಾಂಗ್ರೆಸ್ ಪಕ್ಷ ತನ್ನ ಅಂತರಿಕ ಬಿಕ್ಕಟ್ಟುಗಳಿಂದ 1969ರಲ್ಲಿ ಒಡೆದು ಸಂಸ್ಥಾ ಕಾಂಗ್ರೆಸ್ ಮತ್ತು ಆಡಳಿತ ಕಾಂಗ್ರೆಸ್ ಎಂದು ಎರಡು ಹೋಳಾಯಿತು. ಇಂದಿರಾ ಗಾಂಧಿಯವರು ತಮ್ಮ ಪಕ್ಷದ ಅಂತರಿಕ ಬಿಕ್ಕಟ್ಟುಗಳನ್ನು ನಿವಾರಿಸಿಕೊಳ್ಳುವ ಉದ್ದೇಶದಿಂದ 27, ಡಿಸೆಂಬರ್ 1970 ರಂದು ಲೋಕಸಭೆಯನ್ನು ವಿಸರ್ಜಿಸಿ ಮಧ್ಯಾವಧಿ ಚುನಾವಣೆಗಳನ್ನು ಘೋಷಿಸಿದರು.

ಈ ಹಿನ್ನೆಲೆಯಲ್ಲಿ ಪ್ರಜಾಸಮಾಜವಾದಿಪಕ್ಷ ಬರಲಿರುವ ಚುನಾವಣಾ ತಂತ್ರದ ರೂಪರೇಷೆಗಳನ್ನು ನಿರ್ಧರಿಸಲು ಸಾಕರವಾಡಿಯಲ್ಲಿ ರಾಷ್ಟ್ರೀಯ ಸಮ್ಮೇಳನವನ್ನು ನಡೆಸಿತು. ಆ ಸಮ್ಮೇಳನದಲ್ಲಿ ಪಕ್ಷವು "ಬರಲಿರುವ ಚುನಾವಣೆಗಳಲ್ಲಿ ಸಾಮಾನ್ಯ ದೃಷ್ಟಿಕೋನವನ್ನು ಹೊಂದಿರುವ, ರಾಜಕಾರಣವನ್ನು ತೀವ್ರಗೊಳಿಸುವ, ಸಮಾಜ ವಾದೀ ನೀತಿಗಳನ್ನು ಕಾರ್ಯಗತಗೊಳಿಸುವ ಹಾಗೂ ಸಂಪ್ರದಾಯವಾದಿ, ಯಥಾಸ್ಥಿತಿವಾದಿ ಹಿಂದೂ ಮತ್ತು ಮುಸ್ಲಿಂ ಕೋಮುವಾರುವಾದಿ ಹಾಗೂ ಎಡದುಸ್ಸಾಹಸೀ ಶಕ್ತಿಗಳ ವಿರುದ್ಧ ಹೋರಾಡುವ ಪಕ್ಷಗಳು ಚುನಾವಣಾ

ಹೊಂದಾಣಿಕೆಗಳನ್ನು ಮಾಡಿಕೊಳ್ಳುವುದು ಸಾಧ್ಯ" ಎಂದು ಚುನಾವಣಾ ತಂತ್ರದ ನೀತಿಯನ್ನು ಅಂಗೀಕರಿಸಿತು. ಈ ನೀತಿಯ ಪ್ರಕಾರ ಪ್ರಜಾಸಮಾಜವಾದಿ ಪಕ್ಷ ಹಾಗೂ ಆಡಳಿತ ಕಾಂಗ್ರೆಸ್ ಪಕ್ಷಗಳ ನಡುವೆ ಚುನಾವಣಾ ಹೊಂದಾಣಿಕೆಯನ್ನು ಕುದುರಿಸಲು ಎರಡು ಪಕ್ಷಗಳ ನಾಯಕರು, ಸರಕಾರ ಕೈಗೊಳ್ಳಬೇಕಾದ ಕಾರ್ಯ ಕ್ರಮಗಳ ಬಗ್ಗೆ ಒಮ್ಮತಕ್ಕೆ ಬಂದರು. ಆದರೆ ಲೋಕಸಭಾ ಸ್ಥಾನಗಳ ಹಂಚಿಕೆಯ ಬಗ್ಗೆ ಒಮ್ಮತಕ್ಕೆ ಬರಲಾಗಲಿಲ್ಲ. ಆಗ ತಾನೇ ಕರ್ನಾಟಕದಲ್ಲಿ ಲೋಕಸಭಾ ಸದಸ್ಯರಾದ ಎಸ್. ಎಂ. ಕೃಷ್ಣ ಹಾಗೂ ಕೆ. ಲಕ್ಕಪ್ಪ ಇವರು ಪಕ್ಷ ಬಿಟ್ಟು ಆಡಳಿತ ಕಾಂಗ್ರೆಸ್ ಸೇರಿದ್ದರು. ಹಿಂದೆ ಅವರು ಆರಿಸಿಬಂದ ಕ್ಷೇತ್ರಗಳನ್ನು ಪಕ್ಷಕ್ಕೆ ಕೊಡ ಬೇಕೆಂದು ಪಕ್ಷದ ನಾಯಕರು ಒತ್ತಾಯ ಮಾಡಿದರು. ಆದರೆ ಅಲ್ಲಿಂದ ಆಯ್ಕೆ ಯಾದವರು ಕಾಂಗ್ರೆಸ್ ಪಕ್ಷ ಸೇರಿದ್ದಾರೆ, ಆದ್ದರಿಂದ ಆ ಸ್ಥಾನಗಳಲ್ಲಿ ಕಾಂಗ್ರೆಸ್ಸೇ ಸ್ಪರ್ಧಿಸಬೇಕೆಂದು ಕಾಂಗ್ರೆಸ್ ನಾಯಕರು ಪಟ್ಟು ಹಿಡಿದರು. ಇದೇ ವಾದವನ್ನು ಇತರ ರಾಜ್ಯಗಳಲ್ಲಿಯೂ ಕಾಂಗ್ರೆಸ್ ಪಕ್ಷ ಮಂಡಿಸಿತು. ಈ ಕಾರಣದಿಂದ ಪ್ರಜಾ ಸಮಾಜವಾದಿ ಪಕ್ಷ ಹಾಗೂ ಆಡಳಿತ ಕಾಂಗ್ರೆಸ್ ಪಕ್ಷಗಳ ನಡುವೆ ಚುನಾವಣಾ ಹೊಂದಾಣಿಕೆ ಕುದುರಲಿಲ್ಲ.

ಕರ್ನಾಟಕದಲ್ಲಿ ಪಕ್ಷವು 1967ರ ಚುನಾವಣೆಗಳ ನಂತರ ಪ್ರಮುಖ ವಿರೋಧಪಕ್ಷವಾಗಿತ್ತು. ವಿಧಾನಸಭೆಯಲ್ಲಿ ರಾಜ್ಯಪಕ್ಷದ ಅಧ್ಯಕ್ಷರಾಗಿದ್ದ ಎಸ್. ಶಿವಪ್ಪ ಅವರು ವಿರೋಧಪಕ್ಷದ ನಾಯಕರಾಗಿದ್ದರು. ಅಲ್ಪ ಸಮಯದ ವರೆಗೆ ಪಕ್ಷದ ಪ್ರಧಾನ ಕಾರ್ಯದರ್ಶಿಗಳಾದ ಎ. ಎಲ್. ಶಿವಾನಂದಸ್ವಾಮಿಗಳು ವಿಧಾನಪರಿಷತ್ತಿನಲ್ಲಿ ವಿರೋಧ ಪಕ್ಷದ ನಾಯಕರಾಗಿದ್ದರು. ರಾಜ್ಯದಲ್ಲಿ ಕಾಂಗ್ರೆಸ್ ಪಕ್ಷವು ದೈತ್ಯ ಆಡಳಿತಪಕ್ಷವಾಗಿದ್ದ ವಿಶಿಷ್ಟ ಸಂದರ್ಭಗಳಲ್ಲಿ ಅದು ಒಡ್ಡಿದ ಸವಾಲು ಗಳನ್ನು ಪ್ರಜಾಸಮಾಜವಾದಿ ಪಕ್ಷವು ಸಮರ್ಥವಾಗಿ ಎದುರಿಸಿತು. ಆದರೆ 1970ರ ಸುಮಾರಿನಲ್ಲಿ ರಾಷ್ಟ್ರದಲ್ಲಿ ಪಕ್ಷಾಂತರದ ಪಿಡುಗು ಅರ್ಬುದ ರೋಗದಂತೆ ಹರಡಿತು. ಆ ಪಕ್ಷಾಂತರ ಪಿಡುಗಿನ ಪರಿಣಾಮವಾಗಿ ಇಬ್ಬರು ಲೋಕಸಭಾ ಸದ ಸ್ಯರು, ಹಲವಾರು ಶಾಸಕರು ಹಾಗೂ ಕಾರ್ಯಕರ್ತರು ಪಕ್ಷವನ್ನು ಬಿಟ್ಟು ಕಾಂಗ್ರೆಸ್ ಪಕ್ಷ ಸೇರಿದರು. ಪಕ್ಷಾಂತರದ ನಂತರ ಪಕ್ಷದಲ್ಲಿ 25 ಸಾವಿರ ದಕ್ಷ ಕಾರ್ಯಕರ್ತ ರಿದ್ದಾರೆಂದೂ, ಪಕ್ಷವು ತುಮಕೂರು, ಚಿತ್ರದುರ್ಗ, ಉತ್ತರ ಕನ್ನಡ, ದಕ್ಷಿಣ ಕನ್ನಡ, ಚಿಕ್ಕಮಗಳೂರು, ಹಾಸನ, ಮಂಡ್ಯ ಮತ್ತು ಧಾರವಾಡ ಜಿಲ್ಲೆಗಳಲ್ಲಿ ಪ್ರಬಲ ವಾಗಿದೆ ಎಂದು ಪಕ್ಷದ ಅಧ್ಯಕ್ಷರು ಎಸ್. ಶಿವಪ್ಪ ಅವರು ಚುನಾವಣೆಗಳ ಸಂದರ್ಭ ದಲ್ಲಿ ಹೇಳಿದರು.

ಪ್ರಜಾ ಸಮಾಜವಾದಿ ಪಕ್ಷವು "ಸಮಾಜವಾದಿ ಪರಿವರ್ತನೆಯೆಡೆಗೆ" ಎಂಬ ಹೆಸರಿನಲ್ಲಿ ಒಂದು ಚುನಾವಣಾ ಪ್ರಣಾಳಿಕೆಯನ್ನು ಘೋಷಿಸಿತು. ಸಾಮಾಜಿಕ- ಆರ್ಥಿಕ ಸುಧಾರಣೆಗಾಗಿ ಸಂವಿಧಾನವನ್ನು ಅರ್ಹ ಸಾಧನವನ್ನಾಗಿ ಮಾಡುವ ಉದ್ದೇ

ಶದಿಂದ ಸಂವಿಧಾನವನ್ನು ತಿದ್ದುಪಡಿ ಮಾಡಬೇಕಾಗಿದೆ. ಅದಕ್ಕಾಗಿ ಸಂವಿಧಾನ ಸುಧಾರಣಾ ಆಯೋಗವನ್ನು ರಚಿಸಲು ಪಕ್ಷ ಬಯಸುತ್ತದೆ. ಏಕಸ್ವಾಮ್ಯಗಳ ಕಪಿಮುಷ್ಟಿಯನ್ನು ಮುರಿಯಲು ಪ್ರಭಾವಕಾರಿಯಾದ ಕ್ರಮಗಳನ್ನು ಕೈಗೊಳ್ಳ ಬೇಕು. ಆರ್ಥಿಕ ಸಮಾನತೆಗಾಗಿ ಸೂಕ್ತಕ್ರಮಗಳನ್ನು ಕೈಗೊಳ್ಳಬೇಕು. ನಿರು ದ್ಯೋಗ ಸಮಸ್ಯೆಯನ್ನು ಪರಿಹರಿಸಲು ಗೃಹ ಹಾಗೂ ಕೃಷಿ ಆಧಾರಿತ ಕೈಗಾರಿಕೆ ಗಳಿಗೆ ಆದ್ಯತೆ ಕೊಡಬೇಕು. ನಗರಗಳಲ್ಲಿ ಕ್ರೋಢೀಕೃತವಾಗುತ್ತಿರುವ ಸಂಪತ್ತಿನಿಂದ ಹೆಚ್ಚುತ್ತಿರುವ ಅಸಮಾನತೆಯನ್ನು ತೊಡೆದುಹಾಕಲು ನಗರ ಆಸ್ತಿಮಿತಿಯನ್ನು ಜಾರಿಗೆ ತರಬೇಕು. ಪರಿಹಾರಧನವಿಲ್ಲದೆ ರಾಜಮಹಾರಾಜರ ರಾಜ್ಯಧನವನ್ನು ರದ್ದು ಗೊಳಿಸಬೇಕು. ಕಾರ್ಮಿಕ ರಹಿತ ಹಿತರಕ್ಷಣೆಗಾಗಿ ಕಾನೂನುಗಳನ್ನು ರೂಪಿಸಬೇಕು. ಪ್ರಗತಿಪರ ಭೂಸುಧಾರಣೆಗಳನ್ನು ಜಾರಿಗೆ ತರಬೇಕು. ಹೆಚ್ಚುವರಿ ಭೂಮಿಯನ್ನು ಹಾಗೂ ವ್ಯವಸಾಯಯೋಗ್ಯ ಭೂಮಿಯನ್ನು ಭೂಹೀನ ರೈತರಿಗೆ ಹಾಗೂ ಅತಿ ಸಣ್ಣ ರೈತರಿಗೆ ಹಂಚಬೇಕು. ಸಣ್ಣ ರೈತರಿಗೆ ಸಾಲ ಸೌಲ, ಬೀಜ, ಗೊಬ್ಬರ ಮತ್ತು ವಿದ್ಯುತ್ ಮೊದಲಾದ ನೆರವನ್ನು ನೀಡಬೇಕು. ಹೆಚ್ಚು ಹೆಚ್ಚು ಯುವ ಜನರು ರಾಜಕೀಯದಲ್ಲಿ ಸಕ್ರಿಯ ಪಾತ್ರ ವಹಿಸುವುದಕ್ಕಾಗಿ ಮತದಾನದ ವಯಸ್ಸನ್ನು 18 ವರ್ಷಗಳಿಗೆ ಇಳಿಸಬೇಕು. ಇದೇ ಮೊದಲಾದ ಕಾರ್ಯಕ್ರಮಗಳನ್ನು ಪ್ರಣಾಳಿಕೆಯಲ್ಲಿ ಪಕ್ಷ ನಿರೂಪಿಸಿತ್ತು. ಈ ಪ್ರಣಾಳಿಕೆಯನ್ನು ರಾಜ್ಯಪಕ್ಷವು ಅಂಗೀಕರಿಸಿತು. ರಾಜಕೀಯ ಅಸ್ಥಿರತೆಯನ್ನು ನಿವಾರಿಸಿ ಸಮಾಜವಾದಿ ನೀತಿಗಳಿಗೆ ನಿಷ್ಠೆಯಿಂದಿರುವ ಸುಭದ್ರ ಮತ್ತು ಪ್ರಗತಿಶೀಲ ಸರಕಾರ ಒದಗಿಸುವ ಸಂಕಲ್ಪವನ್ನು ನೆರವೇರಿಸಲು ಜನತೆ ಪಕ್ಷಕ್ಕೆ ಮತನೀಡಬೇಕೆಂದು ಕೋರಿತು.

ರಾಜ್ಯದಲ್ಲಿ 27 ಲೋಕಸಭೆಯ ಸ್ಥಾನಗಳಿದ್ದವು. ಪಕ್ಷವು ಹಾಸನ ಕ್ಷೇತ್ರಕ್ಕೆ ಎಸ್.ಶಿವಪ್ಪ, ಮಂಗಳೂರು ಕ್ಷೇತ್ರಕ್ಕೆ ಈಶ್ವರಭಟ್ ಪರ್ವಕಜೆ, ಧಾರವಾಡ ಕ್ಷೇತ್ರಕ್ಕೆ ಎಸ್. ಪಿ. ಶಿರೂರ್, ಮಧುಗಿರಿ ಕೇತ್ರಕ್ಕೆ ಚಿಕ್ಕನಾರಾಯಣರೆಡ್ಡಿ, ತುಮಕೂರು ಕ್ಷೇತ್ರಕ್ಕೆ ಹೆಚ್. ಹನುಮಂತೆಗೌಡ ಅವರನ್ನು ಅಭ್ಯರ್ಥಿಗಳನ್ನಾಗಿ ನಿಲ್ಲಿಸಿತು. ಉತ್ತರ ಕನ್ನಡ ಕ್ಷೇತ್ರದಿಂದ ಸ್ಪರ್ಧಿಸಿದ್ದ ದಿನಕರ ಬೇಸಾಯಿ ಅವರಿಗೆ ಪಕ್ಷವು ಸಂಪೂರ್ಣ ಬೆಂಬಲನೀಡಿತು. ಈ ಚುನಾವಣೆಯಲ್ಲಿ 1,37,89,683 ಮತದಾರರಿದ್ದರು. ಒಟ್ಟು 76,45,347 ರಷ್ಟು ಮತದಾರರು ಮತನೀಡಿದರು. ಬಿದ್ದ ಮತಗಳಲ್ಲಿ ಪಕ್ಷವು 97301 ರಷ್ಟು ಮತಗಳನ್ನು ಗಳಿಸಿತು. ಅಂದರೆ ಬಿದ್ದ ಮತಗಳಲ್ಲಿ ಪಕ್ಷವು ಶೇಕಡಾ 1.28 ರಷ್ಟು ಮತಗಳನ್ನು ಪಡೆಯಿತು. ಆದರೆ ಒಂದು ಸ್ಥಾನವನ್ನು ಗೆಲ್ಲಲಿಲ್ಲ.

ನಾಲ್ಕನೆಯ ಚುನಾವಣೆಗಳಲ್ಲಿ ಕಾಂಗ್ರೆಸ್ ಸರಕಾರವು ಕೆಲವು ರಾಜ್ಯಗಳಲ್ಲಿ ಸೋತುಹೋಗಿತ್ತು ಹಾಗೂ ಕಾಂಗ್ರೆಸ್ಸೇತರ ಸಮ್ಮಿಶ್ರ ಸರಕಾರಗಳು ರಚಿತ

ಗೊಂಡಿದ್ದವು. ಕಾಂಗ್ರೆಸ್ ಪಕ್ಷ 1969 ರಲ್ಲಿ ಒಡೆದು ಆಡಳಿತ ಕಾಂಗ್ರೆಸ್ ಮತ್ತು ಸಂಸ್ಥಾ ಕಾಂಗ್ರೆಸ್ ಎಂದು ಹೋಳಾಗಿತ್ತು. ಈ ಘಟನೆಗಳು ವಿರೋಧಿ ಪಕ್ಷಗಳು ಈ ಮಧ್ಯಕಾಲೀನ ಚುನಾವಣೆಗಳಲ್ಲಿ ಒಂದಾಗಿ ಸ್ಪರ್ಧಿಸಿದರೆ ಕೇಂದ್ರದಲ್ಲಿಯೂ ಆಡಳಿತ ಕಾಂಗ್ರೆಸ್ಸನ್ನು ಸೋಲಿಸಲು ಸಾಧ್ಯವಾಗಬಹುದೆಂದು ಸೂಚಿಸಿದವು. ಇದರಿಂದ ಪ್ರೇರಣೆಗೊಂಡ ಸಂಯುಕ್ತ ಸಮಾಜವಾದಿ ಪಕ್ಷವು ಸಂಸ್ಥಾ ಕಾಂಗ್ರೆಸ್‌ನ ಅಧ್ಯಕ್ಷ ಎಸ್. ನಿಜಲಿಂಗಪ್ಪನವರ ನೇತೃತ್ವದಲ್ಲಿ ರಚಿತಗೊಂಡ ಮಹಾಮೈತ್ರಿ ಕೂಟಕ್ಕೆ ಸೇರಿಕೊಂಡಿತು. "ರಾಜಕೀಯ, ಆರ್ಥಿಕ ಮತ್ತು ಜಾತ್ಯಾತೀತ ಪ್ರಜಾ ಸತ್ತೆ, ತಮ್ಮ ರಾಷ್ಟ್ರದ ಸ್ವಾತಂತ್ರ್ಯ ಹಾಗೂ ಏಕತೆಯ ರಕ್ಷಣೆ ಹಾಗೂ ಆದರ ತ್ವರಿತ ಆರ್ಥಿಕ, ಸಾಮಾಜಿಕ ಪ್ರಗತಿಗೆ ಪಣತೊಟ್ಟ ಸರಕಾರವನ್ನು ಜನತೆಗೆ ನೀಡಲು ಈ ಮೈತ್ರಿಕೂಟ ನಿರ್ಧರಿಸಿದೆ." ಎಂದು ದಿನಾಂಕ 17-2-71 ರಂದು ಒಂದು ಹೇಳಿಕೆಯಲ್ಲಿ ಮಹಾ ಮೈತ್ರಿಕೂಟದ ಉದ್ದೇಶವನ್ನು ತಿಳಿಸಲಾಯಿತು. ಈ ಮೈತ್ರಿ ಕೂಟದಲ್ಲಿ ಸಂಯುಕ್ತ ಸಮಾಜವಾದಿ ಪಕ್ಷ, ಸಂಸ್ಥಾ ಕಾಂಗ್ರೆಸ್, ಜನಸಂಘ ಹಾಗೂ ಸ್ವತಂತ್ರ ಪಕ್ಷಗಳು ಸೇರಿದ್ದವು.

ಸಂಯುಕ್ತ ಸಮಾಜವಾದಿ ಪಕ್ಷವು ಒಂದು ಚುನಾವಣಾ ಪ್ರಣಾಳಿಕೆಯನ್ನು 18-2-71 ರಂದು ಘೋಷಿಸಿತು. ಮೂಲಭೂತಹಕ್ಕುಗಳ ಪಟ್ಟಿಯಿಂದ ಆಸ್ತಿ-ಪಾಸ್ತಿ ಹಕ್ಕನ್ನು ತೆಗೆದುಹಾಕುವುದು, ಆಸ್ತಿ-ಪಾಸ್ತಿಯನ್ನು ಸರಕಾರವು ವಹಿಸಿಕೊಂಡ ಸಂದರ್ಭದಲ್ಲಿ ಪರಿಹಾರಧನ ನೀಡಬಾರದು. ಅವಶ್ಯಕವೆನಿಸಿದಲ್ಲಿ ಪುನರ್ವಸತಿಯ ಅನುದಾನವನ್ನು ತೊಡಬೇಕು. ಮೂಲಭೂತ ಹಕ್ಕಿನ ಪಟ್ಟಿಯಲ್ಲಿ ಪ್ರತಿಯೊಬ್ಬ ವ್ಯಕ್ತಿಗೂ ಅನ್ನ, ಬಟ್ಟೆ, ವಸತಿ, ಶಿಕ್ಷಣ, ಉದ್ಯೋಗ ಹಾಗೂ ವೈದ್ಯಕೀಯ ನೆರವು ನೀಡಿಕೆಯನ್ನು ಸೇರಿಸಬೇಕು. ಕೇಂದ್ರ-ರಾಜ್ಯಗಳ ಸಂಬಂಧದಲ್ಲಿ ಮೂಲಭೂತ ಬದಲಾವಣೆಯಾಗಬೇಕು. ರಾಜ್ಯ ಹಾಗೂ ಪಂಚಾಯ್ತಿಗಳು ತಾವಾಗಿಯೇ ಸಂಪನ್ಮೂಲಗಳನ್ನು ಕ್ರೋಢೀಕರಿಸಿಕೊಳ್ಳುವುದಕ್ಕೆ ಅನುವಾಗುವಂತೆ ಆರ್ಥಿಕ ವಿಕೇಂದ್ರೀಕರಣವನ್ನು ಮಾಡಬೇಕು. ಎಲ್ಲ ಭಾರಿ ಕೈಗಾರಿಕೆಗಳು ಮತ್ತು ವಿದೇಶಿ ಬಂಡವಾಳಗಳನ್ನು ರಾಷ್ಟ್ರೀಕರಣ ಮಾಡಬೇಕು. ವೈಯುಕ್ತಿಕ ವೆಚ್ಚ ತಿಂಗಳಿಗೆ 1500 ರೂ. ಗಳಿಗೆ ಹೆಚ್ಚದಂತೆ ಕಡಿವಾಣ ಹಾಕಬೇಕು. ಕಾರ್ಮಿಕರಿಗೆ ಕನಿಷ್ಟ ರಾಷ್ಟ್ರೀಯ ವೇತನವನ್ನು ನಿಗದಿಗೊಳಿಸಬೇಕು. ಲಾಭದಾಯಕವಲ್ಲದ ಹಿಡುವಳಿಗಳ ಮೇಲಿನ ಕಂದಾಯವನ್ನು ರದ್ದುಮಾಡಬೇಕು. ತೆರಿಗೆ ವ್ಯಾಪ್ತಿಗೆ ಒಳಪಡುವಂಥ ರೈತರಮೇಲೆ ಆದಾಯತೆರಿಗೆ ವಿಧಿಸುವಂತೆ ರಾಜ್ಯಸರಕಾರಗಳ ಮೇಲೆ ಒತ್ತಾಯ ಹಾಕಬೇಕು. ವ್ಯವಸಾಯಯೋಗ್ಯ ಎಲ್ಲ ಭೂಮಿಯನ್ನು ಏಳು ವರ್ಷಗಳಲ್ಲಿ ನೀರಾವರಿಗೆ ಒಳಪಡಿಸುವುದಕ್ಕೆ ಪಕ್ಷವು 7 ವರ್ಷಗಳ ಯೋಜನೆಯನ್ನು ರೂಪಿಸುತ್ತದೆ. ಜಾತ್ಯಾತೀತತೆಗೆ ಪಕ್ಷ ಬದ್ಧವಾಗಿದೆ ಹಾಗೂ ಜಾತಿಪದ್ಧತಿಯನ್ನು ತೊಡೆದು ಹಾಕಲು

ಪಕ್ಷ ಶ್ರಮಿಸುತ್ತದೆ. ನೇಪಾಳವು ಸ್ವತಂತ್ರವಾಗುವುದು ಭಾರತದ ವಿದೇಶಿ ನೀತಿಯಾಗಿರಬೇಕು. ಇವೇ ಮೊದಲಾದ ಕಾರ್ಯಕ್ರಮಗಳನ್ನು ಪ್ರಣಾಳಿಕೆಯಲ್ಲಿ ಪಕ್ಷ ಘೋಷಿಸಿತ್ತು. ಈ ಪ್ರಣಾಳಿಕೆಯನ್ನೇ ರಾಜ್ಯ ಪಕ್ಷವು ಅಂಗೀಕರಿಸಿ ಚುನಾವಣೆಗಳಲ್ಲಿ ಧುಮಿಕಿತು.

ಮೈತ್ರಿಕೂಟದ ಸಂಯುಕ್ತಸಮಾಜವಾದಿ ಪಕ್ಷದ ಒಬ್ಬ ಅಭ್ಯರ್ಥಿ, ಸಂಸ್ಥಾ ಕಾಂಗ್ರೆಸ್ಸಿನ ಅಭ್ಯರ್ಥಿಗಳು, ಜನಸಂಘದ ಇಬ್ಬರು ಅಭ್ಯರ್ಥಿಗಳು ಸ್ವತಂತ್ರ ಪಕ್ಷದ ಅಭ್ಯರ್ಥಿಗಳು ರಾಜ್ಯದಲ್ಲಿ ಲೋಕಸಭೆಗೆ ಸ್ಪರ್ಧಿಸಿದರು. ಮೈತ್ರಿಕೂಟದ ಒಬ್ಬ ಅಭ್ಯರ್ಥಿಯೂ ಗೆಲ್ಲಲಿಲ್ಲ. ಸಂಯುಕ್ತ ಸಮಾಜವಾದಿ ಪಕ್ಷವು ಈ ಚುನಾವಣೆಯಲ್ಲಿ ಒಟ್ಟು ಬಿದ್ದ 76,45,347ರಷ್ಟು ಮತಗಳ ಪೈಕಿ 79,111 ರಷ್ಟು ಮತಗಳನ್ನು ಅಂದರೆ ಶೇಕಡಾ 1.04 ರಷ್ಟು ಮತಗಳನ್ನು ಪಡೆಯಿತು.

1972ರ ಸಾರ್ವತ್ರಿಕ ಚುನಾವಣೆಗಳು

ಲೋಕಸಭೆಯ ಮಧ್ಯಕಾಲೀನ ಚುನಾವಣೆಗಳಲ್ಲಿ ಪ್ರಜಾಸಮಾಜವಾದಿ ಪಕ್ಷ ಹಾಗೂ ಮಹಾಮೈತ್ರಿಕೂಟಕ್ಕೆ ಸೇರಿದ್ದ ಸಂಯುಕ್ತಸಮಾಜವಾದಿ ಪಕ್ಷಗಳೆರಡು ಭಾರಿ ಸೋಲನ್ನು ಅನುಭವಿಸಿದವು. ಈ ಚುನಾವಣೆಯ ಮೊದಲು ಹಾಗೂ ನಂತರದ ಅವಧಿಯಲ್ಲಿ ಪಕ್ಷಾಂತರದ ಪಿಡುಗು ಈ ಎರಡು ಪಕ್ಷಗಳನ್ನು ಮತ್ತಷ್ಟು ಕ್ಷೀಣಿಸಿತು. ಈ ಹಿನ್ನೆಲೆಯಲ್ಲಿ ಪ್ರಜಾಸಮಾಜವಾದಿ ಪಕ್ಷ ಮತ್ತು ಸಂಯುಕ್ತ ಸಮಾಜವಾದಿ ಪಕ್ಷಗಳು ಮತ್ತೆ 21, ಜೂನ್ 1971 ರಲ್ಲಿ ವಿಲೀನಗೊಂಡು ಸಮಾಜವಾದಿ ಪಕ್ಷವಾಗಿ ರೂಪಗೊಂಡಿತು. ಈ ಪ್ರಕ್ರಿಯೆಯು ಕರ್ನಾಟಕದಲ್ಲಿಯೂ ಸಂಭವಿಸಿತು. ಹಾಗೂ ಕರ್ನಾಟಕದಲ್ಲಿ ವಿಧಾನಸಭೆಯ ಚುನಾವಣೆಗಳನ್ನು ಎದುರಿಸಲು ಹೊಸದಾಗಿ ರೂಪಗೊಂಡ ಸಮಾಜವಾದಿ ಪಕ್ಷವು ಸಿದ್ಧತೆಗಳನ್ನು ಮಾಡತೊಡಗಿತು.

ಮಧ್ಯಾವಧಿಯ ಚುನಾವಣೆಗಳ ನಂತರ ರಾಜಕೀಯ ಹಾಗೂ ಆರ್ಥಿಕ ಅಧಿಕಾರಿಗಳು ಕೆಲವೇ ವ್ಯಕ್ತಿಗಳಲ್ಲಿ ಹೆಚ್ಚು ಹೆಚ್ಚು ಕೇಂದ್ರೀಕೃತವಾಗುತ್ತಿತ್ತು. ಕೇಂದ್ರೀಕರಣದ ದುಷ್ಪರಿಣಾಮವನ್ನು ಅರಿತ ಪಕ್ಷವು "ಜನತೆಗೆ ಎಲ್ಲ ಅಧಿಕಾರ" ಎಂಬ ಒಂದು ಚುನಾವಣಾ ಪ್ರಣಾಳಿಕೆಯನ್ನು ಘೋಷಿಸಿತು. ಹಿಂದುಳಿದವರ, ಹರಿಜನ ಗಿರಿಜನರ ಏಳಿಗೆಗೆ ಹಮ್ಮಿಕೊಳ್ಳುವ ಯೋಜನೆಗಳಿಗೆ ಹಾಗೂ ವಿಶೇಷವಕಾಶಗಳ ಮೀಸಲಾತಿಗೆ ಅಡ್ಡಿಯಾಗಿರುವ ಕ್ರಮಗಳನು ತೊಡೆಹಾಕಲು ಪಕ್ಷವು ಸಂವಿಧಾನಕ್ಕೆ ತಿದ್ದುಪಡಿಯನ್ನು ತರುತ್ತದೆ. ರಾಜಕೀಯ ಹಾಗೂ ಆರ್ಥಿಕ ಅತಿಕೇಂದ್ರೀಕರಣವನ್ನು ಪಕ್ಷ ವಿರೋಧಿಸುತ್ತದೆ ಹಾಗೂ ವಿಕೇಂದ್ರೀಕರಣವನ್ನು ಪ್ರೋತ್ಸಾಹಿಸುತ್ತದೆ. ಬಡಬಗ್ಗರಿಗೆ ಮನೆಗಳನ್ನು ಒದಗಿಸಿಕೊಡಲು, ನಿವೇಶನಗಳ ಬೆಲೆ ಏರದಂತೆ ನೋಡಿಕೊಳ್ಳಲು, ಸೂಕ್ತಕ್ರಮಗಳನ್ನು ಕೈಗೊಳ್ಳಬೇಕು. ಭೂಮಿಯ

ಸಮಾನ ಪುನರ್‌ಹಂಚಿಕೆಗಾಗಿ ಭೂಸುಧಾರಣಾ ಕಾನೂನುಗಳಿಗೆ ಸೂಕ್ತ ತಿದ್ದುಪಡಿ ಮಾಡಬೇಕು. ಹೆಚ್ಚುವರಿ ಭೂಮಿಯನ್ನು ಭೂಹೀನ ರೈತರಿಗೆ ಅದರಲ್ಲೂ ವಿಶೇಷವಾಗಿ ಹರಿಜನ ಗಿರಿಜನರಿಗೆ ಹಂಚಬೇಕು. ನಿರುದ್ಯೋಗ ಸಮಸ್ಯೆಯನ್ನು ನಿವಾರಿಸಲು ಗ್ರಾಮ ಮತ್ತು ನಗರಪ್ರದೇಶಗಳಲ್ಲಿ ಉತ್ಪಾದನೆಯ ಶ್ರಮಆಧಾರಿತ ಕೈಗಾರಿಕೆಗಳಿಗೆ ಆದ್ಯತೆ ಕೊಡಲಾಗುವುದು. ದೇಶದಲ್ಲಿ ಕಾಂಗ್ರೆಸ್ ಆಡಳಿತದ ಫಲದಿಂದ ತಾಂಡವಾಡುತ್ತಿರುವ ಭ್ರಷ್ಟಾಚಾರನಿರ್ಮೂಲನಕ್ಕಾಗಿ ಸ್ವಾಯತ್ತ ಭ್ರಷ್ಟಾಚಾರ ನಿರ್ಮೂಲನ ಮಂಡಳಿಗಳನ್ನು ಸ್ಥಾಪಿಸಬೇಕು. ಖರ್ಚಿನ ಮೇಲೆ ಮಿತಿ ವಿಧಿಸಬೇಕು ಹಾಗೂ ಸರಕಾರದ ಉನ್ನತಾಧಿಕಾರಿಗಳು ಅನಾವಶ್ಯಕ ಖರ್ಚನ್ನು ನಿಲ್ಲಿಸಬೇಕು. ಇವೇ ಮೊದಲಾದ ಕಾರ್ಯಕ್ರಮಗಳನ್ನು ಪ್ರಣಾಳಿಕೆಯಲ್ಲಿ ಘೋಷಿಸಲಾಗಿತ್ತು.

ರಾಷ್ಟ್ರೀಯ ಸಮಾಜವಾದಿ ಪಕ್ಷದ ಪ್ರಣಾಳಿಕೆಗೆ ಪೂರಕವಾಗಿ ರಾಜ್ಯದ ಜನತೆಯ ವಿಶಿಷ್ಟ ಸಮಸ್ಯೆಗಳ ನಿವಾರಣೆಗೆ ಹಾಗೂ ಅದು ಕೇಂದ್ರದ ನೆರವಿನ ಮೇಲೆ ಅವಲಂಬಿಸದೆ ಸ್ವತಂತ್ರವಾಗಿ ಅಭಿವೃದ್ಧಿ ಹೊಂದಲು ಬೇಕಾಗುವ ಸ್ವಾಯತ್ತತೆಯ ಅವಶ್ಯಕತೆಯನ್ನು ನಿರೂಪಿಸುವ ಒಂದು ಉಪಚುನಾವಣಾ ಪ್ರಣಾಳಿಕೆಯನ್ನು ರಾಜ್ಯ ಪಕ್ಷದ ಅಧ್ಯಕ್ಷ ಕೆ. ಜಿ. ಮಹೇಶ್ವರಪ್ಪ ಅವರು ಬಿಡುಗಡೆ ಮಾಡಿದರು. "ಭಾರತದ ಭದ್ರತೆ, ಸಮಗ್ರತೆ ರಾಷ್ಟ್ರೀಯತೆ ಹಾಗೂ ಆರ್ಥಿಕ ವಿಕಾಸಗಳಿಗೆ ಧಕ್ಕೆಬಾರದ ರೀತಿಯಲ್ಲಿ ಕರ್ನಾಟಕ ಸ್ವಾಯತ್ತವಾಗಬೇಕು" ಎಂದು ಪ್ರಣಾಳಿಕೆಯಲ್ಲಿ ಪಕ್ಷ ಹೇಳಿತು. ಕರ್ನಾಟಕದಲ್ಲಿರುವಂತಹ ಸಂಪನ್ಮೂಲಗಳ, ಜನಶಕ್ತಿಯ ಸಂಪೂರ್ಣ ಬಳಕೆಯ ಸಮೃದ್ಧ ಸಮಾಜವಾದಿ ಕರ್ನಾಟಕ ಕಟ್ಟಲು ಯೋಜನೆಗಳನ್ನು ರೂಪಿಸಬೇಕು. ಪ್ರಜಾಪ್ರಭುತ್ವವು ಗ್ರಾಮದಿಂದ ಹಿಡಿದು ರಾಜ್ಯಮಟ್ಟದವರೆಗೆ ಬೇರೂರುವಂತೆ ರಾಜಕೀಯ ಸುಧಾರಣೆಗಳನ್ನು ಕೈಗೊಳ್ಳಬೇಕು. ಕನ್ನಡಿಗರ ವಿಶಿಷ್ಟ ಸಂಸ್ಕೃತಿ ಭಾಷೆಗಳು ಅನಿರ್ಬಾಧಿತವಾಗಿ ಅರಳುವಂತೆ ಸಾಧ್ಯವಾಗುವಂತಹ ಸ್ವಾಯತ್ತತೆ ಕನ್ನಡಿಗರಿಗೆ ಬೇಕು.

ರಾಜ್ಯದ ಗಡಿಪ್ರಶ್ನೆ ಮತ್ತು ನದಿನೀರಿನ ಹಂಚಿಕೆಯ ಪ್ರಶ್ನೆಗಳನ್ನು ಹೋಗಲಾಡಿಸಲು ಕ್ರಮಗಳನ್ನು ಪ್ರಣಾಳಿಕೆ ಸೂಚಿಸಿತು. "ಈ ಸಮಸ್ಯೆಗಳನ್ನು ಕೇಂದ್ರದ ಮಧ್ಯಸ್ತಿಕೆಗೆ ಬಿಡದೆ ಸಂಬಂಧಿಸಿದ ರಾಜ್ಯ ಸರಕಾರಗಳು ನೇರವಾಗಿ ಬಗೆಹರಿಸಿಕೊಳ್ಳಬೇಕು ಇಲ್ಲವೆ ಯಾವುದಾದರೂ ಅಖಿಲ ಭಾರತದ ಸೂತ್ರ ಅನುಸರಿಸಬೇಕು" ಎಂದು ಪ್ರಣಾಳಿಕೆ ಒತ್ತಿ ಹೇಳಿತು. ಆಡಳಿತ ಮತ್ತು ಶಿಕ್ಷಣಮಾಧ್ಯಮ ಕನ್ನಡವಾಗಬೇಕು. ಕೇಂದ್ರ ಸರಕಾರದ ಇಲಾಖೆಗಳೆಲ್ಲ ಕನ್ನಡದಲ್ಲೆ ವ್ಯವಹರಿಸಬೇಕು. ಕನ್ನಡ ಸಾಹಿತ್ಯ ಪರಿಷತ್ತಿನ ಸ್ಥಾನಮಾನ ಮತ್ತು ಆರ್ಥಿಕ ಪರಿಸ್ಥಿತಿಗಳನ್ನು ಮಾರ್ಪಾಟುಮಾಡಿ ಜನಜೀವನದ ಕನ್ನಡೀಕರಣದ ಹೊಣೆಗಾರಿಕೆಯ ಕಾರ್ಯಗಳಿಂದ ಅನುವಾದಗಳು, ತರಬೇತಿ, ಪ್ರಕಾಶನ, ಪ್ರಚಾರ ಇತ್ಯಾದಿಗಳನ್ನು ಪರಿಷತ್ತಿಗೆ ವಹಿಸ

ಬೇಕು. ಕನ್ನಡ ಹಾಗೂ ನೆರೆಹೊರೆಯ ಇತರ ಸೋದರಭಾಷೆಗಳೊಡನೆ ನೇರವಾಗಿ ಸಾಂಸ್ಕೃತಿಕ ಬಾಂಧವ್ಯ ವ್ಯವಹಾರವನ್ನು ಇಂಗ್ಲೀಷ್‌ನ ಮಧ್ಯಸ್ತಿಕೆಯಿಲ್ಲದೆಯೇ ಸಾಧಿಸುವ ಸಲುವಾಗಿ ದಿವಂಗತ ಸಾಣೆ ಗುರೂಜಿ ಅವರ ಕಲ್ಪನೆಯ "ಅಂತರ ಭಾರತಿ" ರೀತಿಯ ದ್ವಿಭಾಷಾ ಅಥವಾ ತ್ರಿಭಾಷಾ ಸಂಸ್ಥೆಗಳನ್ನು, ಉದಾಹರಣೆಗೆ (ಕನ್ನಡ–ಉರ್ದು, ಕನ್ನಡ–ಮರಾಠಿ, ಕನ್ನಡ–ತೆಲುಗು ಇತ್ಯಾದಿ) ಸ್ಥಾಪಿಸಬೇಕು. ರಾಜ್ಯಕ್ಕೆ ಕೇಂದ್ರದ ಮರ್ಜಿಯನ್ನು ಕಾಯದೆ ಕೂಡಲೆ ಕರ್ನಾಟಕ ಎಂದು ಹೆಸರಿಡ ಬೇಕು. ಕರ್ನಾಟಕದಲ್ಲಿ ಕನ್ನಡ ಪ್ರಥಮ ಭಾಷೆಯಾಗಬೇಕು.

ಒಂದು ಉದ್ಯಮದಲ್ಲಿ ಒಂದೇ ಕಾರ್ಮಿಕ ಸಂಘ, ನ್ಯಾಯಸಮ್ಮತಿ ಕೂಲಿ, ಸಾಮಾಜಿಕ ಭದ್ರತೆ, ಕೇಂದ್ರ–ರಾಜ್ಯಸರಕಾರಿ ನೌಕರರಿಗೆ ಸಮಾನವೇತನ, ಅಸಂಘ ಟಿತ ಮತ್ತು ಕೃಷಿಕಾರ್ಮಿಕರಿಗೆ ಟ್ರೇಡ್‌ಯೂನಿಯನ್ ಸಂಘಟನ ಹಾಗೂ ಹಿತಲಾಭ ಗಳ ವಿಸ್ತರಣೆ ಇವುಗಳನ್ನು ಜಾರಿಗೆ ತರಬೇಕು. ಮಿರಜ್–ಬೆಂಗಳೂರು, ಮೈಸೂರು – ಬೆಂಗಳೂರು, ಗುಂತಕಲ್ಲು – ಬೆಂಗಳೂರು ರೈಲ್ವೆ ಮಾರ್ಗಗಳ ಬ್ರಾಡ್‌ಗೇಜ್ ಪರಿವರ್ತನೆಯನ್ನು ಕೂಡಲೆ ಕೈಗೊಳ್ಳಬೇಕು.

"ತನ್ನ ಪಕ್ಷದ ಚರಿತ್ರೆ, ಕಾರ್ಯಕ್ರಮ, ತನ್ನ ಅಭ್ಯರ್ಥಿಗಳ ಅರ್ಹತೆ ಹಾಗೂ ನಿಷ್ಠೆಗಳ ಆಧಾರದ ಮೇಲೆ ಮತ ನೀಡಬೇಕೆಂದು ಕನ್ನಡಿಗರನ್ನು ಕೇಳಿಕೊಂಡು ಗೆದ್ದ ಅಭ್ಯರ್ಥಿಗಳು ಕನ್ನಡಿಗರ ಆಶೋತ್ತರಗಳನ್ನು ಯಶಸ್ವಿಯಾಗಿ ಬೆಂಬಲಿಸುವವರೆಂದೂ ಹೊರಗಡೆ ಜನತೆಯ ಸಂಕಷ್ಟಗಳ ನಿವಾರಣೆಗಾಗಿ ಹೋರಾಟಗಳನ್ನು ಸಂಘಟಿಸು ವುದು" ಎಂಬ ಆಶ್ವಾಸನೆಯನ್ನು ಪ್ರಣಾಳಿಕೆಯಲ್ಲಿ ಕೊಟ್ಟು ಪಕ್ಷ ಚುನಾವಣಾ ಕಣಕ್ಕಿಳಿಯಿತು.

ಕರ್ನಾಟಕದ ವಿಧಾನಸಭೆಯಲ್ಲಿ ಒಟ್ಟು 216 ಸ್ಥಾನಗಳಿದ್ದವು. 1,50,83,923 ರಷ್ಟು ಒಟ್ಟು ಮತದಾರರಿದ್ದರು. ಪಕ್ಷವು 29 ಕ್ಷೇತ್ರಗಳಿಗೆ ಸ್ಪರ್ಧಿಗಳನ್ನು ನಿಲ್ಲಿಸಿತ್ತು. ನಿಲ್ಲಿಸಿದ್ದ ಅಭ್ಯರ್ಥಿಗಳಲ್ಲಿ ಎಸ್. ಬಂಗಾರಪ್ಪ ಸೊರಬ ಕ್ಷೇತ್ರದಿಂದ, ಕಾಗೋಡು ತಿಮ್ಮಪ್ಪ ಸಾಗರ ಕ್ಷೇತ್ರದಿಂದ ಹಾಗೂ ಕೋಣಂದೂರು ಲಿಂಗಪ್ಪ ಅವರು ತೀರ್ಥಹಳ್ಳಿ ಕ್ಷೇತ್ರದಿಂದ ಆಯ್ಕೆಗೊಂಡರು. ಬಿದ್ದ ಮತಗಳಲ್ಲಿ ಪಕ್ಷವು 1,52,256 ರಷ್ಟು ಮತಗಳನ್ನು ಅಂದರೆ 1.65ರಷ್ಟು ಮತಗಳನ್ನು ಪಡೆಯಿತು.

ಮೊದಲ ಐದು ಸಾರ್ವತ್ರಿಕ ಚುನಾವಣೆಗಳಲ್ಲಿ ಪ್ರಜಾಸಮಾಜವಾದಿ ಪಕ್ಷವು ಗಳಿಸಿದ ಮತಗಳು ಹಾಗೂ ಸ್ಥಾನ ಸಂಖ್ಯೆಯನ್ನು ಪರಿಶೀಲಿಸಿದಾಗ ಕೆಲವು ಗಮನಾರ್ಹವಾದ ಸಂಗತಿಗಳು ಗೊತ್ತಾಗುತ್ತವೆ. ಕರ್ನಾಟಕದ ವಿಧಾನಸಭೆಗೆ ನಡೆದ ಪ್ರಪ್ರಥಮ ಚುನಾವಣೆಯಲ್ಲಿಯೇ ಪ್ರಜಾಸಮಾಜವಾದಿ ಪಕ್ಷವು ಅತ್ಯಂತ ಹೆಚ್ಚು ಮತಗಳನ್ನು ಅಂದರೆ ಶೇಕಡಾ 22.64 ರಷ್ಟು ಮತಗಳನ್ನು ಪಡೆಯಿತು. ಆದರೆ ಅದೇ ಸಮಯದಲ್ಲಿ ನಡೆದ ಲೋಕಸಭಾ ಚುನಾವಣೆಗಳಲ್ಲಿ ಪಕ್ಷ ಬರಿ ಶೇಕಡಾ 6.2 ರಷ್ಟು

ಮತಗಳನ್ನು ಪಡೆಯಿತು. ಈ ಅಂತರಕ್ಕೆ ಕಾರಣ ಪಕ್ಷವು ಲೋಕಸಭೆಗೆ ಕಡಿಮೆ ಅಭ್ಯರ್ಥಿಗಳನ್ನು ನಿಲ್ಲಿಸಿತ್ತು. ಈ ಕಾರಣದಿಂದಾಗಿ ಪಕ್ಷದ ಲೋಕಸಭಾ ಅಭ್ಯರ್ಥಿಗಳು ಇಲ್ಲದ ಕ್ಷೇತ್ರಗಳಲ್ಲಿ ಪಕ್ಷದ ವಿಧಾನಸಭಾ ಅಭ್ಯರ್ಥಿಗಳು ಪಡೆದ ಮತಗಳು ಲೋಕಸಭೆಗೆ ಪಡೆದ ಮತಗಳಲ್ಲಿ ಎಣಿಕೆಯಾಗಲಾರದೆ ಹೋದವು.

ಎರಡನೆಯ ಸಾರ್ವತ್ರಿಕ ಚುನಾವಣೆಗಳಲ್ಲಿ ಸ್ವಲ್ಪಮಟ್ಟಿಗೆ ಇದರ ತದ್ವಿರುದ್ಧ ಪರಿಸ್ಥಿತಿಯುಂಟಾಯಿತು. ವಿಧಾನಸಭಾ ಚುನಾವಣೆಗಳಲ್ಲಿ ಪಕ್ಷ ಶೇಕಡಾ 14.05 ಮತಗಳನ್ನು ಪಡೆದರೆ ಅದೇ ಸಮಯದಲ್ಲಿ ನಡೆದ ಲೋಕಸಭಾ ಚುನಾವಣೆಗಳಲ್ಲಿ ಪಕ್ಷ ಶೇಕಡಾ 18.6 ರಷ್ಟು ಮತಗಳನ್ನು ಪಡೆಯಿತು. ಇದಕ್ಕೆ ಕಾರಣ ಈ ಚುನಾವಣೆಗಳಲ್ಲಿ ಪಕ್ಷವು 10 ಲೋಕಸಭಾ ಕ್ಷೇತ್ರಗಳಿಗೆ ಸ್ಪರ್ಧಿಸಿತ್ತು.

ಮೊದಲನೆಯ ಸಾರ್ವತ್ರಿಕ ಚುನಾವಣೆಯಲ್ಲಿ ವಿಧಾನಸಭೆಯ ಬರಿ 44 ಸ್ಥಾನಗಳಿಗೆ ಸ್ಪರ್ಧಿಸಿ ಶೇಕಡಾ 22.54 ರಷ್ಟು ಮತಗಳನ್ನು ಪಡೆದ ಪಕ್ಷ ಎರಡನೆಯ ಸಾರ್ವತ್ರಿಕ ಚುನಾವಣೆಗಳಲ್ಲಿ 85 ಸ್ಥಾನಗಳಿಗೆ ಸ್ಪರ್ಧಿಸಿದರೂ ಬರಿ ಶೇಕಡಾ 14.05 ಮತಗಳನ್ನು ಪಡೆಯಿತು. ಇದಕ್ಕೆ ಕಾರಣ ಪಕ್ಷದ ಜನಪ್ರಿಯತೆ ಕಡಿಮೆಯಾಗಿರುವುದಕ್ಕೆ ಹೆಚ್ಚಾಗಿ ತಮಗೆ ಸಾಕಷ್ಟು ಬೆಂಬಲವಿಲ್ಲದಿದ್ದ ಕ್ಷೇತ್ರಗಳಲ್ಲಿಯೂ ಪಕ್ಷ ಸ್ಪರ್ಧಿಸಿದ್ದು ಎನ್ನಬಹುದು. ಏಕೆಂದರೆ ಶೇಕಡಾ 22.54 ರಷ್ಟು ಮತಗಳನ್ನು ಪಡೆದು 13 ಸ್ಥಾನಗಳಲ್ಲಿ ಜಯಗಳಿಸಿದ ಪಕ್ಷ ಎರಡನೆಯ ಸಾರ್ವತ್ರಿಕ ಚುನಾವಣೆಯಲ್ಲಿ ಕಡಿಮೆ ಮತಗಳನ್ನು ಪಡೆದರೂ 18 ಸ್ಥಾನಗಳಲ್ಲಿ ಜಯಗಳಿಸಿತು.

1957, 1962, 1967 ರ ವಿಧಾನಸಭಾ ಚುನಾವಣೆಗಳಲ್ಲಿ ಪಕ್ಷವು ಹೆಚ್ಚು ಕಡಿಮೆ ಒಂದೇ ಪ್ರಮಾಣದಲ್ಲಿ ಮತಗಳನ್ನು (14.05%) ಪಡೆದು ಹೆಚ್ಚು ಸ್ಥಾನಗಳನ್ನು ಗಳಿಸಿತ್ತು. ಅಂದರೆ ಈ ಮೂರೂ ಚುನಾವಣೆಗಳಲ್ಲಿ ಪಕ್ಷವು ತನ್ನ ಜನಪ್ರಿಯತೆಯನ್ನು ಹೆಚ್ಚುಕಡಿಮೆ ಹಾಗೇ ಉಳಿಸಿಕೊಂಡಿತು. ಆದರೆ ಪಕ್ಷ ವಿಧಾನಸಭೆಯಲ್ಲಿನ ತನ್ನ ಸದಸ್ಯರ ಸಂಖ್ಯೆಯನ್ನು ಬೆಳೆಸಿಕೊಳ್ಳುತ್ತಾ ಹೋಯಿತು. ಲೋಕಸಭೆಯಲ್ಲಿ ಮಾತ್ರ 1957ರ ನಂತರ ಪಕ್ಷ ಪಡೆದ ಮತಗಳು ಜಾಸ್ತಿಯಾಗುತ್ತಲೇ ಬಂದವು. 1967 ರ ಲೋಕಸಭಾ ಚುನಾವಣೆಗಳಲ್ಲಿ ಅಭ್ಯರ್ಥಿಗಳನ್ನು ನಿಲ್ಲಿಸಿ ಬರಿ ಶೇಕಡಾ 5.1ರಷ್ಟು ಮತಗಳನ್ನು ಪಡೆದರೂ ಪಕ್ಷದ ಇಬ್ಬರು ಅಭ್ಯರ್ಥಿಗಳು ಚುನಾವಣೆಗಳಲ್ಲಿ ಗೆದ್ದರೆಂಬುದು ಪಕ್ಷ ಚುನಾವಣೆಗಳಲ್ಲಿ ಯಾವುದೇ ಚುನಾವಣಾ ತಂತ್ರವನ್ನು ಬಳಸಲಿಲ್ಲ ಎಂಬುದನ್ನು ರುಜುವಾತು ಪಡಿಸುತ್ತದೆ.

1954 ರಲ್ಲಿ ಹುಟ್ಟಿದ ಸಮಾಜವಾದಿ ಪಕ್ಷ (ಲೋಹಿಯಾ ಗುಂಪು) ಮಾತ್ರ ಕೊನೆಯವರೆಗೂ ಒಂದು ಸಣ್ಣ ಪಕ್ಷವಾಗಿ ಉಳಿಯಿತು. ಇದರ ಪ್ರಭಾವ ಹೆಚ್ಚು ಕಡಿಮೆ ಶಿವಮೊಗ್ಗ ಜಿಲ್ಲೆಗೆ ಸೀಮಿತವಾಗಿತ್ತು.

1971 ರ ಮಧ್ಯಾವಧಿ ಲೋಕಸಭಾ ಚುನಾವಣೆಗಳಲ್ಲಿ ಇನ್ನಿತರ ಪಕ್ಷಗಳಂತೆ ಪ್ರಜಾಸಮಾಜವಾದಿ ಪಕ್ಷ ಹಾಗೂ ಸಂಯುಕ್ತ ಸಮಾಜವಾದಿ ಪಕ್ಷಗಳೆರಡೂ ಇಂದಿರಾ ಬಿರುಗಾಳಿಯಿಂದ ತತ್ತರಿಸಿ ಹೋದವು. ಪ್ರಜಾಸಮಾಜವಾದಿ ಪಕ್ಷ ಶೇಕಡಾ 1.28 ರಷ್ಟು ಮತಗಳನ್ನು ಗಳಿಸಿದರೆ ಸಂಯುಕ್ತ ಸಮಾಜವಾದಿ ಪಕ್ಷವು ಶೇಕಡಾ 1.04 ಮತಗಳನ್ನು ಗಳಿಸಿತು. ಈ ಎರಡು ಪಕ್ಷಗಳು ಸೇರಿ ರಚಿಸಿದ ಸಮಾಜವಾದಿ ಪಕ್ಷ ಕೂಡ 1972 ರ ವಿಧಾನ ಸಭೆಯ ಚುನಾವಣೆಗಳಲ್ಲಿ ಪಕ್ಷ ಬರಿ ಶೇಕಡಾ 1.65ರಷ್ಟು ಮತಗಳನ್ನು ಪಡೆದಿದ್ದು ಇದಕ್ಕೆ ಉದಾಹರಣೆ ಪಕ್ಷದ ಈ ಚಿಂತಾಜನಕ ಪರಿಸ್ಥಿತಿಗೆ ಪ್ರಮುಖ ಕಾರಣ ಪ್ರಜಾಸಮಾಜವಾದಿ ಪಕ್ಷ ಹಾಗೂ ಸಂಯುಕ್ತ ಸಮಾಜವಾದಿ ಪಕ್ಷಗಳ ಬಹುಪಾಲು ಸದಸ್ಯರು ಇಂದಿರಾ ಕಾಂಗ್ರೆಸ್ ಸೇರಿಕೊಂಡಿದ್ದೇ ಆಗಿತ್ತು. ಈ ಚುನಾವಣೆಗಳಲ್ಲಿ ಪಕ್ಷ ಗಳಿಸಿದ್ದ ಮೂರು ಸ್ಥಾನಗಳೂ ಶಿವಮೊಗ್ಗ ಜಿಲ್ಲೆಯಲ್ಲಿ ಗಳಿಸಲ್ಪಟ್ಟಿದ್ದು ಇದಕ್ಕೆ ಉದಾಹರಣೆ.

ಇತರ ಎಡ ಪಕ್ಷಗಳು ಅಂದರೆ ಭಾರತದ ಕಮುನಿಸ್ಟ್ ಪಕ್ಷ, ಮಾರ್ಕ್ಸವಾದಿ ಪಕ್ಷಗಳೊಂದಿಗೆ ಹಾಗೂ ಜನಸಂಘ ಪಕ್ಷಗಳೊಂದಿಗೆ ಹೋಲಿಸಿದಾಗ ಪ್ರಜಾಸಮಾಜ ವಾದಿ ಪಕ್ಷವೇ ಅತ್ಯಂತ ದೊಡ್ಡ ವಿರೋಧ ಪಕ್ಷವೆನ್ನುವುದು ಸ್ಪಷ್ಟವಾಗುತ್ತದೆ. ಒಂದು ಕಾಲಕ್ಕೆ ಕರ್ನಾಟಕದಲ್ಲಿ ವಿಧಾನಸಭೆ ಮತ್ತು ವಿಧಾನಪರಿಷತ್ತುಗಳೆರಡರಲ್ಲಿ ಪಕ್ಷದ ಸದಸ್ಯರು ವಿರೊಧ ಪಕ್ಷದ ನಾಯಕರಾಗಿದ್ದರೆನ್ನುವುದೂ ಗಮನಾರ್ಹ.

1972 ರ ಚುನಾವಣೆಗಳ ನಂತರದ ಚುನಾವಣೆಗಳಲ್ಲಿ ಸಮಾಜವಾದಿ ಪಕ್ಷ ಭಾಗವಹಿಸಲಿಲ್ಲ. ಏಕೆಂದರೆ 1975 ರಲ್ಲಿ ಇಂದಿರಾಗಾಂಧಿಯವರು ಜನತಂತ್ರವನ್ನು ಮಣ್ಣು ಪಾಲು ಮಾಡಿ ತುರ್ತುಪರಿಸ್ಥಿತಿಯನ್ನು ಹೇರಿದರು. ಜನತಂತ್ರದ ಪುನರು ಜ್ಜೀವನಕ್ಕಾಗಿ ಸಮಾಜವಾದಿ ಪಕ್ಷವು ತನ್ನ ಸ್ವತಂತ್ರ ಅಸ್ತಿತ್ವವನ್ನು ತ್ಯಜಿಸಿ 1977 ರ ಪ್ರಾರಂಭದಲ್ಲಿ ಜನತಾ ಪಕ್ಷದಲ್ಲಿ ವಿಲೀನವಾಯಿತು.

ಪವಾಡಗಳು : ಸಾಹಿತಿಯ ದೃಷ್ಟಿಯಲ್ಲಿ*

ಜಿ. ಎಸ್. ಶಿವರುದ್ರಪ್ಪ

ಪವಾಡಗಳ ಬಗೆಗೆ ಇರುವ ಆಸಕ್ತಿ ಹಾಗೂ ನಂಬಿಕೆಗಳು ಅತ್ಯಂತ ಪ್ರಾಚೀನವಾದವು. ಹಾಗೆಯೆ ಪವಾಡಗಳನ್ನು ಮಾಡಿ ಜನದ ಆಸಕ್ತಿ ಮತ್ತು ನಂಬಿಕೆಗಳನ್ನು ಹುಟ್ಟಿಸುವ ವಿಶಿಷ್ಟ ವ್ಯಕ್ತಿಗಳ ಪರಂಪರೆ ಕೂಡಾ ಪ್ರಾಚೀನವಾದದ್ದು. ಮೊದಮೊದಲು ಮಾಟ ಮಂತ್ರಗಳನ್ನು ಮಾಡುತ್ತ, ಆದಿಕಾಲದ ಮಾನವ ಸಮಾಜವನ್ನು ತಮ್ಮ ನಿಯಂತ್ರಣದಲ್ಲಿರಿಸಿಕೊಂಡ ಪೂಜಾರಿ ಮಾಂತ್ರಿಕ ವರ್ಗ, ಕ್ರಮಕ್ರಮೇಣ ಧಾರ್ಮಿಕ ನಾಯಕರಿಂದ, ಸಂತ ಯೋಗಿ ಸಿದ್ಧರಿಂದ ಮತ್ತು ಅವರ ಅತೀಂದ್ರಿಯ ಸಾಮರ್ಥ್ಯಗಳ ಕಾರಣದಿಂದ ಹಿಂದಕ್ಕೆ ಹೋಯಿತೆಂಬುದನ್ನು ಮನುಕುಲದ ಚರಿತ್ರೆ ಹೇಳುತ್ತದೆ. ಯಾವ ವ್ಯಕ್ತಿಗಳು ಮುಖ್ಯವಾಗಿ ಧಾರ್ಮಿಕ ಹಾಗೂ ಆಧ್ಯಾತ್ಮಿಕ ಕ್ಷೇತ್ರಕ್ಕೆ ಸಂಬಂಧಿಸಿದ್ದಾರೋ ಅವರು, ಮೂಲತಃ ತಮ್ಮ ಅಪೌರುಷೇಯವೆಂಬಂತಹ ಅತೀಂದ್ರಿಯ ಶಕ್ತಿಸಾಮರ್ಥ್ಯಾದಿಗಳ ಪ್ರದರ್ಶನದಿಂದ, ಜನರಿಗೆ ತಮ್ಮ ವ್ಯಕ್ತಿತ್ವದ ಮಹತ್ತನ್ನು ಪ್ರಕಟಿಸುತ್ತ, ತಾವು ಹೇಳಲಿರುವ ತತ್ವ ಅಥವಾ ಉಪದೇಶಗಳ ಬಗ್ಗೆ ಜನರ ಶ್ರದ್ಧೆ ಆಸಕ್ತಿಗಳನ್ನು ಉದ್ದೀಪಿಸಲು, ನಡೆಯಿಸಿ ತೋರಿಸಿದ ಅಘಟಿತ ಘಟನೆಗಳೆ ಪವಾಡಗಳು ಎಂದು ಹೇಳಬಹುದು. ಆದುದರಿಂದ ಪವಾಡಗಳನ್ನು ಕುರಿತು ಮಾತನಾಡುವಾಗ, ನಾವು ಮುಖ್ಯವಾಗಿ ಧಾರ್ಮಿಕಕ್ಷೇತ್ರಕ್ಕೆ ಸಂಬಂಧಪಟ್ಟ ವ್ಯಕ್ತಿಗಳನ್ನು ಮಾತ್ರ ಉದ್ದೇಶಿಸಿ ನಮ್ಮ ಚಿಂತನೆಗಳನ್ನು ಸೀಮಿತಗೊಳಿಸಿಕೊಳ್ಳುವುದು ಒಳ್ಳೆಯದು. ಯಾಕೆಂದರೆ ಪವಾಡಗಳನ್ನು ಮಾಡಿದವರೆಂದು ಹೇಳಲಾಗಿರುವವರೆಲ್ಲ ಬಹುಮಟ್ಟಿಗೆ ಧಾರ್ಮಿಕ ಕ್ಷೇತ್ರಕ್ಕೇ ಸಂಬಂಧಪಟ್ಟವರಾಗಿದ್ದಾರೆ. ಇಂದಿಗೂ ಈ ಮಾತು ನಿಜ.

ಏಸುಕ್ರಿಸ್ತ ನೀರನ್ನು ಸ್ಪರ್ಶ ಮಾತ್ರದಿಂದ ಮಧುವನ್ನಾಗಿ ಮಾಡಿದ; ಮದಿಸಿ ನುಗ್ಗಿ ಬಂದ ಆನೆಯೊಂದನ್ನು ಬುದ್ಧ ತನ್ನ ದೃಷ್ಟಿಮಾತ್ರದಿಂದ ಶಾಂತವನ್ನಾಗಿ ಮಾಡಿದ; ಕೆಲವರು ಜಂಗಮವೇಷಧಾರಿಗಳು, ಲಿಂಗದ ಬದಲು, ಕೊರಳಲ್ಲಿ ಬದನೆಕಾಯಿಗಳನ್ನು ಕಟ್ಟಿಕೊಂಡು ಬಂದಾಗ ಬಸವಣ್ಣನವರು, ಅವರು ಕೊರಳ ಬಟ್ಟೆಯಲ್ಲಿ ಕಟ್ಟಿಕೊಂಡ ಬದನೆಕಾಯಿಗಳನ್ನು ನಿಜವಾದ ಶಿವಲಿಂಗಗಳನ್ನಾಗಿ ಮಾಡಿದರು; ಶ್ರೀರಾಮಕೃಷ್ಣ ಪರಮಹಂಸರು, ಅತ್ಯಂತ ಪ್ರಖರ ವಿಚಾರವಾದಿಯಾಗಿದ್ದ ನರೇಂದ್ರನನ್ನು, ತಮ್ಮ ಸ್ಪರ್ಶಮಾತ್ರದಿಂದ ಸಮಾಧಿಗೆ ಹೋಗುವಂತೆ ಮಾಡಿ,

---

* ಬೆಂಗಳೂರು ಆಕಾಶವಾಣಿಯ ಕೃಪೆಯಿಂದ

ಅವರನ್ನು ಸ್ವಾಮಿ ವಿವೇಕಾನಂದರನ್ನಾಗಿ ಪರಿವರ್ತಿಸಿದರು—ಇಂಥ ಪವಾಡಗಳು, ಮಹಾವ್ಯಕ್ತಿಗಳ ಜೀವನ ಚರಿತ್ರೆಯಲ್ಲಿ ಉಲ್ಲೇಖಿತವಾಗಿವೆ.

ಆದರೆ ಉದ್ದಕ್ಕೂ ಧಾರ್ಮಿಕ ಅಥವಾ ಆಧ್ಯಾತ್ಮಿಕ ಕ್ಷೇತ್ರಕ್ಕೆ ಸೇರಿದ ಮಹಾ ವ್ಯಕ್ತಿಗಳು ಹಲವು ಬಗೆಯ ಪವಾಡಗಳನ್ನು ಮಾಡಿದ್ದರೂ, ಅವುಗಳು ತಮಗೆ ತಾವೇ ಗುರಿ ಎಂದು ಅವರು ಭಾವಿಸಿದಂತೆ ತೋರುವುದಿಲ್ಲ. ಅವುಗಳು, ಜನರ ಭಕ್ತಿಶ್ರದ್ಧೆಗಳನ್ನು ವೃದ್ಧಿಗೊಳಿಸಲು ಮತ್ತು ತಾವು ಹೇಳುವ ಉಪದೇಶಗಳ ಬಗ್ಗೆ ವಿಶ್ವಾಸವನ್ನು ತಾಳುವಂತೆ ಮಾಡಲು, ಅವರು ಅನುಸರಿಸಿದ ಒಂದು ವಿಧಾನ ಮಾತ್ರವಾಗಿವೆ. ಜತೆಗೆ ಪವಾಡಗಳನ್ನು ಮಾಡುವುದು ಆಧ್ಯಾತ್ಮ ಕ್ಷೇತ್ರದ ಕನಿಷ್ಠತಮ ವಲಯಕ್ಕೆ ಸೇರುವ ಸಂಗತಿಯಾಗಿದೆ ಎಂದು ಈ ಶತಮಾನದ ಮಹಾ ಯೋಗಿ ಶ್ರೀ ರಾಮಕೃಷ್ಣ ಪರಮಹಂಸರು ಹೇಳುತ್ತಾರೆ. ಹನ್ನೆರಡನೆಯ ಶತಮಾನ ದಷ್ಟು ಹಿಂದೆಯೆ "ಎಂಬತ್ತೆಂಟು ಪವಾಡವ ಮೆರೆದು ಹಗರಣದ ಚೋಹದಂತಾಯಿ ತ್ತೆನ್ನ ಭಕ್ತಿ" ಎಂದು ಬಸವಣ್ಣನವರು ಪಶ್ಚಾತ್ತಾಪ ಪಟ್ಟಿದ್ದಾರೆ. ಎಂದರೆ ಇಷ್ಟೊಂದು ಪವಾಡಗಳನ್ನು ಮಾಡುವುದರ ಮೂಲಕ, ನನ್ನ ಭಕ್ತಿ ಕೇವಲ ನಾಟಕದ ವೇಷಧಾರಿಯ ಪ್ರದರ್ಶನದಂತೆ, ತೋರಿಕೆಯದಾಯಿತಲ್ಲಾ ಎಂಬುದು ಈ ಮಾತಿನ ಅರ್ಥ. ಆಧ್ಯಾತ್ಮದಲ್ಲಿ ಮುಂದುವರಿದ ವ್ಯಕ್ತಿಗೆ, ಕೆಲವು ಅತೀಂದ್ರಿಯವೆಂಬಂಥ ಅಲೌಕಿಕ ಶಕ್ತಿಗಳು ಅಥವಾ ಸಿದ್ಧಿಗಳು ಪ್ರಾಪ್ತವಾಗುತ್ತವೆಂದೂ, ಅವುಗಳನ್ನು ಕೇವಲ ಪ್ರದರ್ಶನಗಳಿಗಾಗಿ ಬಳಸಬಾರದೆಂದೂ ಮಹಾವ್ಯಕ್ತಿಗಳು ಎಚ್ಚರಿಕೆ ನೀಡಿ ದ್ದಾರೆ. ಆದರೆ ಇಂಥ ಪವಾಡಗಳನ್ನು ಕಂಡ ಜನ, ಅವುಗಳಿಗಷ್ಟೆ ಬೆರಗಾಗಿ, ಅವು ಗಳನ್ನೇ ಹಾಡಿ ಹೊಗಳಿ, ತಮ್ಮ ಭಕ್ತಿಗಣಿತದಿಂದ ಅವುಗಳನ್ನು ಗುಣಿಸಿ, ಅವುಗಳನ್ನು ಪ್ರಚಾರ ಮಾಡುವುದರಲ್ಲಿ ಮಗ್ನವಾಗಿರುವುದುಂಟು. ಇವತ್ತಿಗೂ ಈ ಪ್ರವೃತ್ತಿ ಸಮೃದ್ಧವಾಗಿ ಜೀವಂತವಾಗಿದೆ. ಪ್ರತಿಯೊಂದನ್ನೂ ಪ್ರಯೋಗ ಪರೀಕ್ಷೆಗೆ ಒಳಗು ಪಡಿಸಿ ನಂಬಬೇಕೆಂದು ಹೇಳುವ ಈ ವೈಜ್ಞಾನಿಕ ಯುಗದಲ್ಲಿಯೂ, ಜನಸಾಮಾನ್ಯರಿ ಗಿರಲಿ, ಅತ್ಯಂತ ಉನ್ನತ ಶಿಕ್ಷಣವನ್ನು ಪಡೆದವರಿಗೂ ಸಹ, ಪವಾಡಗಳನ್ನು ಕುರಿತ, ಪವಾಡ ಪುರುಷರನ್ನು ಕುರಿತ ಆಸಕ್ತಿ, ಶ್ರದ್ಧೆ, ಗೌರವಗಳು ಕಡಿಮೆಯಾಗಿಲ್ಲ. ತರ್ಕಾ ತೀತವಾದುದರಲ್ಲಿ ಹಾಗೂ ಅತೀಂದ್ರಿಯವಾದದ್ದರ ಬಗೆಗೆ ಇರುವ ತುಡಿತ ಮನುಷ್ಯನ ಮೂಲಭೂತ ಅವಶ್ಯಕತೆಗಳಲ್ಲಿ ಒಂದೇನೋ ಅನ್ನಿಸುವಷ್ಟರಮಟ್ಟಿಗೆ, ಇವತ್ತಿನ ಆಧುನಿಕ ಮನುಷ್ಯ ಈ ವಿಷಯಗಳನ್ನು ಕುರಿತು ಅದಮ್ಯವಾದ ಕುತೂಹಲ ಹಾಗೂ ಆಸಕ್ತಿಗಳನ್ನು ಕಾಯ್ದುಕೊಂಡು ಬಂದಿದ್ದಾನೆ.

ಒಬ್ಬ ಬರೆಹಗಾರನಾಗಿ ಮತ್ತು ಸಾಹಿತ್ಯದ ವಿದ್ಯಾರ್ಥಿಯಾಗಿ ಹೇಳುವುದಾದರೆ, ನನಗೆ ಪವಾಡಗಳಲ್ಲಾಗಲೀ ಪವಾಡ ಪುರುಷರಲ್ಲಾಗಲೀ ಆಸಕ್ತಿ ಇಲ್ಲ. ಆದರೆ ಪವಾಡಗಳೆಲ್ಲಾ ಸುಳ್ಳು ಎಂದಾಗಲೀ, ಭ್ರಮೆ ಎಂದಾಗಲೀ ಮೋಸ ಎಂದಾಗಲೀ ಹೇಳಲಾರೆ. ಹಾಗೆಂದರೆ ಕೆಲವು ಪವಾಡ ಪುರುಷರು ಜನರನ್ನು ಮರುಳುಗೊಳಿಸು ತ್ತಾರೆ, ಅವರ ಮೌಢ್ಯಗಳನ್ನು ಕದಲಿಸದೆ ಅವನ್ನೆ ಬಂಡವಾಳವನ್ನಾಗಿ ಮಾಡಿ

ಕೊಂಡು ಸುಲಿಯುತ್ತಾರೆ, ಅಥವಾ ಮೋಸಗೊಳಿಸಲು ಸಾಧ್ಯವಿದೆ–ಎಂಬುದನ್ನು
ನಾನು ನಿರಾಕರಿಸುವುದಿಲ್ಲ. ಪವಾಡಗಳೆಂದರೆ ಏನು? ಅವುಗಳನ್ನು ಮಾಡುವವರು
ಅವುಗಳನ್ನು ಯಾವ ಯಾವ ಉದ್ದೇಶಗಳಿಗೆ ಬಳಸಿಕೊಳ್ಳುತ್ತಾರೆ–ಇತ್ಯಾದಿಗಳನ್ನು
ತೆರೆದ ಮನಸ್ಸಿನಿಂದ ವಿಚಾರ ಮಾಡುವ ಪ್ರವೃತ್ತಿಯೂ ನಮ್ಮಲ್ಲಿ ಇಂದು ಬೆಳೆಯ
ಬೇಕಾಗಿದೆ. ಯಾಕೆಂದರೆ ಸತ್ಯದ ಅನ್ವೇಷಣೆಗೆ ಯಾವ ಕ್ಷೇತ್ರವೂ ಹೊರತಾಗ
ಬಾರದು.

ಮೂಲತಹ ಸಾಹಿತಿಯಾದವನು, ಸಾಹಿತ್ಯ ನಿರ್ಮಿತಿಗೆ ತನ್ನ ಅನುಭವಗಳನ್ನೆ
ಆಶ್ರಯಿಸುತ್ತಾನಾದರೂ, ಅಲ್ಲಿಯೂ ಒಂದರ್ಥದಲ್ಲಿ ಒಂದು ಬಗೆಯ ಅಘಟಿತ ಘಟನೆ
ನಡೆಯುತ್ತದೆ ಎಂಬುದನ್ನು ಗುರುತಿಸಿಕೊಳ್ಳಬೇಕಾಗಿದೆ. ಸಾಹಿತ್ಯ ನಿರ್ಮಿತಿ ಕೇವಲ
ಬುದ್ಧಿಪೂರ್ವಕವಾದ ಒಂದು 'ರಚನೆ'ಯಾಗಿದ್ದರೆ ಬಹುಶಃ ಎಲ್ಲರೂ ಸಾಹಿತಿ
ಗಳಾಗುತಿದ್ದರೇನೋ. ಆದರೆ ಪರಿಸ್ಥಿತಿ ಹಾಗಿಲ್ಲ. ಸಾಹಿತ್ಯ ಎಂಬುದು ಒಂದು ಸೃಷ್ಟಿ
ಅಥವಾ ಕೇವಲ ರಚನೆಗೆ ಮೀರಿದ್ದು. ಈ ಕಾರಣದಿಂದ ಆ ಸೃಜನೆಯ ಒಳವಿವರಗಳು
ಸಾಹಿತಿ ಎಂಬ ಮನುಷ್ಯನಿಗೂ ತಿಳಿಯದವುಗಳಾಗಿವೆ. ಒಂದು ಕವಿತೆಯನ್ನು
ಬರೆಯುವ ಕವಿಗೇ, ತನ್ನೊಳಗಿನಿಂದ ಹುಟ್ಟಿಕೊಂಡು ಬರುವ ಕವಿತೆ ಒಂದು ಪವಾಡ
ದಂತೆ ತೋರುತ್ತದೆ ಎಂದರೆ ಯಾರೂ ಅದನ್ನು ಅಲ್ಲಗಳೆಯಬೇಕಾಗಿಲ್ಲ. ಮೂಲತಃ
ಎಲ್ಲ ಸೃಜನೆಗಳೂ, ಮನಸ್ಸಿನ ಅಗೋಚರ ಪದರದೊಳಗಿನಿಂದ ಅವಿರ್ಭವಿಸತಕ್ಕವು.
ಆ ಸೃಜನೆಯ ಸ್ವಲ್ಪಭಾಗ ಪ್ರಜ್ಞಾಗೋಚರವೆಂಬಂತೆ ತೋರಿದರೂ ಅದರ
ಬಹಳಷ್ಟು ಭಾಗ ಅರಿವಿಗೆ ನಿಲುಕದ ಆಳದೊಳಗೆ ರೂಪುಗೊಳ್ಳುತ್ತದೆ. ಸಾಹಿತಿ
ಯಾದವನಿಗೇ ತಾನು ಬರೆದ ಕೃತಿ ಒಂದು ಆಶ್ಚರ್ಯದಂತೆ, ಒಂದು ಅಘಟಿತ ಘಟನೆ
ಯಂತೆ ತೋರುವುದು ಈ ಕಾರಣದಿಂದಲೇ. ಓದುಗರು ಸಾಹಿತ್ಯನಿರ್ಮಿತಿಯನ್ನು
ಒಂದು "ಪವಾಡ" ಎಂದು ವರ್ಣಿಸಬಹುದು. ಆದರೆ ಸಾಹಿತಿಯನ್ನು ಯಾರೂ
ಪವಾಡಪುರುಷನೆಂದು ಕರೆಯುವುದಿಲ್ಲ ; ಯಾಕೆಂದರೆ ಸಾಹಿತ್ಯ ನಿರ್ಮಿತಿ, ತಕ್ಕಮಟ್ಟಿಗೆ
ವಿವರಿಸಬಹುದಾದಂಥ ಸಾಹಿತಿಯೊಬ್ಬನ ಸಹಜವಾದ ಕ್ರಿಯೆ.

ಬೆಳಗಾದರೆ ಹಚ್ಚಹಸುರಿನ ಗಿಡದಲ್ಲಿ ಬೆಳ್ಳನೆಯ ದಳ ತೆರೆದು ಕಣ್ಣನ್ನು
ತುಂಬುವ ಹೂವು ; ಬಾನಗಲಕ್ಕೂ ಸಪ್ತವರ್ಣದ ಕಮಾನು ಕಟ್ಟುವ ಕಾಮನಬಿಲ್ಲು;
ದಂಡುದಂಡಾಗಿ, ಬೆಟ್ಟಬೆಟ್ಟವಾಗಿ ಆಕಾಶದ ನೀಲಿಯಲ್ಲಿ ದಟ್ಟೈಸುವ ಮೋಡಗಳು
ಮಿಂಚು ಗುಡುಗುಗಳಿಂದ ಹುಟ್ಟಿಸುವ ಬೆರಗು ಭಯಗಳು; ಹಸುರು ಹುಲ್ಲಿನ ಮೇಲೆ
ಕಿಡಿಕಿಡಿ ಮಿರುಗುವ ,ಅಸಂಖ್ಯಾತ ಹಿಮಮಣಿಗಳು– ಇತ್ಯಾದಿ ಇತ್ಯಾದಿ ಅನಂತ
ಸಂಖ್ಯೆಯ ಸಂಗತಿಗಳು, ಆಶ್ಚರ್ಯಪೂರ್ವಕವಾದ ಅಘಟಿತ ಘಟನೆಗಳಂತೆ ತೋರುವು
ದರಿಂದ ಇವೆಲ್ಲವನ್ನೂ ಪವಾಡಗಳೆಂದೇ ಹೇಳಬಹುದಲ್ಲವೆ ? ಹೇಳಬಹುದು :
ಆದರೆ ವಾಸ್ತವವಾಗಿ ಅವುಗಳನ್ನು ಪವಾಡಗಳೆನ್ನಲುಬಾರದು. ಕಾರಣವೇನೆಂದರೆ
ಈ ಪ್ರಾಕೃತಿಕ ಸಂಗತಿಗಳ 'ಸಂಘಟನೆ'ಗಳನ್ನು ವೈಜ್ಞಾನಿಕವಾಗಿ ಹಾಗೂ ಶಾಸ್ತ್ರೀಯ

ವಾಗಿ ವಿವರಿಸಬಹುದು. ಆದರೆ ಸಂತನೋ ಸಿದ್ಧನೋ ನೋಡನೋಡುತ್ತಲೇ ಹೂವೊಂದನ್ನು ಸೃಷ್ಟಿಸಿ ತನ್ನ ಭಕ್ತಾದಿಗಳಿಗೆ ಕೊಡುತ್ತಾನೆಂದು ಭಾವಿಸೋಣ. ಆಗ ಅದು ಪವಾಡ. ಕವಿಯೊಬ್ಬ ಸುಂದರವಾದ ಕವಿತೆಯೊಂದನ್ನು ಬರೆದರೆ, ಗಿಡ ವೊಂದರಲ್ಲಿ ಬಣ್ಣದ ಹೂವು ಅರಳಿದರೆ ಅದು ಸಹಜ ಹಾಗೂ ನೈಸರ್ಗಿಕ. ಆದರೆ ಸಂತನೊಬ್ಬ ತಟಕ್ಕನೆ ಹೂವೊಂದನ್ನು ಸೃಷ್ಟಿಸಿ ಭಕ್ತರಿಗೆ ಹಂಚಿದರೆ ಅದು ಪವಾಡ. ಹೀಗೆಯೇ ಜಾದೂಗಾರನೊಬ್ಬ ಹೂವೊಂದನ್ನು ಸೃಷ್ಟಿಸಿ ಪ್ರೇಕ್ಷಕರನ್ನು ಬೆರಗು ಗೊಳಿಸಿದರೆ ಅದನ್ನು 'ಪವಾಡ' ಅನ್ನುವುದಿಲ್ಲ. ಅದನ್ನು ಜಾದೂ 'ಮ್ಯಾಜಿಕ್' ಎನ್ನುತ್ತೇವೆ. ಆದರೆ 'ಪವಾಡ'ದಲ್ಲಿ ಜಾದುಗಾರಿಕೆಯ ಲಕ್ಷಣಗಳಿದ್ದರೂ, ಅದನ್ನು ಕೇವಲ ಜಾದೂ ಎಂದು ಕರೆಯಲುಬಾರದು. ಈ ದೃಷ್ಟಿಯಿಂದ 'ಪವಾಡ'ಗಳೇ ಬೇರೆ 'ಜಾದುಗಾರಿಕೆ'ಯೆ ಬೇರೆ. ಅದನ್ನು ಮಾಡುವವರ ವ್ಯಕ್ತಿತ್ವ ಹಾಗೂ ಉದ್ದೇಶಗಳ ಮೇಲಿನಿಂದ ಈ ಎರಡರ ವ್ಯತ್ಯಾಸವನ್ನು ಗುರುತಿಸಿಕೊಳ್ಳುವುದು ಒಳ್ಳೆಯದು. 'ಪವಾಡ' ಎಂದರೆ, ಧಾರ್ಮಿಕ ಅಥವಾ ಆಧ್ಯಾತ್ಮಿಕ ಕ್ಷೇತ್ರಕ್ಕೆ ಸೇರಿದ ವ್ಯಕ್ತಿಗಳು ಜನರ ಭಕ್ತಿ ಶ್ರದ್ಧೆಗಳನ್ನು ಗಟ್ಟಿಗೊಳಿಸುವ ಉದ್ದೇಶದಿಂದ ಮತ್ತು ಲೋಕಾನುಕಂಪದಿಂದ, ಪ್ರಾಸಂಗಿಕವಾಗಿ ಪ್ರದರ್ಶಿಸುವ ಕೆಲವು ಅಘಟಿತ ಘಟನೆ ಗಳು ಎಂದು ಹೇಳಬಹುದು. ನೋಡುವವರಲ್ಲಿ ಆಶ್ಚರ್ಯವನ್ನು ಹುಟ್ಟಿಸುವುದು ಅದರ ಮೊದಲ ಲಕ್ಷಣ ; ದೈನಂದಿನ ಪರಿಚಿತ ಸಂಗತಿಗಳಿಂದ ಭಿನ್ನವಾದ, ನಮ್ಮ ತಿಳಿವಳಿಕೆಯ ಮೂಲವಾನದಿಂದ ಅದರ ಸ್ವರೂಪವನ್ನು ವಿವರಿಸಲಾಗದಂಥ ಒಂದು ವಿಲಕ್ಷಣವಾದ ಅಥವಾ ಅತೀಂದ್ರಿಯ ಸಾಮರ್ಥ್ಯದ ಪರಿಣಾಮ ಅದು.

ಪವಾಡಗಳ ಉಲ್ಲೇಖ ಜಗತ್ತಿನ ಎಲ್ಲ ಭಾಷೆಯ ಸಾಹಿತ್ಯದಲ್ಲೂ, ಬಹು ಹಿಂದಿನಿಂದ ಇಂದಿನವರೆಗೆ ಕಾಣಿಸಿಕೊಳ್ಳುತ್ತವೆ. ಅದರಲ್ಲಿಯೂ ಧಾರ್ಮಿಕ ಮಹಾ ವ್ಯಕ್ತಿಗಳನ್ನು ಕುರಿತ ಕಥನದಲ್ಲಿ ಇವು ಸಮೃದ್ಧವಾಗಿವೆ. ಜನರ ಕಷ್ಟ ಸಂಕಟಗಳನ್ನು ನಿವಾರಿಸಲು, ತಮ್ಮ ವ್ಯಕ್ತಿ ಮಹಿಮೆಯನ್ನು ಪ್ರಕಟಪಡಿಸಲು, ಇಂಥ ಮಹಾ ವ್ಯಕ್ತಿಗಳು ಮಾಡಿ ತೋರಿಸಿದ ವಿಶೇಷ ಸಾಮರ್ಥ್ಯಗಳು ಪವಾಡಗಳೆಂದು ನಿರೂಪಿತ ವಾಗಿವೆ. ಕನ್ನಡ ಸಾಹಿತ್ಯದ ಮಟ್ಟಿಗೆ ಹೇಳುವುದಾದರೆ, ಪವಾಡಗಳು ಸಾಹಿತ್ಯದಲ್ಲಿ ದಾಖಲಾಗಿರುವುದು ಹನ್ನೆರಡನೆಯ ಶತಮಾನದ ಶಿವಶರಣರಲ್ಲಿ ಕೆಲವರನ್ನು ಕುರಿತು ರಚಿತವಾಗಿರುವ ಕೃತಿ ಪರಂಪರೆಯಲ್ಲಿ. ಅದುವರೆಗಿನ ಕಥಾವಸ್ತು ಪ್ರಾಚೀನ ಪುರಾಣೇತಿಹಾಸಗಳಿಂದ ಎತ್ತಿಕೊಂಡದ್ದಾದ್ದರಿಂದ, ಆ ಪುರಾಣಗಳೊಳಗೆ ಬರುವ ಅಘಟಿತ ಘಟನೆಗಳನ್ನೆಲ್ಲ 'ಪವಾಡ'ಗಳೆಂದು ಕರೆಯುವಂತಿಲ್ಲ. ಆ ಪುರಾಣಗಳಲ್ಲಿ ಬರುವ ಮುಖ್ಯ ನಾಯಕ ಪಾತ್ರಗಳ ವ್ಯಕ್ತಿತ್ವದಲ್ಲೇ ಒಂದು ಬಗೆಯ ಅಪೌರುಷೇ ಯತೆ ತಾನೇ ತಾನಾಗಿರುವುದರಿಂದ ಮತ್ತು ಆಯಾ ಕಥಾ ಸಂದರ್ಭದಲ್ಲಿ ಕಾಣಿಸಿ ಕೊಳ್ಳುವ ದೇವಾನು ದೇವತೆಗಳ ನಡವಳಿಕೆಯಲ್ಲಿ ಅಲೌಕಿಕತೆ ಅವುಗಳ ಆತ್ಮ ಲಕ್ಷಣ

ವಾಗಿರುವುದರಿಂದ, ಆ ಪುರಾಣೇತಿಹಾಸಗಳ ಇಂಥ ಪಾತ್ರಗಳ ನಡವಳಿಕೆಗಳನ್ನು 'ಪವಾಡ'ಗಳೆಂದು ವ್ಯಾಖ್ಯಾನಿಸಲು ಬರುವುದಿಲ್ಲ. ಆದರೆ ಹನ್ನೆರಡನೆಯ ಶತಮಾನದನಂತರ, ವೀರಶೈವ ಕವಿಗಳು ತಮಗೆ ಸಮೀಪಕಾಲದವರಾಗಿದ್ದ ಬಸವ, ಸಿದ್ಧರಾಮ, ಅಲ್ಲಮ ಇಂತಹ ಚಾರಿತ್ರಿಕ ವ್ಯಕ್ತಿಗಳನ್ನು ತಮ್ಮ ಕೃತಿಯ ಕಥಾ ನಾಯಕರನ್ನಾಗಿ ಯಾವಾಗ ಮಾಡಿಕೊಂಡರೋ, ಆಗ ಆ ವ್ಯಕ್ತಿಗಳನ್ನು ದೇವಾಂಶ ಸಂಭೂತರೆಂದೋ ಅಲೌಕಿಕ ಮಹಿಮಾಶಾಲಿಗಳೆಂದೋ ವೈಭವಿಸುವ ಉದ್ದೇಶದಿಂದ, ಅವರು ಅನೇಕ ಪವಾಡಗಳನ್ನು ಮಾಡಿದರೆಂಬಂತೆ, ಕತೆಯನ್ನು ಕಲ್ಪಿಸಿದ್ದಾರೆ. ಇದಕ್ಕೆ ನಮ್ಮ ಕನ್ನಡ ಕವಿಗಳಿಗೆ ಇರುವ ಚಾರಿತ್ರಿಕ ಪ್ರಜ್ಞೆಯ ಅಭಾವ ಒಂದು ಕಾರಣವಾದರೆ, ಜನಸಾಮಾನ್ಯರಿಗೆ ಪವಾಡಗಳ ಬಗೆಗೆ ಇರುವ ವಿಲಕ್ಷಣವಾದ ಆಸಕ್ತಿಯೂ ಒಂದು ಕಾರಣವೆನ್ನಬಹುದು. ಯಾವುದೇ ಮಹಾವ್ಯಕ್ತಿಯನ್ನು ಅವನಲ್ಲಿರಬಹುದಾದ ಶ್ರೇಷ್ಠ ಮಾನವೀಯ ಮೌಲ್ಯಗಳ ಕಾರಣಗಳಿಗಾಗಿ ಗೌರವಿಸು ವುದಕ್ಕಿಂತ, ಅವನ ಅಲೌಕಿಕ ಅಪೌರುಷೇಯವೆಂಬಂಥ ಸಾಮರ್ಥ್ಯಗಳಿಗಾಗಿ ಮೆಚ್ಚಿ ಕೊಳ್ಳುವುದು ಎಲ್ಲ ಕಾಲದ ಜನಸಮೂಹಕ್ಕೆ ಇರುವ ದೌರ್ಬಲ್ಯವೋ ಲಕ್ಷಣವೋ ಆಗಿದೆ. ಹೀಗಾಗಿ ಚಾರಿತ್ರಿಕ ವ್ಯಕ್ತಿಗಳಾದ ಮತ್ತು ಕರ್ನಾಟಕದ ಧಾರ್ಮಿಕ ಕ್ಷೇತ್ರ ವೊಂದರ ನಾಯಕರಾದ, ಬಸವಣ್ಣನವರಿಗೆ ತೀರ ಸಮೀಪಕಾಲದವನಾದ ಹರಿಹರ, ತಾನು ಬರೆದ 'ಬಸವರಾಜದೇವರ ರಗಳೆ'ಯಲ್ಲಿ, ಬಸವಣ್ಣನವರು ಮಾಡಿದರೆನ್ನಲಾದ ಎಂಟು ಪವಾಡಗಳನ್ನು ಮೊಟ್ಟಮೊದಲಿಗೆ ತಂದಿದ್ದಾನೆ. ಮುಂದೆ ಬಸವಣ್ಣ ನವರನ್ನು ಕುರಿತು ಪುರಾಣಗಳನ್ನು ಬರೆಯುತ್ತಾ ಹೋದವರು ಈ ಪವಾಡಗಳ ಸಂಖ್ಯೆಯನ್ನು ಎಂಬತ್ತೆಂಟರಷ್ಟಕ್ಕೆ ಏರಿಸಿದ್ದಾರೆ. ಇದೇ ರೀತಿ ಇತರ ಶಿವಶರಣ ರನ್ನು ಕುರಿತ ಕೃತಿಗಳಲ್ಲಿಯೂ ಪವಾಡಗಳು ಸಮೃದ್ಧವಾಗಿ ಸೇರಿಕೊಂಡಿವೆ. ವಾಸ್ತವವಾಗಿ ಬಸವಾದಿಗಳು ಮೂಲತಃ ಪವಾಡ ಪುರುಷರಲ್ಲ; ಆದರೆ ಅವರ ನಡವಳಿಕೆಯಲ್ಲಿ ಪ್ರಾಸಂಗಿಕವಾಗಿ ಪ್ರಕಟವಾಗಿರಬಹುದಾದ ಕೆಲವು ವಿಶೇಷ ಸಂಗತಿ ಗಳು, ಅವರ ಅಭಿಮಾನಿಗಳ ಕಲ್ಪನೆಯಲ್ಲಿ 'ಪವಾಡ'ಗಳೆಂಬ ಪ್ರತೀತಿಯನ್ನು ಪಡೆದು ಕೊಂಡಿರಬಹುದು. ಇಂಥವರ ಬದುಕನ್ನು ಕುರಿತು ಬರೆಯುವ ವೇಳೆಗೆ, ಜನಮನ ದಲ್ಲಿ ಈ ಧಾರ್ಮಿಕ ವ್ಯಕ್ತಿಗಳನ್ನು ಕುರಿತು ಹುಟ್ಟಿಕೊಂಡ, ಕತೆಗಳೂ, ಕಲ್ಪನೆಗಳೂ, ಪವಾಡ ಪ್ರತೀತಿಗಳೂ ಕವಿಯ ಕಥಾವಸ್ತುವಾಗಿ ಒದಗಿಬರುತ್ತವೆ. ಕವಿ ಕೃತಿಗಳಲ್ಲಿ ಪವಾಡ ಸಂಗತಿಗಳು ಸೇರಿಕೊಳ್ಳುವುದು ಹೀಗೆ. ಆದರೆ ಹೀಗೆ ವರ್ಣಿತವಾಗಿರುವ ಪವಾಡಗಳು, ಧಾರ್ಮಿಕ ನಾಯಕನೊಬ್ಬನ ಕಥೆಯನ್ನು ಬರೆಯುವ ಕವಿಗೆ ಎಷ್ಟು ಮಟ್ಟಿಗೆ ಅವನ ಕಲಾತಂತ್ರಗಳಾಗಿ ಒದಗಿಬಂದಿವೆ ಎಂಬುದನ್ನು ನಾವು ನೋಡಲು ಕಲಿಯಬೇಕು. ಎಷ್ಟೋ ವರ್ಣಿತವಾದ 'ಪವಾಡ'ಗಳು ನಡೆದಂಥ ವಾಸ್ತವ ಸಂಗತಿಗಳಿಗೆ ಕೊಟ್ಟ ಅತಿಶಯವಾದ ರೂಪಗಳೋ, ಇನ್ನೆಷ್ಟೋ ಅವರ ಮಹಿಮಾದಿ ಗಳಿಗೆ ಸಂಕೇತ ಪ್ರತೀಕಗಳೋ, ಮತ್ತಿನೆಷ್ಟೋ ಉದ್ದೇಶಪೂರ್ವಕವಾಗಿ ಹೊಸೆದು

ಸೇರಿಸಿದ ಪವಾಡಗಳೋ ಆಗಿರುವುದುಂಟು. ಈ ಪವಾಡಗಳಲ್ಲಿ ಆರೋಗ್ಯಕರವಾದುವು ಉಂಟು ; ಅನಾರೋಗ್ಯಕರವಾದವೂ ಉಂಟು. ಒಟ್ಟಿನಲ್ಲಿ, ಸಾಹಿತ್ಯದಲ್ಲಿ ಉಲ್ಲೇಖಿತವಾಗಿರುವ ಪವಾಡಗಳು, ಆಯಾ ಕವಿಗಳು ಚಿತ್ರಿಸುವ ವ್ಯಕ್ತಿಗಳು ಅಸಾಧಾರಣ ಮಹಿಮಾವಂತರೂ, ಲೋಕಾನುಕಂಪೆಯುಳ್ಳವರೂ, ಜನರನ್ನು ಸನ್ಮಾರ್ಗದಲ್ಲಿ ನಡೆಯಿಸುವವರೂ ಆಗಿದ್ದರೆಂಬುದನ್ನು ಸಂಕೇತಿಸುವ ಉದ್ದೇಶಕ್ಕೆ ಬಳಕೆಯಾಗಿವೆಯೇ ಹೊರತು, ಆಯಾ ಮಹಾವ್ಯಕ್ತಿಗಳು ಪವಾಡಗಳನ್ನು ಮಾಡಿದ್ದರಿಂದಲೇ ದೊಡ್ಡವರಾಗಿದ್ದಾರೆ ಎಂಬ ಪ್ರತೀತಿಯನ್ನುಂಟುಮಾಡುವ ಉದ್ದೇಶಕ್ಕಲ್ಲ. ಆದರೆ ಎಷ್ಟೋವೇಳೆ, ಸರಿಯಾದ ಮೌಲ್ಯಪ್ರಜ್ಞೆ ಇಲ್ಲದ ಹಾಗೂ ಕಲಾಪ್ರಜ್ಞೆ ಇಲ್ಲದ ಲೇಖಕನ ನಿರ್ವಹಣೆಯಲ್ಲಿ, ಈ ಉದ್ದೇಶ ವಿಫಲವಾಗಿ ಜನರನ್ನು ದಾರಿ ತಪ್ಪಿಸುವುದೂ ಸಾಧ್ಯ. ಅಂಥ ಸಂದರ್ಭಗಳಲ್ಲಿ 'ಪವಾಡ'ಗಳು, ಆಯಾ ಮಹಾ ವ್ಯಕ್ತಿಗಳ ಅಸಾಧಾರಣತೆಯನ್ನು ಸಂಕೇತಿಸಲು ಕವಿ ಅನುಸರಿಸಿರುವ ಒಂದು ಕಲಾ ತಂತ್ರ ಎಂದು ಅನ್ನಿಸದೆ, ಅಯಾ ಮಹಾವ್ಯಕ್ತಿಗಳ ಮಹತ್ತು ನಿಂತಿರುವುದೇ ಅವರು ಮಾಡಿದ ಪವಾಡಗಳಿಂದ ಎಂದು, ಸಾಕಷ್ಟು ವಿಚಾರ ಮಾಡದ ಜನ ತಪ್ಪಾಗಿ ಭಾವಿಸುವ ಸಂಭವವಿದೆ. ಇದು ಸಾಹಿತ್ಯದಲ್ಲಿ ಹೇಗೋ, ವಾಸ್ತವ ಬದುಕಿಗೂ ಹಾಗೆಯೆ ಅನ್ವಯಿಸುತ್ತದೆ. ಈ ದೃಷ್ಟಿಯಿಂದ ಹಿಂದಿನ ಸಾಹಿತ್ಯದಲ್ಲಿ ದಾಖಲಾಗಿರುವ ಪವಾಡಗಳನ್ನು ಕುರಿತು, ಅವುಗಳನ್ನು ನೋಡುವ ಹಾಗೂ ಗ್ರಹಿಸುವ ವಿಮರ್ಶನ ವಿಧಾನಗಳನ್ನು ನಮ್ಮ ಓದುಗರಿಗೆ ತಿಳಿಯಪಡಿಸುವುದರ ಜತೆಗೆ, ನಮ್ಮ ಸುತ್ತಣ ಪರಿಸರದಲ್ಲಿ ಜನರು ಪವಾಡ ಹಾಗೂ ಪವಾಡ ಪುರುಷರ ಬಗ್ಗೆ ಕಣ್ಣು ಮುಚ್ಚಿಕೊಂಡು ಮರುಳಾಗುವ ಪ್ರವೃತ್ತಿಯ ವಿರುದ್ಧ, ಅಗತ್ಯವಾದ ವೈಚಾರಿಕ ಎಚ್ಚರವನ್ನೂ ಮೌಲ್ಯಪ್ರಜ್ಞೆಯನ್ನೂ, ಮೂಡಿಸುವುದು ಇಂದಿನ ಸಾಹಿತಿಗಳ ಬಹು ಮುಖ್ಯವಾದ ಸಾಮಾಜಿಕ ಜವಾಬ್ದಾರಿಗಳಲ್ಲಿ ಒಂದು ಎಂದು ನಾನು ತಿಳಿದಿದ್ದೇನೆ.

ವಿನೋಬಾಜಿಗೆ

ಜಾ. ಗೋ.

ಆಚಾರ್ಯ ವಿನೋಬಾ ಭಾವೆಯವರು ದಿನಾಂಕ 8-11-1982 ರಂದು ಸಂಪೂರ್ಣ ನಿರಶನ ವ್ರತವನ್ನು ಕೈಗೊಂಡು ತಮ್ಮ ಪ್ರಾಣವನ್ನು ತ್ಯಜಿಸುವ ಕ್ರಿಯೆಯಲ್ಲಿ ತೊಡಗಿದ ಸಂದರ್ಭದಲ್ಲಿ ಆಗ ಇನ್ನೂ ಜೀವಂತವಾಗಿದ್ದ ಅವರನ್ನುದ್ದೇಶಿಸಿ ದಿನಾಂಕ 14-11-1982 ರಂದು ರಚಿತವಾದ ಕವನ.

ಸ್ವಾಮೀ, ವಿನೋಬಾಜೀ :
ನನಗೆ ಗೊತ್ತು
ನಿಮಗೆ ಇದು ಕೇಳಿಸೊಲ್ಲ,
ಇದ ಕೇಳಲು ಪುರಸತ್ತೂ ಇಲ್ಲ ಅಂತ.
ಆದರೂ ಹೇಳುತ್ತಿದ್ದೇನೆ,
ಕೇಳಿರಿ ಸಾಧ್ಯವಾದರೆ.
ಒರೆಯುತ್ತಿದ್ದೇನೆ, ಕೊರೆಯುತ್ತಿದ್ದೇನೆ
ಒಳಗೆ ಕೊರೆಯುತ್ತಿರುವ ಕೊರೆಯನ್ನು, ವೊರೆಯನ್ನು.

ಹೌದು ಸ್ವಾಮಿ, ನಾವೂ ಕೇಳಿದ್ದೇವೆ
ಬಹುಶ್ರುತರಿಂದ—ಶ್ರುತಿ-ಸ್ಮೃತಿ-ವಿಶಾರದರಿಂದ—
ಪ್ರಾಯೋಪವೇಶನಾದಿ ಸಮಾಧಿ ವ್ರತಗಳ ಬಗ್ಗೆ,
ಆ ಎಲ್ಲ ಹಠ-ಯೋಗ-ವಿ-ಯೋಗಗಳ ಲಗ್ಗೆ.
ಆದರೆ ನಮಗನಿಸಿರಲಿಲ್ಲ ನಿಮ್ಮಂಥ
ಸರ್ವೋದಯಾಧ್ವರ್ಯಗಳು ಕೂಡ
ಹಿಡಿಯಬಹುದಂಥವೇ ಪಥಗಳನು ಎಂದು !

ಓ ಓ ಓ ಭೂದಾನಯಾಗ ಯತಿವರ :
ಈಗಾರಿಗೀ ಜೀವದಾನವ ನೀಡಹೊರಟಿಹಿರಿ ?
ಈಗ್ಯಾಕೆ ಈದಾನ, ಈ ಪಂಚಪ್ರಾಣೋತ್ಥಾನ ?
ಹಿಂಸೆ—ಒಲುಮೆಗಳಿಂದ ಬಾಳೀ ಬಾಳು
ಎಂದುಪದೇಶಿಸಿದೆರಾಬುದ್ಧ—ಕ್ರಿಸ್ತ—ಬಾಪೂಜಿಯಾದಿಗಳು,
ಈವರೆಗೆ ಇಳಿಸಿದ್ದಿರದೇ ಘನತತ್ವವನು ಆಚರಣೆಯಲಿ ನೀವು.
ಆದರೂ ಬಿಡಲಿಲ್ಲ ಚಪಲ ನಿಮ್ಮಾತ್ಮದಧ್ಯಾತ್ಮಶಕ್ತಿ—ಬಲದ ಪ್ರದರ್ಶನದ !

ಸ್ವಾಮೀ, ದರ್ಶನವು ನಿಮಗಿರಲು ಈ ಪ್ರದರ್ಶನವು ಯಾಕೆ ?
ನಿದರ್ಶನವೆ ಇದು ನಮಗೆ ನಿಮ್ಮಾತ್ಮಸಂಕಲ್ಪ-ಬಲದ ?
ಸ್ವಾಮೀ, ನಮಗೆಲ್ಲ ಗೊತ್ತು ನಿಮ್ಮಾತ್ಮದಧ್ಯಾತ್ಮಶಕ್ತಿಸಾಮರ್ಥ್ಯಗಳು,
ಆದರೂ ನಮಗೊಂದು ಅತ್ಯಂತ ಇಹಪರಾಜ್ಮುಖತೆಯು
ಹಾಗೂ ಪರಲೋಕ-ಪರಾಯಣತೆಯು ಜೀವಂ(ವಾಂ)ತ
ನಿದರ್ಶನ, ಪ್ರತ್ಯಕ್ಷ ಪ್ರಾತ್ಯಕ್ಷಿಕೆ ಈಗ ನಿಮ್ಮಿಂದ ?

ಇಕೋ ನೋಡಿ, ಬಂದಿರುವರೀ ನೆರೆಹೊರೆಯ ಜನಂಗಳೆಲ್ಲ
ನಿಮ್ಮಯ ಪಾವನ ದರುಶನಕೆ ಪಾವನಾರಕೆ !
ಆಶೀರ್ವದಿಸಿರವರನು ಅಲ್ಲೆ ಪವಡಿಸಿದಲ್ಲಿಂದ,
ಧರಿಸಿ ನಿಮ್ಮಯ ಹರಕೆಯ ಭದ್ರಕವಚವನು
ಚಲಿಸುವರವರೀ ಕರ್ಮಭೂಮಿಯಲಿ ಮತ್ತೆ
ಕರ್ತರೀ-ಕರ್ಮಣೀಗಳ ಕತ್ತರಿಯಲಿ ತರ-ತರಿಸುತ್ತ, ತತ್ತರಿಸುತ್ತ !

ಅತ್ತ ಹೊರಟು—ಹೊರಟೇಹೊರಟು—ನಿಂತಿರುವಿರಿ...
ಅಲ್ಲ...ಕೂತಿರುವಿರಿ...ಅಲ್ಲ...ಮಲಗಿರುವಿರಿ
ನೀವು ಮಾತ್ರ ಅಲುಗದೆ ಹಾಗೂ ಮುಲುಗದೆ !
ಆಗದೆ ಹೇಳಿರಿದರಿಂದ ಚೆಂದ ಸಮರ್ಥನೆ 'ಸತಿ'ಗೆ ?
ಅಥವಾ ಆಗುವುದೆ ಇದರಿಂದ ಒಂದು ಸಮರ್ಥನೆ 'ಆತ್ಮಹತ್ಯೆ'ಗೆ ?
ಆಗುವುದೆ(ಆಗದೆ) ಇದೂ ಒಂದಪರಾಧ ದಂಡ(ಉದ್ದಂಡ) ಸಂಹಿತೆಯಲ್ಲಿ ?
ಕ್ಷಮಿಸಿರುದ್ಧಟತನದ ಸರ್ವೋದಯಾಚಾರ್ಯ, ಪರಂತು
ಸಲ್ಲಿಸಿರುವನಂತಲ್ಲ ಯಾವನೋ ಒಬ್ಬ ಧರ್ಮಾತ್ಮ-ನಾಗರೀಕ
ರಿಟ್ಟರ್ಜಿಯೊಂದನ್ನು ಉಚ್ಚ-ಕೋರ್ಟಿನಲ್ಲಿ ನಾಗಪುರ-
ದಲ್ಲಿ ನಿಮ್ಮ ಜೀವಿತವನ್ನು ಕಾನೂನುರಿತ್ಯಾ ಪ್ರಾರ್ಥಿಸಿ ?
ಪಾಪ ! ಆತನೀಗೇನು ಗೊತ್ತು ಪ್ರಾರ್ಥನೆಯ ಸಲ್ಲಿಸಬೇಕಾಗಿತ್ತು
ಮತ್ತೊಂದು ಉಚ್ಚ-ತಮ—ಸರ್ವೋಚ್ಚತಮ—ಕೋರ್ಟಿನಲ್ಲೆಂಬುದು ?

ಶಾಂತಂ ಪಾಪಂ! ಶಾಂತಂ ಪಾಪಂ! ಶಾಂತಂ ಪಾಪಂ!
ಓಂಶಾಂತಿಃ ಶಾಂತಿಃ ಶಾಂತಿಃ!

ಕೇಳಿಕೆ

ಎಸ್. ಎಸ್. ಹಿರೇಮಠ

ಕೇಳಿಕೆಗೆ ಡಾ॥ ಎಂ. ಚಿದಾನಂದಮೂರ್ತಿಯವರ "ಆಟ, ಕುಣಿತ, ಅಭಿನಯ, ಸಾಭಿನಯವಾಗಿ ಹಾಡು" ≤ (ಸಂಸ್ಕೃತ) ತೇಲಿ (ಕೇಲಿಕೆ)" ಎಂದು ಅರ್ಥ ಹೇಳಿದ್ದಾರೆ.[1]

ಮುಖ್ಯವಾಗಿ ಬಸವರಾಜದೇವರ ರಗಳೆ, ಬಸವಪುರಾಣಗಳಲ್ಲಿ ಮಾತ್ರ ಬರುವ ಕೇಳಿಕೆ ಶಬ್ದವನ್ನು ಗಮನದಲ್ಲಿಟ್ಟುಕೊಂಡು ವಿವೇಚಿಸಿ "ಈ ಉಲ್ಲೇಖ ಗಳನ್ನೆಲ್ಲ ಒಟ್ಟಾರೆ ಪರಿಶೀಲಿಸಿದಾಗ ಒಂದು ಸಂಗತಿ ಹೊಳೆಯುತ್ತದೆ. ಅದೇನೆಂದರೆ 'ಕೇಳಿಕೆ' ಎಂಬುದು ಮೆರವಣಿಗೆಯಂತಹ, ಸಭೆಯಂತಹ ಸ್ಥಳಗಳಲ್ಲಿ, ಒಟ್ಟಿನಲ್ಲಿ ಹಲವು ಜನ ನೆರೆದಿದ್ದಾಗ ನಡೆಯುತ್ತಿದ್ದ ಆಟ, ಕುಣಿತ, ಅಭಿನಯಗಳನ್ನು ಸೂಚಿ ಸುತ್ತದೆ" ಎಂದಿದ್ದಾರೆ.[2]

ಇವರ ಲೇಖನದಲ್ಲಿ ಕಾಣುವ ಅನುಮಾನಗಳನ್ನು ಚರ್ಚಿಸಿ, ಬೇರೆ ಬೇರೆ ಕಾವ್ಯಗಳಲ್ಲಿ ಬರುವ ಉಲ್ಲೇಖಗಳನ್ನು ಆಧರಿಸಿ ಕೇಳಿಕೆ ಶಬ್ದದ ಖಚಿತ ಅರ್ಥವೇನು ಎಂಬುದನ್ನು ಈ ಲೇಖನ ಚರ್ಚಿಸುತ್ತದೆ.

ಬಸವಪುರಾಣದಲ್ಲಿ ೧೪ ಕಡೆ ಕೇಳಿಕೆ ಶಬ್ದ ಬರುತ್ತದೆ. ಅಲ್ಲೆಲ್ಲಾ ಡಾ॥ ಚಿದಾನಂದಮೂರ್ತಿಗಳು ಹೇಳುವ ಅರ್ಥಕ್ಕಿಂತ ಹೆಚ್ಚಿನ ಅರ್ಥ ಬರುತ್ತದೆ.

೧. ಬಸವಣ್ಣನವರ ಮೆರವಣಿಗೆ ನಡೆದಾಗ "ಆಡುವಾ ತ್ರಿಪುರಾಂತಕನ ನೆಜಿ ಜೂಥಿಸಿದ ನರ್ತನದವರಿಗಾರ್ ಪಾಡೆನಲು ಪೊಂಗಿಜುಗಟೆಯು ಕೇಳಿಕೆಯು ಜೋಕೆಗಳ್"[3] ತೆಲುಗು ಬಸವ ಪುರಾಣದಲ್ಲಿ ಈ ಸಂದರ್ಭದಲ್ಲಿ "ಪಸಂಡಿ ಗಿರ್ಗಟ್ ಕೇಳಿಕಲುಸು"[4] ಎಂದಿದೆ. ಇದರ ಮುಂದಿನ ಪದ್ಯದಲ್ಲಿ ಬೇರೆ ಬೇರೆ ಪ್ರದೇಶದವರು ಆಡುವ, ಕುಣಿಯುವ, ನಟಿಸುವ ವಿವರಣೆ ಇದೆ. ಇದೂ ಕೂಡ ತೆಲುಗು ಬಸವ ಪುರಾಣದಲ್ಲಿದೆ.

1. "ಕೇಳಿಕೆ" ಪದದ ಅರ್ಥ ಮತ್ತು ನಿಷ್ಪತ್ತಿ – ಸಂಶೋಧನ ತರಂಗ ೨. ಪುಟ 26-29 ಡಾ॥ ಎಂ. ಚಿದಾನಂದಮೂರ್ತಿ. 2 ಅದೇ
3. ಬ. ಪು. 5–41 4. ತೆ.ಬ.ಪು. (ಆ. ಗ್ರ.) ಪುಟ 26.

೨. ''ತತವಿತತಾದಿ ವಾದ್ಯಕ । ದಂಬದಗ್ಗದ ಕೇಳಿಕೆಗಳುಲಿ । ಎಂಬಧಿರ ವಾಗಲು ದಿಶಾವಳಯಂಗಳೆಱೆರಂತೆ"[5]

೩. ಮುಗ್ಧಸಂಗಯ್ಯನ ಕಥೆಯಲ್ಲಿ ಮಂರುಪದ, ಕೊಳಲು, ತಾಳ, ನುಡಿ ಸುವವರು, ಲಿಂಗಾದೇವಿ, ಚಂಗಳೆ, ಭೋಗಾಯಿ ''ಪಡಿಹರಿಯ ದಾಸವ್ವೆ ದುಗ್ಗಳೆ ಒಡರಿಚುವುದೇಂ ಕೇಳಿಕೆಯ ನೀ ನರ್ತನೋಚಿತತೆ"[6] 'ಉಚಿತ ನರ್ತನಕ್ಕೆ ಕೇಳಿಕೆಯನ್ನು ರಚಿಸುವೆಯ ಎಂಬ ಅರ್ಥ ಮಾಡಿ ದರೆ ನರ್ತನಕ್ಕೆ ಪೂರಕವಾದುದನ್ನು ಕೇಳಿಕೆ ಹೇಳುವಂತೆ ಭಾಸವಾಗು ತ್ತದೆ.

೪. ಸಕಲೇಶ ಮಾದರಸರ ಕಥೆಯಲ್ಲಿಯೂ ಹಾಗೆ ಗಮನಿಸಿ. ''ಪೊಂಗಿ ಯಾಡುವ ತಮತಮಗೆ ವಾದ್ಯಂಗಳುಲಿಯಲು ಕೇಳಿಕೆಗಳ ಸುರಂಗ ಗತಿಗಳಿಗಾಡುತವರವರಿಗೆ ಪರಿಣಮಿಸಲು"[7]

೫. ಕಿನ್ನರಯ್ಯಗಳ ಕಥೆಯಲ್ಲಿ "ಮೀಟಿ ಕೇಳಿಕೆ ಜಾಟಿ ಸುಗತಿಗೆ ಹಾಟಿ ಕುಜನರು ದೂಟಿ ಹರನಂ ಸೇಟಿ ಭಕ್ತರು ಮಾಟಿ ಮಟಿಹಾ ಹೇಟಿ ಮಹಿಮೆಗಳ"[8]

೬. ಮೇದಾರ ಕೇತಿ ದೇವನ ಕಥೆಯಲ್ಲಿ, ಬಸವನ ಓಲಗದಲ್ಲಿ ''ಕೇಳಿಕೆ ಗಳನುಗೊಳಿಸಿ । ಹೊಸ ಪರಿಯ ರೀತಿಗಳ ಗೀತ ಸ । ರಸದ ತತ ವಿತತಾದಿ ವಾದ್ಯ । ಪ್ರಸರ ಮೇಳನದಲಿ ಸೊಗಸಲಾಡುತ್ತ ಕೇಳಿ ಸಲು"[9]
ಗೀತ, ವಾದ್ಯ, ನೃತ್ಯಗಳನ್ನು (ಆಡುತ್ತ) ಅನುಗೊಳಿಸಿ ("ಕೇಳಿಕೆಯನನು ಗೊಳಿಸಿ") ಕೇಳಿಸುತ್ತಿದ್ದರು ಎಂಬ ಈ ಸಂಗತಿ ಮಹತ್ವಪೂರ್ಣ.

೭. ವೇಮನಾರಾಧ್ಯರ ಕಥೆಯಲ್ಲಿ ''ಜಾಂಗು ಭಲ ಜಾಂಗು ಬಲವೆಂಬರ । ಮಂಗಳುಲಿಯಲು ಕೇಳಿಕೆಗಳು ಸು । ರಂಗಿಸುತ್ತಿರೆ ಕವಿಗಳು ಪಾಠ ಕರು ಕೀರ್ತಿಸಲು."[10]

---

5. ಬ. ಪು. 6–22
ಕೇಳಿಕೆಗಳು ಎಂಬ ವಚನ ಇಲ್ಲಿ ಗಮನಾರ್ಹ.
6. ಬ.ಪು. 11–42
7. ಬ.ಪು. 18–19
8. ಬ.ಪು. 35–28
9. ಬ.ಪು. 36-2
10. ಬ.ಪು. 45–52

೮. "ಟಕ ವಿಕಟ ದಿಕ್ಕಟ ದಿಕಟಧಿಂ । ಮಿಕಟವೆಂಬಾ ರಸವೆಸೆವ ಕೀ । ಳಿಕೆಯನಾಡಿಸುತ್ತಿದ್ದ ಹರ ತಾವೆನಲು ಮಾಚಯ್ಯ"[11]

೯. ಬಿಬ್ಬ ಚಾಚಯ್ಯಗಳ ಕಥೆಯಲ್ಲಿ "ಬಂಡಿಯೊಳಗ್ರದಲಿ ಕೀಳಿಕೆ ಗಳೊಳಗೂಡಿ"[12]

10. ಅಲ್ಲೆ ಬಿಬ್ಬ ಬಾಚಯ್ಯಗಳು ಪ್ರೀತಿಯಿಂದ "ಭೂ ಪ್ರಸಿದ್ಧದೊಳಿಂದಿ ನಂತೆ ಬ । ಹು ಪ್ರಕಾರದ ಕೀಳಿಕೆಗಳರ | ವ ಪ್ರತತಿ ಮಿಗೆ ತಂದು ಗೊಬ್ಬರೊಳು ತ್ರಿಸಂಧ್ಯೆಯಲಿ"[13]

ಬಹುಪ್ರಕಾರದ ಕೀಳಿಕೆಗಳು ಎಂಬ ಮಾತು ಗಮನಿಸುವಂಥದ್ದು. 60–64ರ ಉಲ್ಲೇಖವೂ ಇದನ್ನೇ ಸಮರ್ಥಿಸುತ್ತೆ. ತೆಲಗು ಬಸವ ಪುರಾಣದಲ್ಲಿ "ಚಾಂಗು ಬಳಾಯಿನು ಶಬ್ದಮುಲ್ ಪ್ರೋಯಿಂಗ್ ಕೀಳಿಕಲ" (ಪುಟ 185) ಎಂದಿದೆ.

11. "ಶೂಲಿ ಭಕ್ತನು ಸತ್ತನೊ ಈ ಕೀಳಿಕೆಗಳೇಂ ಹಂತವಂ ಮುಂಜಿ। ದಾಳಿನಂತೆ ನಿಗುರ್ದಪಿರಿ..."[14]

12. ಸಾಮವೇದಿಗಳ ಕಥೆಯಲ್ಲಿ "ಚೆಲುವಲರಿ ಪೋಪಂತೆ ಭಕ್ತರು ।ಪುಳಕಿ ಸುತ ಕೀಳಿಕೆಗಳಿಂ ತಾ | ಳವಡಿಸುತಾಡುತ್ತ ಪಾಡುತ ಹೋಗುತಿರ ಲಿತ್ತ."[15]

13. "ಕೀಳಿಕೆಯ ಮಹದೇವಿ."[16]

14. "ಮೊರೆಯೆ ಜಯ ಜಯ ಘೋಷಣಂಗಳು ಪರಿ ಪರಿಯ । ಕೀಳಿಕೆ ಗಳಿಂದಿ। ತ್ತರ ದೊಳಾಡುತ ಪಾಡುತಂ ಸಲೆ ಕೇಳಿಸುತ್ತಿರಲು"[17]

ಬಸವರಾಜ ದೇವರ ರಗಳೆಯಲ್ಲಿ ಕೀಳಿಕೆ, ಕೀಳಿಸು ಶಬ್ದಗಳು ಭಿನ್ನಾರ್ಥದಲ್ಲಿ ಬರುತ್ತವೆ.*

---

11. ಬ.ಪು. 36–8
12. ಬ.ಪು. 55-6
13. ಬ.ಪು. 55–10
14. ಬ.ಪು. 55–16
15. ಬ.ಪು. 56–46
16. ಬ.ಪು. 58–7
17. ಬ.ಪು. 60–64

* ಇಲ್ಲಿ ಎಲ್ಲ ಉಲ್ಲೇಖಗಳು ಬ.ದೇ.ರ. ಸಂ : ಟಿ. ಎಸ್. ವೆಂಕಣ್ಣಯ್ಯ. 1959

15. "ಮೃದು, ಮೃದಂಗ, ಪಟಹ, ಶಂಖ, ಭೇರೀ ನಿನಾದಂಗಳೊಡನೆ ಎತ್ತಿದ ವೃಷಭ ಧ್ವಜಂಗಳ ಸತ್ಯ ಶರಣರ ಕೇಳಿಕೆ ಸಹಿತಂ ಸಂದಣಿಸಿ ನಡೆತಂದ ಮಹಾಮಹೇಶ್ವರ ಕುಲ."[18]

16. ಕಿನ್ನರ ಬೊಮ್ಮಯ್ಯ ಬಸವನನ್ನು ನೋಡಲು ಬರುವಾಗ "ಮುಂತೆ ವೃಷಭಧ್ವಜಂ ಗಗನದೊಳು ಕುಣಿವುತಿರೆ, ಪಿಂತೆ ಮಾಹೇಶ್ವರರ ಕೇಳಿಕೆಗಳೊಳೊಪ್ಪುತಿರೆ"[19]
ಅದೇ ಸ್ಥಳದಲ್ಲಿ ಮದ್ದಳೆ ಕಹಳೆ ಆವುಜೆ, ಕರಡೆಯ ದನಿಗಳ

17. "ನಡುವೆ ಕೇಳಿಸುವ ಕೇಳಿಕೆಯವರ ಸಂಗಡದ। ಗಡಣ ವಿಡಿದೊಪ್ಪದಿಂ ಬರುತಿರ್ಪ ಜಂಗಮದ" [20]

18. 12ನೇ ಸ್ಥಲದಲ್ಲಿ (79 ಪುಟ) "ಓರ್ವ ಮಾಹೇಶ್ವರಂ ಪುರಾತನ ವಿರಚಿತ ಗದ್ಯ ಪದ್ಯಂಗಳಂ ಕೇಳಿಸುತ್ತಂ..." ಎಂದು ಬರುವಲ್ಲಿ, to cause, to hear ಎಂಬುದು ಮಾತ್ರ ಅರ್ಥ. (ಮುಂದೆ ನೋಡಿ)

19. ಅದೇ ಸ್ಥಲದಲ್ಲಿ ಶಿವನ ವಿಟವೇಷ (82 ಪುಟ) "ಸುರನದಿಯ ಸುಕುಮಾರನೆನಿಪ ಬಾಲ ಶಶಿಯಂ ಕೇಳಿಸುವ ಗಾಯಕ್ತರಂತೆ ಸುತ್ತಿಮುತ್ತಿ ಝೇಂಕಾರಂಗೊಂಬ, ತುಂಬಿಯಂ ಪಂತಿಯಂ ಮುಸುಂಕಿಟ್ಟು ಪವಡಿಸುವ ಬಿಸುಗಣ್ಣ ತೊಡಂಬೆಯಂ ತಪ್ಪಳಿಸುವ ಪೆಣ್ದುಂಬಿಗಳಂತೆ ಲಲಾಟರಂಗದೊಳುಂಗುರಿಸಿ ಸಂಗಡದಿಂ ಕುಣಿವ ನೀಳಾಳಕಂಗಳ" ಎಂದು ಬರುತ್ತೆ.

20. 8ನೇ ಸ್ಥಲದಲ್ಲಿ (50 ಪುಟ) ಬಸವಣ್ಣ ಹೊಗಳಿಕೆಗೆ ತಗ್ಗಿ "ಆಗಳಾಗಳಿನ ಸಂಗತಿಗೆ ಹೊಸ ಹೊಸ ಗೀತಮುಂ ಕೇಳಿಸುತ್ತಿರ್ದ ಸಮಯ" ದಲ್ಲಿ ಎಂಬಲ್ಲಿ ಕೇಳಿಸು ಎಂಬುದಕ್ಕೆ ಡಾ॥ ಚಿದಾನಂದಮೂರ್ತಿಯವರು "ಸಾಭಿನಯವಾಗಿ ಹಾಡು ಎಂದು ಇದಕ್ಕೆ ಸರಿಯಾದ ಅರ್ಥ"[21] ಎಂದು ಹೇಳಿ "ಕೇಳಿಕೆ, ಕೇಳಿಸು ಗಳೆರಡೂ ಒಂದೇ ಮೂಲದಿಂದ ಬಂದ ಪದಗಳ ಎಂಬುದರಲ್ಲಿ ಸಂದೇಹವಿಲ್ಲ"[22] ಎಂದಿದ್ದಾರೆ. ಇದು ಸರಿಯಾದುದಲ್ಲ. ತೀರ ಕೆಲವು ಪ್ರಸಂಗಗಳಲ್ಲಿ ಮಾತ್ರ ಕೇಳಿಸುವಿಗೆ ಕೇಳಿಕೆಯ ಸಂಬಂಧ ಹೇಳಬೇಕಾಗುತ್ತದೆ. ಉಳಿದೆಲ್ಲ ಕಡೆ ಕೇಳು ಧಾತುವಿನಿಂದಾದ ಕೃದಂತ 'ಕೇಳಿಸು' ಎಂಬುದೇ

---

18. ಬ.ದೇ.ರ. 6ನೇ ಸ್ಥಲ. ಪುಟ 37.
19. ಅದೇ 11ನೇ ಸ್ಥಲ. ಪುಟ 70.
20. ಅದೇ 21. ಸಂ. ತ.ವಿ. ಪುಟ 28. 22. ಅಲ್ಲೇ ಪುಟ 75

ಬಳಕೆಯಾಗಿದೆ. ಈ ಮೇಲಿನ ಸಂದರ್ಭದಲ್ಲಿ ಬಸವಣ್ಣ ಕುಣಿಯುತ್ತ ಹಾಡುತ್ತಿದ್ದನೆಂಬುದು ಬಹುಶಃ ಅಸಂಬದ್ಧವಾಗುತ್ತದೆ :

21. ಭೃಂಗೀಶನ ರಗಳೆಯಲ್ಲಿ "ಕಿನ್ನರಿಯರ್ ಶಿವನಂ ಕೇಳಿಸುತ್ತಿರೆ" ಎಂಬಲ್ಲಿಯೂ to cause to listen ಎಂದೆ ಹೇಳಬೇಕು.

22. ಮಲುಹಣನ ರಗಳೆಯಲ್ಲಿ ನರ್ತಿಸುತ್ತಿದ್ದ ಮಲುಹಣೆ, ಮಲುಹಣನನ್ನ ನೋಡಿ ನರ್ತಿಸುವುದನ್ನೇ ನಿಲ್ಲಿಸಿ ಅವನನ್ನೇ ನೋಡುತ್ತ ನಿಂತು ಬಿಡುತ್ತಾಳೆ. ಆಗ, "ರಂಗಮಂಟಪಂ ವಿರಹ ಮಂಟಪ ಮಾದುದಂ, ಈಶ್ವರ ಕೇಳಿಕೆ ರತೀಶ್ವರ ಕೇಳಿಕೆಯಾದುದು "ಎಂದಂ* ಹರಿಹರನ" ಹೇಳಿಕೆ, ತಾಳ, ಮದ್ದಳೆ, ಆವುಜ, ಕರಡೆ, ವೀಣೆ, ಕಿನ್ನರಿ ಕೌಸಾಳವಾಸ, ಜೀವಣಿಗರ ಸಂಗೀತದ ನಡುವೆ ಮಲುಹಣೆ ಹಾಡುತ್ತ ನರ್ತಿಸುವುದಕ್ಕೆ 'ಕೇಳಿಕೆ' ಎಂದಂ ಹೇಳಿದ್ದಾನೆ ಹರಿಹರ.[23]

23. ರಾಘವಾಂಕನ ಹರಿಶ್ಚಂದ್ರ ಕಾವ್ಯದಲ್ಲಿ ಹರಿಶ್ಚಂದ್ರ ತನ್ನನ್ನು ಕೊಳ್ಳುವವರಾರು ಇಲ್ಲವೆ ಎಂದು ಕೇರಿಗಳಲ್ಲಿ "ನಿಂದ ನೆರವಿಗಳ ಜನಮುಮಂ ಮಿಗೆ ಕೇಳಿಸುತ್ತ ತೊಳಲಿದನು"[24] ಇಲ್ಲಿ ಕೇಳಿಸು ಎಂಬುದಕ್ಕೆ ಕೇಳುವಂತೆ ಮಾಡು ಎಂದರ್ಥವಷ್ಟೆ.

24. ಸಿದ್ಧರಾಮ ಪುರಾಣದಲ್ಲಿ "ನೆರೆದು ಕೇಳಿಸುವ ತುಂಬುರ, ರಂಭೆ, ಭೃಂಗಿಯುಂ ಪರಿಕಿಸಿ" ಎಂದು ಬರುತ್ತದೆ.[25] ಇಲ್ಲಿ 'ಕೇಳಿಕೆ' ಪದವನ್ನವಲಂಬಿಸಿದ (ಕೇಳಿಸು) ಅರ್ಥ—ಹಾಡಿ, ಕುಣಿದು, ಬಾರಿಸಿ—ಇದೆ.

25. ಯಶೋಧರ ಚರಿತೆಯಲ್ಲಿ, ಅಮೃತಮತಿಯನ್ನು ಬದಗ ಹೊಡೆದಾಗ ಆಕೆ "ತಡವಾದುದುಂಟು ನಲ್ಲನೆ। ಜಿಡು ಮುಳಿಯದಿರರಸನೆಂಬ ಪಾತಕನೆನ್ನಂ। ತೊಡೆಯೇಜಿಸಿ ಕೇಳಿಕೆಯಾ। ದೊಡೆ ನೋಡುತ್ತಿರ್ದೆನನುಂತೆ ನಿಲಲಣ್ಮುವೆನೇ "[26] ಎನ್ನುತ್ತಾಳೆ.

26. ಕಥಾಮಣಿಸೂತ್ರ ರತ್ನಾಕರದಲ್ಲಿ (ಸಂ.R.C.H. ಭಾಗ 2– 180) ಹರಿದೇವನೆಂಬ ಕೇಳಿಕೆಯ ಶಿವಭಕ್ತನ ಕಥೆಯು ಬರುತ್ತದೆ.

---

23 ಹರಿಹರನ ಅನೇಕ ರಗಳೆಗಳಲ್ಲಿ ಬರಬಹುದು.

24 ಹ. ಕಾ. ಸಂಗ್ರಹ. ಪು. 78.

* "ಹರಿಹರನ ರಗಳೆಗಳು" ಸಂ : ಫ. ಗು. ಹಳಕಟ್ಟಿ ಭಾಗ 2. ಪು 18.

25 ಸಿ. ಪು. ಸಂ : T. S. ವೆಂಕಣ್ಣಯ್ಯ & D. L. N. 1–23

26. ಯ. ಚ. 2–33

"ಕನಕಾವತಿಯೆಂಬ ಪಟ್ಟಣದರಸಂ ಆದಿತ್ಯಭೂಪನೆಂಬವನು, ಹರಿಹರನಾಥನೆಂಬ ಲಿಂಗವ ಭಜಿಸುತ್ತಿರಲು, ಆ ಪಟ್ಟಣದಲ್ಲಿ ಕಂಥೆಯು ಹರಿದೇವನೆಂಬ ಭಕ್ತನು ಆ ಹರಿನಾಥನೆಂಬ ಲಿಂಗಕ್ಕೆ ವಾಸುಗಿಯಂ ಕೇಳಿಕೆಯಂ ಕೇಳಿಸಿ, ಬಾಳಿಕಾ ಶಿವಭಕ್ತರ ಮನೆಗೆ ಪೋಗಿ ಕೇಳಿಸಿ, ಕಾಯಕಮಂ ತಂದು ಜಂಗಮ ದಾಸೋಹಮಂ ಮಾಡುತ್ತಿರಲು ಈ ವಾರ್ತೆಯಂ ಆದಿತ್ಯಭೂಪ ಕೇಳಿ, ನನ್ನ ಮುಂದೆ ಕೇಳಿಕೆಯಂ ಮಾಡಿ ಎನಲು, ಆ ಭಕ್ತನೊಲ್ಲೆ ಎನಲು ಬಲುಹು ಮಾಡಿ ಕೇಳಿಕೆಯಂ ಕೇಳಲು, ಮೂರ್ಛಿರ್ದಿ ಆ ರಾಜನ ಕಿವಿ ಕಿವುಡು ಬೀಳಲು"

ರಾಜ ಹೆದರಿ ಲಿಂಗಕ್ಕೆ ಬೇಡಿಕೊಂಡಾಗ ಆ ಲಿಂಗ ಸ್ವಪ್ನದಲ್ಲಿ "ಹರಿದೇವಯ್ಯಗೆ ಹನ್ನೆರಡು ಹೊನ್ನ ಪಡಿಯಂ ಕೊಟ್ಟು, ನನಗೆ ಕೇಳಿಕೆಯಂ ಕೇಳಿಸಿ, ನೀನು ಕೇಳುತ್ತಿರಲು, ನಿನ್ನ ಕರ್ಣ ಆ ಭಕ್ತನಿಂದ ಕೇಳಿ ಬಂದಾವು" ಎಂದಿತು. ಒಟ್ಟು ಕಥೆಯಲ್ಲಿ 12 ಸಲ ಕೇಳಿಕೆ, ಕೇಳಿಸು ಪದ ಬರುತ್ತದೆ. ಹಾವನ್ನು ಆಡಿಸುವ ಹರಿದೇವ ವಾದ್ಯಬಾರಿಸುವ, ಹಾವನ್ನು ಕುಣಿಸುವ, (ಗೀತೆಯನ್ನು ಹಾಡುವ ?) ಕಾಯಕದವನೆಂಬುದು ಸ್ಪಷ್ಟವಾಗುತ್ತದೆ. "ತ್ರಿಕಾಲ ವಾಸುಗಿಯಂ ಕೇಳಿಸುತ್ತಿರಲು" ಎಂದು ಅಲ್ಲೇ ಬರುತ್ತದೆ. ಕೇಳಿಕೆಯವರ ಮಹತ್ವವನ್ನು, ತೋರಿಸುವ ಈ ಕಥೆ ಕೇಳಿಕೆಯ ಘನತೆಯನ್ನು ಸ್ಪಷ್ಟಪಡಿಸುತ್ತದೆ. ಕೇಳಿಕೆ ಒಂದು ಉದಾತ್ತ ಕಾಯಕವಾಗಿತ್ತೆಂಬುದು ಸ್ಪಷ್ಟ.

27. ಪ್ರೌಢದೇವರಾಯನ ಕಾವ್ಯದಲ್ಲಿ "ವೀಣೆಯಂ ಕೇಳಿಸುತ ನಾರದಂ" ಎಂದು ಬರುತ್ತದೆ. [27]

28. ಭರತೇಶ ವೈಭವದಲ್ಲಿ ಕೇಳಿಸು ಪದ ಅನೇಕ ಕಡೆ, ಎರಡೂ ಅರ್ಥದಲ್ಲಿ ಬರುತ್ತದೆ.[28]

ಅ) ವೀಣಾ ಸಂಧಿಯಲ್ಲಿ 8 ನೇ ಪದ್ಯ "ನಲ್ಲಳು ಹಾಡುವದ ಬಿಟ್ಟು ಬಾಯ್ಮುಚ್ಚಿ ತಂತಿಯೊಳಗೆ ಕೇಳಿಸಿದಳು."

ಬ) ಪೂರ್ವ ನಾಟಕ ಸಂಧಿಯಲ್ಲಿ (36–40, 82,89) ತಾಳಧಾರಿಯು "ಕೇಳಿಸಿದನು ಹೊಸ ಪರಿಯಾಗಿ ಮುನ್ನೆಂದು ಕೇಳಿಸಿತಿಲ್ಲೆಂತುಟೆನಿಸಿ" ಆದರೆ 90ನೇ ಪದ್ಯದಲ್ಲಿ "ಕೊರವಂಜಿ ಕಟ್ಟಣೆಯನು ಕೇಳಿಸಿದರು" ಎಂಬಲ್ಲಿ "ಗೀತ ವಾದ್ಯದ ಜತೆ ನರ್ತನ" ಎಂಬರ್ಥವಿರುವಂತಿದೆ.

---

27. ಪ್ರೌ.ದೇ.ಕಾ. ಸಂ : ಸಂ. ಶಿ. ಭೂಸನೂರಮಠ 2-2.
28. ಎಲ್ಲ ಉದ್ಧರಣೆಗಳಿಗೆ "ಭರತೇಶ ವೈಭವ–'' ಸಂ : ಜಿ. ಬ್ರಹ್ಮಪ್ಪ; ಹಂಪನಾ ಕಮಲಾ ಹಂಪ.ನಾ.

ಕ) ತಾಂಡವ ವಿನಯ ಸಂಧಿಯಲ್ಲಿ "ಕೊರವಂಜಿ ಕಟ್ಟಣೆಯೆಂಬ ತಿರುಕ ವೇಷದೆರಕವ ತೊಟ್ಟಿವೆ ನಾವು" ಎಂಬ ಮಾತನ್ನು ಗಮನಿಸಿದರೆ ಇದು ಒಂದು ರೀತಿಯ ದೇಶಿ ನೃತ್ಯವೆಂದು ಸ್ಪಷ್ಟವಾಗುತ್ತದೆ.

ಡ) ಉತ್ತರ ನಾಟಕ ಸಂಧಿಯಲ್ಲಿ 13–16ರ ವರೆಗಿನ ಪದ್ಯಗಳಲ್ಲಿ ಬರುವ ಕೇಳಿಸು "ಕೇಳುವಂತೆ ಮಾಡು" ಎಂಬರ್ಥ ಮಾತ್ರ; ಕೇಳುವುದರ ಜತೆ ನೋಡುವುದಲ್ಲ.

ಇಲ್ಲಿಯವರೆಗಿನ ಉಲ್ಲೇಖಗಳಿಂದ, "ಕೇಳಿಕೆ"ಗೆ ಅರ್ಥವನ್ನು ಓದುಗರು ಗ್ರಹಿಸಿರಬೇಕು, ಇನ್ನೂ ಸ್ಪಷ್ಟವಾದ ಅರ್ಥವನ್ನು ತಿಳಿಸುವಲ್ಲಿ ಅಲ್ಲಮನ ಒಂದು ವಚನ ದೊಡ್ಡ ಆಧಾರವಾಗುತ್ತದೆ. ಅದು

"ಇಷ್ಟಲಿಂಗಕ್ಕೆ ಅಂಗದಲ್ಲಿಯೆ ಮಜ್ಜನ, ಲಲಾಟದಲ್ಲಿಯೆ ಗಂಧಾಕ್ಷತೆ
ತಂಬುಬಿದ ಪುಷ್ಪಚಯವೆ ಲಿಂಗಕ್ಕೆ ಪೂಜೆ
ಜಿಹ್ವೆ ಸೋಂಕಿದ ಷಡುರಸಾನ್ನವೆ ಲಿಂಗಕ್ಕೆ ನೈವೇದ್ಯ
ತಾಂಬೂಲ ಸವಿಹವೆ ಲಿಂಗಕ್ಕೆ ವೀಳೆಯ,
ಅಂಗಚ್ಛಾದನ ವಸ್ತ್ರವೆ ಲಿಂಗಕ್ಕೆ ವಸ್ತ್ರ
ಕಂಡು ಕೇಳಿದ ಗೀತವಾದ್ಯ ನೃತ್ಯಾದಿಗಳೆ ಲಿಂಗದ ಕೇಳಿಕೆ" [29]

ನೋಡುವ ಮತ್ತು ಕೇಳುವ ಗೀತ, ವಾದ್ಯ ನೃತ್ಯಗಳ ಮೇಳವೆ "ಕೇಳಿಕೆ" ಎಂಬುದನ್ನು ಸ್ಪಷ್ಟವಾಗಿ ತಿಳಿಯಬಹುದು. "ಗೀತಂ, ವಾದ್ಯಂ, ಕಥಾ ನೃತ್ತಂತ್ರಯಂ ಸಂಗೀತಮುಚ್ಯತೇ"[30] ಎಂದು ಸಂಗೀತ ರತ್ನಾಕರ ಹೇಳುತ್ತದೆ. ಈ ಸಂಗೀತದಲ್ಲಿ ಎರಡು ಪ್ರಕಾರಗಳು. ಮಾರ್ಗ ಮತ್ತು ದೇಶಿ ಎಂದು. ಗೀತ, ವಾದನ, ನೃತ್ಯಗಳಿಂದ ಕೂಡಿರುವುದು 'ದೇಶಿ ಸಂಗೀತ'[31] ಈ ದೇಶಿ ಸಂಗೀತವನ್ನೇ ಕೇಳಿಕೆ ಎಂಬ ಶಬ್ದ ಸೂಚಿಸುತ್ತದೆ. ಈ ಮಾತಿಗೆ ಹೆಚ್ಚಿನೆಲ್ಲ ಉದ್ಧರಣೆಗಳು ಸಾಕ್ಷಿಯಾಗುತ್ತವೆ.

ಕಿಟೆಲ್ ಅವರು 'ಕೇಳಿಕೆ'ಗೆ to begin to play ಎಂದು ಅರ್ಥ ಹೇಳಿ ಪಂಪಭಾರತದ "ಸಹಜದ ಚಲ್ವಿನೊಳ್ ರತಿಯ ಸೋಲದ ಕೇಳಿಕೆಯೊಳ್ ಪೊದಱ್ದು" ಎಂಬ ಉದಾಹರಣೆ, ಕೊಟ್ಟಿದ್ದಾರೆ. ಶಬರ ಶಂಕರ ವಿಳಾಸದ ೧–೭೯ ವನ್ನೂ ಸೂಚಿಸಿದ್ದಾರೆ.

ಕೇಲಿಕೆ = ಕೇಲಿಕಾ = ಕೇಳಿಕೆ = play etc(= ಕೇಲಿ) ಎಂದು ಹೇಳಿ ಬಸವ ಪುರಾಣದ ೧೨ (ಈ ಪೆಹದಲು ಡಾ॥ ಎಂ. ಚಿದಾನಂದ ಮೂರ್ತಿಗಳು ಮತ್ತು ನಾನು

---

29. "ಅಲ್ಲಮ ಪ್ರಭುದೇವರ ವಚನಗಳು" ಸಂ: R. C. ಹಿರೇಮಠ. ಡಾ॥ M. S. ಸುಂಕಾಪೂರ. ವಚನ 769. 30. ಸಂಗೀತ ರತ್ನಾಕರ ಪುಟ 13, 31. ಅದೇ ಪುಟ 18.

ಸೂಚಿಸಿದೆವೇ) ಸಂದರ್ಭಗಳಲ್ಲಿ ಬರುವ ಕೇಳಿಕೆಯನ್ನು ಗುರುತಿಸಿದ್ದಾರೆ. "ಕೇಲಿಸು" ಎಂಬುದಕ್ಕೆ ಕೇಳಿಸು=to sport, to play (BP 37,2 ; 61, 64) ಬೆಳಗಪ್ಪಿಕಂ ಕೇಳಿಸಿದಂ (Smd 295) ರಂಭೆ ಕೇಳಿತುಂ ಪೆರ್ಕ್ಕಣಮುಂ (268) ಎರಡೂ ಹೇಳಿದ್ದಾರೆ.

ಈ ಎಲ್ಲ ಉಲ್ಲೇಖಗಳನ್ನು ಗಮನಿಸದ ಡಾ॥ ಎಂ. ಚಿದಾನಂದ ಮೂರ್ತಿಯುವರು ಕಿಟೆಲ್ ಅವರು ಹೇಳುವ ಇನ್ನೊಂದು "ಕೇಳಿಕೆ" =hearing, hearsay, asking ಮತ್ತು ಕೇಳಿಸು=to cause to listen, to cause to be heard, to sound on, play on ಎಂಬುವನ್ನು ಮಾತ್ರ ಗುರುತಿಸಿ "ಈ ಎಲ್ಲ ಅರ್ಥಗಳುಂ ಸರಿಯಲ್ಲವೆಂಬುದುಂ ಸ್ಪಷ್ಟವಾಗಿದೆ" ಎಂದಿದ್ದಾರೆ.[32]

ಕೇಳಿಕೆಗೆ ಅಭಿನಯಂ, ಆಟ ಎಂದೂ ಅರ್ಥ ಹೇಳಿದ ಡಾ॥ ಎಂ. ಚಿದಾನಂದ ಮೂರ್ತಿಯುವರು ಕಿಟೆಲ್‌ರ ಕೇಲಿಸು=to sport to play ಎಂಬುದನ್ನು ಮೊದಲು ಗಮನಿಸಿದ್ದಿದ್ದರೆ, ಕಿಟೆಲ್‌ರಿಗೆ ಅಪಚಾರ ಮಾಡುವುದು ತಪ್ಪುತ್ತಿತ್ತು. ಆದರೆ ಇಬ್ಬರೂ ವಿದ್ವಾಂಸರು ಕೇಳಿಕೆಗೆ ಸರಿಯಾದ ಅರ್ಥಮಾಡಿಲ್ಲವೆಂಬುದು ಈ ವಿವೇಚನೆಯಿಂದ ಸ್ಪಷ್ಟವಾಗುತ್ತದೆಂದು ಭಾವಿಸುವೆ.

ಗೀತ, ನೃತ್ಯ, ವಾದ್ಯಗಳ ಈ ದೇಶೀ ಸಂಗೀತ ಮೇಳವನ್ನು ಶರಣರು ತಮ್ಮ ಧಾರ್ಮಿಕ ಸಾಹಿತ್ಯವನ್ನು ಪ್ರಚಾರಮಾಡಲು ಹೆಚ್ಚು ಬಳಸಿಕೊಂಡಂತೆ ತೋರುವುದು. ಇಂಥ ಸಂದರ್ಭದಲ್ಲಿ ಗೀತವು ಶರಣರ ವಚನಗಳನ್ನು ಮಾತ್ರ ಹಾಡುವುದಕ್ಕೆ ಸೀಮಿತವಾಗಿರಬಹುದು. ಈ ಲೇಖನದ ಎಲ್ಲ ಉಲ್ಲೇಖಗಳನ್ನು ಗಮನಿಸಿದರೆ ಗೀತ, ನೃತ್ಯ, ವಾದ್ಯಗಳ ಮೇಳ ಎಂಬ ಅರ್ಥ ಕೇಳಿಕೆಗೆ ಸಾಮಾನ್ಯವಾಗಿ ಸ್ಪಷ್ಟವಾದರೂ ಕೆಲವು ಕಡೆ ಒಂದೊಂದರ ಕೊರತೆಯಿದ್ದರೂ (ಗೀತವಿಲ್ಲದೆ ಅಥವಾ ನೃತ್ಯವಿಲ್ಲದೆ) ಅಂಥಲ್ಲಿ ಕೇಳಿಕೆ ಬಳಕೆಯಾಗಿರುವ ಸಂಭವ ಇದೆ. ಬಸವ ಪುರಾಣದಲ್ಲಿ ಬರುವ ಕೇಳಿಕೆಯ ಮಹದೇವಿ ಇಂಥ ಮೇಳವನ್ನು ನಿರ್ದೇಶಿಸುವಂಥವಳಾಗಿರಬಹುದು. ವೀರಶೈವರು ಕೇಳಿಕೆಯನ್ನು ವಿಶೇಷವಾಗಿ ಬಳಸಿಕೊಂಡಿರುವ ಸಾಧ್ಯತೆ ಇದೆ.

ಕೇಳಿಕೆ ಸಂಸ್ಕೃತದಲ್ಲಿ ಯಾವ ಅರ್ಥ ಪಡೆದಿದೆಯೊ ನೋಡಬೇಕು. ಕನ್ನಡದಲ್ಲಿ ಇದು ಯಾವಾಗ, ಹೇಗೆ ಬಳಕೆಯಾಗುತ್ತ ಬಂದಿತೆಂಬುದನ್ನು ಅಭ್ಯಾಸಮಾಡಬೇಕು. ಸಂ. ಕ. ಪದಗಳ (ಕೇಲಿ ಮತ್ತು ಕೇಳ್) ರೂಪ, ಅರ್ಥಗಳ ಸಮ್ಮಿಳನದಂತೆ ಕಾಣುವ "ಕೇಳಿಕೆ" ಪದದ ವ್ಯುತ್ಪತ್ತಿ ಏನು ಎಂಬ ಪ್ರಶ್ನೆ ಉಳಿಯುತ್ತದೆ.

---

32. ಸಂ. ಕ. ೨. ಪುಟ 29.

ಪಲ್ಲವ ವಾಸ್ತುಶಿಲ್ಪದ ವೈಶಿಷ್ಟ್ಯ

ಎಸ್. ಎನ್. ಶಿವರುದ್ರಸ್ವಾಮಿ

1

ದ್ರಾವಿಡ ದೇಶದಲ್ಲಿ ಬೆಳೆದು ಬಂದ ಕಲಾಪರಂಪರೆಯನ್ನು ದ್ರಾವಿಡ ಕಲಾಶೈಲಿ ಎನ್ನುತ್ತೇವೆ. ದ್ರಾವಿಡಶೈಲಿ ಹುಟ್ಟಿ, ಬೆಳವಣಿಗೆ ಕಂಡಿದ್ದು ಪಲ್ಲವರ ಆಶ್ರಯದಲ್ಲಿ. ಶಾತವಾಹನರ ಸಾಮಂತರಾಗಿದ್ದ ಪಲ್ಲವರು ಕ್ರಿ.ಶಕ ನಾಲ್ಕನೆಯ ಶತಮಾನದಲ್ಲಿ ತೊಂಡೈಮಂಡಲದಲ್ಲಿ ಸ್ವತಂತ್ರ ಆಳ್ವಿಕೆಯನ್ನಾರಂಭಿಸಿದರು. ಏಳನೆಯ ಶತಮಾನದ ವೇಳೆಗೆ ಸಿಂಹವಿಷ್ಣು ವಂಶದ ಪಲ್ಲವರು ಪ್ರಬಲರಾಗಿ ಶುದ್ಧದ್ರಾವಿಡ ಸಂಸ್ಕೃತಿಯ ಬೆಳವಣಿಗೆಗೆ ಕಾರಣರಾದರು. ಅವರ ರಾಜಧಾನಿಯಾದ ಕಾಂಚಿನಗರ ದಕ್ಷಿಣ ಭಾರತದ ರಾಜಕೀಯ ಚಟುವಟಿಕೆಗಳ ಕೇಂದ್ರವಾಯಿತು. ಈ ವೇಳೆಗಾಗಲೆ ಭಾರತದ ವಿದ್ಯಾಕೇಂದ್ರಗಳಲ್ಲಿ ಒಂದಾಗಿತ್ತು, ಆ ನಗರ. ಕದಂಬರ ಅರಸನಾದ ಮಯೂರ ಶರ್ಮ ಈ ನಗರದಲ್ಲಿ ವೇದಾಧ್ಯಯನ ಮಾಡಲು ಹೋಗಿ ಪಲ್ಲವ ಅರಸರೊಂದಿಗೆ ದ್ವೇಷ ಕಟ್ಟಿಕೊಂಡನೆಂದು ಶಾಸನವು ತಿಳಿಸುತ್ತದೆ. ಮುಂದೆ ಒಂಬತ್ತನೆಯ ಶತಮಾನದವರೆಗೂ ಆಳಿದ ಪಲ್ಲವರು ಕಲೆ, ಸಾಹಿತ್ಯ—ಮುಂತಾದ ಕ್ಷೇತ್ರಗಳಿಗೆ ಗಮನಾರ್ಹವಾದ ಕೊಡುಗೆಗಳನ್ನು ನೀಡಿದರು. ಪಲ್ಲವರ ಕಲೆ ಸಾಕಷ್ಟು ಜನಪ್ರಿಯತೆಗೊಂಡು, ಕಡಲಾಚೆಯ ನಾಡುಗಳಾದ ಇಂಡೋಚೀನಾ, ಇಂಡೋನೇಷ್ಯಾ, ಜಾವಾ ಮುಂತಾದ ಆಗ್ನೇಯ ಏಷ್ಯಾದ ರಾಷ್ಟ್ರಗಳಲ್ಲಿ ಪ್ರಸರಣಗೊಂಡಿತು.

ತಮಿಳು ದೇಶದ ಇತಿಹಾಸದಲ್ಲಿ ವಾಸ್ತು, ಶಿಲ್ಪಕಲೆಗಳ ಪೂರ್ಣ ಚಟುವಟಿಕೆಗಳು ಪ್ರಾರಂಭವಾದುದು ಪಲ್ಲವರ ಸಿಂಹವಿಷ್ಣುವಿನ ಮಗನಾದ ಒಂದನೇ ಮಹೇಂದ್ರವರ್ಮ (600–630)ನ ಕಾಲದಲ್ಲಿ ಇವನು ಕಲೆಗಾರ, ಕವಿ, ಶಿಲ್ಪಿ, ವಾಸ್ತುಕಾರ, ಚಿತ್ರಗಾರ, ನಾದಶಾಸ್ತ್ರ ಪ್ರವೀಣ. ಅವನಿಗೆ 'ವಿಚಿತ್ರ ಚಿತ್ತ', 'ಮತ್ತವಿಲಾಸ', 'ಗುಣಧರ'– ಇನ್ನೂ ಹಲವಾರು ಬಿರುದುಗಳಿದ್ದವೆಂದು ತಿಳಿದು ಬರುತ್ತದೆ. ಇವನು 'ಮತ್ತವಿಲಾಸ ಪ್ರಹಸನ'– ಎಂಬ ವಿಡಂಬನಾತ್ಮಕ ಕೃತಿಯೊಂದನ್ನು ರಚಿಸಿದ್ದಾನೆ. ಪ್ರಾರಂಭದಲ್ಲಿ ಜೈನನಾಗಿದ್ದ ಇವನು, ಶಿವಸಂತ ಅಪ್ಪಾರನ ಪ್ರಭಾವದಿಂದ ಶೈವಧರ್ಮವನ್ನು ಸ್ವೀಕರಿಸಿದ್ದುಂಟು. ಹೊಸತನ್ನು ಅರಿಯುವ, ಹೊಸತನ್ನು ನಿರ್ಮಿಸುವುದರ ಬಗ್ಗೆ ಹೆಚ್ಚು ಕಾತರ ಉಳ್ಳ ವ್ಯಕ್ತಿಯಾಗಿದ್ದ. ಕಲೆಯಲ್ಲಿ ಹೊಸ ಜಾಡನ್ನು ತುಳಿಯುವ ಬಯಕೆ ಅವನದು. ಹೆಬ್ಬಂಡೆಗಳನ್ನು ಕೊರೆದು ಗುಹಾಲಯಗಳನ್ನು ನಿರ್ಮಿಸುವ ಪರಂಪರೆಯನ್ನು ಆರಂಭಿಸಿದ ಕೀರ್ತಿ

ಅವನಿಗೆ ಸಲ್ಲುತ್ತದೆ. ದಕ್ಷಿಣ ಅರ್ಕಾಟ್ ಜಿಲ್ಲೆಯ ಮಂಡಗಪಟ್ಟುವಿನ ಗುಡ್ಡದ ಮೇಲಿನ ಗುಹಾಲಯವನ್ನು ಬ್ರಹ್ಮ-ವಿಷ್ಣು-ಮಹೇಶ್ವರರಿಗಾಗಿ ನಿರ್ಮಿಸಿದನೆಂದು ಶಾಸನವು ಹೇಳುತ್ತದೆ. ಇಟ್ಟಿಗೆ, ಗಾರೆ, ಮರ–ಮುಂತಾದ ವಸ್ತುಗಳಿಂದ ನಿರ್ಮಿಸಿದ ಕಟ್ಟಡಗಳ ಪದ್ಧತಿಯಿದ್ದರೂ ಗುಹಾಲಯವನ್ನು ಆರಂಭಿಸಿದನೆಂದು ಅದೇ ಶಾಸನವು ತಿಳಿಸುತ್ತದೆ. ಮದ್ರಾಸಿನ ಹತ್ತಿರವಿರುವ ಪಲ್ಲಾವರಂನಲ್ಲಿ ಉನ್ನತ ವಿನ್ಯಾಸದ ಮೇಲೆ ಕೊರೆಯಲಾದ ಪಂಚಗೃಹಗಳ ಗುಹಾಮಂದಿರ ಅವನ ಉತ್ತಮ ನಿರ್ಮಾಣ ಗಳಲ್ಲೊಂದು. ಉತ್ತರ ಅರ್ಕಾಟ್ ಜಿಲ್ಲೆಯ ಸಿಯಮಂಗಲಮ್‌ನ ಶಿವಾಲಯ, ತಿರುಚಿರಾಪಳ್ಳಿಯ ಗುಹಾಲಯಗಳು ಮಹೇಂದ್ರವರ್ಮನ ಕೃತಿಗಳು. ಅವನ ಸಾಮಂತರು ಗುಹಾಮಂದಿರಗಳನ್ನು ನಿರ್ಮಿಸಿದ್ದುಂಟು. ವಲ್ಲಮ್‌ನ ಗುಹಾಲಯ ಅಂತಹದೊಂದು ನಿರ್ಮಾಣ. ಉತ್ತರ ಅರ್ಕಾಟ್ ಜಿಲ್ಲೆಯ ಮಹೇಂದ್ರವಾಡಿಯ ಮಹೇಂದ್ರವಿಷ್ಣುಗೃಹ, ಶ್ರೀಗವರಮ್‌ನ ರಂಗನಾಥ ದೇಗುಲ, ಕಾಂಚಿಯ ಏಕಾಂಬರೇಶ್ವರಾಲಯ, ತಿರುವದಿಗೈನ ಗುಣಧರೇಶ್ವರ ಗುಹಾಲಯಗಳು ಮಹೇಂದ್ರ ವರ್ಮನ ಕಾಲಕ್ಕೆ ಸೇರಿದ ಕೃತಿಗಳು. ಮಹೇಂದ್ರವರ್ಮನ ಕಾಲದ ಗುಹಾಲಯಗಳ ಸ್ತಂಭರಾಜಿಯ ಮಂಟಪಗಳು. ಇವುಗಳು ನಿಜಕ್ಕೂ ಪುರಾತನ ಮಾದರಿಗಳು. ಈ ಮಂಟಗಳ ಒಳಗೋಡೆಯನ್ನು ಅಂದಕ್ಕಿಂತ ಹೆಚ್ಚು ಗರ್ಭಾಂಕಣಗಳನ್ನಾಗಿ ಹಿಂದಕ್ಕೆ ಕೊರೆಯಲಾಗಿದೆ.

ಪಲ್ಲವ ವಾಸ್ತುವಿನ ಪ್ರಮುಖ ಅಂಕಗಳು 'ಸ್ತಂಭರಾಜಿ'. ಸ್ತಂಭರಾಜಿಯ ಪರಂಪರೆಯು ಐದನೆಯ ಶತಮಾನದಲ್ಲಿ ಪಲ್ಲವರ ಕಾಲದಿಂದ ಹದಿನೈದನೆಯ ಶತಮಾನ ತಂಜಾವೂರಿನ ನಾಯಕರ ಕಾಲದವರೆವಿಗೂ ವೈವಿಧ್ಯಪೂರ್ಣವಾಗಿ ಮುಂದುವರೆಯಿತು. ಮಹೇಂದ್ರವರ್ಮನ ಸ್ತಂಭಗಳು ಸ್ಥೂಲವಾಗಿದ್ದು, ಅದರ ಮೂರುಭಾಗಗಳನ್ನು ಕಾಣಬಹುದು. ಮೇಲಿನ ಹಾಗೂ ಕೆಳಗಿನ ಭಾಗಗಳು ಚಚ್ಚೌಕವಾಗಿದ್ದು, ಮಧ್ಯಭಾಗ ಅಷ್ಟಮುಖಗಳಿಂದ ಕೂಡಿದೆ. ಸ್ತಂಭಗಳ ಚಾಚು ಪೀಠಗಳು ಅಲಂಕೃತವಾಗಿವೆ. ಮಂಟಪದ ಕಪೋತ (corhice)ದ ಚೆಲುವನ್ನು ಚೈತ್ಯದ ಅಂತರ್ಭಾವವಾದ ಕೂಡು ಮತ್ತಷ್ಟು ಹೆಚ್ಚಿಸಿದೆ. ಕೂಡುಗಳು ಸರಳ ವಾಗಿದ್ದು, ಅದರ ಮೂಲಕ ಮಾನವ ತಲೆಯೊಂದು ಹೊರಕ್ಕೆ ಇಣುಕಿ ನೋಡು ತ್ತಿದೆ. ಅದರ ಕಲಶ ಗುದ್ದಲಿ ಆಕಾರದಲ್ಲಿದೆ. ಗುಹಾಲಯದ ದ್ವಾರಪಾಲಕರಿಗೆ ಎರಡು ತೋಳಿದ್ದು, ಬಲಿಷ್ಠವಾದ ಮೈಕಟ್ಟನ್ನು ಹೊಂದಿದ್ದಾರೆ; ಬಲವಾದ ಗದೆಯನ್ನು ಹಿಡಿದಿದ್ದಾರೆ; ಯಜ್ಞೋಪವೀತವನ್ನು ಧರಿಸಿದ್ದಾರೆ; ನೀಳವಾದ ಮುಖಗಳು ಅವರಿಗಿವೆ.

ಮಹೇಂದ್ರವರ್ಮನ ಆಳ್ವಿಕೆಯ ಕೊನೆಗಾಲದಲ್ಲಿ ಗುಹಾಮಂದಿರಗಳ ನಿರ್ಮಾಣ ದಲ್ಲಿ ಬದಲಾವಣೆಯಾದುದನ್ನು ಕಾಣಬಹುದು. ಉಂಡವಳ್ಳಿ, ಭೈರವಕೊಂಡಗಳ ಗುಹಾಮಂದಿರಗಳು ಒಂದರಮೇಲೊಂದು ಮಂಟಪಗಳನ್ನು ಹೊಂದಿವೆ. ಬೌದ್ಧ ವಿಹಾರಗಳನ್ನು ಅನುಸರಿಸಿ ಈ ಗುಹಾಲಯಗಳನ್ನು ಕೊರೆಯಲಾಗಿದೆ.

2

ಮಹೇಂದ್ರವರ್ಮನ ನಂತರ, ಅಧಿಕಾರಕ್ಕೆ ಬಂದ ಅವನ ಮಗ ಒಂದನೇ ನರಸಿಂಹವರ್ಮ (ಕ್ರಿ. ಶಕ 630-668) ಪಲ್ಲವವಂಶದಲ್ಲಿ ಅತ್ಯಂತ ಪ್ರಖ್ಯಾತನಾದ ಅರಸು. ಅವನ ಕಾಲದಲ್ಲಿಯೇ ಪಲ್ಲವ ವಂಶ ವೈಭವದ ಉಚ್ಛ್ರಾಯ ಸ್ಥಿತಿಗೇರಿತು. ಇವನು ತನ್ನ ತಂದೆಯ ಸಾವಿಗೆ ಕಾರಣನಾದ ಚಾಲುಕ್ಯ ಚಕ್ರವರ್ತಿ ಇಮ್ಮಡಿ ಪುಲಿಕೇಶಿಯ ಮೇಲೆ ದಂಡೆತ್ತಿ ಹೋಗಿ, ನಿಗ್ರಹಿಸಿ, ಸೇಡು ತೀರಿಸಿಕೊಂಡ. ಗೆದ್ದ ಸ್ಮರಣಾರ್ಥವಾಗಿ 'ವಾತಾಪಿಕೊಂಡ'—ಎಂಬ ಬಿರುದಂ ಧರಿಸಿದ. ಇವನ ಕಾಲದಲ್ಲೇ ಚೀನದ ಪ್ರಸಿದ್ಧ ಪ್ರವಾಸಿ ಹ್ಯೂಯುನ್‌ತ್ಸಾಂಗ್ ಕಾಂಚಿ ನಗರಕ್ಕೆ ಬಂದಿದ್ದ. ಇವನು ಪಲ್ಲವ ಸಾಮ್ರಾಜ್ಯದ ಪ್ರಗತಿಯನ್ನು ಅವಲೋಕಿಸಿದ. ನರಸಿಂಹವರ್ಮನೂ ಕೂಡ ತಂದೆಯಂತೆ ವಾಸ್ತು ಪ್ರೇಮಿ. ಕಲೆ ಮತ್ತು ವಾಸ್ತು ಇವನ ಕಾಲದಲ್ಲಿ ಉನ್ನತವಾಗಿ ಬೆಳೆದು ಪ್ರಫುಲ್ಲವಾಗಿ ಅರಳಿತು. ಇವನ ಕಾಲದಲ್ಲಿ ಮಾಮಲ್ಲಪುರಂ ಕಲಾ ಚಟುವಟಿಕೆಗಳ ಕೇಂದ್ರವಾಯಿತು.

ಪಾಲಾರ್ ನದಿಯ ದಡದಲ್ಲಿರುವ ಪುರಾತನ ಹಡಗು ತಾಣವಾದ ಮಹಾಬಲಿಪುರಂನಲ್ಲಿ ಪಲ್ಲವ ವಾಸ್ತುವಿನ ಬೆಳವಣಿಗೆಯ ಪ್ರಮುಖ ಹಂತಗಳನ್ನು ಕಾಣಬಹುದು. ಈ ನಗರ ಮದ್ರಾಸ್‌ನಿಂದ 32 ಮೈಲಿಗಳ ದೂರದಲ್ಲಿ ದಕ್ಷಿಣದಲ್ಲಿದೆ. ನೂರಡಿ ಎತ್ತರದ ದಕ್ಷಿಣೋತ್ತರವಾಗಿ ಅರ್ಧ ಮೈಲಿಯವರೆವಿಗೂ ಚಾಚಿರುವ ಕಗ್ಗಲ್ಲಿ (granite) ಗುಡ್ಡದ ಮೇಲೆ ಪಲ್ಲವರ ಅಪೂರ್ವ ಕಲಾಕೃತಿಗಳು ಅಲ್ಲಲ್ಲಿ ಚದುರಿದಂತೆ ನಿರ್ಮಾಣಗೊಂಡಿವೆ. ಇದಲ್ಲದೆ ದಕ್ಷಿಣದಲ್ಲಿರುವ ಕಗ್ಗಲ್ಲ ಗುಡ್ಡದಲ್ಲೂ ನಾವು ಪಲ್ಲವರ ಶಿಲ್ಪಗಳನ್ನು ಕಾಣಬಹುದು, ಅಂದಿಗೆ ಮಾಮಲ್ಲಪುರ ಅಂಗಡಿ–ಮುಂಗಟ್ಟುಗಳಿಂದ, ಅರಮನೆಗಳಿಂದ, ಅವಿಶ್ರಾಂತ ವ್ಯಾವಹಾರಿಕ ಚಟುವಟಿಕೆಗಳಿಂದ ಕೂಡಿತ್ತು. ಇಟ್ಟಿಗೆ, ಗಾರೆ, ಮರ-ಮುಂತಾದ ವಸ್ತುಗಳಿಂದ ನಿರ್ಮಾಣವಾದ ವ್ಯಾವಹಾರಿಕ ಕಟ್ಟಡಗಳು ಕಾಲದೊಂದಿಗೆ ಅಳಿದುಹೋದರೂ, ಪಲ್ಲವ ಅರಸರ ಧಾರ್ಮಿಕ ಆಸ್ಥೆಯಿಂದ ಮೂಡಿದ ಕಗ್ಗಲ್ಲ ರಚನೆಗಳು ಇಂದಿಗೂ ಪಲ್ಲವ ಕೃತಿಗಾರರ ಪ್ರತಿಭೆಯ ಜೀವಂತ ಸಾಕ್ಷಿಯಾಗಿ ನಿಂತಿವೆ. ಮಾಮಲ್ಲಪುರಂ ದಕ್ಷಿಣ ಭಾರತದ ಸಾಂಸ್ಕೃತಿಕ ಚಟುವಟಿಕೆಗಳ ಕಲಾಕಾರಂಜಿಯಾಗಿ, ದೂರದ ರಾಷ್ಟ್ರಗಳ ಮೇಲೂ ಪ್ರಭಾವ ಬೀರಿದ್ದುಂಟು.

ಮಾಮಲ್ಲಪುರಂನಲ್ಲಿ ಎರಡು ತೆರನಾದ ವಾಸ್ತು ಚಟುವಟಿಕೆಗಳನ್ನು ಕಾಣಬಹುದು : ಹೆಬ್ಬಂಡೆಗಳಲ್ಲಿ ಮಂಟಪವನ್ನು ಕೊರೆಯುವ ಪದ್ಧತಿ—ಒಂದನೇ ನರಸಿಂಹವರ್ಮನ ಕಾಲದಲ್ಲಿ ಮುಂದುವರೆದುದು ಒಂದು ತೆರನಾದರೆ ; ಅಖಂಡ ಬಂಡೆಯ ರಥಗಳ ಹೊಸ ನಮೂನೆ ಇನ್ನೊಂದು ಬಗೆ. ಇವನ ಕಾಲದ ಮಂಟಪಗಳು ಸುಂದರವಾದ ಶಿಲ್ಪಕೃತಿಗಳನ್ನು ಒಳಗೊಂಡಿವೆ. ಈ ಮಂಟಪಗಳ ರಚನೆ

ಗುಳ್ಳಿ ತೀಕ್ಷ್ಣವಾದ ಕ್ಷಿಪ್ರ ಬೆಳವಣಿಗೆಯನ್ನು ಕಾಣಬಹುದು. ಮಂಟಪದ ಮುಂಭಾಗದ ಕಪೋತವು ಸುಂದರವಾಗಿ 'ಕೂಡು'ಗಳಿಂದ ಅಲಂಕೃತಗೊಂಡಿದೆ. ಇದರ ಮೇಲೆ ಕೈಪಿಡಿ ಗೋಡೆ (Parapet) ಇದೆ. ಮಂಟಪದ ಒಳ ಹಾಗೂ ಹೊರ ಆವರಣದಲ್ಲಿ ಶಿಲ್ಪಗಳ ಸುತ್ತಲೂ ಅರೆಗಂಬಗಳ ಚೌಕಟ್ಟನ್ನು ರಚಿಸಲಾಗಿದೆ. ಇಂತಹ ಹತ್ತಾರು ಗುಹಾಮಂಟಪಗಳನ್ನು ಕಾಣಬಹುದು. ಇವುಗಳಲ್ಲಿ ಕೆಲವು ಪೂರ್ಣವಾಗಿಯೂ, ಇನ್ನು ಕೆಲವು ಅಪೂರ್ಣವಾಗಿಯೂ ಇವೆ. ವಿವಿಧ ತಲ ವಿನ್ಯಾಸಗಳಲ್ಲಿ ಗುಹಾಮಂದಿರಗಳು ನಿರ್ಮಾಣಗೊಂಡಿವೆ. ಮಂಟಪಗಳ ಒಳಗೆ ಹಿಂಭಾಗದ ಭಿತ್ತಿಯಲ್ಲಿ ಗರ್ಭಗೃಹಗಳನ್ನು ಕೊರೆದಿದ್ದರೆ, ಇನ್ನೂ ಕೆಲ ಮಾದರಿ ಗಳಲ್ಲಿ ಗರ್ಭಗೃಹಗಳು ನವರಂಗದೊಳಕ್ಕೆ ಚಾಚಿಕೊಂಡಿರುವುದುಂಟು. ಇನ್ನೂ ಹಲವಾರು ಬಗೆಗಳನ್ನು ಕಾಣಬಹುದು. ಮಾಮಲ್ಲನ ಕಾಲದ ಸ್ತಂಭಗಳು ತೆಳ್ಳ ಗಿದ್ದು, ಅಲಂಕೃತವಾಗಿವೆ, ಹಾಗೂ ಮುಂಗಾಲಿನಲ್ಲಿ ಕುಳಿತ ಪೀಠಗಳ ಮೇಲಿವೆ. ಸ್ತಂಭ ಪೀಠ, ಚಾಚುಪೀಠ—ಹೀಗೆ ಹಲವು ಅಂಶಗಳು ನಿರ್ದಿಷ್ಟರೂಪ ಪಡೆಯು ಲಾರಂಭಿಸಿದ್ದು, ಈ ಕಾಲದಿಂದಲೇ. ವಿಶಾಲವಾದ, ಉನ್ನತ ತಲವಿನ್ಯಾಸದ ಆಧಾರದ ಮೇಲೆ ಕೊರೆಯಲಾದ, ಹಾಗೂ ಪ್ರದಕ್ಷಿಣ ಪಥವನ್ನು ಹೊಂದಿರುವ ಮಂಟಪವೆಂದರೆ ಪಂಚಪಾಂಡವ ಗುಹಾಲಯ. ಮಹಿಷಾಸುರಮರ್ದಿನಿ ಮತ್ತು ವರಾಹ ಮಂಟಪಗಳು ನಿಜಕ್ಕೂ ಚೆಲುವಿನ ಕೃತಿಗಳು.

ಮಹಿಷಾಸರ ಮರ್ದಿನಿ ಗುಹಾಲಯದ ದುರ್ಗಾ ಮಹಿಷಾಸುರನನ್ನು ಮರ್ದಿ ಸುತ್ತಿರುವ ಶಿಲ್ಪ ಪಲ್ಲವ ಕಲಾಕಾರರ ಅತ್ಯುತ್ಕೃಷ್ಟ ಸಾಧನೆಯಾಗಿದೆ. ಸುರಶಕ್ತಿ ದುಷ್ಟ ಶಕ್ತಿಯನ್ನು ದಮನಮಾಡುತ್ತಿರುವ ಚಿತ್ರ ಚೆನ್ನಾಗಿ ಮೂಡಿ ಬಂದಿದೆ. ಉನ್ನತ ಶಿಲ್ಪದ ಕೌಶಲವೆಲ್ಲವೂ ಅದರಲ್ಲಿದೆ. ಜಗತ್ತಿನ ಪ್ರೇಕ್ಷಕರ ಮೆಚ್ಚುಗೆ ಪಡೆದ ನಯನಾಕರ್ಷಕ ಶಿಲ್ಪ ಇದು. ಇದೇ ಶಿಲ್ಪದೆದುರಿಗಿರುವ ಶೇಷಶಾಯಿಯಾಗಿರುವ ವಿಷ್ಣುವಿನ ಶಿಲ್ಪವೂ ಪಲ್ಲವರ ಉತ್ತಮ ಶಿಲ್ಪಗಳಲ್ಲೊಂದು. ಆದಿವರಾಹ ಗುಹಾಲಯದ ಲಕ್ಷ್ಮಿ ಮತ್ತು ದುರ್ಗಾದೇವಿಯವರ ಮೂರ್ತಿಗಳು ಉತ್ತಮ ಶಿಲ್ಪಿಗಳೇ ಇದೇ ಗುಹಾಲಯದಲ್ಲಿರುವ ಸಿಂಹವಿಷ್ಣು ಮತ್ತು ಮಹೇಂದ್ರ ವರ್ಮರ ಶಿಲಾಭಂಜಿಕೆಗಳು ನಮ್ಮ ಗಮನ ಸೆಳೆಯದಿರಲಾರವು. ಗೋವರ್ಧನ ಗುಹಾಮಂದಿರದ ಗೋಪಾಲಕರ ತೌಕಿಕ ಶಿಲ್ಪವು ಪಲ್ಲವ ಕೃತಿಗಾರರ ಮತ್ತೊಂದು ಅಮೋಘ ಸಾಧನೆ. ಇದೇ ಮಂದಿರದಲ್ಲಿ ಸ್ತ್ರೀ ಒಬ್ಬಳು ಹಸುವಿನ ಕೆಚ್ಚಲಿನಿಂದ ಹಾಲು ಕರೆಯುತ್ತಿದ್ದಾಳೆ' ಅತ್ತ ಹಸು ತನ್ನ ಮುಂದಿನ ಕರುವನ್ನು ಪ್ರೀತಿಯಿಂದ ಮೈನೆಕ್ಕುತ್ತಿದೆ. ಇದೂ ಕೂಡ ಅಪೂರ್ವ ಕೃತಿಗಳಲ್ಲೊಂದು. ಮಹಾಬಲಿ ಪುರಮ್‌ಗೆ ಮೂರು ಮೈಲಿಗಳ ದೂರದಲ್ಲಿರುವ ಶಾಳುವಾಂಕುಪ್ಪಮ್‌ನ ವ್ಯಾಘ್ರ

ಗುಹಾಲಯ ಪಲ್ಲವರ ವಿಲಕ್ಷಣ ಸೃಷ್ಟಿ. ಇದರಲ್ಲಿ ವ್ಯಾಳದ ಆಕೃತಿಗಳ ಅರೆ ವೃತ್ತಾಕಾರದ ಪಂಕ್ತಿಯನ್ನು ಕಾಣಬಹುದು.

ಮಾಮಲ್ಲನ ಕಾಲದ ಅಪೂರ್ವ ಕಲಾ ಕಾಣಿಕೆಗಳೆಂದರೆ ಮಾಮಲ್ಲಪುರಂನ ರಥಗಳು ಹೆಬ್ಬಂಡೆಗಳಲ್ಲಿ ಕಡೆದ ಹತ್ತು ಪಲ್ಲವ ರಥಗಳನ್ನು ಅಲ್ಲಲ್ಲಿ ಕಾಣಬಹುದು. ಇವುಗಳಲ್ಲೆಲ್ಲ ಪಂಚಪಾಂಡವ ರಥಗಳು ಪ್ರಮುಖವಾದುದು. 'ಅರ್ಜುನ ತಪಸ್ಸಿ'ನ ಶಿಲ್ಪದ ಪಕ್ಕದಲ್ಲಿರುವ ಗಣೇಶರಥವೂ ಪ್ರಮುಖವಾದದ್ದೇ. ಬೌದ್ಧ ವಾಸ್ತುಗಳು ಈ ಕಲೆಗಳಿಗೆ ಪ್ರೇರಣೆಯಾಗಿರಬಹುದು. ಮಾಮಲ್ಲನ ಕಾಲದ ರಥಗಳು ಉದಯಗಿರಿಯ ಪಾವಾ ಗುಹೆಯ ವಿಮಾನಾಕೃತಿಯನ್ನು ಅನುಸರಿಸಿದಂತಿದೆ. ಈ ರಥಗಳನ್ನು ಹೆಬ್ಬಂಡೆಯೊಂದರಲ್ಲಿ ಮೇಲಿಂದ ಕೆಳಕ್ಕೆ ಬೇಕಾದ ವಿವಿಧಾಕೃತಿಯಲ್ಲಿ ಕೊರೆಯಲಾಗಿದೆ.

ವಿನ್ಯಾಸ–ಆಕೃತಿಗಳಲ್ಲಿ ಪಂಚಪಾಂಡವ ರಥಗಳಾದ ಧರ್ಮರಾಜ, ಭೀಮ, ಅರ್ಜುನ, ದ್ರೌಪದಿ ಹಾಗೂ ನಕುಲ–ಸಹದೇವ ರಥಗಳಲ್ಲಿ ವಿಭಿನ್ನತೆಯನ್ನು ಕಾಣಬಹುದು. ಮಹಾಬಲಿಪುರಂನ ರಥಗಳಲೆಲ್ಲ ಧರ್ಮರಾಜ ರಥವೆ ಪ್ರಮುಖವಾದುದು. ಇದು ಚಚ್ಚೌಕಾರಾದ ತಲ ವಿನ್ಯಾಸದಲ್ಲಿ ಮೇಲಿಂದ ಕೆಳಕ್ಕೆ ಕೊರೆಯಲಾಗಿದೆ. ಇದರ ಮೇಲೆ ಪಿರಮಿಡ್ ಆಕೃತಿಯ ವಿಮಾನವಿದೆ. ಬೌದ್ಧ ವಿಹಾರದ ಆಕೃತಿಯ ಆಧಾರದ ಮೇಲೆ ನಿರ್ಮಾಣಗೊಂಡ ದ್ರಾವಿಡ ಮಾದರಿ ರಚನೆ. ಇದು ಮೂರು ಅಂತಸ್ತುಗಳ ವಿಮಾನವನ್ನು ಹೊಂದಿದ್ದು ಪ್ರತಿಯೊಂದು ಅಂತಸ್ತೂ ಮೇಲೇರಿದಂತೆ ಕಿರಿದಾಗುತ್ತಾ ಹೋಗುತ್ತದೆ. ಇದರ ಕಲಶವಾಕೃತಿಯ ಶಿಖರ ಅಷ್ಟಮುಖಿಯಾಗಿದೆ. ಪ್ರತಿಯೊಂದುಅಂತಸ್ತಿನಲ್ಲೂ ಚೈತ್ಯ ಕೂಡುಗಳಿಂದ ಅಲಂಕೃತವಾದ ಕಪೋತವಿದೆ. ಅರೆಗಂಬಗಳ ಚೌಕ, ಅದರ ನಡುವೆ ಶಿಲ್ಪವಿದೆ. ರಥದ ಹೊರ ಮೈಗಳ ಮೇಲೆ ಹರಿಹರ, ಬ್ರಹ್ಮ, ಸ್ಕಂದ—ಮುಂತಾದ ಶಿಲ್ಪಗಳನ್ನು ಕಾಣಬಹುದು. ಸಿಂಹಪೀಠಗಳಿರುವ ಎರಡು ಸ್ತಂಭಗಳು. ಎರಡು ಅರೆಗಂಬಗಳೂ ಇವೆ. ರಚನೆಯಲ್ಲಿ ಇದಕ್ಕಿಂತ ಭಿನ್ನವಾದುದು. ಇದರ ಮಗ್ಗುಲಲ್ಲೇ ಇರುವ ಭೀಮರಥ ಅರೆ ಪಿಪಾಯಿ ಆಕಾರದ ಮೇಲ್ಛಾವಣಿಯ ಆಯತಾಕಾರದ ದೇಗುಲದ ಮೇಲಿದೆ. ಅದರ ಮೇಲೆ ಮೂರು ಕಲಶಗಳಿವೆ. ಗುಡಿಸಲ ನಿರ್ಮಾಣದ ಸೂತ್ರವನ್ನು ಅನುಸರಿಸಿ ಈ ರಥವನ್ನು ಕಡೆಯಲಾಗಿದೆ. ಪಿಪಾಯಿಯಾಕಾರದ ಛಾಣಿಯು ಧರ್ಮರಾಜರಥದಲ್ಲಿರುವಂತೆ ಅಲಂಕೃತವಾದ ಕಪೋತವನ್ನು ಹೊಂದಿದೆ. ಮುಂದಿನದು ಅರ್ಜುನ ರಥ. ,ಇದು ಧರ್ಮರಾಜ ರಥದ ಯಥಾಕೃತಿಯಂತಿರುವ ಎರಡು ಅಂತಸ್ತುಗಳ ದೇಗುಲ. ಇದೂ ಕೂಡ ಅಷ್ಟಮುಖಿಯ ಶಿಖರವನ್ನು ಹೊಂದಿದೆ. ರಥದ ಪಶ್ಚಿಮಕ್ಕೆ ಎರಡು ಸ್ತಂಭಗಳು, ಹಾಗೂ ಮುಂಗಾಲಿನ ಮೇಲೆ ನಿಂತ ಸಿಂಹದ ಅರೆಗಂಬಗಳನ್ನು ಹೊತ್ತಿರುವ ಅರೆ ಮಂಟಪವಿದೆ. ಹೊರ ಭಿತ್ತಿಯ ಮೇಲೆ

ಚಿತ್ತಾಕರ್ಷಕ ಮೂರ್ತಿಗಳು ಕಾಣಸಿಗುತ್ತವೆ. ಮುಂದೆ ಕಾಣುವುದೇ ದ್ರೌಪದಿ ರಥ, ಇದು ಗುಡಿಸಲಾಕೃತಿಯಲ್ಲಿದ್ದು, ಅದರ ಗರ್ಭಗೃಹದ ಹಿಂಬಾಗದ ಭಿತ್ತಿಯಲ್ಲಿ ದುರ್ಗೆಯ ಮೂರ್ತಿಯನ್ನು ಕಾಣಬಹುದು. ಈ ರಥಗಳ ಪಂಕ್ತಿಯ ಪಕ್ಕದಲ್ಲಿರುವ ನಕುಲ–ಸಹದೇವ ರಥ ಗಜಪೃಷ್ಠಾಕಾರವನ್ನು ಹೊಂದಿದೆ. ಇದರ ವಿಮಾನ ಧರ್ಮರಾಜ ಮತ್ತು ಅರ್ಜುನ ರಥಗಳಂತೆ ಎಲ್ಲ ಅಂಶಗಳನ್ನೂ ಒಳಗೊಂಡಿದೆ. ಮುಂಭಾಗದಲ್ಲಿ ಸಿಂಹಸ್ತಂಭಗಳ ಅರೆ ಮಂಟಪವಿದೆ. ಈ ರಥದ ಪಕ್ಕದಲ್ಲಿ ಏಕಶಿಲೆಯಲ್ಲಿ ಕೊರೆಯಲಾದ ಆನೆ ಇದೆ.

'ಅರ್ಜುನ ತಪಸ್ಸಿ'ನ ಶಿಲ್ಪದ ಹತ್ತಿರವಿರುವ ಗಣೇಶರಥ ಮಹಾಬಲಿಪುರಂನ ಉತ್ತಮ ರಥಗಳಲ್ಲೊಂದು. ಇದು ನಿಜಕ್ಕೂ ಪೂರ್ಣಗೊಂಡ ರಚನೆ. ಇದು ಆಯತಾಕಾರದ ವಿಮಾನವನ್ನೂ ಹಾಗೂ ಅರ್ಧ ಮಂಟಪವನ್ನು ಹೊಂದಿದೆ.

ಪಲ್ಲವ ಶಿಲ್ಪ ಸಾಮರ್ಥ್ಯದ ಮಹತ್ತರ ಕನಸುಗಳು ಕೃತಿಗಿಳಿದಿರುವುದು ಅವರ ಪ್ರಮುಖ ಶಿಲ್ಪಗಳಲ್ಲಿ. ಮಹಾಭಾರತದ ಕಥೆಯೊಂದು 'ಅರ್ಜುನ ತಪಸ್ಸಿ'ನಲ್ಲಿ ಚಿತ್ರಿತವಾಗಿದೆ. ಇದು ಪಲ್ಲವರ ಅಪೂರ್ವ ಕಲಾಕೃತಿ ; ಕಲೆಯಲ್ಲಿ ಮೂಡಿದ ಕಾವ್ಯ ಕುಸುಮ. ಭಾರತದ ಪ್ರಖ್ಯಾತ ಧನುರ್ಧಾರಿಯಾದ ಅರ್ಜುನನು ಉಗ್ರ ತಪಸ್ಸನ್ನು ಕೈಗೊಂಡು, ಶಿವನನ್ನು ಮೆಚ್ಚಿಸಿ, ಪಾಶುಪತಾಸ್ತ್ರವನ್ನು ಪಡೆಯುವ ಆಖ್ಯಾನ ಇದರಲ್ಲಿ ಚಿತ್ರಿತವಾಗಿದೆ. ಈ ವೇಳೆಗಾಗಲೆ ಈ ಕಥೆ ಸಾಕಷ್ಟು ಜನಪ್ರಿಯತೆಗಳಿಸಿರ ಬೇಕು. ಪ್ರಸಿದ್ಧ ಸಂಸ್ಕೃತ ಕವಿಯಾದ ಭಾರವಿ ಪಲ್ಲವರ ಆಸ್ಥಾನದಲ್ಲಿದ್ದು 'ಕಿರಾತಾರ್ಜುನೀಯ' ವನ್ನು ಆರನೆಯ ಶತಮಾನದ ವೇಳೆಗೆ ರಚಿಸಿದ್ದ. ತೊಂಬತ್ತಡಿ ಉದ್ದದ, ನಲವತ್ತೆರಡಿ ಎತ್ತರದ ಹೆಬ್ಬಂಡೆಯ ನಡುವೆ ನೈಸರ್ಗಿಕ ಸೀಳಿಕೆಯಲ್ಲಿ ಸುಂದರ ಜಲಪಾತ, ರಚನೆಯಾಗಿದೆ. ಜಲಪಾತದ ಇಕ್ಕಡೆಗಳಲ್ಲೂ ನಾಗ–ನಾಗಿಯರು ಗಂಧರ್ವರು, ಸಿದ್ಧರು ಆಗಸದಲ್ಲಿ ಹಾರಾಡುತ್ತಾ ಹೋಗುತ್ತಿದ್ದಾರೆ. ನಿಸರ್ಗದ ಚಲುವೆಲ್ಲವೂ ಕಲೆಯಲ್ಲಿ ಅರಳಿದೆ. ರಾಜಕುವರನೊಬ್ಬ ಋಷಿ ವೇಷ ಧಾರಿಯಾಗಿ ತಪಸ್ಸಿನಲ್ಲಿ ತಲ್ಲೀನನಾಗಿ, ಸುತ್ತಣ ಪರಿವೆ ಇಲ್ಲದವನಾಗಿದ್ದಾನೆ. ಗಂಗೆ ಮಂಜುಳಕರವಾಗಿ ಹರಿಯುತ್ತಿದ್ದಾಳೆ. ಋಷಿಗಳು ದಿನನಿತ್ಯದ ಕರ್ಮದಲ್ಲಿ ತೊಡಗಿದ್ದಾರೆ. ಕಾಡಿನ ಪ್ರಾಣಿಗಳು ಚಲಿಸುತ್ತಿವೆ—ಇವೆಲ್ಲವನ್ನು ಶಿಲ್ಪಿ ತನ್ನ ಮಾಯಕ ಚಲುವಿನಿಂದ ಚಿರ ನೂತನವಾಗಿ ಸೆರೆಹಿಡಿದಿದ್ದಾನೆ. ಈ ಕೃತಿಯಲ್ಲಿ ಆ ಶಿಲ್ಪಿ ಕಂಡ ಕನಸು ಎಷ್ಟು ಭವ್ಯವೊ ಅಷ್ಟೆ ಉನ್ನತವಾಗಿದೆ ಈ ಕೃತಿ. ಭಾರತೀಯ ಶಿಲ್ಪ ಕ್ಷೇತ್ರದಲ್ಲೇ ಅಪೂರ್ವ ಕೃತಿ ಇದೆಂದರೆ ಉತ್ಪ್ರೇಕ್ಷೆ ಎನಿಸದು.

'ಅರ್ಜುನನ ತಪಸ್ಸಿನ'ನ ಪಕ್ಕದಲ್ಲೆ ಕೋತಿಗಳ ಸಂಸಾರವನ್ನು ಚಿತ್ರಿಸುವ ಶಿಲ್ಪ ಪಲ್ಲವರ ಅಮೋಘ ಸಿದ್ಧಿ. ಕೋತಿಯೊಂದು ಮತ್ತೊಂದರ ಮೈಮೇಲೆ ಹೇನು ಹೆಕ್ಕುತ್ತಿರುವ ಚಿತ್ರ ತೀರ ನೈಜವಾಗಿ ಮೂಡಿದೆ.

2

ಒಂದನೇ ನರಸಿಂಹವರ್ಮನ ಸಾವಿನೊಂದಿಗೆ ಹೆಬ್ಬಂಡೆಗಳಿಂದ ದೇಗುಲಗಳನ್ನು ಕೊರೆಯುವ ಪದ್ಧತಿ ಕೊನೆಗೊಂಡಿತು. ಮುಂದೆ ಅಧಿಕಾರಕ್ಕೆ ಬಂದ ಎರಡನೆಯ ನರಸಿಂಹವರ್ಮ ಅಥವಾ ರಾಜಸಿಂಹ (ಕಿ.ಶ. 690–715)ನ ಕಾಲದಲ್ಲಿ ಬಿಡುಗಲ್ಲ ರಚನೆಗಳು ಪ್ರಾರಂಭವಾದುವು. ಮಹಾಬಲಿಪುರದ ದಂಡೆ ದೇಗುಲ, ಈಶ್ವರ, ಮುಕುಂದಾಲಯಗಳು, ದಕ್ಷಿಣ ಅರ್ಕಾಟ ಜಿಲ್ಲೆಯ ಪನಮಲಯ್ಯನ ದೇವಾಲಯ, ಕಾಂಚೀಪುರದ ಕೈಲಾಸನಾಥ ಹಾಗೂ ವೈಕುಂಟ ಪೆರುಮಾಳ ದೇಗುಲಗಳು ಬಿಡು ಗಲ್ಲುಗಳಿಂದಾದ ಕಟ್ಟಡಗಳು. ಇವುಗಳಲ್ಲೆಲ್ಲ ದಂಡೆ ದೇಗುಲವೇ ಮೂಲದೇಗುಲ ಎನ್ನಬಹುದು. ಇದು ಶಿವಾಲಯವಾಗಿದ್ದರೂ, ಕಡಲ ದಂಡೆಯಲ್ಲಿರುವುದರಿಂದ ದಂಡೆ ದೇಗುಲ (The Shore Temple)—ಎಂದೇ ಪ್ರಸಿದ್ಧಿ ಪಡೆದಿದೆ. ಬಹು ದೂರಕ್ಕೂ ಚೆಲ್ಲಿರುವ ಮರಳ ಬಯಲಿನಲ್ಲಿ ನಿಂತ ಈ ದೇಗುಲ ಸಾಗರದಲೆಗಳ ಹಾಗೂ ಗಾಳಿಯ ಸತತ ಹೊಡೆತಕ್ಕೆ ದೀರ್ಘಕಾಲದಿಂದ ತುತ್ತಾಗಿದ್ದರೂ, ಇಂದಿಗೂ ಉತ್ತಮ ಸ್ಥಿತಿಯಲ್ಲಿರುವುದು ಪಲ್ಲವ ವಾಸ್ತುಗಾರರ ಶ್ರೇಷ್ಠತೆಗೆ ಸಾಕ್ಷಿಯಾಗಿದೆ. ಇದರ ಮುಖ್ಯದ್ವಾರ ಪೂರ್ವಾಭಿಮುಖವಾಗಿದ್ದು, ಬಾಲರವಿಯ ಹೊಂಗಿರಣಗಳು ಗರ್ಭಾಂಕಣವನ್ನು ಪ್ರಕಾಶಗೊಳಿಸುತ್ತವೆ. ಸಾಮಾನ್ಯವಾಗಿ ಎಲ್ಲ ಪಲ್ಲವ ದೇಗುಲ ಗಳಲ್ಲೂ ಕಾಣುವಂತೆ, ಇಲ್ಲೂ ಶಿವಲಿಂಗದ ಹಿಂದೆ ಸೋಮಸ್ಕಂದ ಶಿಲ್ಪಗಳನ್ನು ಕಾಣಬಹುದು. ದೇಗುಲದ ತಲವಿನ್ಯಾಸ ತುಸು ವಿಚಿತ್ರವಾಗಿದೆ. ದೇವಾಲಯದ ಸುತ್ತಲೂ ಬಲವಾದ ಪ್ರಾಕಾರವಿದ್ದು, ಪಡುವಣ ದಿಕ್ಕಿನಿಂದ ಪ್ರವೇಶಿಸಬೇಕು. ಈ ಆಲಯಕ್ಕೆ ಎರಡು ಗರ್ಭಾಂಕಣಗಳೂ, ವಿಮಾನಗಳೂ ಇವೆ. ಪಶ್ಚಿಮದ ವಿಮಾನವು ದೇಗುಲದ ಪ್ರಥಮ ಪ್ರವೇಶದ್ವಾರವೆಂಬಂತೆ ಮೊದಲ ನೋಟಕ್ಕೆ ಕಾಣುವುದುಂಟು. ಇದು ಅನಂತರದ ಸೇರ್ಪಡೆಯಾದರೂ, ದೇಗುಲದ ಅಂದಕ್ಕೆ ಸ್ವಲ್ಪವೂ ಕುಂದಿಲ್ಲ. ದೇಗುಲದ ವಿಮಾನಗಳು ಧರ್ಮರಾಜ ರಥದ ವಿಮಾನವನ್ನು ಪೂರ್ಣವಾಗಿ ರಚನೆ–ವಿನ್ಯಾಸಗಳಲ್ಲಿ ಹೋಲುತ್ತದೆ. ಅರೆಗಂಬಗಳಲ್ಲಿ ಕಾಣುವ ಸಿಂಹ ಮುದ್ರೆಯಲ್ಲಿ ಪ್ರಗತಿಯನ್ನು ಕಾಣಬಹುದು. ದ್ವಾರಗಳಲ್ಲಿ ಅಲಂಕೃತವಾಗಿ ಕೆತ್ತಲಾಗಿದೆ. ದೇವಾಲಯ ಪೌಳಿಯ ಮೇಲೆ ಕುಳಿತ ನಂದಿ ಶಿಲ್ಪಗಳ ಪಂಕ್ತಿಯನ್ನು ಕಾಣಬಹುದು.

ದಂಡೆದೇಗುಲದ ನಿರ್ಮಾಣವಾದ ಕೆಲಕಾಲದಲ್ಲಿಯೇ ಕಾಂಚೀಪುರದ ಕೈಲಾಸ ನಾಥ ದೇವಾಲಯವನ್ನು ಕಟ್ಟಲಾಯಿತು. ರಾಜಸಿಂಹನ ಕಾಲದಲ್ಲಿ ಈ ಆಲಯದ ನಿರ್ಮಾಣ ಆರಂಭವಾದರೂ, ಅವನ ಮಗ ಮಹೇಂದ್ರವರ್ಮನ ಕಾಲದಲ್ಲಿ ಪೂರ್ಣ ಗೊಂಡಂತೆ ಕಾಣಬರುತ್ತದೆ. ಮೊದಲಿಗೆ ಪಿರಮಿಡ್ ಆಕೃತಿಯ ವಿಮಾನವನ್ನು

ಹೊಂದಿದ ಗರ್ಭಗೃಹ ಹಾಗೂ ಕಲೆಯ ಚೆಲುವನ್ನು ಮೈತಳೆದು ನಿಂತ ಸ್ತಂಭ ರಾಜಿಯ ಮಂಟಪವನ್ನು ಕಾಣಬಹುದು. ವಿವಿಧ ಗರ್ಭಾಂಕಣಗಳನ್ನು ಒಳಗೊಂಡ ಎತ್ತರದ ಪೌಳಿಯು ಆಯತಾಕಾರದಲ್ಲಿ ದೇವಾಲಯವನ್ನು ಸುತ್ತುವರೆದಿದೆ. ಅನಂತರದ ಕಾಲದಲ್ಲಿ–ಶತಮಾನಗಳನಂತರ ನಿರ್ಮಾಣಗೊಂಡ ಅರ್ಧಮಂಟಪ ಗರ್ಭ ಗೃಹ ಮತ್ತು ಮಂಟಪವನ್ನು ಒಂದುಗೂಡಿಸಿದೆ. ಇದು ದೇವಾಲಯದ ಒಟ್ಟಾರೆ ಕಲಾ ಸೌಂದರ್ಯವನ್ನು ಮುಕ್ಕಾಗಿಸಿದೆ–ಎಂದರೆ ತಪ್ಪೆನಿಸದು. ದೇಗುಲದ ವಿಮಾನ ಮಾಮಲ್ಲಪುರಂನ ಧರ್ಮರಾಜರಥದ ವಿಮಾನವನ್ನು ಹೋಲುತ್ತದೆ. ಪೌಳಿಯ ಒಳ ಗರ್ಭಾಂಕಣಗಳು ದೇಗುಲದ ಸೊಬಗನ್ನು ಮತ್ತಷ್ಟು ಹೆಚ್ಚಿಸಿದೆ. ಪಲ್ಲವ ಕಲೆಯ ಎಲ್ಲಾ ಅಂಶಗಳು ಮೋಹಕವಾಗಿ ಈ ದೇಗುಲದಲ್ಲಿ ಸಂಮಿಳನಗೊಂಡಿವೆ. ಗರ್ಭಾಂಕಣದ ಒಳಗೋಡೆಗಳ ಮೇಲೆ ಚಿತ್ರಕಲೆಯ ಅವಶೇಷಗಳು ಕಾಣಿಸು ವುದುಂಟು. ದೇವಾಲಯದ ಸ್ತಂಭಗಳು ಒಂದೇ ತೆರನಾಗಿದ್ದರೂ. ದೇಗುಲದ ಚಲುವು ಮಾಸಿಲ್ಲ. ವಿಮಾನವು ಸಪ್ರಮಾಣವಾಗಿದ್ದು, ದಂಡೆದೇಗುಲಕ್ಕಿಂತ ಹೆಚ್ಚಿನ ಪ್ರಗತಿ ಹೊಂದಿರುವುದನ್ನು ಗುರ್ತಿಸಬಹುದು. ಪ್ರಾಕಾರದ ದ್ವಾರದ ಮೇಲೆ ಗೋಪುರವಿದೆ. ಅಂದಿನಿಂದ ಗೋಪುರ ನಿರ್ಮಾಣ ಮಾಡುವ ಪದ್ಧತಿ ಆರಂಭವಾಗಿರಬೇಕು. ಕೈಲಾಸನಾಥ ದೇಗುಲದ ವಾಸ್ತುಕಾರರು ಕಗ್ಗಲ್ಲನ್ನು ದೇಗುಲದ ನಿರ್ಮಾಣಕ್ಕೆ ಉಪಯೋಗಿಸಿರುವುದು ಅದರ ಈ ದೀರ್ಘಕಾಲದ ಬಾಳಿಕೆಗೆ ಕಾರಣವಿರಲೂಬಹುದು. ದೇವಾಲಯದ ಗರ್ಭಾಂಕಣಗಳ ಮುಖ್ಯ ಶಿವಲಿಂಗದ ಹಿಂಭಾಗದಲ್ಲಿ ಸೋಮಸ್ಕಂದ ಕೆತ್ತನೆಯನ್ನು ಕಾಣಬಹುದು.

ಅತ್ಯಂತ ಪೂರ್ಣಪ್ರಗತಿಯನ್ನು ಕಂಡ ದೇಗುಲವೆಂದರೆ ಕಂಚಿಯ ವೈಕುಂಠ ಪೆರುಮಾಳ ದೇವಾಲಯ. ಇದು ಕೈಲಾಸನಾಥ ದೇವಾಲಯಕ್ಕಿಂತ ತುಸು ದೊಡ್ಡ ದಾಗಿದೆ. ಗರ್ಭಗೃಹ, ಅಂತರಾಳ, ಮಂಟಪ–ಇವುಗಳನ್ನೆಲ್ಲ ಓರಣವಾಗಿ ಜೋಡಿಸಿದ ಅಮೋಘ ಶಿಲ್ಪಕೌಶಲ, ಈ ದೇಗುಲ. ದೇವಾಲಯದ ಸುತ್ತಲೂ ಎತ್ತರವಾದ ಪ್ರಾಕಾರವಿದೆ. ಪ್ರಾಕಾರದ ಒಳಭಾಗದಲ್ಲಿ ಅದಕ್ಕೆ ತಾಗಿದಂತೆ, ಪ್ರದಕ್ಷಿಣ ಪಥಕ್ಕೆ ಅನುಕೂಲವಾಗುವಂತೆ ಸಿಂಹಸ್ತಂಭರಾಜಿಯ ಮಂಟಪ ಸುತ್ತುವರಿದಿದೆ. ದೇಗುಲದ ಮುಖ ಮಂಟಪ ಚಚ್ಚೌಕವಾಗಿದ್ದು, ಅದರ ಬಾಹು 21½ ಅಡಿ ಉದ್ದವಿದೆ. ಅದರ ಭುವನೇಶ್ವರಿಯನ್ನು ಎಂಟು ಸ್ತಂಭಗಳು ಹಿಡಿದು ನಿಂತಿವೆ. ಗರ್ಭಗುಡಿಯ ವಿಮಾನ ಚೌಕಾಕಾರವಾಗಿದ್ದು, ನೆಲಮಟ್ಟದಿಂದ ಅರವತ್ತಡಿ ಎತ್ತರವಾಗಿದೆ. ಇದು ನಾಲ್ಕಂತಸ್ತು ಹೊಂದಿದೆ. ದೇವಾಲಯದ ಆವರಣದಲ್ಲಿ ಪಲ್ಲವ ಅರಸೊತ್ತಿಗೆಯ ಮೂಲ ಬೆಳವಣಿಗೆಯನ್ನು ಕಾಣಬಹುದು.

4

ಕ್ರಿ. ಶಕ 730ರ ಸುಮಾರಿಗೆ ಸಿಂಹವಿಷ್ಣು ಪಲ್ಲವ ವಂಶದ ಅರಸೊತ್ತಿಗೆ ಕೊನೆ ಗೊಂಡಿತು. ಆಸ್ಥಾನಿಕರೆಲ್ಲ ಸೇರಿ ಪಲ್ಲವರ ದೂರದ ದಾಯಾದಿಯಾದ ಇಮ್ಮಡಿ

ನಂದಿವರ್ಮನನ್ನು ಅಧಿಕಾರಕ್ಕೆ ತಂದರು. ಇವನು ಹಿಂದಿನ ಪಲ್ಲವರ ವೈಭವವನ್ನು ಉಳಿಸಿಕೊಳ್ಳಲು ತೀವ್ರವಾಗಿ ಹೋರಾಟ ನಡೆಸಿದ. ಇವನ ನಂತರದ ಕಾಲದಲ್ಲಿ ಪಲ್ಲವ ಪ್ರಭುತ್ವ ಇಳಿಮುಖವಾಗುತ್ತಾ ಬಂದಿತು. ಇದು ಕಲಾಕ್ಷೇತ್ರದಲ್ಲೂ ಪ್ರತಿಧ್ವನಿಸಿತು. ಪಲ್ಲವ ಬಿಡುಗಲ್ಲ ಕಟ್ಟಡಗಳ ಎರಡನೆಯ ಹಾಗೂ ಕೊನೆಯ ಹಂತ ಪ್ರಾರಂಭವಾದುದು ನಂದಿವರ್ಮ ಹಾಗೂ ಅನಂತರದ ಅರಸರ ಕಾಲದಲ್ಲಿ. ಹಿಂದಿನ ಕಾಲದ ಕಲಾ ಪ್ರಗತಿ ಹಾಗೂ ವೈಭವವೆಲ್ಲವೂ ಎರಡನೆಯ ಹಂತದ ದೇವಾಲಯಗಳಲ್ಲಿ ಮಸುಕಾಗಿದೆ. ಹೆಸರಾಂತ ದೇವಾಲಯಗಳಾವುವೂ ಈ ಕಾಲದಲ್ಲಿ ನಿರ್ಮಾಣವಾದಂತೆ ಕಂಡುಬರುವುದಿಲ್ಲ. ಈ ಕಾಲದ ಕಲಾ ಪ್ರಗತಿ ಅಡ್ಡದಾರಿ ಹಿಡಿದುದನ್ನು ದೇವಾಲಯಗಳಲ್ಲಿ ಕಾಣಬಹುದು. ಪಲ್ಲವರ ಅಳಿವು ಆರಂಭವಾದುದು ಇದಕ್ಕೆ ಕಾರಣವಿರಲೂ ಬಹುದು.

ಕಂಚಿಯ ಮುಕ್ತೇಶ್ವರ, ಮತಂಗೇಶ್ವರ ದೇವಾಲಯಗಳು, ಚಿಂಗಲ್‌ಪೇಟೆ ಹತ್ತಿರದ ಒರಗಡವ್‌ನ ವಾಡಾಮಲ್ಲೀಶ್ವರ ಅರಕೋಣಂ ಹತ್ತಿರದ ವೀರಾಟ್ಟಾನೇಶ್ವರ ಮಂದಿರಗಳು ಈ ಕಾಲದ ಪ್ರಮುಖ ಆಲಯಗಳು. ಮೇಲೆ ತಿಳಿಸಿದ ಕಂಚಿಯ ದೇಗುಲಗಳ ಪ್ರವೇಶ ದ್ವಾರದಲ್ಲಿನ ಮಂಟಪಗಳನ್ನು ಎರಡು ಎರಡು ಸ್ತಂಭಗಳು ಎತ್ತಿ ಹಿಡಿದು ನಿಂತಿವೆ. ಉಳಿದ ದೇವಾಲಯಗಳು ಗಜ ಪೃಷ್ಠಾಕೃತಿಯಲ್ಲಿವೆ. ಇವು ರಚನೆಯಲ್ಲಿ ಮಾಮಲ್ಲಪುರಮ್‌ನ ನಕುಲ–ಸಹದೇವ ರಥಗಳನ್ನು ಅನುಸರಿಸಿದಂತೆ ಕಾಣುತ್ತವೆ. ಪಲ್ಲವ ಸಾಮ್ರಾಜ್ಯದ ಪತನವನ್ನು ಇವು ಸೂಚಿಸುತ್ತವೆ. ಕಲಾ ದೃಷ್ಟಿಯಿಂದ ಈ ಕಾಲದ ದೇವಾಲಯಗಳು ಪ್ರಮುಖವಾದುವೇನಲ್ಲ. ಪಲ್ಲವರ ಕೊನೆಯ ಅರಸ ಅಪರಾಜಿತನನ್ನು ಚೋಳ ಪ್ರಭು ಒಂದನೇ ಆದಿತ್ಯ ಇರಿದು ಕೊಂದು, ಚೋಳ ಸಾಮ್ರಾಜ್ಯ ಸ್ಥಾಪಿಸಿದ (ಕ್ರಿ. ಶಕ 903). ಅಂದಿಗೆ ಪಲ್ಲವ ಯುಗದ ಪರಿಸಮಾಪ್ತಿಯಾಯಿತು.

ದಕ್ಷಿಣ ಭಾರತದಲ್ಲಿ ಮೊದಲಿಗೆ ವಾಸ್ತುಶಿಲ್ಪ–ಕಲೆಗಳ ಪರಂಪರೆಯನ್ನು ಆರಂಭಿಸಿ, ಪೋಷಿಸಿದವರು ಪಲ್ಲವರು. ಅವರೇ ಮೊದಲಿಗೆ ದಕ್ಷಿಣ ಭಾರತದಲ್ಲಿ ವ್ಯಾಪಕವಾದ ರಾಜ್ಯವನ್ನು ಸ್ಥಾಪಿಸಿದವರೆಂಬುದನ್ನು ಮರೆಯುವಂತಿಲ್ಲ. ಅಂದಿನಿಂದ ದ್ರಾವಿಡ ಕಲಾ ಇತಿಹಾಸದ ಆರಂಭವೂ ಆಯಿತು. ಪಲ್ಲವ ಕಲೆ ಪ್ರಾರಂಭದ ಹಂತದಲ್ಲೇ ಸಾಕಷ್ಟು ಪ್ರಗತಿಯನ್ನು ಸಾಧಿಸಿತ್ತು–ಎಂಬ ಅಂಶ ಗಮನಾರ್ಹವಾದುದು. ಅವರ ಕಾಲಕ್ಕೆ ಹಿಂದೆಯೇ ಕಲೆಗಾರರು ಅನುಭವ ಪಡೆದಿರಬೇಕು ; ಇದರ ಬಗ್ಗೆ ಶಾಸನಗಳು ಸುಳಿವು ನೀಡುತ್ತವೆ. ಅದೇನೇ ಇರಲಿ, ಪಲ್ಲವ ಕಲೆ ಭಾರತೀಯ ಕಲಾ ಇತಿಹಾಸದಲ್ಲಿ ಒಂದು ನೂತನ ಗುಣಮಟ್ಟವನ್ನು ಸ್ಥಾಪಿಸಿತು ಎನ್ನುವ ಅಂಶ ಗಮನೀಯ.

-ಇ>-ಎ : ದಾವಣಗೆರೆ ಉಪಭಾಷೆಯ ಒಂದು ವೈಲಕ್ಷಣ್ಯ

ಎಂ. ಚಿದಾನಂದಮೂರ್ತಿ

ಉತ್ತರ ಕರ್ನಾಟಕದ ಮತ್ತು ದಕ್ಷಿಣ ಕರ್ನಾಟಕದ ಉಪಭಾಷೆಗಳಿಗೆ ಇರುವ ಬಹು ಮುಖ್ಯ ವ್ಯತ್ಯಾಸಗಳಲ್ಲಿ ಒಂದು ಎಂದರೆ ಅಂತ್ಯ -ಎ ಕಾರವೆಲ್ಲ ಉತ್ತರ ಕರ್ನಾಟಕದಲ್ಲಿ -ಇ ಕಾರವಾಗುವುದು. ಆನೆ→ಆನಿ, ಕುದುರೆ→ಕುದುರಿ, ಮನೆ→ಮನಿ ಇತ್ಯಾದಿ ನೂರಾರು ಉದಾಹರಣೆಗಳನ್ನು ಹೆಸರಿಸಬಹುದು. ಈ ಸ್ವನ ವ್ಯತ್ಯಾಸವು ಬಹು ಸುಪ್ರಸಿದ್ಧವಾಗಿದ್ದರೂ ಅದನ್ನು ಕುರಿತಂತೆ ವ್ಯಾಪಕವಾದ ಸಮೀಕ್ಷೆ ನಡೆದಾಗ ಮಾತ್ರ ಆ ವ್ಯತ್ಯಾಸದ ಪ್ರಾದೇಶಿಕ ಹರಹು ನಮಗೆ ಗೊತ್ತಾಗುತ್ತದೆ.

ಉತ್ತರ ಕರ್ನಾಟಕ ಮತ್ತು ದಕ್ಷಿಣ ಕರ್ನಾಟಕ ಉಪಭಾಷೆಗಳ ಸ್ಥೂಲವಾದ ಗಡಿ ತುಂಗಭದ್ರಾನದಿ ಎಂದು ಭಾವಿಸಲಾಗಿದೆ. ತುಂಗಭದ್ರಾನದಿಗೆ ಎಂಟು ಮೈಲಿ ದೂರದ ದಾವಣಗೆರೆ ಪ್ರದೇಶದ ಕನ್ನಡದ ಒಂದು ವಿಶೇಷಲಕ್ಷಣವನ್ನು ಅದರ ಸ್ವಾರಸ್ಯಕ್ಕಾಗಿ, ಮತ್ತು ಹೆಚ್ಚಿನ ತಾತ್ವಿಕ ಚಿಂತನೆಗೆ ಅನುವು ಮಾಡಿಕೊಡಬಹುದು ಎಂಬ ಕಾರಣಕ್ಕಾಗಿ ಈ ಚಿಕ್ಕ ಸಂಪ್ರಬಂಧದಲ್ಲಿ ಪರಿಚಯುಮಾಡಿಕೊಡಲು ಬಯಸುತ್ತೇನೆ. ಇಲ್ಲಿನ ನನ್ನ ವಿವೇಚನೆಗೆ ಮುಖ್ಯವಾಗಿ ನನ್ನ, ಎಂದರೆ ನನ್ನ ಬಾಲ್ಯದ ಉಪಭಾಷೆ ಮುಖ್ಯವಾದ ಆಧಾರ. ನನ್ನ ಹುಟ್ಟೂರು ವಾಸ್ತವವಾಗಿ ಶಿವಮೊಗ್ಗ ಜಿಲ್ಲೆಯಲ್ಲಿದ್ದರೂ ವ್ಯಾಪಾರ ವ್ಯವಹಾರ ವಿದ್ಯಾಭ್ಯಾಸಗಳಿಗೆಲ್ಲ ನನ್ನ ಊರಿನ ಮತ್ತು ಸುತ್ತಮುತ್ತಲ ಹಳ್ಳಿಗಳ ಜನರೆಲ್ಲ ಇಪ್ಪತ್ತುಮೈಲಿ ದೂರದ ದಾವಣಗೆರೆಯನ್ನೇ ಆಶ್ರಯಿಸಿರುವುದರಿಂದ ನನ್ನ ಹುಟ್ಟೂರು ಆಡಳಿತದ ದೃಷ್ಟಿಯಿಂದ ಶಿವಮೊಗ್ಗ ಜಿಲ್ಲೆಗೆ ಸೇರಿದ್ದರೂ 'ಸಾಂಸ್ಕೃತಿಕ'ವಾಗಿ ದಾವಣಗೆರೆಯ ಕಕ್ಷೆಗೆ ಸೇರುತ್ತದೆ. ಆದ್ದರಿಂದ ನನ್ನ ಉಪಭಾಷೆಯನ್ನು ದಾವಣಗೆರೆ ಉಪಭಾಷೆಯೇ ಎಂದು ಭಾವಿಸಿ ಮುಂದುವರಿಯುತ್ತೇನೆ. ನನ್ನ ಉಪಭಾಷೆಯನ್ನು ಈಗ ನಾನು ನನ್ನ ಆಡು ಮಾತಿನಲ್ಲಿ ಬಳಸದಿದ್ದರೂ ಅದು ನನ್ನ ಒಳ ಆಸ್ತಿಯಾಗಿ, ನನ್ನ ಒಟ್ಟು ಕನ್ನಡದ ಭಾಗವಾಗಿ ಉಳಿದಿದೆ. ಆ ಉಪಭಾಷೆ ನನಗೆ ಅರ್ಥವಾಗುವುದಲ್ಲದೆ, ಯತ್ನಿಸಿದರೆ ಅದರಲ್ಲಿ ಮಾತನಾಡಬಲ್ಲೆನಾದರೂ ಅದು ನನ್ನಲ್ಲಿ ಬಳಕೆಯಾಗದ ಭಾಷಿಕ ಸಾಮಗ್ರಿಯಾಗಿ ನನ್ನಲ್ಲಿ ಕುಳಿತಿದೆ (ಹಳ್ಳಿಗಳಿಂದ ಪಟ್ಟಣಕ್ಕೆ ಬಂದ ಎಲ್ಲ ವಿದ್ಯಾವಂತರ ಉಪಭಾಷೆಗಳಿಗೂ ಇದೇ ಅವಸ್ಥೆ ಒದಗಿರುತ್ತದೆ). ಬೆಂಗಳೂರಲ್ಲಿ ನನ್ನ ಜೊತೆ ಇರುವ ನನ್ನ ತಾಯಿ ತಮ್ಮ ಆಡುಮಾತಿನಲ್ಲಿ ಈಗಲೂ ನನ್ನ ಉಪಭಾಷೆಯನ್ನು ಉಳಿಸಿ

ಕೊಂಡಿರುವುದರಿಂದ, ಸಂದೇಹ ಬಂದಾಗ ಅವರ ಮಾತನ್ನು ಪರಿಶೀಲಿಸಿ ನನ್ನ ಈ ಸಂಪ್ರಬಂಧದ ಸಾಮಗ್ರಿಯನ್ನು ಖಚಿತಪಡಿಸಿಕೊಂಡಿದ್ದೇನೆ.

ಈ ಉಪಭಾಷೆಯ ಪ್ರಮುಖ ವೈಲಕ್ಷಣ್ಯವೆಂದರೆ ಆಡುಮಾತಿನಲ್ಲಿ ಅಂತ್ಯ–ಇ ಕಾರವು -ಎ ಕಾರವಾಗುವುದು. (-ಇ>–ಎ) ಕೆಳಗಿನ ಉದಾಹರಣೆಗಳು ಇದನ್ನು ಸ್ಪಷ್ಟಪಡಿಸುತ್ತವೆ.

ಗುಡಿ→ಗುಡೆ	ನರಿ→ನರೆ
ಮರಿ→ಮರೆ	ಕುರಿ→ಕುರೆ
ಕುರಿಮರಿ→ಕುರಿಮರೆ	ತುದಿ→ತುದೆ
ಗರಿ→ಗರೆ	ಹುಲಿ→ಹುಲೆ
ಕಿವಿ→ಕಿವೆ	ಇಲಿ→ಇಲೆ
ಪುಡಿ→ಪುಡೆ	ಕಡ್ಡಿಪುಡಿ→ಕಡ್ಡಿಪುಡೆ
ಗಿಣಿ→ಗಿಣೆ	ಗುಣಿ→ಗುಣೆ
ಹುರಿ→ಹುರೆ	ದಾರದಹುರಿ→ದಾರದಹುರೆ
ಹುಳಿ→ಹುಳೆ	ಗವಿ→ಗವೆ
ಗತಿ→ಗತೆ	ತಿತಿ→ತಿತೆ
ಮಿಣಿ→ಮಿಣೆ	ನುಸಿ→ನುಸೆ
ಸಸಿ→ಸಸೆ	ಮಿಣಿ→ಮಿಣೆ
ಸುಳಿ→ಸುಳೆ	ಉರಿ→ಉರೆ
ಮುಸಿ→ಮುಸೆ	(ಹೂವಿನ) ಮುಡಿ→ಮುಡೆ
ಗವಿ→ಗವೆ	ನುಸಿ→ನುಸೆ

ಇವೆಲ್ಲವೂ ನಾಮಪದಗಳು (ಇವುಗಳಲ್ಲಿ ಗುಣವಾಚಕಗಳೂ ಸೇರಿವೆ : ದ್ರಾವಿಡದಲ್ಲಿ ನಾಮಪದ ಗುಣವಾಚಕಗಳನ್ನು ಪ್ರತ್ಯೇಕಿಸುವುದು ಕಷ್ಟ). ಈ ಪದಗಳು ಸಮಸ್ತ ಪದದ ಪೂರ್ವಭಾಗವಾಗಿ ಬಂದಾಗ ತಮ್ಮ ಮೂಲದ - ಇಕಾರಾಂತವನ್ನೇ ಉಳಿಸಿಕೊಳ್ಳುತ್ತವೆ (ನೋಡಿ : ಕುರಿಮರೆ ; ಕಡ್ಡಿಪುಡೆ). –ಇಕಾರಾಂತಗಳು ತಮ್ಮ ಮೂಲರೂಪದಲ್ಲೇ ಹಲವು ಬಾರಿ ಬಳಕೆಯಾಗುವುದೂ ಉಂಟು. ವಿದ್ಯಾವಂತ ಜನ ಅಥವಾ ಭಾಷೆಯ ಬಗ್ಗೆ ಸ್ವಲ್ಪ ಪ್ರಜ್ಞಾವಂತರಾದಾಗ ಅವಿದ್ಯಾವಂತರೂ ಕೂಡ, ಇಕಾರಾಂತಗಳನ್ನೇ ಬಳಸುತ್ತಾರೆ. ಆದರೆ ಅವಿದ್ಯಾವಂತರು ಬಹು ಸಹಜವಾಗಿ ಮಾತನಾಡಿಕೊಳ್ಳುವಾಗ ಮಾತ್ರ –ಇ ಕಾರಾಂತಗಳು –ಎ ಕಾರಾಂತವಾಗುವ ಸಾಧ್ಯತೆಗಳು ಬಹಳ.

-ಇ >-ಎ ಆಗುವುದು ಎರಡಕ್ಷರದ [vv] ಈ ರಚನೆಯ ನಾಮಪದಗಳಲ್ಲಿ ಮಾತ್ರ : ಎಂದರೆ ಎರಡು ಲಘ್ವಕ್ಷರದ ನಾಮಪದಗಳಲ್ಲಿ ಮಾತ್ರ (ಮೇಲಿನ ಉದಾ

ಹರಣೆಗಳನ್ನು ನೋಡಿ). ಉಳಿದ ಎಲ್ಲ ಕಡೆಗಳಲ್ಲಿ ಅಂತ್ಯ -ಇ ಕಾರವು ಯಾವುದೇ ವ್ಯತ್ಯಾಸವನ್ನೂ ಪಡೆಯುವುದಿಲ್ಲ.

(i) [-v] ಈ ರಚನೆಯ ಎರಡಕ್ಷರದ ನಾಮಪದಗಳಲ್ಲೂ ಏನೂ ವ್ಯತ್ಯಾಸವಾಗುವುದಿಲ್ಲ. ಕಡ್ಡಿ, ಬಡ್ಡಿ, ಹಕ್ಕಿ, ಹಟ್ಟಿ, ಹುಗ್ಗಿ, ಕಜ್ಜಿ, ಸುಗ್ಗಿ, ಹಳ್ಳಿ ಪೌಳಿ, ಕೋಳಿ, ಅಂಗಿ, ಬೆಂಕಿ, ತಂಗಿ, ಮೂತಿ, ಗುಬ್ಬಿ, ತತ್ತಿ, ಕಾಯಿ, ಬಾವಿ, ಜಾತಿ, ಬೆಳ್ಳಿ, ಹಲ್ಲಿ, ಹುಚ್ಚಿ, ಬೀದಿ ಇಲ್ಲೆಲ್ಲ ಅಂತ್ಯ -ಇ ಕಾರವೇ ಇರುತ್ತದೆ.

(ii) ಮೂರಕ್ಷರದ ಯಾವುದೇ ನಾಮಪದಗಳಲ್ಲೂ ಯಾವುದೇ ವ್ಯತ್ಯಾಸವನ್ನು ಪಡೆಯುವುದಿಲ್ಲ. ಉದಾಹರಣೆಗೆ, ಕರಡಿ, ಬಡವಿ, ಸರವಿ, ಅಡವಿ, ಇಬ್ಬನಿ, ಬಸುರಿ, ಕಿಟಕಿ, ಹೆಂಡತಿ, ಕೊಬ್ಬರಿ, ಇಬ್ಬನಿ ಇತ್ಯಾದಿ.

(iii) [vv] ಈ ರಚನೆಯಿರುವ ಧಾತುಗಳೂ ಯಾವುದೇ ವ್ಯತ್ಯಾಸವನ್ನೂ ಪಡೆಯುವುದಿಲ್ಲ. ಉದಾಹರಣೆಗೆ, ಸುರಿ, ತುರಿ, ಕುಡಿ, ಬಡಿ, ಇಳಿ, ಮರಿ, ಸರಿ, ಇರಿ, ಅಗಿ, ಕದಿ, ಬಸಿ ಇತ್ಯಾದಿ.

ಉತ್ತರ ಕರ್ನಾಟಕದ ಕನ್ನಡದಲ್ಲಿ ಅಂತ್ಯ–ಎ ಕಾರವು –ಇ ಕಾರವಾಗುವ ಸ್ವನ ಪ್ರಕ್ರಿಯೆಯು ದಾವಣಗೆರೆ ಉಪಭಾಷೆಯಲ್ಲೂ ಇರುವುದರಿಂದ, –ಎ > –ಇ ಆಗುವುದು, –ಇ > –ಎ ಆಗುವುದು ಎರಡೂ ಒಂದರ ಪಕ್ಕದಲ್ಲೊಂದು ಕಾಣಿಸಿಕೊಂಡಿರುವುದು ಬಹುಮುಖ್ಯ ಸಂಗತಿಯಾಗಿರುತ್ತದೆ. ನಾನು ಈಗಾಗಲೇ ಬೇರೊಂದು ಲೇಖನದಲ್ಲಿ ಸ್ವನ ವ್ಯತ್ಯಾಸಗಳು ವಿಪರ್ಯಯವಾಗಿ (reciprocal) ನಡೆಯುವ ಉದಾಹರಣೆಗಳನ್ನು ಎತ್ತಿ ತೋರಿಸಿದ್ದೇನೆ.[1] ಅದನ್ನು ಹೀಗೆ ಹೇಳಬಹುದು: ಒಂದು ನಿರ್ದಿಷ್ಟ ಕಾಲ ಅಥವಾ ನಿರ್ದಿಷ್ಟ ಪರಿಸರದಲ್ಲಿ [x] ಸ್ವನ ಕೆಲವು ನಿಯಮಗಳಿಗೆ ಒಳಪಟ್ಟು [y] ಸ್ವನ ಆದರೆ, ಅದೇ ಸಂದರ್ಭದಲ್ಲಿ ಅದೇ ನಿಯಮಗಳಿಗೆ ಒಳಪಟ್ಟಂತೆ ಅದೇ ಕಾಲ, ಪರಿಸರದಲ್ಲಿ [y] ಎನ್ನುವ ಸ್ವನ [x] ಆಗುವ ಸಾಧ್ಯತೆಗಳಿವೆ (ಆಗಿಯೇ ಆಗುತ್ತದೆ ಎಂದು ಖಚಿತವಾಗಿ ಹೇಳಲು ಸಾಧ್ಯವಿಲ್ಲ.)

[x] → [y]
[y] → [x]

ಇಲ್ಲಿ x→y ಇದು ಮೊದಲು ನಡೆಯುವ ವ್ಯತ್ಯಾಸವಾದ್ದರಿಂದ ಭಾಷೆಯಲ್ಲಿ ಹೆಚ್ಚು ವ್ಯಾಪಕವಾಗಿ ನಡೆಯುತ್ತದೆ; ಎಷ್ಟೋ ಸಾರಿ ಅಪವಾದಗಳೇ ಇಲ್ಲದಂತೆ ನಡೆಯಬಹುದು. ಈ ವ್ಯತ್ಯಾಸಕ್ಕೆ ಪ್ರತಿಯಾಗಿ ಏನೋ ಎನ್ನುವಂತೆ, ಒಂದು ಕ್ರಿಯೆಗೆ ಪ್ರತಿಕ್ರಿಯೆ ಎನ್ನುವಂತೆ, ಆ ಮೇಲೆ ನಡೆಯುವ y→x ಎಂಬುದು ಹಲವು ಅಪವಾದ

1 ಎಂ. ಚಿದಾನಂದಮೂರ್ತಿ: 'ಕನ್ನಡದ ಉಪಭಾಷೆಯೊಂದರಲ್ಲಿ ತಾಲವ್ಯೀಕರಣ ಮತ್ತು ಕಂಠ್ಯೀಕರಣ', ವಾಗರ್ಥ, ಬೆಂಗಳೂರು, 1981, ಪು. 156

ಗಳನ್ನು ಹೊಂದಿ ನಡೆಯುತ್ತದೆ. x→y ಇದು ಹೆಚ್ಚು ಕಡಮೆ ನೂರಕ್ಕೆ ನೂರರಷ್ಟಾದರೆ, y→x ಇದು ನೂರಕ್ಕೆ ಐವತ್ತು ಅಥವಾ ಅರವತ್ತರಷ್ಟು ಮಾತ್ರ ನಡೆಯುಬಹುದು. ಕನ್ನಡಕ್ಕೆ ಸಂಬಂಧಿಸಿದಂತೆ ನೋಡಿದಲ್ಲಿ –ಎ>–ಇ ಈ ವ್ಯತ್ಯಾಸ ಬಹಳ ವ್ಯಾಪಕವಾಗಿದೆ. ಬಹುತೇಕ ಎಲ್ಲ ಬಗೆಯ ಪದಗಳಲ್ಲಿ, ನಾಮಪದ ಕ್ರಿಯಾಪದ ಇತ್ಯಾದಿಗಳಲ್ಲಿ, ಎರಡು ಮೂರು ಅಕ್ಷರದ ಪದಗಳಲ್ಲಿ ಈ ವ್ಯತ್ಯಾಸ ಕಾಣಿಸಿದೆ. ಆದರೆ –ಇ>–ಎ ಇದು ಎರಡು ಲಘ್ವಕ್ಷರಗಳ ನಾಮಪದಗಳಲ್ಲಿ ಮಾತ್ರ ಕಾಣಿಸಿಕೊಂಡಿದೆ. ಇದು –ಎ>–ಇ ಈ ವ್ಯತ್ಯಾಸ ಮೊದಲು ನಡೆಯಿತೆಂಬುದನ್ನೂ, ಅದಕ್ಕೆ ವಿಪರ್ಯಯವಾಗಿ ಆಮೇಲೆ –ಇ>_ಎ ಈ ವ್ಯತ್ಯಾಸ ನಡೆಯಿತೆಂಬುದನ್ನೂ ಸೂಚಿಸುತ್ತದೆ.

ಸ್ವನ ವ್ಯತ್ಯಾಸಗಳ ವಿಪರ್ಯಯ ಸಾಧ್ಯತೆ (Reciprocality of sound change) ಭಾಷಾವಿಜ್ಞಾನ ಕ್ಷೇತ್ರದಲ್ಲಿ ರೂಢವಾಗಬೇಕಾಗಿರುವ ತತ್ವವಾಗಿದೆ. ಅದಕ್ಕೆ ದೊರಕುವ ಹಲವು ಉದಾಹರಣೆಗಳಲ್ಲಿ ದಾವಣಗೆರೆ ಉಪ ಭಾಷೆಯೂ ಒಂದು.

ನಾಟ್ಯೋತ್ಸವ: ಒಂದು ಮೆಚ್ಚುಗೆ

ಶ್ಯಾಮಸುಂದರ ಕೋಚಿ

ದಕ್ಷಿಣ ಕನ್ನಡ ಜಿಲ್ಲೆಯ ಕಡಲ ತೀರದ ಕನ್ನಡ ಕವಿಗಳಲ್ಲಿ ಗೋವಿಂದ ಪೈ ಅವರ ಅನಂತರ ಕೇಳಿ ಬರುವ ಇರ್ವರು ಮಹತ್ವದ ಕವಿಗಳ ಹೆಸರುಗಳೆಂದರೆ– ಪೇಜಾವರ ಸದಾಶಿವರಾಯರದು ಹಾಗೂ ಕಡೆಂಗೋಡ್ಲು ಶಂಕರಭಟ್ಟರದು. ಸದಾಶಿವರಾಯರ ಅಕಾಲ ಮರಣದಿಂದ ಅವರ ಒಂದೆ ಕವನ ಸಂಗ್ರಹ 'ವರುಣ' ನಮಗಿಂದು ಕಾಣಸಿಗುವುದಾದರೂ ಅವರ ಕಾವ್ಯ ಸಿದ್ಧಿಯನ್ನು ಪ್ರಕಟಗೊಳಿಸುವ ಕೆಲವು ಮಹತ್ವದ ಕವನಗಳು ಅದರಲ್ಲಿ ದೊರೆಯುವುದನ್ನು ಗಮನಿಸಬಹುದಾಗಿದೆ. ಮಾತ್ರವಲ್ಲದೇ ಮುಂದಿನ ಹೊಸಕಾವ್ಯ ಮಾರ್ಗದ ಸೂಚನೆಯ ಸ್ಪಷ್ಟ ಲಕ್ಷಣಗಳು ಈ ಸಂಗ್ರಹದ ಕೆಲವು ಕವನಗಳಲ್ಲಿರುವುದೊಂದು ವಿಶೇಷ. ಇಡೀ ಸಂಗ್ರಹದ ಇತರ ಕವನಗಳಿಂದ ಬೇರ್ಪಟ್ಟು ಶುದ್ಧ ನವ್ಯಪ್ರಜ್ಞೆಯ ಹಿನ್ನೆಲೆಯಲ್ಲಿ ರಚಿತವಾದ 'ನಾಟ್ಯೋತ್ಸವ' ಹಾಗೂ 'ವರುಣ' ಎಂಬೆರಡು ಕವನಗಳು ಈ ಮಾತಿಗೆ ನಿದರ್ಶನ ವಾಗಿವೆ.

ಇಟಲಿಯ ನೃತ್ಯಮಂದಿರವೊಂದರ ಅನುಭವದ ಸ್ಫೂರ್ತಿಯಿಂದ ಮೂಡಿ ಬಂದ ಕವನ 'ನಾಟ್ಯೋತ್ಸವ'. ನೃತ್ಯಮಂದಿರದ ಪರಿಸರದ ವಿವಿಧ ಚಟುವಟಿಕೆ, ಅಲ್ಲಿಯ ಗಂಡು-ಹೆಣ್ಣುಗಳ ಸ್ವೇಚ್ಛಾವಿಹಾರಗಳ ವರ್ಣನೆಯೊಂದಿಗೆ ಒಂದು ಹೊಸ ವಿಶ್ವವನ್ನೇ ಈ ಕವನ ಪ್ರದರ್ಶಿಸುತ್ತದೆ.

> **'ಲೊರೆಂಜೊ ಇಲ್ ಮನ್ನಿಫಿಕೊ**
> **ಹಾಡನರ್ಪಿಸಿಹೆನು ತಕೊ !'**

ಎಂದು ಲೊರೆಂಜೊನ ಸಿದ್ಧಾಂತವನ್ನು ಒಪ್ಪಿಕೊಳ್ಳುವುದರ ಮೂಲ ಕವನ ಪ್ರಾರಂಭವಾಗಿ

> **'ಇಂದಿನೆಮ್ಮ ಉತ್ಸವದಲಿ**
> **ಯೌವನದೀ ಸಂಭ್ರಮದಲಿ**
> **ಹರಯವಿದರ ಯಾಗದಲ್ಲಿ**
> **ಜೀವಿತಗಳ ಭೋಗದಲ್ಲಿ**
> **ಗುರುವೆ ನಿನಗೆ ಅಗ್ರಪೀಠ**
> **ಕಲಿತೆವಿಂದು ನಿನ್ನ ಪಾಠ !'**

ಎಂಬ ಮಾತುಗಳಲ್ಲಿ ಈ ನಂಬಿಕೆ ಗಟ್ಟಿಗೊಳ್ಳುತ್ತದೆ. ಲೊರೆಂಜೊ ಇಟಲಿಯ ಬಹು ದೊಡ್ಡ ಕಲಾವಿದ, ತತ್ವಜ್ಞಾನಿ. ಜೀವನ ಕ್ಷಣಿಕ ನಾಳೆ ಎನ್ನುವುದು ಇದೆಯೊ ಇಲ್ಲವೊ ಬಲ್ಲವರಿಲ್ಲ. ಆದ್ದರಿಂದ ಅನುಭವಿಸುವ ಸುಖೋಪಭೋಗವನ್ನೆಲ್ಲ ಇಂದೇ ಅನುಭವಿಸಿ. ಸೃಷ್ಟಿಯ ಪ್ರತಿಯೊಂದು ವಸ್ತುಗಳು ನಮ್ಮ ಸುಖ-ಸಂತೋಷಕ್ಕಾಗಿಯೇ ಇವೆ. ಆದುದರಿಂದ

'Boys and girls enjoy today
Not ye know about tomorrow'

ಅನುಭವಿಸಿ ಸಂತೋಷಪಡಿ ಎಂಬ (ಚಾರ್ವಾಕ) ತತ್ವದವ. ಬದುಕಿನ ಬಗೆಗೆ ಲೊರೆಂಜೊನಿಗೆ ಇದ್ದ ಧೋರಣೆಯೇ ನಾಟ್ಯೋತ್ಸವದ ಒಟ್ಟು ಧೋರಣೆಯಾಗಿದೆ. ಅದನ್ನೇ ಕವಿ

'ತೇಲಿ ಬರುವ ಜಾಸ್ ಗಾನ
ನಮ್ಮ ಕುಣಿತಕಲ್ಲವೇನ !
ಅದೊ ದ್ರಾಕ್ಷೆರಸದ ಪಾನ-
ನಮ್ಮ ಕುಡಿತಕಲ್ಲವೇನ !'

ಎಂಬ ಮಾತಿನಲ್ಲಿ ಲೊರೆಂಜೊನ ತತ್ವವನ್ನೇ ಪ್ರತಿಪಾದಿಸಿದ್ದಾನೆ. ಮುಂದಿನ ಸಾಲುಗಳಲ್ಲಿ ನೃತ್ಯಮಂದಿರದ ಪ್ರತಿಯೊಂದು ಚಟುವಟಿಕೆಯ ವಿವರವನ್ನು ಎಳೆ ಎಳೆಯಾಗಿ ಸುರುಳಿ ಬಿಚ್ಚುತ್ತ ಹೋಗುತ್ತದೆ ಕವನ!

'ವೆನೇಶ್ಶಿಯದ ಕಡೆದ ಗಾಜು
ಸಾರ್ಡೀನಿಯದ ಸುರೆಯ ಮೋಜು
    ಮುತ್ತಿರುವರೆ ಕತ್ತಲು
ಹಾಡಿನೊಡನೆ ಮೂಡಿ ಬರುವ
ಬೇರೆ ನಾಡ ಕನಸ ತರುವ
    ಸೌರಭದಲಿ ಎತ್ತಲು ;
ಯೌವನವನು ಸೂಸು ಆರುವ
ಬಯಕೆಯನ್ನು ಬೀಸುತಿರುವ
ಸುಂದರಿಯರು ಸುತ್ತಲು !'

ಎಂಬಲ್ಲಿ – ನಾಟ್ಯಮಂದಿರವೊಂದರ ತೀರಪರಿಚಿತ ಪರಿಸರ ನಿರ್ಮಾಣವಾಗುತ್ತದೆ. ವೆನೇಶ್ಶಿಯದ ಕಡೆದ ಗಾಜಿನಲ್ಲಿ ಸಾರ್ಡೀನಿಯಂದ ಸುರೆ ಹೀರುವಾಗ, ಕತ್ತಲೆಯಲ್ಲಿ ಸುತ್ತುವರಿದು ಮುತ್ತಿ ಬಯಕೆಯ ಬಲೆಯನ್ನು ಬೀಸುವ ಸುಂದರಿಯರನ್ನು ಕಂಡಾಗ ಬೇರೊಂದು ಪ್ರಪಂಚದ (ನಾಡ) ಕನಸು ತೇಲಿ ಬರುತ್ತದೆ. ಹೀಗೆ ನಾಟ್ಯಮಂದಿರವೊಂದರ ತೀರ ಪರಿಚಿತ ಪರಿಸರವನ್ನು ನಿರ್ಮಾಣ ಮಾಡಿದ ಕವಿ ಮುಂದೆ ಹೆಣ್ಣುಗಳ ಅಭೀಪ್ಸೆಯ ವಿವಿಧ ಬಗೆಯನ್ನು ಕುರಿತು

'ಮಿಂಚುತಿರುವ ರೇಷ್ಮೆಯಲ್ಲಿ
ಅರ್ಧಮುಚ್ಚಿ ಅರ್ಧಬಿಚ್ಚಿ
ಜಘನ ಧ್ವಜವ ಗಗನದಲ್ಲಿ
ವಿಜಯದಾಸೆಯಿಂದ ಚುಚ್ಚಿ
ಗಂಡಿಗಾಗಿ ಕಾದು ತಿರುವ
ಹಿಂಡು ಎದುರಿದೆ !'

ಎಂದು ಕಣ್ಕಟ್ಟುವ ಬಗೆಯಲ್ಲಿ ಚಿತ್ರಿಸುತ್ತಾನೆ. ಮೇಲಿನ ಸಾಲುಗಳನ್ನು ಓದಿದಾಗ ಕಣ್ಣೆದುರು ನಾಟ್ಯ ಮಂದಿರದೊಳಗಿನ ಚಿತ್ರ ತಾನೇ ತಾನಾಗಿ ಮೂಡಿ ಬರುತ್ತದೆ.

ಹೀಗೆ ಸೇರಿರುವ ಈ ಗುಂಪಿಗೆ ತಮ್ಮ ಸುತ್ತಲಿನ ಬಾಹ್ಯ ಪ್ರಪಂಚದ ಪರಿವೆಯೇ ಇಲ್ಲ. ಮೈಮೇಲಿನ ಉಡುಪು ಕುರಿತು ಲಜ್ಜಾಭಿಮಾನವಿಲ್ಲ. ಅವರ ಕಣ್ಣೆದುರು ಕಂಡು ಕುಣಿಯುತ್ತಿರುವುದು ಯೌವನ ಒಂದೆ ! ಯೌವನದ ಸುಖೋಪಭೋಗದ ಉತ್ಕಟೇಚ್ಛೆಯಿಂದ ಹೆಣ್ಣುಗಳ ಒಂದು ಹಿಂಡೇ ಗಂಡಿಗಾಗಿ ಕಾಯುತ್ತಿದೆ. ಈಗಾಗಲೇ ಈ ಯೌವನದ ಸವಿಯನ್ನು ಸವಿದ ಸುಖದ ನೆನಪು ಕೆದರಿ ಕಾಯದಲ್ಲಿ ತೀವ್ರವಾದ ಕಾಮ ಕದನದಿಚ್ಛೆಯನ್ನುಂಟು ಮಾಡಿದೆ. ಆದರೆ ಅದು ತೃಪ್ತಗೊಳ್ಳದೇ ಹೋದಾಗ ಉನ್ಮಾದದ ನೂರು ಹುಚ್ಚು ನಗುವಿನ ಅಲೆಗಳು ಸಿಗರೇಟಿನ ಹೊಗೆಯಂತೆ ಸುರಳಿ ಸುರಳಿಯಾಗಿ ತೇಲಿ ಬರುತ್ತವೆ. ಇಲ್ಲಿ ಉನ್ಮತ್ತರಾದ ಕಾಮಿಗಳ ಚಿತ್ರಣ ಕಣ್ಕಟ್ಟುತ್ತದೆ. ಹೀಗೆ ಈ ಹೆಣ್ಣುಗಳು ತಮ್ಮ ಕಾಮ ಬಯಕೆಯನ್ನು ತೃಪ್ತಿ ಪಡಿಸಬಲ್ಲ ಗಂಡು ಮೀನುಗಳಿಗಾಗಿ ಧೀವರಿಯರಂತೆ ಬಲೆ ಬೀಸಿ ಕಾಯ್ದುಕೊಂಡಿದ್ದರೆ, ಅತ್ತಲೊ...ಆ ಗಂಡು ಮೀನುಗಳಾದರೂ ತಮಗೆ ಬೇಕಾದ ಮತ್ಸ್ಯೆಯರನ್ನು ಗಂಣಿಸಿ, ಎಣಿಸಿ, ಕುಣಿಸಿ ಆಯ್ದುಕೊಳ್ಳುವ ಹೊಂಚಿನ ತವಕದಲ್ಲಿವೆ. ಇಲ್ಲಿ ಕವಿ ಬಳಸಿದ 'ಗುಣಿಸಿ', 'ಎಣಿಸಿ', 'ಕುಣಿಸಿ' ಎನ್ನುವ ಪದ ಪ್ರಯೋಗಗಳನ್ನು ಗಮನಿಸಬೇಕು. ಈ ಹೆಣ್ಣು–ಗಂಡುಗಳಲ್ಲಿಯ ವ್ಯಾಪಾರೀ ಮನೋಭಾವದ, ಕೃತಕ, ಅಸಾಧುವಾದ ಬಯಕೆಯನ್ನು ಈ ಪದಗಳು ಚನ್ನಾಗಿ ಪ್ರಕಟಪಡಿಸುತ್ತವೆ. ಹೀಗೆ ಕವಿ ನೃತ್ಯ ಮಂದಿರದ ಪ್ರತಿಯೊಂದು ವ್ಯಾಪಾರವನ್ನೂ ಎಳೆ ಎಳೆಯಾಗಿ ಬಿಚಿತೋರುತ್ತ ಅದನ್ನು ಸಮರ್ಥಿಸುವ ಸಿದ್ಧಾಂತದ ಹಿನ್ನೆಲೆಯನ್ನು ಪುನಃ ಸ್ಥಾಪಿಸತೊಡಗುತ್ತಾನೆ.

'ಜೀವನಕ್ಕೆ ಎರಡು ಮುಖ–
ಒಂದು ಸುಖ ಒಂದು ದುಃಖ ;
ನಾಳಿನರಿವು ಯಾಕೆ ಸಖಾ ?
ಇಂದಿಗಿಹುದು ತುಂಬ ಸುಖ !'

ಎನ್ನುವಲ್ಲಿ ಮತ್ತೆ ಕವಿಯ ಧೋರಣೆ ಸಮರ್ಥನೆ ಗೊಳ್ಳುತ್ತದೆ.

ಹೀಗೆ ಹೆಣ್ಣು-ಗಂಡುಗಳು ತಮ್ಮ ಜೋಡಿಯನ್ನು ಆಯ್ದುಕೊಳ್ಳುವಷ್ಟ ರಲ್ಲಿಯೇ ನಾಟ್ಯಮಂದಿರದ ದೀಪಗಳು ಕಳೆದು ಸುತ್ತಲೂ ಕುರುಡು ನೀಲ ಬೆಳಕು ಆವರಿಸುತ್ತದೆ. ಆ ಮಂದ ಬೆಳಕಲ್ಲಿ ಗಂಡು-ಹೆಣ್ಣುಗಳ ನೃತ್ಯ ಸಾಗುತ್ತದೆ.

'ನೋಡು ಗಾನವೇರು ಆಹುದು !
ದೀಪವೆಲ್ಲ ಆರುತಿಹುದು !
ಕುರುಡು ನೀಲ ಬೆಳಕಿನಲ್ಲಿ
ಕೊಳ್ಳೊ ಅವಳ ಬಾಹುಗಳಲಿ ?

ಎಂದು ಬಳುಕುತ್ತಿರುವ ಹೆಣ್ಣನ್ನು ಗಂಡು ಬಾಹುಗಳಲ್ಲಿ ಸೆಳೆದುಕೊಂಡು ಒಟ್ಟಿನಲ್ಲಿ ಗುಟ್ಟನಾಡಲೊ ಎಂಬಂತೆ ಅವಳ ಹೆಗಲ ಮೇಲೆ ಮುಖ ಇರಿಸುತ್ತಾನೆ. ಬಳ್ಳಿಯಂ ತಿರುವ ಕಟಿ ಬಿದ್ದು ಹೋಗುವುದೇನೊ ಎಂದು ಆಸರೆಯಾಗಿ ತನ್ನ ತೋಳನ್ನು ಬಳಸುತ್ತಾನೆ. ಈ ಸ್ಥಿತಿಯಲ್ಲಿ ಎರಡೂ ಜೀವಿಗಳು ಮಧುರವಾದ ಅದರ ಜೀವರಸ ವನ್ನು ಪಾನಮಾಡತೊಡಗುತ್ತವೆ ಮಂತ್ರರಾಗಿ !

ಇಲ್ಲಿ ಬರುವ 'ಕೊಳ್ಳು' ಮುಂತಾದ ಪದಗಳು ಹೇಗೆ ವಾಚ್ಯವನ್ನು ನೀಗಿ ವ್ಯಂಜಕದತ್ತ ಹೊರಳಿ ಕಾವ್ಯದ ಅರ್ಥವನ್ನು ಧ್ವನ್ಯಾತ್ಮಕವಾಗಿ ಹಿಗ್ಗಲಿಸುತ್ತವೆ ಎಂಬುದನ್ನು ಗಮನಿಸಬೇಕು. 'ಕೊಳ್ಳು' ಎನ್ನುವುದಕ್ಕೆ 'ಬಳಸು' 'ಸೆಳೆ' ಎಂಬರ್ಥ ದೊಂದಿಗೇ 'To Purchase' ಎಂಬರ್ಥವೂ ಮೂಡಿ ಬಂದು ಕವಿತೆ ಧ್ವನಿ ಶಕ್ತಿ ಯನ್ನು ಪಡೆದುಕೊಂಡು ಅರ್ಥಪೂರ್ಣವಾಗುತ್ತದೆ.

ಮುಂಬರುವ ಸಾಲುಗಳು ಕವಿಯ ನಿರ್ಧಾರವನ್ನು ಧೋರಣೆಯನ್ನು ಪರಿ ಣಾಮಕಾರಿಯಾಗಿ ಪ್ರಕಟಿಸುತ್ತವೆ.

'ಒಂದು ರಾತ್ರಿ ಒಮ್ಮೆ ಸೊಕ್ಕಿ
ಶಾಸ್ತ್ರಗಳನ ದೂಡ್ಯೇನ ।
ಇಂದು ರಾತ್ರಿ ಬಂದ ಹಾಗೆ
ನನ್ನ ಬಾಳ ಮಾಡ್ಯೇನ !'

ಎನ್ನುವಲ್ಲಿ ಮುಕ್ತತೆಯ ಸ್ವಾತಂತ್ರ್ಯ, ಉಲ್ಲಾಸ, ಸಂತೋಷಗಳನ್ನು ಕಾಣು ವುದರ ಜೊತೆಗೆ ಅದುವರೆಗೂ ಸುಪ್ತವಾಗಿದ್ದ ಎಲ್ಲ ಅದಮ್ಯ ಕಾಮನೆಗಳೂ ಮಹಾ ಪೂರದಂತೆ ಬರುವುದನ್ನು ಕಾಣಬಹುದು.

'ಪೃಥಿವಿಯಿದರ ಮಡಿಲನೊಕ್ಕಿ
ಸಾರವನ್ನು ನೋಡೇನ !
ಮಿಂಚಿನೊಡನೆ ಮಿಂಚುತೊಮ್ಮೆ
ಕತ್ತಲೆಯನೆ ಕೂಡೇನ !'

ಇಲ್ಲಿ 'ಕುಡಿತ' 'ಕುಣಿತ' 'ಕಾಮಿನಿ' ಯರನ್ನು 'ಪೃಥ್ವಿ'ಯ ರೂಪದಲ್ಲಿ ಕಾಣುವ, ಅದರ ಮಡಿಲನ್ನು ಹೊಕ್ಕು ನೋಡುವ ಅನನ್ಯವಾದ ಮಾರ್ಮಿಕ ಬಗೆಯಲ್ಲಿ ಬದು

ಕಿನ ಸವಾಲನ್ನು ಸ್ವೀಕರಿಸಿದ ಅರ್ಥವಂತಿಕೆಯ ಪ್ರಯತ್ನವನ್ನು ಕಾಣುತ್ತೇವೆ. 'ಮಿಂಚಿನೊಡನೆ ಮಿಂಚುತೊಮ್ಮೆ ಕತ್ತಲೆಯನೆ ಕೂಡೇನ' ಎಂಬ ಮಾತಿನಲ್ಲಿ ಸಾಗರದಿಂದ ಸಿಡಿದ ಸೀರ್ಪಣಿಯೊಂದು ಪುನಃ ಸಾಗರಕ್ಕೇ ಸೇರುವಂತೆ, ಬದುಕಿನಿಂದ ಪ್ರೇರಿತವಾಗಿ ಮೂಡಿ ಬಂದ ಎಲ್ಲ ಬಗೆಯ ಸಿದ್ಧಾಂತಗಳೂ ಪುನಃ ಬದುಕಿನಲ್ಲಿಯೇ ಲೀನವಾಗುತ್ತವೆ ಎಂಬ ಸತ್ಯದ ದರ್ಶನ ಕಂಡು ಕೊಳ್ಳುವಲ್ಲಿ ಕವನ ಮುಕ್ತಾಯವಾಗುತ್ತದೆ.

ಕವನದ ಬಾಹ್ಯ ಸ್ವರೂಪವಾದ ಛಂದೋಪ್ರಕಾರ ಕೂಡ ಮೂರು ನಾಲ್ಕು ಮಾತ್ರೆಗಳ ಪುಟ್ಟ ಪುಟ್ಟ ಪದಗಳಿಂದ ಕೂಡಿದ ಅಸಮ ಪಾದಗಳಿಂದ ಕೂಡಿ ನೃತ್ಯದ ತಾಳಲಯದ ಬಗೆಯಲ್ಲಿಯೇ ನಡೆದು ನೃತ್ಯಸ್ವರೂಪ ಆದರ ಝೇಂಕಾರ ಕಂಡು ಕೇಳಿ ಅನುಭವಿಸುವಂತೆ ಮಾಡುವಲ್ಲಿ ಯಶಸ್ವಿಯಾಗುತ್ತದೆ.

ಹೀಗೆ ಎಲ್ಲಂದದಿಂದಲೂ ಅತ್ಯುತ್ತಮ ಕವನವಾದ ನಾಟ್ಯೋತ್ಸವ ಕನ್ನಡ ಕಾವ್ಯದಲ್ಲಿ ಬಹುಕಾಲ ಉಳಿಯಬಲ್ಲುದು.

ಅಂಬಿಗರ ಚೌಡಯ್ಯನ ವಚನಗಳಲ್ಲಿ ಪರಂಪರೆ ಮತ್ತು ಪ್ರಯೋಗತತ್ತ್ವ

ಬಸವರಾಜ ಸಬರದ

ಹನ್ನೆರಡನೇ ಶತಮಾನ ಧಾರ್ಮಿಕವಾಗಿ, ಸಾಮಾಜಿಕವಾಗಿ, ಸಾಹಿತ್ಯಕವಾಗಿ ಹೊಸ ವ್ಯಾಖ್ಯಾನ ಬರೆದ ಕಾಲ. ಕನ್ನಡದಲ್ಲಿ ಬದುಕಿಗೆ ನೇರವಾಗಿ ಪ್ರತಿಸ್ಪಂದಿಸಿರುವ ಸಾಹಿತ್ಯವೆಂದರೆ ವಚನ ಸಾಹಿತ್ಯ. ಸಾಹಿತ್ಯ ಕೇವಲ ಪಂಡಿತರ ಗುತ್ತಿಗೆಯಾಗಿ, ರಾಜಾಶ್ರಯದ ಪಂಜರದಲ್ಲಿ ಸಿಕ್ಕಿಕೊಂಡಾಗ ಬಡವರ ಗುಡಿಸಲಿಗೆ ಅದನ್ನು ತಂದು ಮುಟ್ಟಿಸಿದವರು ವಚನಕಾರರು. ಪಂಡಿತರ ಸೊತ್ತಾಗಿದ್ದ ಸಾಹಿತ್ಯ ಪಾಮರರನ್ನು ಮುಟ್ಟಿದ್ದೂ ಕೂಡ ಅದೇ ಸಂದರ್ಭದಲ್ಲಿ. ಧರ್ಮ-ದೇವರುಗಳ ಹೆಸರಿನಲ್ಲಿ ಸುಲಿಗೆ ನಡೆಯುತ್ತಿದ್ದಾಗ ಅಂದಿನ ಒಟ್ಟು ವ್ಯವಸ್ಥೆಯ ವಿರುದ್ಧ ಬಂಡೆದ್ದವರು ವಚನಕಾರರು. ಧಾರ್ಮಿಕ ರಂಗದಿಂದ ಪ್ರವೇಶಿಸಿದ ಅವರು ಸಮಾಜಕ್ಕೂ, ಸಾಹಿತ್ಯಕ್ಕೂ ತಮ್ಮದೇ ಆದ ವಿಶಿಷ್ಟ ಕಾಣಿಕೆ ಕೊಟ್ಟರು. ಜನಸಾಮಾನ್ಯರು ಸಾಹಿತ್ಯ ರಚಿಸಿ, ಸಮಾನ ವೇದಿಕೆಯಲ್ಲಿ ನಿಂತೂ ಸಮಾಜದ ಬಗೆಗೆ ಚಿಂತನೆ ಮಾಡಿದ್ದು ಚರಿತ್ರೆಯಲ್ಲಿ ಇದೇ ಮೊದಲು. ಬದುಕನ್ನೇ ಬರಹವಾಗಿಸಿದ, ನುಡಿದಂತೆ ನಡೆದ ವಿಶಿಷ್ಟಗುಣ ವಚನಕಾರರದು.

ವಚನಕಾರರು ಪಂಡಿತರಲ್ಲದಿದ್ದರೂ ಸಮಾಜಕ್ಕೆ ಹೊಸ ಆಯಾಮ ತಂದುಕೊಟ್ಟವರು. ಜಾತಿ-ಭೇದವನ್ನಳಿಸಿ ಮಾನವೀಯತೆಯನ್ನು ಬೆಳೆಸಿದವರು. ಶತ-ಶತಮಾನಗಳಿಂದ ಜಂಗು-ಹತ್ತಿದ ವ್ಯವಸ್ಥೆಗೆ ಸಾಣೆಯಾಗಿ ನಿಂತವರು ತಮ್ಮ ಲೋಪದೋಷಗಳನ್ನು ತಿದ್ದಿಕೊಳ್ಳುವದರ ಜತೆಗೆ ಸಕಲರಿಗೂ ಇಹದ ಪ್ರಾಮುಖ್ಯತೆಯನ್ನು ಎತ್ತಿ ಹೇಳಿ ಕಾಯಕದಲ್ಲೇ ಕೈಲಾಸ ತೋರಿಸಿದವರು. ಬಡವರ ಬಾಯಿಯಾಗಿ, ನೊಂದವರ ಕೂಗಾಗಿ ವಚನಕಾರರು ಧ್ವನಿಸಿದ್ದೇನೊ ನಿಜ. ಆದರೆ ಅವರ ಹೋರಾಟದ ಅರ್ಥ ಧಾರ್ಮಿಕ ಸುಧಾರಣೆಯಾಗಿತ್ತೇ ವಿನಃ ಅಂದಿನ ಆರ್ಥಿಕ ವ್ಯವಸ್ಥೆಯನ್ನು ಬುಡಮೇಲು ಮಾಡುವದಾಗಿರಲಿಲ್ಲ. ಧೂಳಿ, ಕಾಳಿ, ಮಾಕಾಳಿ ಮೊದಲಾದ ಹೆಸರಿನ ದೇವರುಗಳನ್ನು ಅಲ್ಲಗಳದದ್ದೇನೊ ನಿಜ, ಆದರೆ ಇವೆಲ್ಲವುಗಳ ಬದಲಾಗಿ ಇಷ್ಟಲಿಂಗವೆಂಬ ಬೇರೊಂದು ಕುರುಹನ್ನು ಕಡ್ಡಾಯ ಮಾಡಿದ್ದು ಈ ಹಿನ್ನೆಲೆಯಲ್ಲಿ ಗಮನಿಸಬೇಕಾದ ಅಂಶ.

ಅಂಬಿಗರ ಚೌಡಯ್ಯ ಹನ್ನೆರಡನೇ ಶತಮಾನದ ಪ್ರಮುಖ ವಚನಕಾರರಲ್ಲೊಬ್ಬ. ವಚನಕಾರರ ಧ್ಯೇಯ-ಧೋರಣೆ ಒಂದೇಯಾಗಿದ್ದರೂ ಹಲವಾರು ವರ್ಗಗಳಿಂದ ಬಂದ ವಚನಕಾರರ ಅಭಿವ್ಯಕ್ತಿಯಲ್ಲಿ ವ್ಯತ್ಯಾಸ ಕಂಡುಬಗುವದು ಸಹಜ : ಎಲ್ಲ ವಚನಕಾರರಿಗೂ ತಮ್ಮ ಇಷ್ಟದೈವವೇ ತಮ್ಮ ವಚನಾಂಕಿತವಾದರೆ, ಅಂಬಿಗರ ಚೌಡಯ್ಯನಿಗೆ ಆತನ ಹೆಸರೇ ವಚನಾಂಕಿತವಾಗಿದೆ. ಬಸವಣ್ಣನದು ಸೌಮ್ಯ ಸ್ವಭಾವವಾದರೆ ಚೌಡಯ್ಯನದು ಉಗ್ರಪ್ರತಿಭಟನೆ ಕಂಡದ್ದನ್ನು ಕಂಡ ಹಾಗೆ ನಿರ್ಭಿಡೆಯಿಂದ ನುಡಿಯುವದು ಈತನ ವಚನಗಳ ವೈಶಿಷ್ಟ್ಯ. ಎಂಥ ದಪ್ಪ ತೊಗಲಿನವರನ್ನು ಈತನ ವಚನಗಳು ಚುಚ್ಚದೇ ಬಿಡವು. ತನ್ನ ವಿಚಾರಗಳನ್ನು ಪ್ರತಿಪಾದಿಸುವಾಗ ಚೌಡಯ್ಯನಲ್ಲಿ ಯಾವುದೇ ಭಾಷಾ ಮಡಿವಂತಿಕೆ ಕಂಡುಬರುವದಿಲ್ಲ ತಾನು-ತನ್ನ ಸಮಾಜ ಅನುಭವಿಸುತ್ತಿರುವ ನೋವು-ಕಷ್ಟಗಳು ಮಾತಾಗಿ ಧ್ವನಿಯಾಗಿ ಈತನ ವಚನಗಳಲ್ಲಿ ಹೊರಹೊಮ್ಮಿವೆ. ಹೇಳುವ ಮಾತು ಪರಿಣಾಮಕಾರಿಯಾಗಿ ತಲುಪಲು ಚೌಡಯ್ಯನು ಬಳಸಿಕೊಂಡ ಆಡುನುಡಿ, ಅಲಂಕಾರ, ಪ್ರತಿಮೆಗಳು ಗಮನಾರ್ಹವಾಗಿವೆ. ಪ್ರತಿಯೊಂದನ್ನೂ ಪ್ರಶ್ನಿಸಿಯೇ ಸ್ವಿಕರಿಸುವ ಗುಣ ಚೌಡಯ್ಯನವರಲ್ಲಿದ್ದುದರಿಂದ ಯಾರ ಭಿಡೆಗೂ ಅವರು ಒಳಗಾಗದವರಾದ್ದರಿಂದ ಇಂದು ಚೌಡಯ್ಯ ನಮಗೆ ಅತ್ಯಂತ ಪ್ರಾಮುಖ್ಯರೆನಿಸುತ್ತಾರೆ.

ವಚನಕಾರರಿಗೊಂದು ಪರಂಪರೆಯಿದೆ. ಅಂಬಿಗರ ಚೌಡಯ್ಯನ ವಚನಗಳಲ್ಲಿಯೂ ಈ ಅಂಶವನ್ನು ಕಾಣಬಹುದು. ಮುಂದಿನ ಭವಿಷ್ಯಕ್ಕೆ ಹಿಂದಿನ ಪರಂಪರೆ ಅಗತ್ಯ. ಒಂದು ಪರಂಪರೆಯನ್ನು ಹೊಂದಿದ ವಚನಕಾರರು ಸಂಪ್ರದಾಯವನ್ನು ತಿರಸ್ಕರಿಸಿದ್ದು ಬಹು ಮುಖ್ಯವಾದದ್ದು. ಪರಂಪರೆ-ಸಂಪ್ರದಾಯದಿಂದ ಬಹಳ ದೂರ. ಅವೆರಡಕ್ಕೂ ಬಹಳ ವ್ಯತ್ಯಾಸವಿದೆ. ಒಂದು ಕಾಲದ ಮೌಲ್ಯಗಳು ಎಲ್ಲಾ ಕಾಲಕ್ಕೂ ಸಮಕಾಲೀನವಾಗಿ ಮುಂದುವರೆದು ಸರ್ವಕಾಲಿಕವೆನ್ನಿಸಿಕೊಂಡರೆ ಅದು ಪರಂಪರೆ. ಮೌಲ್ಯಗಳು ತಮ್ಮ ಕಾಲದಲ್ಲೇ ಅಸ್ತಿತ್ವ ಕಳೆದುಕೊಂಡು ನಿಂತರೆ ಅದು ಸಂಪ್ರದಾಯ. ಪರಂಪರೆ ಯಾವಾಗಲೂ ಸಂಪ್ರದಾಯದ ಪರೆ ಕಳಚಿ ಹೊರಬರುತ್ತಿದೆ. ಸಂಪ್ರದಾಯ ನಿಂತು-ನಾರುವ ಹೊಲಸು ನೀರಾದರೆ, ಪರಂಪರೆ ಕೊಚ್ಚಿಕೊಂಡು ನಿತ್ಯವೂ ಹರಿವ ಹೊಳೆ. ಭೂತ-ಭವಿಷತ್ತುಗಳನ್ನು ಕಚ್ಚಿಗೊಂಡು ನಿರಂತರವಾಗಿರುವದೇ ಪರಂಪರೆ. ಇಂತಹ ಪರಂಪರೆಯನ್ನು ಪ್ರತಿಪಾದಿಸುವ ಹಲವಾರು ವಿಚಾರಗಳು ಚೌಡಯ್ಯನವರ ವಚನಗಳಲ್ಲಿವೆ.

ಪರಂಪರೆ :

ಗುರು-ಲಿಂಗ-ಜಂಗಮ, ದೇವರು, ಭಕ್ತಿ, ಪೂಜೆ, ಆಧ್ಯಾತ್ಮ, ಅರುಹು–ಕುರುಹು, ಗುರು-ಶಿಷ್ಯ ಸಂಬಂಧ-ಇಂತಹ ಹಲವಾರು ಪರಂಪರಾಗತ ವಿಚಾರಗಳನ್ನು ಚೌಡಯ್ಯ ತಮ್ಮ ವಚನಗಳಲ್ಲಿ ಪ್ರಸ್ತಾಪಿಸಿದ್ದಾರೆ. ಪರಂಪರಾಗತವಾಗಿ ಬಂದ

ಇಂತಹ ಹಲವಾರು ವಿಚಾರಗಳನ್ನು ಅವರು ಒಪ್ಪಿಕೊಂಡರೂ ಕೂಡ ಅದರಲ್ಲಿ ಚೌಡಯ್ಯನವರ ಸ್ವಂತಿಕೆ, ಹೊಸದೃಷ್ಟಿ ಎದ್ದು ಕಾಣುತ್ತದೆ.

"ಅರ್ಚನೆಯ ಮಾಡುವಲ್ಲಿ ಆವೇಶ ಅರಿತಿರಬೇಕು ; ಪೂಜೆಯ ಮಾಡುವಲ್ಲಿ ಪುಣ್ಯಮೂರ್ತಿಯಾಗಿರಬೇಕು"–ಎಂಬಂತಹ ಪರಂಪರಾಗತ ವಿಚಾರವನ್ನು ತಮ್ಮ ವಚನದಲ್ಲಿ ಸ್ಪಷ್ಟಪಡಿಸಿದ್ದಾರೆ. ಇಷ್ಟಲಿಂಗವೇ ಪರಶಿವನೆಂಬುದನ್ನು ದೃಢವಾಗಿ ನಂಬಿದ್ದಾರೆ. ಭಕ್ತಿಗೆ ಚೌಡಯ್ಯನವರೂ ಹೊರತಾಗಿಲ್ಲವಾದರೂ ತಮ್ಮ ವ್ಯಕ್ತಿತ್ವದ ಬೆಳವಣಿಗೆಯಲ್ಲಿ ಕೆಲ ಹೊಸ ವಿಚಾರಗಳನ್ನವರು ಹೇಳದೇ ಬಿಟ್ಟಿಲ್ಲ.

ಆದಿಶಕ್ತಿವಿಡಿದಾದವರೆಲ್ಲರೂ 'ಜಂಗಮ'ವಲ್ಲವೆನ್ನುವ ಚೌಡಯ್ಯನವರು, ತಾವು ಒಪ್ಪುವ ಜಂಗಮನನ್ನು ಹೀಗೆ ವಿವರಿಸುತ್ತಾರೆ.

"ಜಂಗಮವೆಂದರೆ ನಡೆ-ನುಡಿ ಸಿದ್ಧಿಯಾಗಿರಬೇಕು
ಮೂರು ಮುಖಕ್ಕೆ ಸಿಕ್ಕದೆ, ಆರಡಿಗೆರಡು ಮೈಯಾಗದೆ
ಆ ಗುಣ ತೋರುವುದಕ್ಕೆ ಮೊದಲೆ
ಮೀರಿ ಇರಬೇಕೆಂದ ನಂಬಿಗ ಚೌಡಯ್ಯ"

ಇಂತಹ ಜಂಗಮನಿಗೆ ಚೌಡಯ್ಯನವರು ನಮಿಸುತ್ತಾರೆ. ನಸುಕಿನಲ್ಲೆದ್ದು ಪತ್ರೆ, ಪುಷ್ಪ, ಹಸಿಯ ತೊಪ್ಪಲ ತಂದು ದೇವರ ತಲೆಯ ಮೇಲೊಟ್ಟಿ ಪೂಜೆ ಮಾಡುವ ವಿಧಾನವನ್ನು ಅಲ್ಲಗಳೆದ ಅವರು ತಂದ ತೊಪ್ಪಲನ್ನೇ ಬಿಸಿಮಾಡಿ ಪಶುಪತಿಯೆಂಬ ಜಂಗಮಕ್ಕೆ ನೀಡಿದರೆ, ಆ ಜಂಗಮನಿಗೆ ತೃಪ್ತಿಯಾದರೆ ಅದೇ ಲಿಂಗದ ತೃಪ್ತಿಯೆಂದು ಹೇಳುತ್ತಾ ಪರಂಪರಾಗತವಾಗಿ ಬಂದ ಪೂಜಾ ವಿಧಾನದಲ್ಲಿ ಬದಲಾವಣೆ ಮಾಡಲೆತ್ನಿಸುತ್ತಾರೆ. ನಿರ್ಜೀವ ವಸ್ತುಗಳ ತಲೆಯ ಮೇಲೆ ಹಾಲನೆರೆದು, ಆಹಾರ ಸುರಿಯುವದರಿಂದ ಏನನ್ನೂ ಸಾಧಿಸಿದಂತಾಗದೆಂದು ಹೇಳುತ್ತಾ ಜೀವಂತವಿರುವ ಮನುಷ್ಯ-ಮನುಷ್ಯರಲ್ಲಿಯ ಸಂಬಂಧವನ್ನು ಗಟ್ಟಿಗೊಳಿಸುತ್ತಾರೆ. ಕಣ್ಣಿಗೆ ಕಾಣದ ಮುಕ್ತಿ-ಕೈಲಾಸಗಳಿಗಿಂತ ನಮ್ಮೆದುರಿಗಿರುವ ಬದುಕು ಅತ್ಯಂತ ಮುಖ್ಯವೆಂದವರು ದೃಢಪಡಿಸುತ್ತಾರೆ. ಪರಂಪರಾಗತವಾಗಿ ಬಂದ ವಿಚಾರಗಳಲ್ಲಿ ಹೊಸತನ ತುಂಬಲು ಪ್ರಯತ್ನಿಸುತ್ತಾರೆ.

"ಜಂಗಮನ ಕರೆತಂದು ಮನೆಯಲ್ಲಿ ಕುಳ್ಳಿರಿಸಿ
ಲಿಂಗದ ಮೇಲಣ ಜಪವನೆಣಿಸುವ ಭಕ್ತನ ಬಾಯಲಿ ತೆರವನಿಕ್ಕಲಿ
ಜಂಗಮದ ತೃಪ್ತಿಯನರಿಯದೆ
ಲಿಂಗವಂತನೆಂತಾದನೋ ಮರುಳೆ..."

ಈ ವಚನದಲ್ಲಿ ಬರೀ ವಿಡಂಬನೆಯಷ್ಟೆ ಇಲ್ಲ, ವಿಡಂಬನೆಯೊಂದಿಗೆ ಜೀವಂತ ಜನರ ಬದುಕಿನ ಸಂಬಂಧವಿದೆ. ಮಾನವೀಯತೆಯ ಉತ್ತುಂಗ ಹಂತವಿದೆ. ಲಿಂಗಕ್ಕಿಂತ-

ಜಂಗಮ ಮುಖ್ಯವೆನ್ನುವ ವಿಚಾರ, ಕಣ್ಣಿಗೆ ಕಾಣುವ ಜೀವಂತ ಜನಕ್ಕೆ ಕೊಟ್ಟ ಪ್ರಾಮುಖ್ಯತೆಯಾಗಿದೆ.

ಪರಂಪರಾಗತವಾಗಿ ಬಂದ ಲಿಂಗದ ಕುರುಹನ್ನು ಚೌಡಯ್ಯ ಒಪ್ಪಿಕೊಳ್ಳುತ್ತಾರಾದರೂ, ಲಿಂಗವೆಂಬುದು ಬರೀ ನೇಮದ ಪಂಜರದಲ್ಲಿಲ್ಲ, ಡಾಂಭಿಕಕ್ಕಾಗಿ ಬಳಸುವ ಜಡವಸ್ತುವಲ್ಲವೆಂಬುದನ್ನು ಸ್ಪಷ್ಟಪಡಿಸುತ್ತಾ—

"ನೇಮಸ್ತನೇನು ಬಲ್ಲನಯ್ಯ ಲಿಂಗದ ಕುರುಹ ?
ಸೂಳೆಯ ಮಗನೇನು ಬಲ್ಲನಯ್ಯ-ತಂದೆಯ ಕುರುಹ ?
ಜಂಗಮದ ಅನುವ ತೊತ್ತಿನ ಮಗನೇನು ಬಲ್ಲನಯ್ಯ ?
ಇಂತಪ್ಪ ಅಂಗವೇ-ಲಿಂಗ ಲಿಂಗವೇ ಅಂಗ-
ಲಿಂಗವೇ ಜಂಗಮವು, ಜಂಗಮವೇ ಲಿಂಗವೆಂದರಿಯದವನ
ಭಕ್ತರೆಂದರೆ ಅಘೋರ ನರಕ–ವೆಂದಾತ ನಮ್ಮ ಅಂಬಿಗ ಚೌಡಯ್ಯ"

ಇಲ್ಲಿ ಬಳಸಲ್ಪಟ್ಟಿರುವ 'ಸೂಳೆಯ ಮಗ'ನ ಉದಾಹರಣೆ ಅರ್ಥದ ತೀವ್ರ ಪರಿಣಾಮಕ್ಕಾಗಿ. ಲೋಕಾನುಭವದಲ್ಲೇ ಶಿವಾನುಭವ ಕಾಣುವ ಕಣ್ಣು ಶರಣರಿಗಿತ್ತು. ಅಂತೆಯೇ ಅವರು ಇಹದ ಬದುಕನ್ನು ಮುಂದಿಟ್ಟುಕೊಂಡು ಅದರಲ್ಲಿಯೇ ಪರವನ್ನು ಕಂಡರು. ಶತ-ಶತಮಾನಗಳಿಂದ ನಂಬಿಕೊಂಡು ಬಂದಿದ್ದ ಜನರ ಸ್ವರ್ಗ, ನರಕಗಳ ಕಲ್ಪನೆಯನ್ನು ಕಳೆದೊಗೆದು ಹೊಸದನ್ನೇ ನಿತ್ಯ ಬದುಕಿನಲ್ಲಿ ತೋರಿಸಿದರು. ಜಂಗಮವೇ ಲಿಂಗ, ಲಿಂಗವೇ-ಅಂಗ ಎನ್ನುವ ಈ ನುಡಿಯಲ್ಲಿನ ಅರ್ಥ ತುಂಬಾ ಗಮನಾರ್ಹ. ದೇವ-ಜಂಗಮ-ಲಿಂಗ ಎಲ್ಲವೂ ಅಂಗವೇ ಆದಾಗ ತನ್ನನ್ನು ಬಿಟ್ಟು ಮತ್ತೆ ಬೇರೆ ಕಡೆ ದೇವರಿಗಾಗಿ ಹಂಬಲಿಸುವ ಅಗತ್ಯವೇ ಇಲ್ಲ.

ಮನುಷ್ಯನ ಪ್ರಯತ್ನ, ಹೋರಾಟ, ಸಾಧನೆ—ಇವೇ ದೇವರು ಎಂಬ ಹೊಸ ವ್ಯಾಖ್ಯಾನದೊಂದಿಗೆ ಶರಣರು ಮಾನವೀಯತೆಯನ್ನು, ಬೆಳಗಿದರು, ಮನುಷ್ಯಶಕ್ತಿಗೆ ಮಹತ್ವಕೊಟ್ಟರು. ಕೆಟ್ಟ ಕೆಲಸಗಳನ್ನೆಲ್ಲಾ ಮಾಡಿ ಶಿವನನ್ನು ಧ್ಯಾನಿಸಿದರೆ, ಲಿಂಗವನ್ನು ಪೂಜಿಸಿದರೆ ಎಲ್ಲಾ ಸರಿಹೋಗುವದೆನ್ನುವ ಡಾಂಭಿಕ ಜನರಿಗೆ ಚೌಡಯ್ಯನವರು ತೀವ್ರವಾಗಿ ಖಂಡಿಸಿದ್ದಾರೆ.

'ಜ್ಯೋತಿಯ ನೆನೆದರೆ- ಕತ್ತಲೆ ಹಿಂಗುವದೆ ?
ರಂಭೆಯ ನೆನೆದರೆ- ಕಾಮದ ಕಳವಳ ಹಿಂಗುವದೆ ?
ಮೃಷ್ಟಾನ್ನವ ನೆನೆದರೆ- ಹೊಟ್ಟೆ ತುಂಬುವುದೆ ?'

ಎಂದು ವಿಡಂಬಿಸುತ್ತಾ ಎಂತಹ ವೇಷ ಹಾಕಿದರೂ ಮಾಡಿದ ದೋಷ ಮಾತ್ರ ಹೋಗಲಾರದೆಂದು ಹೇಳುತ್ತಾ, ಇಂತಹವರನ್ನು ಪಡಿಹಾರಿ ಉತ್ತಣ್ಣಗಳ ಪಾದುಕೆಯಿಂದ ಹೊಡೆಯಬೇಕೆನ್ನುತ್ತಾರೆ. ಪೂಜೆಯ ಹಿಂದಿರುವ ಮೌಢ್ಯ ಮತ್ತು

ಮೋಸವನ್ನು ಶರಣರು ಬಯಲಿಗೆಳೆದಿದ್ದಾರೆ. ಆದರೆ ಪರಂಪರಾಗತವಾಗಿ ಬಂದ ಪೂಜೆಯನ್ನವರು ಒಪ್ಪಿಕೊಂಡಿದ್ದಾರೆ.

"ನಾಯಿ ಬಲ್ಲುದೇ- ದೇವರಬೋನವ ?
ದ್ರೋಹಿ ಬಲ್ಲನೇ- ಗುರುಲಿಂಗಜಂಗಮದ ನೆಲೆಯು ?
ಅಜ್ಞಾನಿ ಬಲ್ಲನೇ– ಸುಜ್ಞಾನಿಯ ನೆಲೆಯ ?
ಕುಕ್ಕುರಬಲ್ಲುದೇ- ಸುಭಿಕ್ಷದ ಸವಿಯ ?
ಇಂತಪ್ಪ ಆಚಾರಭ್ರಷ್ಟರ ಕಡೆಗೆ ನೋಡೆಂದಾತ
ನಮ್ಮ ಅಂಬಿಗ ಚೌಡಯ್ಯ ನಿಜಶರಣನು"

ಪರಂಪರಾಗತವಾಗಿ ಬಂದ ಇಂತಹ ಹಲವಾರು ಹೇಳಿಕೆಗಳು, ವಿಚಾರಗಳು, ನುಡಿಮುತ್ತುಗಳು ಚೌಡಯ್ಯನವರ ವಚನಗಳಲ್ಲಿ ಸಿಗುತ್ತವೆ. ಅಂದಿನ ಶರಣರ ನೀತಿ-ನಿಯಮಗಳಿಗೆ ಚೌಡಯ್ಯನವರೂ ಬದ್ಧರಾಗಿದ್ದಾಗ ಪರಂಪರೆಯ ಹಲವು ವಿಚಾರಗಳನ್ನು ಅವರೂ ಒಪ್ಪುತ್ತಾರೆ. ಒಂದು ಸಂಘಟನೆಗೆ ಬದ್ಧರಾದಾಗ ಕೆಲವೊಂದು ವಿಚಾರಗಳನ್ನು ಒಪ್ಪುವದು ಅನಿವಾರ್ಯವಾದರೂ, ವ್ಯಕ್ತಿಗಿರುವ ಸ್ವಂತ ಅಭಿಪ್ರಾಯಗಳನ್ನು ಅಲ್ಲಗಳೆಯಲಿಕ್ಕಾಗುವದಿಲ್ಲ. ವೈಚಾರಿಕವಾಗಿ ವ್ಯಕ್ತಿ ಬೆಳೆಯುತ್ತಾ ಹೋದಂತೆಲ್ಲಾ ಭೂತ, ವರ್ತಮಾನಗಳನ್ನು ಸಂಶಯ ದೃಷ್ಟಿಯಿಂದ ನೋಡುವದು ಸಹಜ.

ಪ್ರಯೋಗ ತತ್ವ

ಪ್ರಾರಂಭದ ತಮ್ಮ ವಚನಗಳಲ್ಲಿ ಪಶುಪತಿ, ಶಿವ ಎಂದು ದೇವರನ್ನು ಬಣ್ಣಿಸಿದ ಚೌಡಯ್ಯನವರು, ವೈಚಾರಿಕವಾಗಿ ಬೆಳೆಯುತ್ತಾ ಹೋದಂತೆಲ್ಲಾ, ಕಣ್ಣಿಗೆ ಕಾಣದ, ಸಂಸಾರದ ಗುರುತೇ ಇಲ್ಲದ ದೇವರಿಗೆ ಹೆಸರೇ ಇಲ್ಲವೆಂದು ಹೇಳುತ್ತಾ ಪರಮಾತ್ಮನ ಬಗೆಗಿದ್ದ ಪೌರಾಣಿಕ ಕಲ್ಪನೆಗಳನ್ನು ಅಲ್ಲಗಳೆಯುತ್ತಾರೆ.

"ಅಸುರರ ಮಾಲೆಗಳಿಲ್ಲ, ತ್ರಿಶೂಲ ಡಮರುಗವಿಲ್ಲ ,
ಬ್ರಹ್ಮಕಪಾಲವಿಲ್ಲ, ಭಸ್ಮಭೂಷಣನಲ್ಲ ;
ವೃಷಭವಾಹನನಲ್ಲ, ಋಷಿಗಳೊಡನೆ ಇದ್ದಾತನಲ್ಲ ;
ಎಸಗುವ ಸಂಸಾರದ ಕುರುಹಿಲ್ಲದಾತಂಗೆ-
ಹೆಸರಾವುದೂ ಇಲ್ಲವೆಂದನಂಬಿಗ ಚೌಡಯ್ಯ"

ಎಂಟುನೂರು 'ವರ್ಷಗಳ ಹಿಂದೆಯೇ ಚೌಡಯ್ಯನಂತಹ ವಚನಕಾರನೊಬ್ಬ ಪರಮಾತ್ಮನ ಪರಿಕಲ್ಪನೆಯನ್ನು ಇಷ್ಟು ವೈಜ್ಞಾನಿಕವಾಗಿ ಹೇಳಿದ್ದು ಅಚ್ಚರಿಯ ಜತೆಗೆ ಗಮನಾರ್ಹವೂ ಹೌದು. ಇಂದಿಗೂ ಪರಮಾತ್ಮನ ಬಗೆಗೆ ಪೌರಾಣಿಕ

ಕಲ್ಪನೆಗಳನ್ನೇ ಜನ ನಂಬುತ್ತಾರೆ. ಭಸ್ಮ ಧರಿಸಿ, ತ್ರಿಶೂಲ ಡಮರುಗ ಹಿಡಿದು ಬ್ರಹ್ಮಕಪಾಲದೊಂದಿಗೆ ವೃಷಭನನ್ನು ಹತ್ತಿನಿಂತ ಪರಮಾತ್ಮನನ್ನು ನೋಡಿದವ ರಾರು ? ಚೌಡಯ್ಯನವರ ವಚನ ಇಂದಿಗೂ ಸ್ವಾಗತಾರ್ಹವಾಗಿದೆ.

ಹನ್ನೆರಡನೇ ಶತಮಾನದ ವಚನಕಾರರೆಲ್ಲಾ ವೇದ-ಶಾಸ್ತ್ರ-ಪುರಾಣಗಳನ್ನು ಅಲ್ಲಗಳೆದವರು. ವೇದಕ್ಕೆ ಒರೆಯ ಕಟ್ಟಿ, ಶಾಸ್ತ್ರಕ್ಕೆ ಇಗಳವನ್ನಿಕ್ಕಿ, ಆಗಮದ ಮೂಗ ಕೊಯ್ದ ಶರಣರು, ಶಾಸ್ತ್ರವೆಂಬುದು ಸಂತೆಯ ಸುದ್ದಿ, ಪುರಾಣವೆಂಬುದು ಪುಂಡರಗೋಷ್ಠಿ ಎನ್ನುವ ಹಂತದವರೆಗೆ ಬೆಳೆದವರು. ಅತ್ಯಂತ ನಯವಾಗಿ ವೇದ ಶಾಸ್ತ್ರಗಳನ್ನು ತಿರಸ್ಕರಿಸುವ ಚೌಡಯ್ಯನವರ ವಚನವೊಂದು ಈ ದಿಸೆಯಲ್ಲಿ ಕುತೂಹಲ ಕೆರಳಿಸುವಂತಹದು.

"ವೇದದಲುಳ್ಳೊಡೆ- ಪ್ರಾಣವಧೆಯಪ್ಪುದೆ ?
ಶಾಸ್ತ್ರದಲುಳ್ಳೊಡೆ- ಸಮನಾಗದಿಪ್ಪುದೆ ?
ಪರ್ವತದಲ್ಲಿವುಳ್ಳೊಡೆ- ಹೋದವರು ಮರಳಿಬಪ್ಪರೆ ?'

ವೇದದಲ್ಲಿ ಅಂತಹ ಸಾಮರ್ಥ್ಯವಿದ್ದರೆ ಪ್ರಾಣವಧೆಯೇಕೆ ನಡೆಯುತ್ತಿದೆ, ಶಾಸ್ತ್ರದಲ್ಲಿ ಅಂತಹ ಸಾಮರ್ಥ್ಯವಿದ್ದರೆ ಸಮಾನತೆಯೇಕೆ ಬಂದಿಲ್ಲವೆಂದು ಪ್ರಶ್ನಿಸುವ ದರ ಮೂಲಕ ಸಕಾರಣಗಳನ್ನು ಕೊಟ್ಟು ವಿಚಾರ ಮಾಡಲು ಹಚ್ಚುತ್ತಾರೆ. ಗೊಡ್ಡು ವೇದ-ಶಾಸ್ತ್ರಗಳ ನಂಬಿದ ನಿರ್ಬುದ್ಧಿ ಮಾನವರೇನೆಂಬೆ—ಎಂದು ವಿಷಾದ ವ್ಯಕ್ತಪಡಿಸುತ್ತಾರೆ. ಮನ-ವಚನ-ಕಾಯ ಶುದ್ಧವಾಗಿರುವಾತನಲ್ಲಿ ಸಕಲವನ್ನೂ ಕಂಡೆನೆನ್ನುತ್ತಾರೆ. ವೇದ-ಶಾಸ್ತ್ರಗಳ ಬಗೆಗೆ ಮತ್ತೆ ಮುಂದುವರೆದು ಪ್ರಶ್ನಿಸುತ್ತಾ

''ಕಪ್ಪನ ಮನೆಯಲ್ಲಿ ಸೃಷ್ಟಿಗೀಶ್ವರನುಂಬಾಗ
ಎತ್ತ ಹೋದವೋ ನಿಮ್ಮ ಶಾಸ್ತ್ರಂಗಳು ?
ಕೆತ್ತ ಮುಚ್ಚಳು ಬೇಡಂಗೆ ತೆಗೆವಾಗ
ಇಕ್ಕಿದ ಜನ್ನಿವಾರ ಬೀಯವಾದುವು.
ಮುಕ್ಕುಳಿಸಿದ ನೀರ ತಂದೆರದಡೆ
ಎತ್ತಲಿದ್ದುವು ನಿಮ್ಮ ವೇದಂಗಗಳು ?"

ಪ್ರಶ್ನೆ ಕೇಳದಹಾಗೆ ಬಾಯಿ ಮುಚ್ಚಿಸುವ ಅಂದಿನ ಅಧಿಕಾರಶಾಹಿ ಪದ್ಧತಿಯಲ್ಲಿ, ವೇದ-ಶಾಸ್ತ್ರ-ಆಗಮಗಳನ್ನು ದೇವರೆಂದೇ ನಂಬಿ ಪೂಜಿಸುವ ಅಂತಹ ಸಂದಿಗ್ಧ ಪರಿಸ್ಥಿತಿಯಲ್ಲಿ, ಚತುರ್ವರ್ಣದ ನೆಪದಲ್ಲಿ, ನಿತ್ಯವೂ ಬಡವರ-ಶೂದ್ರರ ಸುಲಿಗೆ ನಡೆಯುವಂತಹ ಸಂದರ್ಭದಲ್ಲಿ ಸಮಾನ ವಿಚಾರವುಳ್ಳ ವಚನಕಾರರೆಲ್ಲಾ ಒಂದೆಡೆ ಸೇರಿ ಇಂತಹ ಮೌಢ್ಯ ವ್ಯವಸ್ಥೆಯ ವಿರುದ್ಧ ಬಂಡೆದ್ದದ್ದು, ಬದಲಾವಣೆ ತರಲು ಪ್ರಯತ್ನಿಸಿದ್ದು, ಚರಿತ್ರೆಯ ಮುಖ್ಯ ದಾಖಲೆಗಳಾಗುವದರ ಜತೆಗೆ, ಕೋಟಿ-

ಕೋಟಿ ಜನತೆಗೆ ಬದುಕು ಕೊಟ್ಟ ಮಹತ್ವದ ಪ್ರಸಂಗಗಳಾಗಿ ನಮಗಿಂದು ಅತಿ ಮುಖ್ಯವೆನಿಸುತ್ತವೆ.

ಲಿಂಗದ ಬಗೆಗೆ ಚೌಡಯ್ಯನವರ ಅಭಿಪ್ರಾಯ ಹೊಸ ಅರ್ಥವನ್ನೇ ಕೊಡುತ್ತದೆ. ಲಿಂಗದ ಮೇಲೆ ಮೊದ-ಮೊದಲು ಭಕ್ತಿ ತಾಳಿದ್ದ ಅವರು, "ದ್ರೋಹಿ ಬಲ್ಲನೆ ಗುರು-ಲಿಂಗ-ಜಂಗಮದ ನೆಲೆಯ ?" ಎಂದು ಪ್ರಶ್ನಿಸಿದವರೇ, ಸಂದಿಗ್ಧ ಸ್ಥಿತಿಗೆ ಬಂದು ಮುಟ್ಟುತ್ತಾರೆ.

> "ಕುರುಹೆಂಬೆನೆ ? ಕಲ್ಲಿನಲ್ಲಿ ಹತ್ತಿದ ಹಾವಸೆ;
> ಅರಿವೆಂಬೆನೆ ? ಕಾಣಬಾರದ ಬಯಲು".

ಎಂಬಂಥ ಅನುಮಾನ ಅವರಿಗೆ ಬಂದಿದೆ. "ಬಿಟ್ಟಡೆ ಸಮಯವಿಲ್ಲ, ಜಿಡ್ಡ ಹಿಡಿದಡೆ ಜ್ಞಾನವಿಲ್ಲ"-ಇಂತಹ ಉಭಯದ ಗುಟ್ಟಿನಲ್ಲಿ ಕೊಳೆಯುತ್ತಿದ್ದೇನೆಂದು ಹೇಳುತ್ತಾರೆ. ಈ ವಚನವನ್ನು ಓದಿದಾಗ ಚೌಡಯ್ಯನವರ ಮನಸ್ಸಿನಲ್ಲಿಯ ತುಡಿತ ಸ್ಪಷ್ಟವಾಗುತ್ತದೆ. ಒಂದುಕಡೆ ಲಿಂಗಾಂಗ ಸಾಮರಸ್ಯದಲ್ಲಿ ನಿರತರಾಗಿರುವ ಬಸವಣ್ಣನಂತಹ ಹಿರಿಯ ಶರಣರು, ಮತ್ತೊಂದು ಕಡೆ ಷಟ್‌ಸ್ಥಲದ ಮಹತ್ವನ್ನು ಬಿತ್ತರಿಸುವ ಚೆನ್ನಬಸವಣ್ಣನಂತಹ ಜ್ಞಾನಿಗಳು ಚೌಡಯ್ಯನವರ ಅಂತರಂಗದಲ್ಲಿ ಸಮಸ್ಯೆಯಾದದ್ದಂತೂ ಸತ್ಯ. ಅಂತೆಯೇ ಅವರು "ಲಿಂಗಬೇಡವೇಬೇಡವೆಂದು ಜಿಡ್ಡು ಹಿಡಿದರೆ ಜ್ಞಾನವಿಲ್ಲ" ವೆಂದು ಹೇಳಿರುವದು ಇದಕ್ಕಾಗಿಯೆ. ಒಂದು ಸಂಘಟನೆಗೆ ಬದ್ಧನಾಗಿರುವ ತಾನು ಅದರ ಮೂಲ ನಿಯಮವನ್ನೇ ಮುರಿದುಹಾಕಿದರೆ ಹೇಗೆ ? ಎಂಬ ಸಮಸ್ಯೆ ಚೌಡಯ್ಯನವರನ್ನು ಕಾಡಿರಬೇಕು. ಆದರೂ ಅವರು ತಮ್ಮ ಒಳಗುದಿಯನ್ನು ಹೊರಗೆ ಹಾಕದೇ ಬಿಟ್ಟಿಲ್ಲ. ಯಾವ ವ್ಯಕ್ತಿಯಲ್ಲಿ ಅನುಮಾನ-ಪ್ರಶ್ನೆಗಳು ಹುಟ್ಟುತ್ತವೆಯೋ ಅದು ಆತನ ಬೆಳವಣಿಗೆಯ ಹಂತವನ್ನು ಸೂಚಿಸುತ್ತದೆ. ಚೌಡಯ್ಯ ಈ ದೃಷ್ಟಿಯಿಂದ ಬಹಳ ಮಹತ್ವದವರೆನಿಸುತ್ತಾರೆ. ಇಂತಹ ಅನುಮಾನ-ಸಂಶಯಗಳು ಅನುಭವ ಮಂಟಪದಲ್ಲಿಯ ಹಲವಾರು ಶರಣರನ್ನು ಕಾಡಿರಬಹುದು. ಆದರೆ ಶರಣರ ಸಂಘಟನೆಗೆ ಹೊಡೆತ ಬೀಳಬಹುದೆನ್ನುವ ಮುಂದಾಲೋಚನೆಯಿಂದ ಅವರು ಇಂತಹ ವಿಷಯದ ಬಗೆಗೆ ಹೆಚ್ಚು ಗೊಂದಲ ವೆಬ್ಬಿಸಿರಲಿಕ್ಕಿಲ್ಲ. ಆದರೂ ಸಿದ್ಧರಾಮ, ಕಾಳವ್ವೆ, ಚೌಡಯ್ಯ ಮುಂತಾದವರ ವಚನಗಳಲ್ಲಿ ಈ ಅನುಮಾನ-ಸಂಶಯಗಳು ಅನಿವಾರ್ಯವಾಗಿ ಕಾಣಿಸಿಕೊಂಡಿವೆ.

"ಉಭಯ ಗುಟ್ಟಿನಲ್ಲಿ ಕೊಳೆಯುತ್ತಿದ್ದೇನೆ"—ಎನ್ನುವ ಅವರ ಸಂದಿಗ್ಧ ಪರಿಸ್ಥಿತಿಗೆ ಬಹಳ ಮಹತ್ವ ಕೊಡಬೇಕಾಗುತ್ತದೆ. ಚೌಡಯ್ಯನವರಂತಹ ನಿರ್ಭಿಡೆಯ ವಚನಕಾರರಿಂದ ಇಂತಹ ಮಾತು ಬರಬೇಕಾದರೆ ಲಿಂಗ ಪೂಜೆಯ ಗಾಢ ಪ್ರಭಾವ ಎಂತಹದೆಂಬುದು ಗೊತ್ತಾಗದೇ ಇರದು.

"ತಮ್ಮಂಗ ಸಂಗವನರಿಯದೆ ಲಿಂಗಸಂಗಿಯೆಂಬ
ಭಂಡರನೇನೆಂಬೆನೆಂದಂಬಿಗ ಚೌಡಯ್ಯ"

"ಉದಾಸೀನವ ಮಾಡುವ ಸಮಯಹೀನನ ಕೊರಳಲ್ಲಿ
ಶಿವಲಿಂಗವ ಕಟ್ಟಿರ್ದಡೇನಯ್ಯಾ?
ಪಡುವಲ ಕಾಯಿಗೆ ಕಲ್ಲು ಕಟ್ಟಿದಂತೆ"

"ದೇವರಿಲ್ಲದ ದೇಗುಲಕ್ಕೆ–ಮಂತ್ರ ಅಭಿಷೇಕವುಂಟೆ ?
ಅರಿವು ನಷ್ಟವಾಗಿ–ಕರುಹಿನ ಹಾವಚೆಯೆ ?"

"ಕರದಲ್ಲಿ ಲಿಂಗವ ಹಿಡಿದುಕೊಂಡು, ಕಣ್ಣುಮುಚ್ಚಿ ಸರಜಪಮಾಲೆಯ
ಬೆರಳಿಂದ ಎಳೆದೆಳೆದು ಎಣಿಸುತ್ತಾ
ಗುರುಮೂರ್ತಿಯ ಧ್ಯಾನಿಸುತ್ತ, ಕಂಡೆನೆಂಬುತ್ತ
ಇರುವರೆ ? ಮೂಳರಿರಾ, ನಿಮಗೆಲ್ಲಿಯದೋ ಗುರುಧ್ಯಾನ"

"ಎರಡು ಗ್ರಾಮದ ನಡುವೆ ಕಟ್ಟಿದ ಸೀಮೆಯ ಕಲ್ಲು
ಆದಿಯನರಿಯದ ಗುರು, ಭೇದಿಸಲರಿಯದ ಶಿಷ್ಯ
ಅದ ಕಟ್ಟಿದಾತ ಗುರುವಲ್ಲ, ಕಟ್ಟಿಸಿಕೊಂಡಾತ ಶಿಷ್ಯನಲ್ಲ"

"ಹೂವ ಕೊಯಿದ ಕುಕ್ಕೆ ಹರಿದು. ನೀರ ಹೊಯಿವ ಕುಡಿಕೆವೊಡೆದು
ನೋಡುವ ಕಣ್ಣ ತೆರೆಕಟ್ಟಿ ಆರಜತಾಗಿ, ಸ್ವೈವೆರಗಾಗಿ
ಲಿಂಗವನಾರೂ ಕಂಡುದಿಲ್ಲಾಯೆಂದನಂಬಿಗ ಚೌಡಯ್ಯ"

ಈ ಮೊದಲಾದ ವಚನಗಳನ್ನು ಗಮನಿಸಿದರೆ "ಲಿಂಗ" ಚೌಡಯ್ಯನವರ ದೃಷ್ಟಿ ಕೋನದಲ್ಲಿ ಬದಲಾಗುತ್ತಾ ಅದು ಕಲ್ಲಿನಲ್ಲಿ ಹತ್ತಿದ ಹಾವಸೆಯಂತೆ ಕಂಡದ್ದು ಗಮನಿಸಬೇಕಾದ ಅಂಶ. ಲಿಂಗಸಂಗಕ್ಕಿಂತ–ಅಂಗಸಂಗ ಮುಖ್ಯ, ಶಿವಲಿಂಗ ಪೂಜೆಗಿಂತ ಸಮಯ ಪ್ರಜ್ಞೆ ಮಹತ್ವದ್ದು, ಅರಿವೇ ಇಲ್ಲದಿದ್ದಾಗ ಕುರುಹಿಗೇನು ಬೆಲೆ ? ಈ ಮುಂತಾದ ಚೌಡಯ್ಯನವರ ನುಡಿಗಳಲ್ಲಿ–ಇಹದ ಪ್ರಾಮುಖ್ಯತೆಗೆ, ಸಂಸಾರಕ್ಕೆ, ಜ್ಞಾನಕ್ಕೆ ಅವರು ಹೆಚ್ಚು ಪ್ರಾಶಸ್ತ್ಯ ಕೊಟ್ಟದ್ದು ಸ್ಪಷ್ಟವಾಗುತ್ತದೆ. ಕಾಣದೇ ಇರುವ ಕೈಲಾಸಕ್ಕಿಂತ, ಕಣ್ಣಿಗೆ ಕಾಣುವ ಬದುಕೇ ಅವರಿಗೆ ಅತ್ಯಂತ ಪ್ರಮುಖವೆನ್ನಿಸಿತು. ಅಂತೆಯೇ ಬದುಕಿನ ವಿವಿಧ ಮಜಲುಗಳಿಗೆ ಮೈಯೊಡ್ಡಿದ್ದ ವಚನಕಾರರು ಇಹದಲ್ಲಿಯೇ ಸಕಲ ಸಂಪತ್ತಿರುವದನ್ನು ಬಿಡಿಸಿ ತೋರಿಸಿದರು.

ಗುರು–ಶಿಷ್ಯರ ಸಂಬಂಧವನ್ನು ಹೇಳುವಾಗಲೂ ಚೌಡಯ್ಯನವರ ನುಡಿಗಳು ತೀರಾ ಮಹತ್ವದ ವೆನಿಸುತ್ತವೆ. ಶೂದ್ರನಿಗೆ ಶಿಕ್ಷಣ ದೊರೆಯಲಾರದ ಅಂದಿನ ಸಂದರ್ಭದಲ್ಲಿ, ಒಂದು ವೇಳೆ ಶೂದ್ರ ಶಿಷ್ಯಂಗೆ ಅನುಗ್ರಹ ಮಾಡಿದರೂ ಗುರು–ಶಿಷ್ಯನ ಮನೆಯಲ್ಲಿ ಊಟಮಾಡದೇ ಇದ್ದ ಅಂದಿನ ಸಂಕ್ರಮಣಾವಸ್ಥೆಯಲ್ಲಿ ಚೌಡಯ್ಯನವರು ಇಂತಹ ಗುರುವನ್ನು ಕಂಡು ಕಟುವಾಗಿ ಟೀಕಿಸಿದ್ದಾರೆ. ಶೂದ್ರ

ಶಿಷ್ಯನ ಮನೆಯಿಂದ ಅಕ್ಕಿ–ಗೋವುಗಳನ್ನು ಮಾತ್ರ ತೆಗೆದುಕೊಂಡು ಹೋಗುತ್ತಿದ್ದ ಗುರುವನ್ನು ಕಂಡರೆ "ಕೆಡವಿ ಹಾಕಿ ಮುಖಗ ಕೊಯ್ದು ಇಟ್ಟಂಗಿ ಕಲ್ಲಿನಿಂದ ಸಾಸಿವೆ ತಿಕ್ಕಿ, ಹಿಟ್ಟು ಹಾಕಿ ಅದರ ಮೇಲೆ ಲಿಂಬಿ ಹುಳಿಯನ್ನು ಹಿಂಡಿ ಪಡುವಣಗಾಳಿಗೆ ಹಿಡಿ"—ಎಂದು ಹೇಳುವ ಚೌಡಯ್ಯನವರ ನುಡಿಗಳಲ್ಲಿ ಜಾತಿಯ ಹೆಸರಿನಲ್ಲಾಗು ತ್ತಿದ್ದ ಶೋಷಣೆ ಸ್ಪಷ್ಟವಾಗುತ್ತದೆ. ಇಂತಹ ವ್ಯವಸ್ಥೆಯ ರೀತಿ–ನೀತಿಗಳನ್ನು ತಿರಸ್ಕರಿಸುವ ಅವರ ಧಾಟಿ ಸೂಜಿ ಮೊನೆಯಷ್ಟೇ ಹರಿತ.

"ಕಂಥೆ ತೊಟ್ಟವ ಗುರುವಲ್ಲ
ಕಾವಿ ಹೊತ್ತವ ಜಂಗಮನಲ್ಲ
ಶೀಲ ಕಟ್ಟಿದವ ಶಿವಭಕ್ತನಲ್ಲ"

"ಮಾಯೆಯ ಬಸುರಲ್ಲಿ ಬಂದಾತ ಮಹೇಶ
ದೇವಕಿಯ ಬಸುರಲ್ಲಿ ಬಂದಾತ ವಿಷ್ಣು
ಹೂವಿನ ಬಸುರಲ್ಲಿ ಬಂದಾತ ಬ್ರಹ್ಮ
ಇವರು ದೇವರೆಂದು ನಂಬಿ ಪೂಜಿಸಿದಡೆ ಭವ ಅಳಿಯದು
ಮುಕ್ತಿಯಾಗದೆಂದಾತನಂಬಿಗ ಚೌಡಯ್ಯ".

ಇವೆರಡೂ ವಚನಗಳು ಚೌಡಯ್ಯನವರ ಹೊಸ ದೃಷ್ಟಿಕೋನಕ್ಕೆ ಸಾಕ್ಷಿಯಾಗಿವೆ. ಮೊದ-ಮೊದಲು ಪರಂಪರೆಯೊಂದಿಗೆ ಬೆಳೆದು ಬಂದ ಚೌಡಯ್ಯನವರು ತಮ್ಮ ಅನುಭವದ ಹಾದಿಯಲ್ಲಿ ಹೊಸ–ಹೊಸ ವಿಚಾರಗಳನ್ನು ಕಂಡುಕೊಂಡರು. ಗುರು–ಲಿಂಗ–ಜಂಗಮ–ಪೂಜೆ–ಪರಮಾತ್ಮ–ಭಕ್ತ–ಇಂತಹ ಹಲವಾರು ವಿಷಯಗಳ ಮೇಲೆ ಚೌಡಯ್ಯನವರ ದೃಷ್ಟಿಕೋನ ಹೊಸದೆನ್ನಿಸುತ್ತದೆ, ವಾಸ್ತವವೆನ್ನಿಸುತ್ತದೆ.

ಕಣ್ಣಿಗೆ ಕಾಣದ ವಸ್ತುಗಳ ಬಗೆಗೆ ಚಿಂತಿಸಿ ಬದುಕು ಹಾಳುಮಾಡಿಕೊಳ್ಳುವದಕ್ಕಿಂತ, ಕಣ್ಣಿಗೆ ಕಾಣುವ ಜೀವಿಗಳನ್ನು ಪ್ರೀತಿಸಬೇಕೆಂದು ಚೌಡಯ್ಯನವರು ಸ್ಪಷ್ಟಪಡಿಸಿದ್ದಾರೆ. ಇಹದ ಬದುಕಿಗೆ ಸ್ಪಂದಿಸುವ ಅವರ ಹಲವಾರು ವಿಚಾರಗಳು ಇಂದಿಗೂ ನೂತನವಾಗಿ, ಅರ್ಥಪೂರ್ಣವಾಗಿ ಕಾಣಿಸುತ್ತವೆ.

---

* [ಈ ಲೇಖನದಲ್ಲಿ ಬಳಸಿಕೊಂಡ ವಚನಗಳನ್ನು ಬಿ. ಆರ್. ಹಿ. ಅವರು ಸಂಪಾದಿಸಿದ "ಅಂಬಿಗರ ಚೌಡಯ್ಯನ ವಚನಗಳು" ಕೃತಿಯಿಂದ ಆಯ್ದುಕೊಳ್ಳಲಾಗಿದೆ.]

ನಮ್ಮ ಕಾಲಿನ ಕೆಳಗೆ

ಬಿ. ಎ. ಸನದಿ

ಸೂರ್ಯ ಮುಳುಗುವುದೇಕೆ, ಮೂಡಿ
ಮಂಳುಗುವುದೇಕೆ
ನನಗೆ ಗೊತ್ತಿಲ್ಲ ; ನಿಮಗೆ ?
ಆತ ಮೂಡುವುದಿಲ್ಲ, ಮೂಡದೇ
ಮುಳಂಗುವ ಪ್ರಶ್ನೆಯೇ ಇಲ್ಲ
ಎಂದರಿಯುದ ಜಾಣರು
ಹಾಗೆ ಹೇಳುವುದನ್ನು ಹಲವುಸಲ ಕೇಳಿರುವೆ.
ಅವರೆಲ್ಲ ಹಾಗೇಕೆ ಹೇಳುತ್ತಾರೊ
ನನಗೆ ಗೊತ್ತಿಲ್ಲ, ನಿಮಗೆ ?
....

೨

ನಿಂತಲ್ಲಿ ನಿಂತರೂ
ಪೃಥಿವಿಯು ಮೈಗಂಟಿದ ಚಿಗಳಿಗಳಂತೆ
ನಾವೆಲ್ಲಾ ಸುತ್ತುತ್ತೇವೆ
ಸ್ಥಿರಚಿತ್ತ ಸೂರ್ಯನ ಸುತ್ತ
ಸುತ್ತುತ್ತ ಸುತ್ತುತ್ತ
ಸುತ್ತುವವರಾರೆಂಬ ಸತ್ಯ ಮರೆಯುತ್ತೇವೆ
ಸುಳ್ಳುಸ್ಲೋಗನ್ನುಗಳ ಸ್ವರವನೆತ್ತುತ್ತೇವೆ
ಕೂಗೇಗಳ ಖುಷಿಯಲ್ಲಿ ಕೂಳು ಮರೆಯುವ ಹಾಗೆ
ಮೋರೆ-ಮೋರೆಯ ಮೇಲೆ ಮಂತ್ರದ ನವಿಲುಗರಿಯಾಡಿಸುತ್ತೇವೆ.
ನಾವೆಂದುದೇ ಸತ್ಯವೆಂದು ಜಗವು ನಂಬುವ ಹಾಗೆ
ಗುಲ್ಲು ಎಬ್ಬಿಸುತ್ತೇವೆ
ಗಗನಚುಂಬೀ ಟೆರೆಸ್ಸಿನ ಮೇಲೆ ಹಸಿರು
ಹುಲ್ಲು ಹಬ್ಬಿಸುತ್ತೇವೆ
ಈ ಸ್ವಂತಸ್ಥ ಅಂತಸ್ತುಗಳ ಅಂತರಂತರದಲ್ಲಿ

ಬೆಳೆವುದುಂಟೆ ಬಹುಕಾಲ ಬಾಳುವ ತೇಗು ?
ಅಥವಾ, ದಿನಬಳಕೆಯ ತೆಂಗು ?
ಎರಡು ಕಳಚುವುದೇನೊ
ನಮ್ಮ ಕನಸುಗಳ ಕಡಲಿಂದೊಗೆವ
ಬಂಜೆ ಮೋಡಗಳ ಹಂಗು !
....

೩

ದಿನ ದಿನವೂ ಪದೇ ಪದೇ
ಅದೇ ಅದೇ ಸೂರ್ಯನ ಕಂಡು ಮುಗುಳುನಗೆ ಬೀರುತ್ತವೆ
ಹುಲ್ಲು ಗಿಡ ಮರ ಬಳ್ಳಿ ಹೂ ಕಾಯಿ ಹಣ್ಣು
ನಾವೊ, ಮುಖ ಮೈ ಕೈ ಸೊಟ್ಟಗೆ ಮಾಡಿ
ಸೂರ್ಯ ಕಣ್ಮರೆಯಾಗುವ ದಾರಿಕಾಯುತ್ತೇವೆ
ಹಗಲ ಹೋರೆಯಿಂದ ಪಾರಾಗಿ
ರಾತ್ರಿ ಮಾಡುವ ಅದೇ ಅದೇ ಕೆಲಸಕ್ಕಾಗಿ
ನಮ್ಮ ಪಾಲಿಗೆ
ಮೈಗಳ್ಳ ಮೇಟಿಯು ಮಾಲು ಯಾರಾರಿಗೋ ಮಾರಿ
ಹೊಟ್ಟೆ ಬೆಳೆಸುವುದಕ್ಕೆ ಬೆಳಕೆಂಬುದೇ ವೈರಿ !
ಸೂರ್ಯ ಕಾಣದ ವೇಳೆ
ಕ್ಷಿತಿಜಗಳ ಹಂಗಿರದ ಸ್ವಪ್ನಸಂಚಾರ
ಸೂರ್ಯನೆದುರಿಗೆ ಬದುಕು
ಯಥಾಪ್ರಕಾರ !
....

೪

ಒಂದು ದಿನವಾದರೂ
ಸೂರ್ಯನ ಸಾಕ್ಷಿಯಾಗಿ
ನಾಲ್ಕಾರು ರೇಖಾಂಶಗಳವರೆಗೆ ಹೆಜ್ಜೆ ಹಾಕಿದ್ದುಂಟೆ
ನಾವು-ನೀವು ?
ಸೂರ್ಯನ ಕಾವಿನಲಿ
ಕುಳಿತಲ್ಲಿಯೇ ಬೇಳೆ ಬೇಯಿಸಿಕೊಂಡರೆ ಸಾಕೆ ?
ನಡು ಹಗಲಿನ ಸುಡುಬಿಸಿಲಿನಲಿ

ನಮ್ಮ ಕಾಲಿನ ಕೆಳಗೆ
ಆಸರವ ಪಡೆವಾಗ ನಮ್ಮದೆಂಬುವ ನೆರಳು
ಒಂದು ಕ್ಷಣವಾದರೂ
ಪಾದರಕ್ಷೆಗಳ ತಗೆದಿರಿಸಿ ತಣಿಸಿದ್ದುಂಟೆ
ಅಂಗಾಲಿನ ಬೆವರಿನಿಂದ ಆ ನೆರಳ ಬಾಯಾರಿಕೆ ?
ಇಲ್ಲ
ನಮ್ಮ ಕಾಲಿನ ಕೆಳಗೆ ನಮ್ಮ ಗಮನವೇ ಇಲ್ಲ
ನಮ್ಮ ನೆತ್ತಿಯ ಮೇಲುರಿಯುವ ಸೂರ್ಯ
ನಮ್ಮ ಕಾಲಿನ ಕೆಳಗೂ
ಅವಿತ ನೆರಳಿನ ಒಳಗೂ
ಡೇರೆ ಹೊಡೆದವನೆಂದು ನಮಗೆ ತಿಳಿದೇ ಇಲ್ಲ !

ಸ್ತ್ರೀ ನಾಮಕರಣ

ಚನ್ನಕ್ಕ ಎಲಿಗಾರ

ಸ್ಥಳನಾಮಗಳಂತೆ ವ್ಯಕ್ತಿನಾಮಗಳೂ ಒಂದು ಜನಾಂಗದ ಧರ್ಮ ಪ್ರದೇಶ, ಭಾಷೆ, ಅಂತಸ್ತು, ಅಧಿಕಾರಗಳನ್ನು ಬಿಂಬಿಸುತ್ತ ಅದರ ಸಂಸ್ಕೃತಿಯನ್ನು ಬಿಚ್ಚಿ ತೋರಿಸುತ್ತವೆ. ಈ ದೃಷ್ಟಿಯಿಂದ ಪ್ರಾಚೀನ ಕರ್ನಾಟಕದ ಸ್ತ್ರೀಯರ ಹೆಸರುಗಳನ್ನು ರಾಚನಿಕ (structural) ವಾಂಶಿಕ (geniological)ವಾಗಿ ಅವಲೋಕಿಸಿ ಹೆಸರು ಇಡುವಲ್ಲಿ ಆ ಕಾಲದ ತಾಯಿ ತಂದೆಗಳ, ಇಟ್ಟ ಹೆಸರನ್ನ ಬಳಸಿಕೊಳ್ಳುವಲ್ಲಿ ಸ್ವತಃ ಆ ವ್ಯಕ್ತಿ ಮತ್ತು ಸಮಾಜಗಳ ಮನೋಧರ್ಮವೇನಿದ್ದಿತೆಂಬುದನ್ನು ಇಲ್ಲಿ ಅರಿಯಬಹುದು.

ಪ್ರಾಚೀನ ಕರ್ನಾಟಕದಲ್ಲಿ ಸ್ತ್ರೀ ಸಮುದಾಯುವ ಪೆಸರುಗಳು ಒಂದು ಆಕೃತಿಮಾಗಳಲ್ಲ ; ಸಾಮಾನ್ಯವಾಗಿ ಎರಡರಿಂದ ಆರು ಆಕೃತಿಮಾಗಳ ಸಂಯುಕ್ತ ರೂಪಗಳು. ಇವುಗಳನ್ನು ಪೂರ್ವ ಆಕೃತಿಮಾ, ಉತ್ತರ ಆಕೃತಿಮಾ ಎಂದು ಬಿಡಿಸಿ ಹೇಳಬಹುದು. ಪೂರ್ವದ್ದು ಸಾಮಾನ್ಯವಾಗಿ ಒಂದೇ ಆಕೃತಿಮಾ ಆಗಿದ್ದರೆ ಉತ್ತರದ್ದು ಐದು ಆಕೃತಿಮಾಗಳವರೆಗೆ ಬೆಳೆಯಬಹುದು.

ಮಲ್ಲಿ	+	ಅಕ್ಕ
ದೇವಿ	+	ಅಬ್ಬೆ
ಗುಡ್ಡ	+	ಅಮ್ಮ
ಕಾಳಿ	+	ಅವ್ವೆ
ಹಿರು	+	ಬಾಯಿ
ಗೌರ	+	ಅಕ್ಕ + ಅಬ್ಬೆ
ಪೋಟಿ	+	ಅಕ್ಕ + ಅವ್ವೆ
ರೇವ	+	ಅಕ್ಕ + ಅಬ್ಬೆ + ಗಾವುಂಡಿ
ಚಟ್ಟ	+	ಅಕ್ಕ + ಅಬ್ಬೆ + ಅರಸಿ
ಕಾಳಿ	+	ಅಕ್ಕ + ದಂಡ + ನಾಯಕ + ಇತಿ
ಮಾಯಿ	+	ದೇವಿ + ದಂಡ + ನಾಯಕ + ಇತಿ
ಮೈಳಲ	+	ದೇವಿ + ಅಕ್ಕ + ದಂಡ + ನಾಯಕ + ಇತಿ

ಹೀಗೆ ಪೂರ್ವದಲ್ಲಿ ಒಂದೇ ಆಕೃತಿಯೂ ಇರುತ್ತಿದ್ದರೂ | ಮಹಾ + ದೇವಿ + ಅಕ್ಕ | ಎಂಬಲ್ಲಿಯಂತೆ ಎರಡೂ ಆಕೃತಿಯೂಗಳೂ ಕ್ವಚಿತ್ ಬಳಕೆಯಾಗಿವೆ.

ಕೇವಲ ಎರಡು ಆಕೃತಿಯೂಗಳ ಆದರಲ್ಲಿಯೂ ಅಕ್ಕ, ಅಬ್ಬೆ, ಅಮ್ಮ, ಅವ್ವೆ, ಬಾಯಿ ಎಂಬ ಉತ್ತರ ಆಕೃತಿಯೂಗಳುಳ್ಳ ಹೆಸರುಗಳು ಸಾಮಾನ್ಯವರ್ಗದ ಸ್ತ್ರೀಯರ ಹೆಸರನ್ನು ಸೂಚಿಸುವದುಂಟು ಉದಾ: ಬೀಜಿಯಕ್ಕ ಬಾಗಿಯಕ್ಕ ಚಂಡಬ್ಬೆ, ಮಾದಬ್ಬೆ, ಅಕ್ಕಮ್ಮ, ಗುಡ್ಡಮ್ಮ, ಜೋಗವ್ವೆ, ಬಮ್ಮವೆ. ಮಲ್ಲುಬಾಯಿ ಸಾವಿಬಾಯಿ ಮುಂತಾದವು.

ಸ್ತ್ರೀ ಅಸಾಮಾನ್ಯಳಾಗಿದ್ದರೆ ಅಕ್ಕ, ಅಬ್ಬೆ, ಅಮ್ಮ, ಅವ್ವೆ, ಬಾಯಿಗಳಿಗೆ ಬದಲಾಗಿ ಅಂಬೆ, ಅಂಬಿಕೆ, ಮತಿ, ದೇವಿ ಎಂಬ ಪದಗಳು ಸೇರಬಹುದು. ಒಂದು ವೇಳೆ ಸಾಮಾನ್ಯ ಹೆಸರುಗಳ ಮುಂದೆ ಗೌಡಿ, ಅರಸಿ, ನಾಯಂಕಿತಿ ಇತ್ಯಾದಿಗಳೂ ಸೇರಿದ್ದಲ್ಲಿ ಸಾಮಾನ್ಯ ಸ್ತ್ರೀಯೊಬ್ಬಳು ಅಂತಸ್ತಿಗೇರಿದುದರ ಸೂಚನೆಯಾಗಿರುತ್ತದೆ. ಉದಾ : ದೀವಳಾಂಬೆ, ಲಕ್ಷ್ಮೀಮತಿ, ಚಂದ್ರಿಕಾದೇವಿ, ಚಟ್ಟಿತಬ್ಬೆಗೌಡಿ, ರೇವತಬ್ಬರಸಿ, ಗುಜ್ಜವೆನಾಯಕಿತಿ, ಬಮ್ಮವೆನಾಯಕಿತಿ. ಇದಲ್ಲದೆ ಈ ಸಾಮಾನ್ಯರಿಗೆ ಅಕ್ಕ, ಅಬ್ಬೆ, ಅವ್ವೆ, ಇವು ಒಂದಕ್ಕಿಂತ ಹೆಚ್ಚು ಸೇರಿದ್ದರೆ ಅವಳು ಪ್ರಸಿದ್ಧಳು. ಉದಾ : ಪಂಪಕಬ್ಬೆ (ಪಂಪ+ಅಕ್ಕ+ಅಬ್ಬೆ), ವೈಜಕವ್ವೆ (ವೈಜ+ಅಕ್ಕ+ಅವ್ವೆ ಇತ್ಯಾದಿ.

ಹೀಗೆ ಸಾಮಾಜಿಕ ಅಂತಸ್ತಿನಂತೆ ವ್ಯಕ್ತಿಯ ವಯಸ್ಸಿಗನುಗುಣವಾಗಿಯೂ ನಾಮದಲ್ಲಿ ಬದಲಾವಣೆ ಕಂಡುಬರುತ್ತದೆ. ಅಕ್ಕ ಅಂತ್ಯದ ರಾಮಕ್ಕ, ಪಾಳಿಯಕ್ಕ, ಸೆಮ್ಬಕ್ಕ, ಹರಿಯಕ್ಕ ಎಂಬ ಹೆಸರುಗಳು ಅವರ ಯೌವನವನ್ನು ಸೂಚಿಸುತ್ತವೆ. ಸಾಮಾನ್ಯವಾಗಿ ಈ 'ಅಕ್ಕ' ಆಕೃತಿಯೂಕ್ಕೆ ಬದಲು, ಇಲ್ಲವೆ ಅದರ ಮೇಲೆ 'ಅಬ್ಬೆ' 'ಅಮ್ಮ' ಆಕೃತಿಯೂ ಬರುವುದು ಅವಳು ಯೌವನವನ್ನು ದಾಟಿ ಬಂದುದರ ಸೂಚನೆಗಳಾಗಿರುತ್ತವೆ. ಉದಾ: ಮಾಚಬ್ಬೆ, ಅಕ್ಕಮ್ಮ, ಮಾಚಕಬ್ಬೆ, ಮಾಚಕವ್ವೆ. 'ಅಜ್ಜ' ಎಂದು ಅಂತ್ಯವಾಗುವ ಕಾಡಜ್ಜಿ ಮಾಕಜ್ಜಿ ಎಂಬ ಹೆಸರುಗಳು ಕಾಡಬ್ಬೆ ಮಾಕಬ್ಬೆಗಳ ಪರಿವರ್ತಿತ ರೂಪಗಳಾಗಿದ್ದು ಆ ವ್ಯಕ್ತಿಗಳ ವಾರ್ಧಕ್ಯವನ್ನು ಸೂಚಿಸುತ್ತವೆ.

ಸಾಮಾನ್ಯವಾಗಿ ಮೇಲುವರ್ಗದ ಮಹಿಳೆಯರಿಗೆ '...ದೇವಿ' ಅಂತ್ಯದ ಹೆಸರುಗಳು ಗಮನಾರ್ಹ ಸಂಖ್ಯೆಯಲ್ಲಿ ಬಳಕೆಯಾಗಿವೆ. ಉದಾ : ದೇಮಲದೇವಿ, ಶಾಂತಲದೇವಿ, ಹರಿಯಲದೇವಿ. ಇದರಂತೆ ಇವರಿಗೆ ಸಾವಲಾ, ಮಾಳಲಾ, ಭಾಗಲಾ ಮುಂತಾದ ಹೆಸರುಗಳು ಕಂಡುಬರುತ್ತಿದ್ದು ಇಲ್ಲಿ ಸಮ ಸಂಸ್ಕೃತದ ಪ್ರಕ್ರಿಯೆಯ

ಪ್ರಕಾರ ಲಾ>ಲೆ ಆಗಿದೆ. ಆದರೆ ಇಲ್ಲಿಯ '...ಲಾ' ಏನನ್ನು ಸೂಚಿಸುತ್ತದೆ ಯೆಂಬುದನ್ನು ಈಗ ಹೇಳುವುದು ಸಾಧ್ಯವಿಲ್ಲ.

ಬೊಮ್ಮಿಗವುಡಿ, ಜಕ್ಕಿಯಬ್ಬೆ ನಾಳ್ಗಾವುಂಡಿ, ಕಾಳಿಯಕ್ಕ ದಂಡನಾಯಂಕಿತಿ, ಮೈಲವೆರಾಣಿ, ಕೆಳೆಯಬ್ಬರಸಿ, ಹೆಸರುಗಳ ಕೊನೆಯ ಗವುಡಿ, ನಾಳ್ಗಾವುಂಡಿ, ಗಂಡಂದಿರ ಅಧಿಕಾರ ಸೂಚಿಸುತ್ತದೆಯೇ ಹೊರತು ಇವರ ಅಧಿಕಾರವನ್ನಲ್ಲ.

ಪೆರುಮಾಳುಕಂತಿ, ಸಸಿಮತಿಗಂತಿ, ರೇವಬ್ಬೆಗೊರವಿ ಮುಂತಾದ ಹೆಸರುಗಳ ಕೊನೆಯ '...ಕಂತಿ', '...ಗೊರವಿ'ಗಳು ಅವರು ಸನ್ಯಾಸ ಸ್ವೀಕರಿಸಿದುದನ್ನು '...ಗಣಕುಮಾರ', '...ಗಣಕುಮಾರಿ' ಎಂಬಿವು ಅವರು ಧರ್ಮದಲ್ಲಿ ಪಡೆದಿರುವ ಸ್ಥಾನವನ್ನು ಸೂಚಿಸುತ್ತವೆ.

ಹೆಸರುಗಳು ಅವರ ಧರ್ಮವನ್ನು ಸೂಚಿಸುತ್ತಿದ್ದರೂ ಪ್ರಾಚೀನ ಸ್ತ್ರೀ ನಾಮ ಗಳು ಇದಕ್ಕೆ ಸಹಾಯವಾಗಲಾರವು. ಕೆಲವು ಸಲ '...ಮತಿ', '...ವತಿ' ಅಂತ್ಯ ವುಳ್ಳ ಮಲಯಮತಿ, ವಿಜಯವತಿ ಎಂಬ ಹೆಸರುಗಳು ಜೈನ ಸ್ತ್ರೀಯರಿಗೆ ಹೆಚ್ಚು ಬಳಕೆಯಾಗಿದ್ದರೂ ಅನ್ಯಮತೀಯರಲ್ಲಿಯೂ ಆಗಾಗ ಕಂಡುಬರುತ್ತವೆ.

ಕೆಲವು ಸಲ ಹೆಸರಿನ ಪೂರ್ವೋತ್ತರ ಆಕೃತಿಮಾಗಳು ಸವಕಳಿಗೊಂಡು ಹೊಸ ರೂಪ ಪಡೆದಿರುವುದುಂಟು. ಉದಾ : ಭಗಿಯಬ್ಬೆ>ಭಗಿಬೆ, ಜಾಯಬ್ಬೆ>ಜಾಬೆ. ಇದರಂತೆ 'ನಾಯಕಿತಿ' ಎಂಬ ಪದದ ಸವಕಳಿರೂಪಗಳಾಗಿವೆ-ಉತ್ತರದ 'ನಾಗತಿ', 'ನೋತಿ' ಉದಾ : ಅಬೆನಾಗತಿ (ಅಬ್ಬೆ+ನಾಯಕಿತಿ) ಅಪ್ಪಾವಿನೇತಿ (ಅಪ್ಪಾವಿ+ ನಾಯಂಕಿತಿ).

ಅಕ್ಕ, ಅಬ್ಬೆ, ದೇವಿ, ರಾಣಿ ಮೊದಲಾದ ಉತ್ತರ ಪದಗಳಂತೆ ಪೂರ್ವ ಪದಗಳೂ ಸಂಸ್ಕೃತ ಮತ್ತು ಕನ್ನಡ ಮೂಲದವುಗಳಾಗಿವೆ. ಉದಾ : ಪದ್ಮಬ್ಬರಸಿ, ಅರಸಿಯಕ್ಕ, ಅಸಗಬ್ಬೆ, ಕನಕವ್ವೆ. ಇಲ್ಲಿಯ ಸಂಸ್ಕೃತ ಮೂಲದವು ಸಾಮಾನ್ಯವಾಗಿ ಪ್ರತಿಷ್ಠಿತರನ್ನು, ಕನ್ನಡ ಮೂಲದವು ಅಪ್ರತಿಷ್ಠರನ್ನ ಸೂಚಿಸುತ್ತವೆ. ಕೆಲವು ಸಲ ಸಂಸ್ಕೃತ ಪದಗಳನ್ನ ತದ್ಭವರೂಪದಲ್ಲಿ ಬಳಸಿಕೊಂಡಿದ್ದಕ್ಕೆ 'ಮಸಣಿಗವುಡಿ'ಯಂತಹ ಹೆಸರುಗಳನ್ನು ಹೇಳಬಹುದು.

ಶಾಸನಗಳಲ್ಲಿ ಇನ್ನೂ ಕೆಲವು ವಿಶಿಷ್ಟ ಹೆಸರುಗಳು ಕಂಡುಬರುತ್ತವೆ. ರೇವಕನಿಮ್ಮಡಿ, ಏನೇತಿನಿಮ್ಮಡಿ, ಲೋಕೇತಿ ನಿಮ್ಮಡಿ ಇತ್ಯಾದಿ. ರೇವಕನಿಮ್ಮಡಿ ಹೆಸರಿನ ಬಗೆಗೆ ದಿ. ಮುಳಿಯ ತಿಮ್ಮಪ್ಪಯ್ಯನವರು "ರೇವಕ್ಕ' ಎಂಬುದು ಆಗಿನ ರಾಷ್ಟ್ರಕೂಟ ಮನೆತನದವರು, ವಿಶೇಷವಾಗಿ ಆ ಮನೆತನದ ರಾಣಿವಾಸದವರು ಭಕ್ತಿ ಪೂರ್ವಕವಾಗಿ ತಮ್ಮ ರೇವೆಯನ್ನು ಅದೇ ಹೆಸರಿನ ಕುಲರಾಜಧಾನಿಯನ್ನೂ

ಕರೆಯುವ ಪದ್ಧತಿ ಇರಬೇಕು''. ''ರೇವಕನ+ಇರ್ಮ್ಮಡಿ'' ಎಂದರೆ ಪವಿತ್ರತೆ, ಏಳಿಗೆ ಮುಂತಾದವುಗಳಲ್ಲಿ ರೇವಕ್ಕನಿಗೂ ಇಮ್ಮಡಿಯಾಗಿ ಬೆಳಗುವಾಕೆ ಎಂದು, ತಮ್ಮ ಕುಲಬಾಲಿಕೆಯರನ್ನು ಹಿರಿಯರಸಿಯರು ಮುದ್ದಿನಿಂದ ಕರೆಯುವ ಒಳ ಹೆಸರದು. ಪುಣ್ಯವಾಹಿನಿ ರೇವಾದೇವಿ ಹರಿಯುತ್ತಾ ತನ್ನ ಇಕ್ಕಡೆಯ ಕೂಲಗಳನ್ನು ಹೇಗೋ ಹಾಗೆ ಈಕೆ ಹುಟ್ಟಿದ, ಹೊಕ್ಕ ಎರಡು ಕುಲಗಳನ್ನು ಪಾವನಗೊಳಿಸುವಳು ಎಂಬ ವಿಶ್ವಾಸದ ಒಳ ಹೆಸರದು'' ಎಂದು ತಿಳಿಸಿರುವರು[1] ಆದರೆ ಹಿರಿಮೆಯಲ್ಲಿ ರೇವಾ ನದಿಗಿಂತ ಎರಡು ಪಟ್ಟು ಎಂದು ಹೇಳುವುದಕ್ಕಿಂತ ಪುರಾಣ ಪ್ರಸಿದ್ಧ ರೇವತಿ ಅಥವಾ ರೇವಕ ಎಂಬವಳಿಗಿಂತ ಎರಡು ಪಟ್ಟು ಎಂದು ಹೇಳುವುದಕ್ಕಿಂತ ಸರಿಯೆನಿಸುತ್ತದೆ. ಅಥವಾ ಯಾವುದೇ ಮನೆತನದಲ್ಲಿ ಆಗಿಹೋದ ಪ್ರಸಿದ್ಧ ವ್ಯಕ್ತಿಗಳ ಹೆಸರನ್ನು ಮುಂದಿನವರಿಗೆ ಇಡುವುದು ಸಹಜ. ಇಮ್ಮಡಿ ತೈಲ, ಮುಮ್ಮಡಿ ತೈಲ ಇತ್ಯಾದಿ. ಇದೇ ರೀತಿ ಆಯಾ ವಂಶದಲ್ಲಿ ಆಗಿಹೋಗಿದ್ದ ರೇವಕ್ಕ, ಲೊಕೆೋತಿ ಸಾವಿ, ವಿನೇತಿ ಎಂಬ ಸುಪ್ರಸಿದ್ಧ ಸ್ತ್ರೀಯರ ಹೆಸರುಗಳನ್ನೇ ಮುಂದಿನವರಿಗೆ ಇಡುವಲ್ಲಿ, ಅಂದರೆ ಈ ಹೆಸರಿನ 2ನೆಯವಳು ಎಂಬ ಅರ್ಥದಲ್ಲಿ ರೇವಕನಿಮ್ಮಡಿ,[2] ಲೋಕೆೋತಿ ನಿಮ್ಮಡಿ, ಸಾವಿನಿಮ್ಮಡಿ ವಿನೋತಿ ನಿಮ್ಮಡಿ ಇವು ಬಳಕೆಗೆ ಬಂದಿರಬೇಕು. ಇದು ನಿಜವಿದ್ದರೆ 'ಇಮ್ಮಡಿ' ಎಂಬುದನ್ನು ಪುರುಷರ ಹೆಸರಿಗೆ ಮೊದಲು, ಸ್ತ್ರೀಯರ ಹೆಸರಿಗೆ ತರುವಾಯ ಹಚ್ಚುತ್ತಿದ್ದರೆಂದು ಹೇಳಬೇಕಾಗುತ್ತದೆ. ಇದು ಒಂದು ಕುತೂಹಲಕಾರಿ ಅಂಶ.

ಕನ್ನಡದಲ್ಲಿ ಸ್ತ್ರೀ ನಾಮಗಳ ಕೊನೆಯ ''–ಬಾಯಿ'' ಆಕೃತಿಮಾದ ಬಳಕೆ 12ನೆಯ ಶತಮಾನದಿಂದ ಕಂಡುಬರುತ್ತದೆ. ಪೂರ್ವ ಆಕೃತಿಮಾದ ಮುಂದೆ ಬರುವ ಅಬೆ+ಅವ್ವೆ ಎಂಬ ಜೋಡಿ ಉತ್ತರ ಆಕೃತಿಮಾಗಳ ಸವೆದ ರೂಪವೇ ''–ಬಾಯಿ'' ಇಲ್ಲಿ

ಅಬ್ಬೆ > ಅಬೆ > ಬೆ > ಬಾ
ಅವ್ವೆ > ವ್ವೆ > ವಿ > ಯಿ

ಹೀಗೆ '–ಬಾಯಿ' ರೂಪ ನಿರ್ಮಾಣವಾಗಿದೆ. ಕೆಲವು ಸಲ ಹೀರುಬಾಯಿ (<ಹೀರೂ ಬಾಯಿ) ಮಲ್ಲುಬಾಯಿ (<ಮಲ್ಲೂಬಾಯಿ) ಎಂಬ ಹೆಸರುಗಳು ಕಂಡುಬರುತ್ತವೆ. ಇಲ್ಲಿ 'ಅಬ್ಬೆ'ಯ ಒತ್ತು ಕಾಲಕ್ರಮೇಣ ಅಳಿಯಲು ಅದರ ಕೊರತೆಯನ್ನು ತುಂಬಿ ಕೊಳ್ಳಲೋಸುಗ ದೀರ್ಘವನ್ನು ಬಳಸಿರಬಹುದು. ಹೀಗಾಗಿ ನಾವು ಈವರೆಗೆ ಭಾವಿಸಿರುವಂತೆ '–ಬಾಯಿ' ಎಂಬುದು ಮರಾಠಿ ಪದವಲ್ಲ, ಅಚ್ಚಗನ್ನಡಪದವೆಂದು ಹೇಳಬೇಕಾಗುತ್ತದೆ. ಇದರಂತೆ ಶಾಸನಗಳಲ್ಲಿ ದೊರಕುವ ಕವಾಯಿ, ರಾಮಾಯಿ, ಚಿಮ್ಮಾಯಿ ಹೆಸರುಗಳ ಕೊನೆಯ 'ಯಿ' ಎಂಬುದು 'ಅವ್ವೆ' ಎಂಬುದರ ರೂಪಾಂತರ ವಾಗಿದೆ.

"ಶಿವಮಾರದೇವಂ ಸೈಗೊಟ್ಟನೆಂಬೆರಡನೆಯ ಪೆಸರಂ ತಾಳ್ದಿ"[3] "ತ್ರೈಲಭೂಪಂ ಭುಜಬಳಶಾನ್ತರನೆನಿಪ್ಪ ಪೆಸರಂ",[4] "ಗೊಗ್ಗಿನೃಪಾಳಂ ಭೂತಳವರಿಯಲ್ಕೆ ನನ್ನಿಕಾನ್ತರವೆಸರಂ",[5] "ವಿಕ್ರಮಶಾನ್ತರವೆಸರಂ ಶತ್ರುಂಗೆಣೆಯೆನಿಸಿ ಪಡೆದ ನೊಡ್ಡಗಭೂಪಂ"[6] ಇತ್ಯಾದಿ ಉಲ್ಲೇಖಗಳು ಪುರುಷರಿಗೆ ಬಳಸುತ್ತಿದ್ದ ಎರಡು ಹೆಸರಗಳನ್ನು ಸೂಚಿಸುತ್ತವೆ. ಕೆಲವು ಸಲ ರಾಣಿಯಾದವಳಿಗೂ ಎರಡೂ ಹೆಸರುಗಳು ಬಳಕೆಯಲ್ಲಿದ್ದುದು ಕಂಡುಬರುತ್ತದೆ. ಮದುವೆಯ ಸಂದರ್ಭದಲ್ಲಿ ಈ ನಾಮ ಪರಿವರ್ತನೆ ನಡೆಯುತ್ತಿರಬಹುದು. "...ಕಾಡುವೆಟ್ಟಿಗೆ ವಿವಾಹೋತ್ಸವಮಂ ಮಾಡಿ ಚಟ್ಟಲದೇವಿಗೆ ಕಾಡವ ಮಹಾದೇವಿ ಪಟ್ಟಮಂ ಕಟ್ಟಿ ಸುಖದಿಕಿರಿಸಿದಂ"[7], "ವೀರದೇವಂಗಂ ಕಂಚಲದೇವಿಯೆನಿಸಿಯುಂ ನೆರಡನಯ ಪೆಸರಂ ತಾಳ್ದಿದ ವೀರಮಹಾದೇವಿಗಂ" ಎಂಬ ಹುಂಚ ಗ್ರಾಮದ ಶಾಸನದ ಈ ಉಲ್ಲೇಖಗಳು ಮದುವೆಯ ಸಂದರ್ಭದಲ್ಲಿ "ಮಹಾದೇವಿ" ಪಟ್ಟಗಟ್ಟಿ ಗಂಡನ ಹೆಸರಿಗೆ ಅನುಗುಣವಾಗಿ ಹೆಂಡತಿಯ ಹೆಸರನ್ನು ಬದಲಾಯಿಸಿದ ವಿಷಯವನ್ನು ಸೂಚಿಸುತ್ತವೆ. ಹುಂಚದ ಸಾನ್ತರವಂಶಕ್ಕೆ ಸಂಬಂಧಿಸಿದ ಈ ಶಾಸನದಲ್ಲಿ ಚಟ್ಟಲ+ದೇವಿಯು ಕಾಡುವೆಟ್ಟಿಯನ್ನು ಮದುವೆಯಾಗಿ ಕಾಡುವ+ಮಹಾದೇವಿಯಾದಂತೆ, ಕಂಚಲ+ದೇವಿಯು ವೀರದೇವನನ್ನು ಮದುವೆಯಾಗಿ ವೀರ+ಮಹಾದೇವಿಯೆನಿಸಿದ್ದಾಳೆ. ಇವರ ಗಂಡಂದಿರು ಕಾಡವ, ವೀರ ಎಂಬುದನ್ನು ನೆನೆದರೆ ಗಂಡನ ಹೆಸರನ್ನೇ ಇಟ್ಟುಕೊಂಡ, ಆಗ 'ಮಹದೇವಿ' ಎಂಬ ಆಕೃತಿಮಾ ಹೊಂದಿಸಿಕೊಂಡ ಅಂಶಗಳು ನಮ್ಮ ಗಮನ ಸೆಳೆಯುತ್ತವೆ. ಹೀಗೆ ಮದುವೆ ಪ್ರಸಂಗದಲ್ಲಿ "ಮಹಾದೇವಿ ಪಟ್ಟಮಂ ಕಟ್ಟಿ" ಅವಳ ಅಂತಸ್ತನ್ನು ಉನ್ನತಗೊಳಿಸುತ್ತಿರಬಹುದು. ಈ ರೀತಿ ಮದುವೆಯಾಗಿ ಮಹಾದೇವಿ ಪಟ್ಟವನ್ನು ಕಟ್ಟಿಸಿಕೊಂಡವಳೇ 'ಪಟ್ಟ ಮಹಾದೇವಿ'ಯಾಗಿರಬಹುದು.

ಉನ್ನತ ವರ್ಗದಲ್ಲಿ ಜರುಗುತ್ತಲಿದ್ದ ಈ ನಾಮಪರಿವರ್ತನಕ್ರಿಯೆ ಕಾಲಕ್ರಮೇಣ ಕೆಳವರ್ಗದಲ್ಲಿಯೂ ಹರಡಿ ಅನೇಕ ಗಾವುಂಡ, ನಾಳ್ಗಾವುಂಡ, ದಂಡನಾಯಕರ ಮಡದಿಯರೂ ಪತಿಯ ಹೆಸರಿನಿಂದಲೇ ಕರೆಯಿಸಿಕೊಂಡಿರುವ ಸಾಧ್ಯತೆಯಿದೆ. ಉದಾ: ಬಾಚಿಹುಲಿ>ಬಾಚಿಯಕ್ಕ, ಬೊಪ್ಪದೇವ>ಬೊಪ್ಪಿಯಕ್ಕ, ಸಿರಿಯಮಗವುಡ>ಸಿರಿಯಮಗವುಡಿ, ಹಡವಳ ಜಕ್ಕಯ್ಯ>ಹಡವಳತಿ ಜಕ್ಕವ್ವೆ. ಕೆಲವು ಸಲ ಗಂಡನ ಹೆಸರಿಗೆ ಬದಲು ಬೇರೊಂದು ಹೆಸರನ್ನೂ ಇರಿಸಿಕೊಳ್ಳುತ್ತಿದ್ದುದಕ್ಕೆ "ಮನುಮಾರ್ಗಚರಿತೆ ತವಮ್ಮರ್ನೆಯೊಳು ಧರ್ಮಾಂಗನಾಭಿಧಾನದಿನಾತ್ಮೇಶನೆನಿಪ್ಪ ಚಿದ್ದರಾಜನ ಮನೆಯೊಳು ನಾಗಾಂಬಿಕಾಭಿದಾನವೆಸೆವಳು"[9] ಎಂಬ ಉಲ್ಲೇಖ ಉದಾಹರಣೆಯಾಗಿದೆ.

ರಾಜರು ಕೆಲವು ಸಲ ರಾಣಿಯರ ವಂಶವನ್ನೇ ಅವರ ಹೆಸರಿಗಾಗಿ ಬಳಸುತ್ತಿದ್ದುದು ಕಂಡುಬರುತ್ತದೆ. ಉದಾ: ನೊಳಂಬ ಮಹಾದೇವಿ, ಗಂಗಮಹಾ

ದೇವಿ. ಚೋಳ ಮಹಾದೇವಿ, ಹೊಯ್ಸಳಮಹಾದೇವಿ. ಇಬ್ಬರು ಹೆಂಡತಿಯರಿದ್ದರೆ ಅಪರೂಪಕ್ಕೆ ಲೋಕಮಹಾದೇವಿ. ತ್ರೈಲೋಕ್ಯ ಮಹಾದೇವಿ ಎಂಬ ಸುಸಂಬದ್ಧ ಹೆಸರುಗಳನ್ನು ಬಳಸುತ್ತಿರಬೇಕು. ಇಂಥ ಹೆಸರುಗಳು ಸವತಿ ಮಾತ್ಸರ್ಯಕ್ಕೆ ಕಾರಣವಾಗಬಹುದಾದರೂ ಈ ಇಬ್ಬರು ಮಾತ್ರ ಹೈಡಯವಂಶದ ಸೋದರಿಯರಾಗಿದ್ದುದರಿಂದ ಇಲ್ಲಿ ಅಂಥ ಮಾತ್ಸರ್ಯಕ್ಕೆ ಅವಕಾಶವಿಲ್ಲ.

ಪ್ರಾಚೀನ ಕರ್ನಾಟಕದ ಆರು ಅಥವಾ ಏಳನೆಯ ಶತಮಾನದ ಸೂಳೆಯರ ಹೆಸರುಗಳ ಅಂತ್ಯದಲ್ಲಿ ಕೆಲವು ಸಲ ಪೊಟಿ, ಪೋಟಿ, ಪೊದ್ದಿ, ಪೊಡ್ಡಿ ಎಂಬ ಆಕೃತಿಮಾಗಳು ಕಂಡುಬರುತ್ತದೆ. ಉದಾ : ಬಿಂನಪೊಟಿ, ವಿನಾಪೋಟಿ, ವಿಜಯ ಮಹದೇವಿ ಬೊಡ್ಡಿ ಪೊದ್ದಿ. ಬರಬರುತ್ತ ಅವುಗಳ ಸ್ಥಾನದಲ್ಲಿ ಅಕ್ಕ, ಅಬ್ಬೆ, ಅಮ್ಮ ಅವ್ವೆಗಳನ್ನು ಬಳಸಿರುವರು.

ಸಾಮಾನ್ಯವಾಗಿ ಪೂಜಿಸುವ ದೈವದ ಹಿನ್ನೆಲೆಯಲ್ಲಿ ಈ ಹೆಸರುಗಳು ಬೆಳೆದು ಬಂದಿವೆ. ಚಟುಕುಲದ ನಾಗವಂಶೀಯರು ಮತ್ತು ನಾಗೋಪಾಸಕರಾದುದರಿಂದ ಆ ವಂಶದ ಹೆಣ್ಣುಮಕ್ಕಳಿಗೆ ಶಿವಸ್ಕಂದನಾಗಶ್ರೀ, ನಾಗಮಾಲಿನಿ ಎಂಬ ಹೆಸರುಗಳಿವೆ. ಕಾಳಿ, ಮಾಳಿ, ಚಂಡಿ, ಜೋಗಿ, ತಿಪ್ಪಿ ಎಂಬ ; ಸಾಮಾನ್ಯ ದೈವದ ಹೆಸರುಗಳನ್ನು ಪ್ರತಿನಿಧಿಸುವ ಕಾಳಲದೇವಿ, ಮಾಳಲದೇವಿ, ಶಂಕರಿಕಬ್ಬೆ, ಹೊನ್ನಾದೇವಿ ಎಂಬಿವು ಅನೇಕಸಲ ಕಂಡುಬರುತ್ತವೆ. ಕರ್ನಾಟಕ ಹಳ್ಳಿಗಳ ನಾಡಾದುದರಿಂದ ಹಳ್ಳಿಯ ಈ ಸ್ಥಾನಿಕ (ಕ್ಷುದ್ರ ?) ದೇವತೆಗಳ ಹೆಸರನ್ನೇ ಇವರು ಇಟ್ಟುಕೊಂಡುದು ಈ 'ಅನೇಕಸಲ'ಕ್ಕೆ ಕಾರಣವಾಗಿದೆ.

ವ್ಯಕ್ತಿನಾಮುಗಳು ಸಾಮಾನ್ಯವಾಗಿ ಒಂದು ಮನೆತನದಲ್ಲಿ ತಲೆ ಮಾರಿನಿಂದ ತಲೆಮಾರಿಗೆ ಪುನರುಕ್ತವಾಗುತ್ತಿದ್ದರೂ ತಮಗೆ ಆಶ್ರಯ ನೀಡಿದ ವ್ಯಕ್ತಿಗಳ ಹೆಸರನ್ನೂ ಕೃತಜ್ಞತೆಯ ದ್ಯೋತಕವಾಗಿ ತಮ್ಮ ಮಕ್ಕಳಿಗೆ ಇಡುತ್ತಿದ್ದರು. ಕವಿ ರನ್ನನು ತನ್ನ ಮಕ್ಕಳಿಗೆ (ಚಾವುಂಡ)ರಾಯ ಮತ್ತು ಅತ್ತಿಮಬ್ಬೆ ಎಂದು ಹೆಸರಿಟ್ಟುದನ್ನು ಇಲ್ಲಿ ನೆನೆಯಬಹುದು.[10] ಭರತೇಶ್ವರ ದಂಡನಾಯಕ ತನ್ನ ಮಗನಿಗೆ ಬಿಟ್ಟಿದೇವನೆಂದು,[11] ಹಿರಿಯ ಗುತ್ತವಿಕ್ರಮಾದಿತ್ಯ ತನ್ನ ಮಗನಿಗೆ ಕುಮಾರ ವೀರ ಪಾಂಡ್ಯನೆಂದು ಹೆಸರಿಟ್ಟುದು[12] ಶಾಸನೋಕ್ತ ಉದಾಹರಣೆಗಳಾಗಿವೆ.

ಹೀಗೆ ಸ್ತ್ರೀ ನಾಮಕರಣ ವೈವಿಧ್ಯಪೂರ್ಣವೂ ರೋಚಕವೂ ಎನಿಸಿದೆಯೆನ್ನಬೇಕು.

ಅಡಿ ಟಿಪ್ಪಣಿ

1 ತಮ್ಮ ಕುಲರಾಜಧಾನಿಯಾದ ರೇವಾಪಟ್ಟಣದ ಹೆಸರನ್ನೇ ತಮ್ಮ ಮಕ್ಕಳಿಗಿಟ್ಟು ರಾಜಧಾನಿಯ ಕೀರ್ತಿಯನ್ನು ಉಳಿಸಿರುವರು. ಕನ್ನಡನಾಡೂ ದೇಸಿ ಸಾಹಿತ್ಯವೂ. ಪು. 19 ಮುಳಿಯ ತಿಮ್ಮಪ್ಪಯ್ಯ.

2 'ರೇವಕ ನಿಮ್ಮಡಿ' ಹೆಸರಿನ ಹಲವಾರು ಉದಾಹರಣೆಗಳಿವೆ.
3 ಎ. ಕ. VIII ನಗರ 35 ಕೋಡೂರು (ಕ್ರಿ.ಶ. 1077)
4 ಎ. ಕ. VIII ನಗರ 37 ಹುಂಚ (ಕ್ರಿ.ಶ. 1147)
5 ಎ. ಕ. VIII ನಗರ 37 ಹುಂಚ (ಕ್ರಿ.ಶ. 1147)
6 ಎ. ಕ. VIII ನಗರ 37 ಹುಂಚ (ಕ್ರಿ.ಶ. 1147)
7 ಎ. ಕ. VIII ನಗರ 35 ಹುಂಚ (ಕ್ರಿ.ಶ. 1077)
8 ಎ. ಕ. VIII ನಗರ 35 ಹುಂಚ (ಕ್ರಿ.ಶ. 1077)
9 ಎಸ್. ಆಯ್. ಆಯ್. IX–I–266 ಬಾಗಳಿ (ತಾ.) ಹರಪನಹಳ್ಳಿ (ಕ್ರಿ.ಶ. 1160).
10 ಅಜಿತ ಪುರಾಣ. 12 : 51, 52, 53 (ಸಂ.) ಎಚ್. ದೇವಿರಪ್ಪ ಮತ್ತು ಡಿ. ಜವರೇಗೌಡ.
11 ಎ. ಕ. IV ನಾಗಮಂಗಲ 32 ಅಳೀಸಂದ್ರ (ಕ್ರಿ.ಶ. 1184)
12 ಎಸ್. ಆಯ್. ಆಯ್. XVIII 296 ಹರಳಹಳ್ಳಿ (ತಾ.) ಹಾವೇರಿ (ಕ್ರಿ.ಶ. 1188).

ಈ ಲೇಖನಕ್ಕೆ ಮಾರ್ಗದರ್ಶಕರಾದ ಡಾ. ಎಮ್. ಎಮ್. ಕಲಬುರ್ಗಿಯವರಿಗೆ ಕೃತಜ್ಞತೆಗಳು.

ಪೆರಿಯ ಪುರಾಣ ಹಾಗೂ ನಂಬಿಯಣ್ಣನ ರಗಳೆ

ಎಸ್. ವಿದ್ಯಾಶಂಕರ

(ಸಂಪುಟ 11 ಸಂಚಿಕೆ 3 ರಿಂದ ಮುಂದುವರಿದಿದೆ)

ರಗಳೆಯಲ್ಲಿ ತನ್ನ ನಲ್ಲೆಗಾಗಿ ಹೊನ್ನ ಪೆಟ್ಟಿಗೆಗಳನ್ನು ಉತ್ಸಾಹದಿಂದ ನಂಬಿಯಣ್ಣ 'ನವಚಕೋರಿಗೆ ಚಂದ್ರಿಕೆಯಂ ಕುಟುಂಕುದಪ್ಪಂತೆ ತವೆ ತೋಕಿಲಂಗಂಕುರದ ಕುಟುಕುದಪ್ಪಂತೆ' ತಂದನೆಂದು ಹರಿಹರ ವರ್ಣಿಸುವನು (ಸ್ಥ. 11 ಸಾ. 125–126). ಪರವೆಯರ ಮಾತೆ ಮೆಚ್ಚುವಂತೆ ಹೊನ್ನಿನ ರಾಶಿಯನ್ನು ತಂದು ಸುರಿಯಲಾಯಿತು. ನಂಬಿಯಣ್ಣನ ವಿರಹಚಿಂತೆಯಲ್ಲಿ ಬಾಡಿದ ಲತೆಯಂತೆ, ಕೊರಗಿರ್ದ ಶಶಿಕಳೆಯಂತೆ ಇದ್ದ ಪರವೆ ನಂಬಿಯಣ್ಣನ ಆಗಮನದ ಸುದ್ದಿ ತಿಳಿದು ನಲವಿಂದ ಪ್ರಿಯನ ಬಳಿಗೆ ಬಂದು ನಲಿನಲಿದು ಮಲೆತು ಬಿಗಿಯಪ್ಪಿದಳು. 'ಹಸಿದ ಹಂಸೆಗೆ ಪಾಲ್ಗಡಲು ದೊರಕಿದಂದದಿಂ ಬಿಸಿಲ ಚಾದಗಗೆ ಮುಂಗಾರ್ ದುಸಗಿದಂದದಿಂ' ಈರ್ವರೂ ಸಮಸುಖಸರೋನಿಧಿಯಲ್ಲಿ ಶೋಭಿಸಿದ್ದರು.

ರಗಳೆಯ ಹನ್ನೊಂದನೆಯ ಸ್ಥಲದಲ್ಲಿ ಬರುವ ತಿರುನಾಳ ವೈಭವ ಕಣ್ಣಿಗೆ ಕಟ್ಟುವಂತಿದೆ. ಹರಿಹರ ತನ್ನ ಸಂಚಾರ ಕಾಲದಲ್ಲಿ ತಮಿಳುನಾಡಿನ ತಿರುನಾಳಿನ ಸಂಭ್ರಮದ ಆಚರಣೆಯನ್ನು ಕಣ್ಣಾರೆ ನೋಡಿರಬಹುದು. ಈ ಸಾಂಸ್ಕೃತಿಕವಾದ ವೈಭವ ದೃಶ್ಯವನ್ನು ಹರಿಹರ ಹೀಗೆ ಕೊಟ್ಟಿರುವನು : ತಿರುನಾಳಿನಂದು ಪುರವೆಲ್ಲ ಸಿಂಗರಗೊಂಡಿದೆ. ಸಕಲ ಭಕ್ತರು ಹಾಡುತ್ತ ಆಡುತ್ತ ತಮ್ಮ ಉತ್ಸಾಹವನ್ನು ಪ್ರಕಟಪಡಿಸುತ್ತಿರುವರು. ಆಕಾಶದೆತ್ತರಕ್ಕೆ ಹಾಕಿಸಿರುವ ತೋರಣಗಳು ಮನೋಹರವಾಗಿವೆ. ದೇವತೆಗಳ ಸಮೂಹದಂತೆ ಚೋಳಾದಿ ಅರಸರೆಲ್ಲ ನೆರೆದಿರುವರು. ಪುರಜನರು, ವಿಳಾಸಿನಿಯರು ಮನೋಹರವಾಗುವಂತೆ ಅಲಂಕರಿಸಿಕೊಂಡಿರುವರು. ಸಿಂಗಾರಗೊಂಡ ಮಹಾರಥರು ಗುಂಪುಗೂಡಿರುವರು, ಬೆಟ್ಟದೋಪಾದಿಯಲ್ಲಿ ಆನೆಗಳ ಸಮೂಹವಿದೆ. ನಾನಾ ಭಂಗಿಯಲ್ಲಿ ನಿಂತಿರುವ ಕುದುರೆಗಳ ಮೊತ್ತವಿದೆ. ದೇವಾಲಯದ ಸೇವಕರು ಸಡಗರದಿಂದ ಕೂಡಿರುವರು. ಆಗಸವನ್ನೆಲ್ಲಾ ವೃಷಭ ಧ್ವಜಗಳು ಆವರಿಸಿವೆ. ಅಂಬರದಲ್ಲಿ ಬಾವುಟಗಳು ಹಾರಾಡುತ್ತಿವೆ. ಭೇರಿ, ನಿಸ್ಸಾಳ, ತಂಬಟಗಳ ತಂಡಗಳು ಮಧುರವಾಗಿ ಧ್ವನಿ ಮಾಡುತ್ತಿವೆ. ಅತ್ತಿತ್ತ ಓಡಾಡುತ್ತಿರುವ ಮಹಾರಾಜರುಗಳ ಸಮೂಹ ಸಂಭ್ರಮದಿಂದ ಕೂಡಿದೆ. ಭೋರೆಂಬ, ದಾರಿಬಿಡಿ ಎಂಬ, ಉಘೇ ಚಾಂಗು ಬೊಲ್ಲೆಂಬ, ಇದೋ ಶಿವನು

ಹೊರಬಂದನು ಪಕ್ಕಕ್ಕೆ ಸರಿಯಿರೆಂಬ ಸಂಭ್ರಮದ ನಡುವೆ ಶಿವನು ಉಮೆಯೊಡನೆ ನಡೆದನು. ಆಗ ಕೋಟ್ಯಾನುಕೋಟಿ ಭಕ್ತರ ಹರಕೆಗಳು ಪ್ರಕಟಗೊಂಡವು. ಆನಂದದಿಂದ ಭಕ್ತ ಜನವೆದ್ದು ಕುಣಿದಾಡಿದರು. ಸಕಲ ವೇದ ಘೋಷಗಳ ಸ್ತುತಿಯ ನಡುವೆ ಪಾರ್ವತೀಪರಮೇಶ್ವರರು ನಡೆದು ಬರುತ್ತಿರುವರು. ಸಕಲ ವಾದ್ಯಗಳನ್ನು ವಾದಕರು ಪೈಪೋಟಿಯಿಂದ ನುಡಿಸುತ್ತಿರುವರು. ಧಿಮಿಧಿಮಿಕು ಧುಮುಕು ತತ್ಥೊಂ ಎಂದು ಮದ್ದಳೆಯೂ, ಜವಂಕನಕ ತಕನಕನ ವೆಂದು ಕಾಹಳೆಯೂ, ನಟಟಿಪಕು ಫಣಫಣಕು ಛಿಣಿಲೆಂದು ಆವುಜೆಯೂ, ನಟವಿಕಟ ತಕಟ ಖಿಜಿದ್ದಿಂಬ ಕರಡೆಯೂ ಧ್ವನಿ ಮಾಡುತ್ತಿವೆ. ಧಿಂಧಿಮ್ಮ ಧಿಂಧಿಮ್ಮ, ಧಿಂಧಿಮಿಕ ಧುಮುಕೆಂಬ ಕೋಳಾಹಳದ ನಡುವೆ ಕೆಲವರು ಕುಣಿಯುತ್ತ, ಕೂಗುತ್ತ, ಜಾಳಿಸುತ್ತ, ಜರಿವುತ್ತ, ನೋಡಿ ಹಿಗ್ಗುತ್ತ ನೆಗೆನೆಗೆದು ನಲಿನಲಿದು ಬೊಬ್ಬಿಡುತ್ತಿರುವರು. ಕೆಲವರು ಮೊಗೆಮೊಗೆದು ಪೂಜಾರಸವನ್ನು ಕಣ್ಣಿನಿಂದ ಕುಡಿಯುವರು. ಕೆಲವರು ಉಟ್ಟುದನ್ನು ಹೊದೆದುದನ್ನು ಮರೆತು ನೋಡುವರು. ಕೆಲವರು ದೃಷ್ಟಿ ನಟ್ಟಂತೆ ನೋಡುತ್ತಿರುವರು. ಕೆಲವರು ತಿರುಪಾಡನ್ನು ಓದುತ್ತ ಮೈಮರೆಯುತ್ತಿರುವರು. ಕೆಲವರು ಮರುಳಂತೆ, ಮರನಂತೆ ಸುಮ್ಮನಿರುವರು. ಕೆಲವರು ತಮ್ಮ ಕಣ್ಣನ್ನು ನಿವಾಳಿಸಿ ಮತ್ತೆ ಪಡೆಯುವರು. ಕೆಲವರು ತಮ್ಮ ನುಣ್ಣನೆಯ ತಲೆಯನ್ನು ಎರಿಸಿ ಮತ್ತೆ ಪಡೆಯುವರು. ಚೋಳ ಅರಸರಲ್ಲಿ ಕೆಲವರು ನೆಲವನ್ನು ಉಗ್ಘಡಿಸುತ್ತ ಬರುವರು. ಕೆಲವರು ಅರಸುಗುವರರು ಸಂತೋಷದಿಂದ ಅಡ್ಡಬಿದ್ದು ನೋಡುವರು. ಹೀಗೆ ಸಕಲ ಸಂಭ್ರಮದ ನಡುವೆ ಪಾರ್ವತೀಪರಮೇಶ್ವರರು ನಡೆದು ಬಂದರು (ಸ್ಥ. 11 ಸಾ. 139–180).

ಹರಿಹರನ ನಿರೂಪಣೆಯಂತೆ, ತಿರುನಾಳಿನಂದು ಪಾರ್ವತೀಪರಮೇಶ್ವರರು ಸಶರೀರರಾಗಿ ಭಕ್ತರ ನಡುವೆ ತಿರುವಾರೂರಿನ ಬೀದಿಗಳಲ್ಲಿ ಉತ್ಸವದಿಂದ ನಡೆದು ಬಂದರು. ಇದಿಷ್ಟೇ ಅಲ್ಲ, ಉತ್ಸವ ಪರವೆಯ ಮಾಳಿಗೆಯ ಮುಂದೆ ಬಂದಾಗ ಸಾಕ್ಷಾತ್ ಪಾರ್ವತೀ ಪರಮೇಶ್ವರರೇ 'ಕರೆ ಪರವೆನಾಚಿಯುಂ ನಂಬಿಯಣ್ಣನುಂ' ಎಂದು ಹೇಳುವರು. ಪರವೆ–ನಂಬಿಯರು ಬಂದು ಮಯ್ಯಿಕ್ಕಿ ಕೈಮುಗಿದು ತಿರುನಾಳಿನೊಡನೊಡನೆ ಓಲೈಸುತ್ತ ಬರುವರು. ದಂಪತಿಗಳು ಪಾಡುತ ಪೊಗಳುತ ನೋಡುತ ನಚ್ಚುತ ಆಡುತ ಮಾತನಾಡುತ ಮೆಚ್ಚಿ ಮೆಚ್ಚುತ ಜೊತೆ ಜೊತೆಯಾಗಿ ತಿರುವಾರೂರಿನ ಬೀದಿ ಬೀದಿಗಳಲ್ಲಿ ನಡೆಯುತ್ತ ಅಡಿಗಡಿಗೆ ಹಾಡಿ ಪಡಿಹೊನ್ನನ್ನು ಪಡೆಯುತ್ತ ಶಿವನೊಡನೆ ಬಂದು ಶಿವಭವನವನ್ನು ಪ್ರವೇಶಿಸಿ ಶಿವನನ್ನು ಬೀಳ್ಕೊಂಡು ಹಿಂತಿರುಗುವರು (ಸ್ಥ. 11 ಸಾ. 181–190).

ಪೆರಿಯ ಪುರಾಣದಲ್ಲಿ ಹರಿಹರ ಕೊಡುವ ತಿರುನಾಳಿನ ವೈಭವದ ದೃಶ್ಯವಾಗಲೀ, ಪಾರ್ವತೀ ಪರಮೇಶ್ವರರು ಮಾನವರ ನಡುವೆ ಮಾನವರಾಗಿ ಅವರ ಸಂಖ

ಸಂತೋಷಗಳಲ್ಲಿ ತಾವೂ ಭಾಗಿಗಳಾಗಿ ತಿರುವಾರೂರ ಬೀದಿ ಬೀದಿಗಳಲ್ಲಿ ಉತ್ಸವದಿಂದ ನಡೆದು ಬರುವ ಅಪೂರ್ವ ದೃಶ್ಯವಾಗಲೀ, ಉತ್ಸವದಲ್ಲಿ ಪರವೆ–ಸಂಬಿಯಣ್ಣರನ್ನು ಪಾಲ್ಗೊಳ್ಳುವಂತೆ ಹೇಳಿ ಕಳುಹಿಸುವ ಪ್ರಸಂಗವಾಗಲೀ ಬರುವುದಿಲ್ಲ. ಇವೆಲ್ಲವೂ ಹರಿಹರನ ಭಕ್ತಿ ಪ್ರಪಂಚದ ಸುಂದರ ಕಲ್ಪನೆಗಳು. ದೇವ-ಭಕ್ತರನ್ನು ಹತ್ತಿರ ತರುವ ಭಕ್ತಿ ಪ್ರಪಂಚದ ಅಸದೃಶ ಚಿತ್ರಗಳು.

ಸಂಕಿಲಿನಾಚಿಯ ಪ್ರಸಂಗ ಹರಿಹರ–ಶೇಕ್ಕಿಳಾರದಲ್ಲಿ ಏಕಪ್ರಕಾರವಾಗಿ ಬಂದಿಲ್ಲ. ಪೆರಿಯಪುರಾಣದಲ್ಲಿ ಹೊನ್ನಿನ ಪವಾಡದ ನಂತರ ನಂಬಿಯಾರೂರನು ಪರವೆಯೊಡನೆ ತಿರುವಾರೂರಿನಲ್ಲಿ ಕೆಲದಿವಸ ಸುಖದಿಂದಿದ್ದು, ಬಳಿಕ ತನ್ನ ತೀರ್ಥಕ್ಷೇತ್ರ ಯಾತ್ರೆಯನ್ನು ಮುಂದುವರಿಸುವನು. ಪರ್ಯಟನ ಮಾಡುತ್ತ ತಿರುನಲ್ಲೂರಿಗೆ ನಂಬಿಯಾರೂರ ಬರುವನು. ಅಲ್ಲಿಂದ ತಿರುಕ್ಕಡವೂರಿಗೆ ಹೋಗಿ ಅಲ್ಲಿನ ದೇವಾಲಯದಲ್ಲಿ 'ಮರುವಾರ್ ಕೊನ್ರೈ' ಎಂದು ಪ್ರಾರಂಭವಾಗುವ ಪದಿಕವನ್ನು ಹಾಡುವನು. ಅಲ್ಲಿಂದ ತಿರುಚ್ಚಾಯ್‌ಕಾಡು, ತಿರುನನಿಪಲ್ಲಿ, ತಿರುನನ್ರಿಯೂರ್, ತಿರುನೀಡೂರ್, ತಿರುಪ್ಪುಂಕೂರ್, ತಿರುಕ್ಕೋಲಕ್ಕಾ,* ಶೀಕಾಟಿ–ಈ ಸ್ಥಳಗಳಿಗೆ ಭೇಟಿ ನೀಡಿದನು. ಶೀಕಾಟಿಯಲ್ಲಿ ತಿರುಜ್ಞಾನ ಸಂಬಂಧರ ಪಾದಕ್ಕೆ ವಂದಿಸಿ ಅಲ್ಲಿಂದ ಮುಂದೆ ತಿರುಪ್ಪುರುಕ್ಕಾವೂರ್‌ಗೆ ಬರುವನು. ದಾರಿಯಲ್ಲಿ ನಂಬಿಯಾರೂರನಿಗೆ ಹಸಿವು ನೀರಡಿಕೆಯಾಗಲು ಶಿವನು ಬ್ರಾಹ್ಮಣ ವೇಷದಲ್ಲಿ ಬಂದು ಅವನಿಗೆ ಬುತ್ತಿ ಹಾಗೂ ನೀರನ್ನು ಕೊಡುವನು ; ಬಿಸಿಲಿನಿಂದ ರಕ್ಷಣೆ ಪಡೆಯಲು ಚಪ್ಪರ ಹಾಕಿ ಕೊಡುವನು. ಬಿಸಿಲಿನ ಝಳದಿಂದ ಬಳಲಿ ಶಿವಾಯನಮಃ ಎಂದು ಹೇಳಿ ನಂಬಿಯಾರೂರನು ಚಪ್ಪರದಲ್ಲಿ ಕುಳಿತುಕೊಂಡನು. ಬ್ರಾಹ್ಮಣನು ಬುತ್ತಿಯನ್ನು ಕೊಡುತ್ತಿರುವಾಗ ಬೇಡವೆನ್ನಬಾರದೆಂದು ಅದನ್ನು ಸ್ವೀಕರಿಸಿ ಭಕ್ತರ ಜೊತೆ ಸೇವಿಸಿದನು. ದಣಿವಾಗಿದ್ದುದರಿಂದ ನಂಬಿಯಾರೂರ ಸ್ವಲ್ಪ ಕಾಲ ನಿದ್ರಿಸಿದನು. ನಿದ್ರೆಯಿಂದ ಎಚ್ಚರಗೊಂಡು ನೋಡಿದಾಗ ಬ್ರಾಹ್ಮಣ ಅದೃಶ್ಯನಾಗಿದ್ದನು. ಚಪ್ಪರವೂ ಮಾಯವಾಗಿದ್ದಿತು.* ಶಿವನ ಲೀಲೆಯನ್ನು ನೆನೆದು ಪದಿಕವೊಂದನ್ನು ನಂಬಿಯಾರೂರ ಹಾಡುವನು. ಅಲ್ಲಿಂದ ಮುಂದೆ ತಿರುಕುರುಹಾವೂರ್, ತಿರುಕ್ಕಟಿಪಾಲೈ, ತಿರುತ್ತಿನೈಮಾನಗರ್, ತಿರುನಾವಲೂರ್–ಈ ಸ್ಥಳಗಳನ್ನು ಸಂದರ್ಶಿಸುವನು. ತಿರುನಾವಲೂರ್‌ನ ಭಕ್ತರು ನಂಬಿಯಾರೂರನನ್ನು ಆನೆಯ ಮೇಲೆ ಕೂರಿಸಿ ದೇವಾಲಯಕ್ಕೆ ಕರೆದೊಯ್ಯುವರು. ಅಲ್ಲಿಂದ ಮುಂದೆ ತಿರುತ್ತೊಂಡೈನಾಡಿಗೆ ಪ್ರಯಾಣಮಾಡಿ ಅಲ್ಲಿ ಹಲವಾರು ದೇವಾಲಯಗಳನ್ನು ಸಂದರ್ಶಿಸಿ ತಿರುಕ್ಕಜು

---

* ತಿರುಕೋಲಕ್ಕಾವಲ್ಲಿ ನಂಬಿಯಾರೂರನು ತಿರುಜ್ಞಾನಸಂಬಂಧರು ಚಪ್ಪಾಳೆತಟ್ಟಿ ಹಾಡಿದಾಗ ಶಿವನು ಅವರಿಗೆ ತಾಳವನ್ನು ಕೊಟ್ಟನು ಎಂಬ ಭಾವದ ತಿರುಪ್ಪದಿಕವನ್ನು ಹಾಡಿದನು.

* ಶಿವನ ಈ ಲೀಲೆ ಹರಿಹರನಲ್ಲಿ ಎಲ್ಲೂ ಬಂದಿಲ್ಲ.

ಕ್ಕುಂಡ್ರಂ ಹಾಗೂ ತಿರುಕ್ಕಚ್ಚೂರ್‌ಗೆ ಬರುವನು. ತಿರುಕ್ಕಚ್ಚೂರ್‌ನಲ್ಲಿ ಊಟದ ವೇಳೆಯಲ್ಲಿ ಯಾರೂ ಊಟ ತಂದುಕೊಡಲಿಲ್ಲ. ವನ್‌ತೊಂಡರನಿಗೆ ಹಸಿವಾಯಿತು. ಆಗ ಬಿಳಿತಲೆಯ, ಭಿಕ್ಷಾ ಪಾತ್ರೆಯನ್ನು ಕೈಯಲ್ಲಿ ಹಿಡಿದ, ಬ್ರಾಹ್ಮಣನ ವೇಷವನ್ನು ಶಿವ ಧರಿಸಿ ಬಂದು ನಿಮ್ಮ ಹಸಿವನ್ನು ನಿವಾರಿಸಲು ನಾನು ಭಿಕ್ಷೆಗೆ ಹೋಗಿ ಬರುತ್ತೇನೆ ಎಂದು ಹೇಳಿದನು. ಭಿಕ್ಷೆಯನ್ನು ಬೇಡಿ ತಂದು ನಂಬಿಯಾರೂರನಿಗೆ ಕೊಡಲು ಅವನು ಅದನ್ನು ಸ್ವೀಕರಿಸಿದನು. ಇದ್ದಕ್ಕಿದ್ದಂತೆ ಬ್ರಾಹ್ಮಣ ಅದೃಶ್ಯನಾದುದನ್ನು ಕಂಡು ಇದು ಶಿವನ ಲೀಲೆಯೆಂದೇ ಬಗೆದು ಸಂತಸದಿಂದ ನಂಬಿಯಾರೂರನು ತಿರುಪ್ಪದಿಕವನ್ನು ಹಾಡಿದನು. ಅಲ್ಲಿಂದ ತಿರುಕಾಂಚೀಪುರಂಗೆ ಬಂದಾಗ ಕಂಬೈ ನದಿಯು ಪ್ರವಾಹದಿಂದ ಉಕ್ಕಿ ಹರಿಯುತ್ತಿತ್ತು. ನದಿಯ ದಡದಲ್ಲಿರುವ ಶಿವದೇವಾಲಯುವು ಪ್ರವಾಹದಲ್ಲಿ ಮುಳುಗಿಬಿಡಬಹುದೆಂದು ಹೆದರಿದ ನಂಬಿಯಾರೂರನು ಶಿವನ ಪಾದಗಳನ್ನು ಬಲವಾಗಿ ಹಿಡಿದುಕೊಂಡನು. ಶಿವ ಕೃಪೆಯಿಂದ ದೇವಾಲಯ ಉಳಿಯಿತು. ಅಲ್ಲಿಂದ ತಿರುಕಾಳತ್ತಿಮಲೈಗೆ ನಂಬಿಯಾರೂರ ಪ್ರಯಾಣ ಮಾಡಿದನು. ಕಣ್ಣಪ್ಪನಿಗೆ ಕರುಣೆ ತೋರಿದ ಶಿವನಿರುವ ಮಲೆ ಇದೆಂದು ಮನಸದಲ್ಲಿ ಭಾವಿಸಿ ಅಲ್ಲಿಗೆ ಹೋಗಿ ನಂಬಿಯಾರೂರ ಶಿವನಿಗೆ ವಂದಿಸಿದನು. ಉತ್ತರ ದಿಕ್ಕಿನಲ್ಲಿರುವ ತಿರುಕ್ಕೇದಾರಮಲೈನಲ್ಲಿ ಶಿವನಿರುವನೆಂದು ಭಾವಿಸಿದ ಆರೂರನು ಅಲ್ಲಿಂದಲೇ ಅದನ್ನು ವಂದಿಸಿದನು. ತಿರುಕಾಳತ್ತಿಮಲೈನಿಂದ ಆರೂರ ತಿರುವತ್ತಿಯೂರಿಗೆ ಬರುವನು. ಇಲ್ಲಿಂದ ಮುಂದೆ ಶೇಕ್ಕಿಳಾರ್ ಸಂಕಿಲಿನಾಚ್ಚಿಯ ಕಥೆ ಹೇಳತೊಡಗುವನು. ಅನಿಂದಿತೆಯು ಕೈಲಾಸದಿಂದ ಶಿವನ ಆಜ್ಞೆ ಹೊತ್ತು ಬಂದು ದಕ್ಷಿಣ ದಿಕ್ಕಿನಲ್ಲಿ ಹುಟ್ಟಿದರು. ಆ ಕಥೆಯನ್ನು ಹೇಳುವೆನು ಎಂದು ಪ್ರಾರಂಭಿಸುವನು.

ವೇಳಾಳರ್ ಕುಲದಲ್ಲಿ ಜ್ಞಾಯಿರು ಎಂಬ ಊರಿನಲ್ಲಿ ತಿರುಜ್ಞಾಯಿರ್ ಕಿಳವರ್ ಎನ್ನುವವರಿಗೆ—ಪೂರ್ವಜನ್ಮದಲ್ಲಿ ಅನಿಂದಿತೆಯಾಗಿದ್ದವಳು—ಮಗಳಾಗಿ ಹುಟ್ಟಿದಳು. ಪೂರ್ವಜನ್ಮದಲ್ಲಿ ಇವಳು ಪಾರ್ವತಿಗೆ ಬಹಳ ಪ್ರೀತಿಪಾತ್ರಳಾಗಿದ್ದಳು. ಸಂಕಿಲಿಯಾರ್ ಎಂಬ ಹೆಸರಿನ ಇವಳು ಚಿಕ್ಕಮಕ್ಕಳ ಜೊತೆ ಬೆಳೆಯುತ್ತಿದ್ದಳು. ಇವಳಿಗೆ ಹನ್ನೆರಡು ವರ್ಷ ವಯಸ್ಸಾದಾಗ ಇವಳ ತಂದೆ-ತಾಯಿಯರು ಮಗಳ ಮದುವೆಯ ಬಗೆಗೆ ವಿಚಾರಮಾಡಿ ನಮಗೆ ಹೊಂದುವವರಿಗೆ ಕೊಡೋಣವೆಂದು ನಿಶ್ಚಯಿಸಿದರು. ಇದನ್ನು ಕೇಳಿಸಿಕೊಂಡ ಸಂಕಿಲಿನಿಯಾರ್ ಶಿವನ ಕರುಣೆ ಯಾರಿಗಿದೆಯೋ ಅವರಿಗೆ ನನ್ನನ್ನು ಕೊಡದೆ ಬೇರೆ ಯಾರಿಗೋ ಕೊಡುವೆನೆನ್ನುವರಲ್ಲಾ ಎಂದು ಭಯದಿಂದ ಮೂರ್ಛೆಹೋದಳು. ತಂದೆ-ತಾಯಿಯರು ಮಗಳ ಶುಶ್ರೂಷೆ ಮಾಡಿದರು. ಎಚ್ಚೆತ್ತ ಸಂಕಿಲಿನಿ ತನ್ನ ಮನದ ಆಸೆಯನ್ನು ಅವರಲ್ಲಿ ಮುಚ್ಚುಮರೆಯಿಲ್ಲದೆ ಹೇಳಿಕೊಂಡಳು. ತಂದೆ-ತಾಯಿಯರು ಬೇರೆಯಾರಿಗೂ ಮಗಳ

ಮನಸ್ಸಿನ ನಿಶ್ಚಯ ತಿಳಿಯದಂತೆ ಎಚ್ಚರಿಕೆ ವಹಿಸಿದರು. ಕನ್ಯೆಯನ್ನು ನೋಡಲು ಬಂದವರಿಗೆಲ್ಲಾ ಸಂಕಿಲಿನಿಯ ತಂದೆ-ತಾಯಿಯರು ಏನೇನೋ ನೆಪ ಹೇಳಿ ಕಳುಹಿಸಿ ಬಿಟ್ಟರು. ಕನ್ಯೆ ಕೇಳಲು ಬಂದವರು, ಕನ್ಯೆ ಕೇಳಲು ಕಳುಹಿಸಿದವರು ಒಮ್ಮೆಗೇ ಮರಣವನ್ನಪ್ಪಿದರು. ಇದರಿಂದ ಸಂಕಿಲಿನಿಯ ತಂದೆತಾಯಿಯರಿಗೆ ಬಹಳ ಭಯ ವಾಯಿತು. ಶಿವನೇ ಮಗಳ ಮದುವೆಯನ್ನು ತಪ್ಪಿಸಿದನೆಂದು ಭಾವಿಸಿದ ಅವರು ಮಗಳ ಇಷ್ಟದಂತೆ ಮಾಡಲು ನಿರ್ಧರಿಸಿದರು. ತಿರುವತ್ತಿಯೂರ ಶಿವನಲ್ಲಿಗೆ ಮಗಳನ್ನು ಕರೆದುಕೊಂಡು ಹೋದ ಅವರು ದೇವಾಲಯದ ಬಳಿಯಿರುವ ಕನ್ಯಾಗೃಹ (ಕನ್ನಿಮಾಡ)ದಲ್ಲಿ ಬಿಟ್ಟು ದೇವಾಲಯಕ್ಕೆ ಹೋಗುವಾಗ ಮಗಳಿಗೆ ಬೇಕಾದ ರಕ್ಷಣೆ ಯನ್ನೆಲ್ಲಾ ಒದಗಿಸಿಕೊಟ್ಟು ತಮ್ಮ ಊರಿಗೆ ಹಿಂತಿರುಗಿದರು. ಶಿವನ ಪೂಜೆಗೆ ಹೂವು ತರುವುದು ಹಾಗೂ ಇತರೆ ಸಣ್ಣಪುಟ್ಟ ಕೆಲಸ ಕಾರ್ಯಗಳನ್ನು ಸಂಕಿಲಿನಿ ಮಾಡಿಕೊಂಡು ತಿರುವತ್ತಿಯೂರಲ್ಲಿಯೇ ಇದ್ದಳು. ನಂಬಿಯಾರೂರನು ಶಿವನ ದರ್ಶನಕ್ಕೆಂದು ದೇವಾಲಯಕ್ಕೆ ಬಂದಾಗ ಅಲ್ಲಿಯ ಹೂವಿನ ಮಂಟಪದಲ್ಲಿ ಹೂವನ್ನು ಸಂಕಿಲಿನಿ ಕಟ್ಟುತ್ತಿದ್ದಳು. ಹೊರಗಿನ ಶಬ್ದವನ್ನು ಕೇಳಿ ಕುತೂಹಲದಿಂದ ತೆರೆ ಯನ್ನು ಸರಿಸಿ ನೋಡಲು ಆಗ ನಂಬಿಯಾರೂರ ಅವಳ ದೃಷ್ಟಿಗೆ ಬಿದ್ದನು. ಅವನು ಇವಳನ್ನು ನೋಡಿದನು. ಚಂದ್ರನ ಕಿರಣಗಳಿಂದ ಸೃಷ್ಟಿಸಿದ ನನ್ನ ಮನಸ್ಸನ್ನು ಚಂಚಲಗೊಳಿಸಿದ ಈ ಹುಡುಗಿ ಯಾರು ? ಎಂದು ಕೇಳಲು ಸುತ್ತ ನೆರೆದಿದ್ದವರು ಇವಳ ಹೆಸರು ಸಂಕಿಲಿಯಾರ್, ದೇವಾಲಯದಲ್ಲಿ ಶಿವನಿಗೆ ಸೇವೆ ಸಲ್ಲಿಸುತ್ತಲಿರುವಳು ಎಂದರು. ಪರವೆಯ ಜೊತೆಗೆ ಇವಳೂ ಒಬ್ಬಳು ಆಗಬಹುದೇನೋ ಎಂದು ಆರೂರ ವಿಚಾರ ಮಾಡಿದನು. ಶಿವನಿಗೇ ಜೀವವನ್ನರ್ಪಿಸಿರುವ ನನ್ನನ್ನು ಇವಳು ಉತ್ತೇಜಿಸಿರುವಳಲ್ಲ. ಇವಳು ಹೂವನ್ನು ಕಟ್ಟುತ್ತಿರುವುದಷ್ಟೇ ಅಲ್ಲ ನನ್ನ ಮನಸ್ಸನ್ನೂ ಕಟ್ಟಿಹಾಕುತ್ತಿರುವಳು. ಇವಳನ್ನು ನನಗೆ ಅನುಗ್ರಹಿಸುವಂತೆ ಶಿವನನ್ನೇ ಕೇಳುವೆನೆಂದು ದೇವಾಲಯದ ಒಳಗೆ ಆರೂರ ಹೋದನು. ಶಿವನನ್ನು ಸ್ತುತಿಸುತ್ತಾ ದ್ವಿಪತ್ನಿಯರನ್ನು ಹೊಂದಿರುವ ಶಿವನೇ, ನಿನಗೆ ಹೂವನ್ನು ಕಟ್ಟು ತ್ತಿರುವ ಈ ಮಾಲೆಗಾತಿಯನ್ನು ನನಗೆ ಕೊಡು. ಈಕೆ ನನ್ನ ಮನಸ್ಸನ್ನು ಛಿದ್ರಿಸಿರು ವಳು. ನನ್ನ ಮೇಲೆ ಕರುಣೆದೋರು ಎಂದು ಬೇಡಿದನು. ಸಂಕಿಲಿನಿಯನ್ನು ಆರೂರನಿಗೆ ತಂದುಕೊಂಡುವ ಆಶ್ವಾಸನೆಯನ್ನು ಶಿವನು ನೀಡಿದನು.

ರಗಳೆಯಲ್ಲಿ ನಂಬಿಯಾರೂರನ ತೀರ್ಥಕ್ಷೇತ್ರ ಪರ್ಯಟನದ ವಿವರಗಳು ದೀರ್ಘವಾಗಿ ಬರುವುದಿಲ್ಲ. ಹರಿಹರನ ಪ್ರಕಾರ ನಂಬಿಯಣ್ಣನು ತೀರ್ಥಕ್ಷೇತ್ರಗಳಿಗೆ ಭೇಟಿ ನೀಡುವ ಉದ್ದೇಶದಿಂದಲೇ ಹೊರಟವನಲ್ಲ. ವೈಘಾಸಿ ತಿರುನಾಳು ಬರುತ್ತಿರುವಾಗ ಪ್ರಥಮ ಪರ್ವದಲ್ಲಿ ಆಗಬಹುದಾದ ಖರ್ಚುವೆಚ್ಚಗಳ ವಿಚಾರ ಪರವೆಯ ಮಾತೆಯ ಮನಸ್ಸಿನಲ್ಲಿ ಮೂಡುವ ಮುನ್ನ ಹಣವನ್ನು ಹೊಂದಿಸುವ

ಆಲೋಚನೆ ಮಾನಿಗಳರಸನಾದ ನಂಬಿಯಣ್ಣನಲ್ಲಾಯಿತು. ತಕ್ಷಣ ಮಂತ್ರಿ ತುಂಬುರನನ್ನು ಕರೆಯಿಸಿ 'ನಮಗೆ ಶಿವಂ ಸಮಕಟ್ಟಿದ ಪಡಿವೊನ್ನಳಂ ಕುಡದ ದೇವಾಲಯಂಗಳೆಲ್ಲಿಯುಂಟು ?' ಎಂದು ಕೇಳಿದನು. ಉತ್ತರಭಾಗದತ್ತ ನಡೆಯುವುದಂ ಒಳ್ಳೆಯದೆಂದು ಮಂತ್ರಿ ಬಿನ್ನವಿಸಿದನು. ಪೆರುಮಾಳಲೆಯ ಕುಱುಂಬರು ಆಶೀರ್ವದಿಸಿ ನಂದಿಕೋಲನ್ನು ಹಿಡಿದು ಕುಣಿಯುತ್ತ ಮುಂದೆ ನಡೆದರು. ತನ್ನ ಪಟ್ಟದಾನೆಯೇರಿ ಸೈನ್ಯದೊಂದಿಗೆ ಉತ್ತರದ ಕಡೆ ನಂಬಿಯಣ್ಣ ನಡೆದನು. ಹೀಗೆ ಹರಿಹರ ತನ್ನ ಕಥಾನಾಯಕನ ಪ್ರಯಾಣಕ್ಕೆ ಕೊಡುವ ಕಾರಣ ಅರ್ಥಪೂರ್ಣವಾಗಿದೆ. ತನ್ನ ಕಟ್ಟಕ್ಕರೆಯ ಮಗನನ್ನು ಅಗಲಲಾರದೆ ಶಿವ ಬಯಲನುಟ್ಟು ಬೆನ್ನಹಿಂದೆಯೇ ಬಂದನಂತೆ. ಉತ್ತಮಸತ್ವನಾದ ನಂಬಿಯು ಹಲವು ಶಿವಪುರಗಳಲ್ಲಿ ಪಡಿವೊನ್ನಳನ್ನು ಪಡೆಯುತ್ತ ಪರವೆಯ ಗುಣ ಅವನ ಮನಸ್ಸನ್ನು ಚಂಚಲಗೊಳಿಸುತ್ತಲಿರಲು ವಿರಹ ವಿಹ್ವಲನಾಗುತ್ತ ಹಲವಾರು ಸ್ಥಳಗಳಿಗೆ ಹೋಗಿ ಕಂಚಿಗೆ ಬರುವನು. ಅಲ್ಲಿ ಏಕಾಮ್ರನಾಥನನ್ನು ಕಂಡು ಭಕ್ತಿಫಲವನ್ನು ಅವನಿಂದ ಕೊಂಡು ಅಲ್ಲಿಂದ ಮುಂದೆ ಸಾಗಿ ತಿರುವತಿಯೂರಿಗೆ ಬರುವನು.

ತಿರುವತ್ತಿಯೂರ ಅರಸನ ದೇವಾಲಯದ ಬಾಗಿಲಿಗೆ ಬಂದು ಪಟ್ಟದಾನೆಯಿಂದ ಇಳಿದು ಒಳಗೆ ಪ್ರವೇಶಿಸಿ ಪ್ರದಕ್ಷಿಣೆ ಮಾಡಿಬರಲು ನಿಶ್ಚಯಿಸಿ ಸೌಂದರನು ನಡೆದು ಬರುವಾಗ ಮುಂದೆ ಕಟ್ಟಿದ್ದ ಪಚ್ಚೆಯ ಜವನಿಕೆಯನ್ನು ಕಂಡು ತನ್ನ ಕಠಾರಿಯ ಕೋಲಿಂದ ಛೋಂಕನೆ ಮೇಲೆತ್ತಿದನು. ಹರಿಹರ ಈ ಸಂದರ್ಭವನ್ನು ಅತಿಶಯವಾಗಿ ವರ್ಣಿಸುತ್ತ ಪತಿಯನ್ನು ಬಯಸಿ ಶಿವನನ್ನು ಒತ್ತಾಯಿಸಿದ ಸಂಕಿಲಿನಾಚಿಯರ ಮನವನ್ನು ಎತ್ತುವಂತೆ ಪಚ್ಚೆಯ ತೆರೆಯನ್ನು ನಂಬಿಯಣ್ಣನು ಸರಿಸಿದನೆನ್ನುವನು (ಸ್ಥ. 12 ಸಾ. 44–45). ಹಂಸತೂಳದ ಎಳಗದ್ದುಗೆಯ ಮೇಲೆ ಕುಳಿತು ಕಮಲದ ಸೂತ್ರವನ್ನು ಕರಪಲ್ಲವದಲ್ಲಿ ಹಿಡಿದು ಇರವಂತಿಯ ಹೂವೊಂದನ್ನು ಎತ್ತಿ ಕಟ್ಟಿ ಮತ್ತೊಂದನ್ನು ಎತ್ತಲಾರದೆ ಬಳಲಿ ಬೆವರಿ ಹೊಂಬಾಳೆಯ ಬೀಸಣಿಗೆಯಿಂದ ಮೆಲ್ಲ ಮೆಲ್ಲನೆ ಬೀಸಿಕೊಳ್ಳುತ್ತ ನವಯೌವನದೊಳಗಿರುವ ಬೆಳ್ದಿಂಗಳ ತಿರುಳ ಪುತ್ಥಳಿಯಂತಿದ್ದ ಸಂಕಿಲಿನಾಚಿಯರ ನೋಟದೊಡನೆ ತನ್ನ ನೋಟವು ಒಮ್ಮೆಗೇ ಸಂಧಿಸಲು, ಹಳಿಲನೆ ಮನವು ಬಿದ್ದು ನೆನಹು ಉಡುಗಿ ನಡೆಗೆಟ್ಟು ಕಂಪಿಸಿ ನಸುಬೆವರಿ ದೃಷ್ಟಿ ಒಂದನೊಂದು ತಾಕಿ ಹಿಮ್ಮೆಟ್ಟಲಾರದೆ ಈರ್ವರ ಮನದೊಳಗೆ ಸೇರಿದ ರೂಪು ಹಿಂತಿರುಗಲಾರದೆ ಪರಸ್ಪರ ಎವೆಯಿಕ್ಕದೆ ನೋಡುತ್ತಿರಲು ಇದೇ ಸಮಯವೆಂದು ಮದನನು ಪುಷ್ಪಬಾಣಗಳ ಸುರಿಮಳೆಯನ್ನು ಕರೆದನು. ಇದನ್ನು ಕಂಡ ಸಂಕಿಲಿಯ ಸಖಿಯರು ತಮತಮಗೆ ಹೆದರಿ ಅವರಿಬ್ಬರ ನೋಟವನ್ನು ಎರಡು ತುಂಡು ಮಾಡುವಂತೆ, ಕಂಡ ಸುಖವನ್ನು ಭಗ್ನಗೊಳಿಸುವಂತೆ ಮೇಲೆತ್ತಿದ ಜವನಿಕೆಯನ್ನು ಛೋಂಕನೆ ಸಡಿಲಿಸಿ ಮರೆಮಾಡಿದರು. "ಇದೇನಿದೇನಭವಪೂಜೆ ಮನೋಭವಪೂಜೆಗಿಕ್ಕಿತು

ಇದೆಲ್ಲಿಯ ಲಾವಣ್ಯದ ಲಾವುಲಿಗಂ ಜವ್ವನದ ಸೂಜಿಕಾಜಿಂ ಮನದ ಮಲ್ಲಳಿಕಾಜಿಂ ಬಂದಂ ಏಗುವೆನೇಗುವೆಂ ಕುಲಮುಂ ಕಲಕಿದಂ ಚಿತ್ತದ ದಳವುಳಿಕಾಜ ಮುಗುಳಂ ಮಿಸಲ್ವೋಗಿಸಿದಂ ತೀವಿದಮೃತವಂ ತುಳುಂಕಿದಂ ಚಂದ್ರಿಕೆಯುಂ ಬಿಂದುಗಳಿದಂ ಓವೋವೊ" ಎಂದು ಸಖಿಯರು ಗುಂಪುಗೂಡಿ ಭೋಂಕನೆ ಸಂಕಿಲಿಯನ್ನು ಅವಳ ಮನೆಗೆ ಒಯ್ದರು (ಸ್ಥ. 12 ಸಾ. 56–64).

ನಂಬಿಯಣ್ಣನು ದೇವರ ಪ್ರದಕ್ಷಿಣೆಮಾಡಿ ಬಂದು ಐದಾರು ಹೆಜ್ಜೆ ಹಾಕುವಷ್ಟರಲ್ಲೇ ಏಳೆಂಟು ಅವಸ್ಥೆಗೆ ಒಳಗಾಗಿ ಶಿವನಲ್ಲಿಗೆ ಬಂದು ಎಲೆಯೆಲೆ ದೇವಾ ಪ್ರಮಾಣ ಪತ್ರವನ್ನು ಕೊಡುಕೊಡು ಕೊಟ್ಟ ಬಳಿಕಲ್ಲದೆ ಮಾತಾಡೆನೆಂಬ ಅವನ ಅಳಲ್ನುಡಿಯನ್ನು ಕೇಳಿ ಶಿವ ಅಚ್ಚರಿಗೊಂಡನು. ಇದೇನಿದು ಮಗನೆ ನಿಷ್ಕಾರಣವಾಗಿ ಮುನಿಯುತ್ತಿರುವೆ. ಮುನಿಸಿಗೆ ಕಾರಣವನ್ನು ಹೇಳಿ ಬಳಿಕ ಮುನಿವುದು ಎಂದು ಶಿವ ಹೇಳುವನು. ಆದಕ್ಕೆ ನಂಬಿಯುಂ "ದೇವದೇವ ನಿಮ್ಮರಮನೆಯ ಪರಿಸೂತ್ರದೊಳೊರ್ವ ಸಂಕಿಲಿನಾಚಿಯರೆಂಬನರ್ಘ್ಯರತ್ನಮಂ ಕಂಡೆನೆನಗಾ ಕನ್ನಿಕೆಯುಂ ಮಾಡಿಕೊಡುವುದು" ಎಂದು ಶಿವನನ್ನು ಬೇಡುವನು. ಆ ಮಾತು ಕೇಳುತ್ತಿದ್ದಂತೆಯೇ ಶಿವ ಕಿವಿಯನ್ನು ಮುಚ್ಚಿಕೊಳ್ಳುತ್ತ "ಇದಾವ ದುರುಳತನವಿದಾವ ಮೂರ್ಖತ್ವವಿದಾವ ಪಾಪದ ಸರಸವಿದಂ ನುಡಯುದಿರ್ ಅವರ ಕುಲಕ್ಕೆ ಕನ್ನಡಿ ಕಲ್ಮಷಂ ಮಾರ್ತಂಡಂ ಮಲಿನಂ ಆ ಮಾತನಾಡದಿರ್" ಎಂದು ಹುಸಿಕೋಪ ನಟಿಸುವನು. ನಂಬಿಯನ್ನು ಮತ್ತೂ ಹೆದರಿಸುತ್ತ ಅವಳನ್ನು ಬಾಲ್ಯದಲ್ಲಿಯೇ ರಾಜಕುಮಾರನೊಬ್ಬನಿಗೆ ಕೊಡಲು ತೀರ್ಮಾನವಾಗಿದ್ದಿತು. ಅವನು ಸಾಯಲು ಅವನೇ ತನ್ನ ಗಂಡ ' ಅವನ ಮರಣಾನಂತರ ತನಗಿದೇ ಬಾಳು ಎಂದು ಸರ್ವಶುಚಿಯಾಗಿ ಕಟ್ಟುಬ್ಬಟೆಯಿಂದ ನಡೆಸುತ್ತಿರುವಳು. ಅವಳ ತಂದೆತಾಯಿಯರಿಗೆ ವಿಷಯ ತಿಳಿದರೆ ನನ್ನನ್ನೂ ನಿನ್ನನ್ನೂ ಇಲ್ಲವಾಗಿಸುವರು. ಮರುಳು ಮಗನೆ ಇದನ್ನು ಬಿಡು ಬಿಡು ಬಿಟ್ಟು ಕಳೆ ಎಂದು ಹೇಳುವನು. ಅದನ್ನು ಕೇಳಿದ ನಂಬಿಯಣ್ಣ ಸಿಡಿಮಿಡಿಗೊಂಡು 'ಮೊಲೆಗೊಡದ ತಾಯ ಕಾಲ ಬಾಯ ಶಿಶು ನಾಲಗೆಗಿತ್ತಳುವಂತೆ' ರಂಗಮಂಟಪದಲ್ಲಿ ಬಿದ್ದು ಹೊರಳಾಡಿ ಮನಕರಗುವಂತೆ ಶಿವನನ್ನು ಬೇಡುವನು. ನಂಬಿಯ ಮೇಲೆ ಕರುಣೆ ತೋರಿದ ಶಿವ ಅವನನ್ನು ಸಮಾಧಾನಿಸುತ್ತಾ "ಹೋ ಹೋ ಮಗನೆ ಇನಿತಾಸುರವೇಕಂಜದಿರಂಜದಿರ್ ಮೆಲ್ಲನೆ ಪೋಗಿ ವಿಚಾರಿಸಿ ಬಂದೆಪೆನೇಳೇಳ್" ಎನ್ನುವನು. ಶಿವನ ಮಾತಿನೊಡನೆ ನಂಬಿಗೆ ಜೀವ ಬಂದಂ ಚೆನ್ನಾಗಿ ಕುಳಿತುಕೊಳ್ಳುವನು. ಶಿವ ಪ್ರೀತಿಯಿಂದ ತನ್ನ ಮಗನ ಮೈಯನ್ನು ತಡವಿ ಪ್ರಸಾದವನ್ನು ಚಿಲುಪಾಲನ್ನು ಕುಡಿಸಿ ಬಾಯ ತಂಬುಲವನ್ನು ಕೊಟ್ಟು ಪರಿಮಳದ್ರವ್ಯವನ್ನು ಬೀಳುಡೆ ಸಹಿತ ಅನುಗ್ರಹಿಸುವನು (ಸ್ಥ. 12 ಸಾ. 73–90).

ಪ್ರತಿಭಾಶಾಲಿಯಾದ ಹರಿಹರ ತನ್ನ ಪ್ರತಿಭೆಯ ಕುಂಚದಿಂದ ಸಂದರ್ಭ ಸನ್ನಿವೇಶಗಳಿಗೆ ಜೀವತುಂಬಿ ಚಿತ್ತಾಕರ್ಷಕವಾಗಿಸುವನು. ಅವನ ಕವಿಹೃದಯ ನಾಟಕೀಯ ಸನ್ನಿವೇಶಗಳನ್ನು ಕಲ್ಪಿಸುತ್ತದೆ; ಪಾತ್ರಗಳು ಸೊಗಸಾಗಿ ಅಭಿನಯಿಸುವಂತೆ

ಸಂದರ್ಭಗಳನ್ನು ತರುತ್ತದೆ. ಆ ಲೀಲಾಮಯ ದೃಶ್ಯ ಜಗತ್ತು ಸಹೃದಯರ ಮನವನ್ನೆಲ್ಲಾ ವ್ಯಾಪಿಸಿ ಪುಳಕಗೊಳಿಸುತ್ತದೆ. ನಂಬಿಯಾರೂರ–ಸಂಕಿಲಿನಿಯರ ಪ್ರಥಮ ಭೇಟಿಯ ಸಂದರ್ಭ ಶೇಕ್ಕಿಳಾರನಲ್ಲಿ ನೀರಸವಾಗಿ ಬರುತ್ತದೆ. ಹರಿಹರ ಈ ಸಂದರ್ಭದಲ್ಲಿ ಲೀಲಾಜಾಲವಾಗಿ ಒಂದು ಸೊಗಸಾದ ನಾಟಕೀಯ ದೃಶ್ಯವನ್ನು ಕಲ್ಪಿಸುವನು. ರಸಸ್ಥಾನಗಳನ್ನು ಗುರುತಿಸುವ ತೀಕ್ಷ್ಣಬುದ್ಧಿಶಕ್ತಿ ಅವನಲ್ಲಿದೆ. ಶೇಕ್ಕಿಳಾರನ ಶಿವ ನಂಬಿಯಾರೂರನ ಕೋರಿಕೆಯನ್ನು ಈಡೇರಿಸಲು ಹಿಂದುಮುಂದೆ ನೋಡದೆ ಒಪ್ಪಿಕೊಳ್ಳುವನು. ಹರಿಹರ ಇಲ್ಲೊಂದು ರಸಸ್ಥಾನವನ್ನು ಗುರುತಿಸು ವನು. ತನ್ನ ಕಥಾನಾಯಕ ಹಾಗೂ ಶಿವ ಇವರೀರ್ವರ ನಡುವಿರುವ ಅಪೂರ್ವವಾದ ಭಾವಮೈತ್ರಿಯನ್ನು ಮನದಂದು ಒಂದು ಸುಂದರ ನಾಟಕೀಯ ದೃಶ್ಯವನ್ನು ಇಲ್ಲಿ ಕಲ್ಪಿಸುವನು. ನಂಬಿಯಣ್ಣ ಹಾಗೂ ಸಂಕಿಲಿನಿಯರು ಮೊದಲ ನೋಟದಲ್ಲೇ ಪರಸ್ಪರ ಅನುರಾಗಗೊಳ್ಳುವುದು, ನಿಷ್ಕಾರಣವಾಗಿ ಮುನಿಸುಗೊಂಡ ತನ್ನ ಭಕ್ತ ನನ್ನು ಶಿವ ಸಮಾಧಾನಿಸುವುದು, ಸಂಕಿಲಿನಾಚಿಯನ್ನು ನಂಬಿಯಣ್ಣ ಬೇಡಿದಾಗ ಶಿವ ಹೆದರಿದಂತೆ ನಟಿಸಿ ಆ ಕೋರಿಕೆಯನ್ನು ಕೈಬಿಡುವಂತೆ ನಂಬಿಯನ್ನು ರಮಿಸು ವುದು, ನಂಬಿಯಣ್ಣ ತನ್ನ ಕೋರಿಕೆಯನ್ನು ಈಡೇರಿಸಲೇಬೇಕೆಂದು ಚಿಕ್ಕಮಕ್ಕಳಂತೆ ನೆಲದಮೇಲೆ ಬಿದ್ದು ಹೊರಳಾಡಿ ಮನಕರಗುವಂತೆ ಶಿವನನ್ನು ಬೇಡುವುದು, ಕರುಣಾಮಯಿಯಾದ ಶಿವ ತನ್ನ ಭಕ್ತನ ಇಷ್ಟಾರ್ಥ ಪೂರೈಸುವೆನೆಂದು ಅಭಯ ನೀಡುವುದು—ಇಲ್ಲೆಲ್ಲಾ ಹರಿಹರನ ದೃಶ್ಯಕಲ್ಪನೆ ಅಪೂರ್ವದ್ದಾಗುತ್ತದೆ. ಅವನ ಪಾತ್ರಗಳು ನಮ್ಮ ಕಣ್ಣಮುಂದೆ ಜೀವಗೊಂಡು ನಲಿದಾಡುತ್ತವೆ.

ಪೆರಿಯಪುರಾಣದಲ್ಲಿ ಸಂಕಿಲಿಯನ್ನು ನಂಬಿಯಾರೂರನಿಗೆ ತಂದುಕೊಡುವ ಆಶ್ವಾಸನೆ ಕೊಟ್ಟ ಶಿವನು ಬ್ರಾಹ್ಮಣ ವೇಷದಲ್ಲಿ ಸಂಕಿಲಿನಿಯ ಕನಸಿನಲ್ಲಿ ಬಂದು ತಿರುವೆಣ್ಣೈನಲ್ಲೂರಿನಲ್ಲಿ ಆಳ್ಗೊಂಡ ನನ್ನ ಭಕ್ತ ನಂಬಿಯನ್ನು ನೀನು ಮದುವೆ ಯಾಗೆನ್ನುವನು. ಸಂಕಿಲಿಯು ಶಿವನ ಮಾತಿಗೆ ಒಪ್ಪಿ ತಿರುವತ್ತಿಯೂರಿನಲ್ಲಿ ಅವನು ಸದಾ ಇರುವವನಾಗಬೇಕು ಎಂಬ ನಿಬಂಧನೆಯನ್ನು ವಿಧಿಸಿದಳು. ನಿನ್ನನ್ನು ಬಿಟ್ಟು ಹೋಗದಂತೆ ಅವನು ನನ್ನ ಮುಂದೆ ಪ್ರತಿಜ್ಞೆ ತೊಡುವನೆಂದು ಹೇಳಿ ಅವಳನ್ನು ಶಿವ ಒಪ್ಪಿಸುವನು. ಶಿವ ನಂಬಿಯಲ್ಲಿಗೆ ಬಂದು ಸಂಕಿಲಿನಿಯು ಒಡ್ಡಿದ ನಿಬಂಧನೆ ಯನ್ನು ತಿಳಿಸುವನು. ಈ ಮದುವೆಗಾಗಿ ನಾನು ಏನನ್ನು ಬೇಕಾದರೂ ಮಾಡಿ ಯೇನು ಎಂದು ನಂಬಿಯಣ್ಣ ಶಿವನಿಗೆ ಹೇಳುವನು. ಶಿವ ನಂಬಿಯನ್ನು ಮತ್ತೇನು ಬೇಕು ಎಂದು ಕೇಳುವನು. ಅದಕ್ಕೆ ನಂಬಿಯು ನಾನು ಪ್ರತಿಯೊಂದು ಶಿವಸ್ಥಾನ ಗಳಿಗೂ ಹೋಗಿಬರುತ್ತಿರುತ್ತೇನೆ. ಪ್ರತಿಜ್ಞೆ ಕೈಗೊಂಡರೆ ಅದಕ್ಕೆ ಇದರಿಂದ ಅಡ್ಡಿ ಯಾಗುತ್ತದೆ. ಆದ್ದರಿಂದ ನಾನು ಪ್ರತಿಜ್ಞೆ ತೊಡುವಾಗ ನೀವು ದೇವಾಲಯ ದಲ್ಲಿರಬಾರದು. ಮಕಿಜ್ ಮರದ ಕೆಳಗೆ ಇರಬೇಕು ಎಂದು ಕೇಳಿಕೊಳ್ಳುವನು. ಶಿವನು ಅದಕ್ಕೆ ಒಪ್ಪುವನು. ನಂತರ ಶಿವನು ಸಂಕಿಲಿಯ ಕನಸಿನಲ್ಲಿ ಕಾಣಿಸಿಕೊಂಡು ನಂಬಿಯು ನನ್ನ ಎದುರಿಗೆ ಪ್ರತಿಜ್ಞೆ ಮಾಡದೆ ಮಕಿಜ್ ಮರದ ಕೆಳಗೆ ಮಾಡುವೆ

ನೆನ್ನುವನು. ಈ ವಿಷಯ ನಿನಗೆ ತಿಳಿಸುತ್ತಿದ್ದೇನೆ ಎಂದು ಹೇಳಿ ಮಾಯವಾಗುವನು. ಶಿವ ತನ್ನ ಕನಸಿನಲ್ಲಿ ಬಂದು ಹೇಳಿದ್ದಕ್ಕೆ ಸಂತೋಷಪಟ್ಟ ಸಂಕಿಲಿಯು ಅದನ್ನು ತನ್ನ ಚೇಟಿಯರಿಗೂ ತಿಳಿಸುವಳು. ಅವರೂ ಸಂತೋಷಪಡುವರು. ಸಂಕಿಲಿಯು ಪುಷ್ಪಹಾರವನ್ನು ಶಿವನಿಗೊಪ್ಪಿಸುವ ಕಾಲವನ್ನರಿತು ಅವಳು ಹೋಗುವ ದಾರಿಯಲ್ಲಿ ನಂಬಿಯಾರೂರ ಬಂದು ನಿಂತನು. ಸಂಕಿಲಿಯು ತನ್ನ ಚೇಟಿಯರೊಡನೆ ಬರಲು ಅವಳ ಎದುರಿಗೆ ಬಂದು ನಿಂತ ನಂಬಿಯಾರೂರ ಅವಳೊಡ್ಡಿದ ನಿಬಂಧನೆಗೆ ತಾನು ಒಪ್ಪುವುದಾಗಿ ತಿಳಿಸುವನು. ಸಂಕಿಲಿ ನಾಚಿಕೊಂಡು ದೇವಾಲಯದೊಳಗೆ ಹೋದಳು. ಅವಳನ್ನು ಅನುಸರಿಸಿದ ನಂಬಿ ಅವಳ ಚೇಟಿಯರ ಬಳಿ ಬಂದು ನಾನು ಶಿವನ ಮುಂದೆ ಪ್ರತಿಜ್ಞೆ ತೊಡುವೆನು. ನಿವ್ಮೊಡತಿ ಶಿವನ ಮುಂದೆ ಬರಲಿ ಎನ್ನುವನು. ಅದಕ್ಕೆ ಚೇಟಿಯರು ದೇವರದೇವನಾದ ಶಿವನ ಮುಂದೆ ನಾವು ಹೀಗೆ ಮಾಡಬಾರದು ಎನ್ನುವರು. ಬೇರೆಲ್ಲಿ ಮಾಡಬೇಕು ಎಂದು ಆರೂರನು ಕೇಳಲು ಅದಕ್ಕೆ ಅವರು ಮಕಿಲ್ ಮರದ ಕೆಳಗೆ ಮಾಡಬೇಕೆನ್ನುವರು. ನಂಬಿಗೆ ಆ ಮಾತು ಕೇಳಿ ಕಸಿವಿಸಿಯಾಯಿತು. ಹೇಳಿದ ಹಾಗೆ ಮಾಡದಿದ್ದರೆ ಕೆಟ್ಟ ಹೆಸರು ಬರುತ್ತದೆ ಎಂದು ವಿಚಾರಮಾಡಿ ಕೊನೆಗೆ ಬೇರೆ ದಾರಿ ತೋರದೆ ಅದಕ್ಕೆ ಒಪ್ಪುವನು. ಪಕ್ಕದಲ್ಲಿಯೇ ಇದ್ದ ಮಕಿಲ್ ಮರವನ್ನು ಸಂಕಿಲಿ ಕಾಣುವಂತೆ ಮೂರುಬಾರಿ ಪ್ರದಕ್ಷಿಣೆ ಮಾಡಿ ಬೇರೆಲ್ಲೂ ಹೋಗದೆ ಸಂಕಿಲಿಯ ಜೊತೆಯಲ್ಲೇ ಇರುವುದಾಗಿ ಪ್ರತಿಜ್ಞೆ ತೊಡುವನು. ತನಗಾಗಿ ನಂಬಿ ಹೀಗೆ ಮಾಡುತ್ತಿರುವುದನ್ನು ಕಂಡು ಸಂಕಿಲಿಯ ಕಣ್ಣು ತುಂಬಿ ಬಂದಿತು. ನಂತರ ನಂಬಿಯು ದೇವಾಲಯಕ್ಕೆ ಹೋಗಿ ಶಿವನಿಗೆ ವಂದಿಸಿ ನೀವು ಮಾಡಿದ್ದು ಚೆನ್ನಾಯಿತೆನ್ನುವನು.* ಪೂಜಾ ವೇಳೆಯಲ್ಲಿ ಶಿವನಿಗೆ ಪುಷ್ಪವನ್ನರ್ಪಿಸುವ ಕೆಲಸ ಮುಗಿಸಿ ಸಂಕಿಲಿ ತನ್ನ ಕನ್ನಿಮಾಡಕ್ಕೆ ಬರುವಳು. ಇವರ ಮದುವೆ ಮಾಡಿ ಮುಗಿಸುವ ವಿಚಾರ ಮಾಡಿದ ಶಿವನು ತಿರುವತ್ತಿಯೂರಿನ ಭಕ್ತರುಗಳ ಕನಸಿನಲ್ಲಿ ಬಂದು ಇವರ ವಿವಾಹಕ್ಕೆ ಏರ್ಪಾಟು ಮಾಡಲು ಹೇಳುವನು. ಭಕ್ತರು ಹಾಗೆಯೇ ಮಾಡಲು ಆಕಾಶದಿಂದ ಪುಷ್ಪವೃಷ್ಟಿಯಾಯಿತು.

ರಗಳೆಯಲ್ಲಿ ನಂಬಿ–ಸಂಕಿಲಿಯರನ್ನು ಶಿವ ಒಂದುಗೂಡಿಸಿದ ಪ್ರಸಂಗ ಸ್ವಾರಸ್ಯಪೂರ್ಣವಾಗಿ ಬಂದಿದೆ. ನಂಬಿಯಣ್ಣನಿಗೆ ಕುಂಟಣಿಯಾಗಲು ಜಂಗಮರೂಪವನ್ನು ಧರಿಸಿದ ಶಿವ ಪಾರ್ವತಿಯನ್ನು ಹೊರಗೆ ನಿಲ್ಲಿಸಿ, ವೀರಭದ್ರಾದಿಗಣಗಳಿಗೆ ವಿಷಯ ತಿಳಿದರೆ ನಂಬಿಗೆ ಪ್ರಮಾದವೆಂದು ಬಗೆದು ಮೆಲ್ಲಮೆಲ್ಲನೆ ಕದ್ದು ಹೊರನಡೆಯುವನು. ಶಿವ ಸಂಕಿಲನಾಚಿಯ ತಂದೆ–ತಾಯಿಯರಾದ ಈಶಾನಸೆಟ್ಟಿ–ಶಿವದೇವಿಯರ ಮನೆಗೆ ಬರುವನು. ಅವನು ಬರುತ್ತಿದ್ದಂತೆಯೇ ಉತ್ಕಟವಾದ ಕೆಂಪು, ಪ್ರಕಾಶಮಾನವಾದ

*ಸುಂದರರ ತೇವಾರಂನ ತಿರುವೆಣ್‌ಪಾಕ್ಕಂ 9ನೇ ಪದ್ಯದಲ್ಲಿ ಈ ಘಟನೆಯ ಉಲ್ಲೇಖ ಬರುತ್ತದೆ.

ಕಿರಣಗಳು ಅವರ ಮನೆಯನ್ನೆಲ್ಲಾ ಆವರಿಸುವುದು. ಇದೆಲ್ಲಿಯ ಅಚ್ಚರಿ! ಆನಂದ ಮೂರ್ತಿಯೇ ರೂಪುಗೊಂಡಿದೆಯಲ್ಲಾ. ಈ ರೂಪು ತಿರುವತ್ತಿಯೂರ ಅರಸನ ಆಕಾರವಾಗದೆ ಇರದು ಎಂದು ಶಿವದೇವಿಯರು ಭಾವಿಸಿ ಜಂಗಮರೂಪಿ ಶಿವನನ್ನು ಇದಿರುಗೊಂಡು ಅಡ್ಡಬಿದ್ದು ನಿಂದು ಕೈಮುಗಿದು, ದೇವ ಹರಿ ವಿರಿಂಚಿಗಳಿಗೆ ಅಗೋಚರವಾದ, ವೇದಗಳು ತಿಳಿಯದ ನಿನ್ನ ಶ್ರೀಪಾದಕಮಲಗಳು ನನ್ನ ಮನದ ತುದಿಯಲ್ಲಿ ಪವಿತ್ರವಾದವು. ನನಗಿಂತ ಧನ್ಯರಾರು ಎಂದೆನ್ನುತ್ತ ಮತ್ತೆ ಮತ್ತೆ ನಮಸ್ಕರಿಸಿ ಆನಂದಭರಿತಳಾಗಿ ಕನಕಮಣಿಭದ್ರಾಸನದಲ್ಲಿ ಕುಳ್ಳಿರಿಸಿ ಪಾದಪ್ರಕ್ಷಾಳನ ಮಾಡಿ ಪಾದೋದಕವನ್ನು ಸ್ವೀಕರಿಸಿ ಸಂತಸವನ್ನು ಅದುಮಿಡಲಾರದೆ ಒಗ್ಗಿ ಅರಳಿದಳು. ಶಿವದೇವಿಯರನ್ನು ಕಾರುಣ್ಯದಿಂದ ನೋಡಿದ ಶಿವ ಸಂಕಿಲಿನಾಚಿ ಎಲ್ಲಿಗೆ ಹೋದಳು ? ಎಲ್ಲಿರುವಳು ? ಎಂದು ಪ್ರಶ್ನಿಸುವನು. ಮನ್ಮಥನ ಬಾಣ ಗಳಿಗೆ ಗುರಿಯಾಗಿ ಕ್ರೀಡಾವನದ ಹೂವಿನ ಹಾಸಿಗೆಯ ಮೇಲೆ ಮಲಗಿ ಶುಶ್ರೂಷೆ ಮಾಡಿಸಿಕೊಳ್ಳುತ್ತಿರುವ ತನ್ನ ಮಗಳ ದೈನ್ಯಸ್ಥಿತಿಯನ್ನು ಶಿವದೇವಿ ತಿಳಿಸುವಳು. ಶಿವ ನಗುತ್ತಾ, ಆ ಕಾರಣದಿಂದಲೇ ನಾನಿಲ್ಲಿಗೆ ಬಂದುದು. ನನ್ನ ಮಗನ ರೂಪ ವನ್ನು ಕಂಡು ಸಂಕಿಲಿಯ ಮನ ಕಲಕಿತು ಎನ್ನುವನು. ಆ ಮಾತ ಕೇಳಿ ಅಚ್ಚರಿ ಗೊಂಡ ಶಿವದೇವಿಯು, ದೇವ ನಿಮಗೆ ಗಣಪತಿ, ಷಣ್ಮುಖ, ವೀರಭದ್ರರಲ್ಲದೆ ನನ್ನ ಮಗಳು ಸೋಲುವಂತಹ ಮಕ್ಕಳಾರಿರುವರು ಎಂದು ಕೇಳುವಳು. ಅದಕ್ಕೆ ಶಿವನು ಈಗ ಮರ್ತ್ಯಲೋಕದಲ್ಲಿ ಒಬ್ಬ ಹೊಸ ಮಗನನ್ನು ಪಡೆದೆವು. ಅವನ ರೂಪು ನನಗಿಂತ ಎರಡು ಪಾಲು ಹೆಚ್ಚು. ಅವನ ಸೊಬಗು ನನಗಿಂತ ನೂರು ಪಾಲು ಮಿಗಿಲು. ಆತನನ್ನು ಸಂಕಿಲಿಯ ಜೊತೆ ಕೂಡುವುದಕ್ಕೆ ನಿಮ್ಮಲ್ಲಿಗೆ ಬಂದೆನು ಎಂದು ಶಿವ ತಿಳಿಸುವನು (ಸ್ಥ. 12 ಸಾ. 93–127).

ಶಿವನೇ ತನ್ನ ಮಗ ನಂಬಿಯಣ್ಣನಿಗೆ ಹೆಣ್ಣು ಕೇಳಲು ಬಂದಾಗ ಶಿವದೇವಿ ಯರು ಹರುಷಪುಳಕಿತೆಯಾಗಿ "ದೇವ ಅಮೃತದ ಮಳೆ ಕೋಳಲ್ ಜೇನನಜಿಸುವರೆ ದೇವ ಪಾಲ್ಗಡಲಿದಿರಲಿಹೆ ಹಯನನಜಿಸುವರೆ ದೇವ ಪುಂಡ್ರೇಕ್ಷುದಂಡದಿ ಪಣ್ಣನಜಿ ಸುವರೆ ದೇವ ಚಂದನದ ಕುಜದೊಳ್ ಕುಸುಮವಜಿಸುವರೆ ನೀವೆ ಬಿಜಯಂಗೆಯ್ಯಲ ಜಿಸಲುಂಟೇ ದೇವ ನೀವೆ ಕೃಪೆಯಿಂ ಬರೆ ವಿಚಾರವುಂಟೇ ದೇವ" (ಸ್ಥ, 13. ಸಾ. 3–8) ಎನ್ನುವಳು. ನಮ್ಮ ಮೇಲೆ ಕರುಣೆಯಿಟ್ಟು ಸಂಕಿಲಿಯನ್ನು ಆತನೊಡನೆ ಕೂಡುವುದು. ಸಂಕಿಲಿಯನ್ನು ನಿಮ್ಮೊಡನೆ ಕಳುಹಿಸಲೆ ? ಈರ್ವರೂ ಪರಸ್ಪರ ಇಷ್ಟಪಟ್ಟಿರುವರು ಇನ್ನು ತಡಮಾಡುವುದೇಕೆ ? ಎಂದು ಬಿನ್ನೈಸುವಳು. ಅವಳ ಉತ್ಸಾಹಕ್ಕೆ ಶಿವನೇ ತಡೆಯೊಡ್ಡುತ್ತ, ಇಷ್ಟು ಬೇಗ ಬೇಡ. ಮುಂದುವರಿಯದಿರು. ನಾವು ತಿಳಿದಿರುವಂತೆ ಅವನು ಅತಿಚಪಲ, ತಿರುವಾರೂರಿನಲ್ಲಿ ಅವನಿಗೆ ಈಗಾಗಲೇ ಓರ್ವಳು ಪ್ರೇಯಸಿಯುಂಟು. ಆ ಕನ್ನೆಯೊಡನೆ ಅವನ ಸ್ನೆಹ ಗಾಢವಾಗಿದೆ.

ಪರವೆನಾಚಿಯೆಂಬದು ಅವಳ ಹೆಸರು. ಅವನಿಗೆ ಆ ನಾಯಕಸ್ತ್ರೀಯಲ್ಲಿ ಗಾಢವಾದ ಮೈತ್ರಿಯುಂಟು. ಅವರದು ಬಿಡಿಸಲಾಗದ ಸಂಬಂಧ. ಅವಳನ್ನು ಬಯಸದಂತೆ, ಅವಳತ್ತ ಮನಸ್ಸು ಹೋಗದಂತೆ ಪ್ರತಿಜ್ಞೆಯನ್ನು ಅವನಿಂದ ಮಾಡಿಸುವುದು. ಅನಂತರ ಅವರಿಬ್ಬರನ್ನು ಒಂದಾಗಿಸುವುದು. ನಂಬಿಯನ್ನು ನಿಮ್ಮಲ್ಲಿಗೆ ಕಳುಹಿಸುತ್ತೇನೆ ಎಂದು ಹೇಳಿ ಶಿವ ತನ್ನ ಆಲಯಕ್ಕೆ ಹಿಂತಿರುಗಿದನು. ಶಿವನ ಆಗಮನವೇ ವರವಾಗಿ, ಅವನ ಕರುಣವೇ ಹರಣವಾಗಿ ನಂಬಿಯಣ್ಣ ಕಾದು ಕುಳಿತಿದ್ದನು. ಅವನನ್ನು ನೋಡಿದ ಶಿವ, ಕಂಡುದ್ದನ್ನು ಬಯಸುವ ಎಲೆ ಮಗನೆ ತುಂಬುರನೊಡನೆ ಹೋಗಯ್ಯ ಎಂದನು. ನಂಬಿಯಣ್ಣ ಅಲಂಕರಿಸಿಕೊಂಡು ತುಂಬುರನ ಕೈವಿಡಿದು ಶಿವದೇವಿಯರ ಮನೆಗೆ ಬಂದನು. ಸಂಕಿಲಿಯ ನಿಮಿತ್ತ ನಂಬಿಯಣ್ಣ ಬಂದಿರುವುದನ್ನು ತಿಳಿದ ಶಿವದೇವಿಯರು ತುಂಬುರನನ್ನು ಏಕಾಂತದಲ್ಲಿ ಕರೆದು ನಂಬಿಗೆ ತಿರುವಾರೂರಲ್ಲಿ ಈಗಾಗಲೇ ಓರ್ವ ಮಾನಿನಿ ಇರವುದರಿಂದ ಇವರ ಚಿತ್ತ ಮುಂದೆ ಚಂಚಲವಾಗುವುದುಂಟು. ಇದಕ್ಕೆ ನಮ್ಮ ಮನದ ಸಂದೇಹವನ್ನು ಪರಿಹರಿಸಲು ದೇವರ ಮುಂದೆ ನಮಗೆ ಪ್ರತಿಜ್ಞೆ ಮಾಡಿಕೊಟ್ಟು ಬಳಿಕ ಸಂಕಿಲಿಯನ್ನು ವಿವಾಸಲಾಗಿ ಸ್ವೀಕರಿಸುವುದು ಎನ್ನುವಳು. ತುಂಬರನು ನಂಬಿಯಣ್ಣನ ಕಿವಿಯಲ್ಲಿ ಶಿವದೇವಿ ಹೇಳಿದುದನ್ನು ತಿಳಿಸುವನು. ಅದಕ್ಕೆ ತನ್ನ ಒಪ್ಪಿಗೆಯುಂಟೆಂದು ಸೌಂದರನು ತಿಳಿಸಿ ಸಂತಸದಿಂದ ದೇವಾಲಯಕ್ಕೆ ಬರುವನು.

ದೇವಾಲಯಕ್ಕೆ ಹಿಂತಿರುಗಿದ ನಂಬಿ ಶಿವನನ್ನು ಕುರಿತು "ಒಂದೊಂದೆ ನೀ ಮಾಡುವುದು ದೇವ ಸಂಕಟಂ ಇಂದು ಸಂಕಿಲಿನಾಚಿಯರ ಮಾತೆ ತಾಂ ದೇವ ಒಂದು ಸೂರುಳ ಪೇಳ್ದಳಿಂದೀಗಳೆಲೆ ದೇವ ನೀನುವುಂ ಬೆಸಕನುಂ ಸ್ವಾಮಿಯುಂ ದೇವಿಯುಂ ಈ ನಿಂದ ಮರದಡಿಯೊಳಿರ್ಪುದೆನಗಾಗಿಯುಂ" ಎಂದು ಕೇಳಿಕೊಳ್ಳುವನು (ಸ್ಥ. 13. ಸಾ. 66–70). ಶಿವ ಅವನ ಕೋರಿಕೆಗೆ ಒಪ್ಪಿ ಮರದಡಿಯಲ್ಲಿರಲು ತನ್ನವರೊಡನೆ ಹೋಗುವನು. ಸೌಂದರನಿಂದ ಪ್ರತಿಜ್ಞೆ ಮಾಡಿಸಲು ಶಿವದೇವಿಯು ದೇವಾಲಯಕ್ಕೆ ಬರುತ್ತಿರಲು ಅವರಿಗಿದಿರಾಗಿ ಸೌಂದರನಿಗೆ ಕಾಣದಂತೆ ಶಿವನು ಹೋಗಿ ಕಂಡು ಮರದಡಿಯಲ್ಲಿ ನಾವಿರುವೆವು. ದೇವಾಲಯದಲ್ಲಿ ಬೇಡ ಮರದಡಿಯಲ್ಲಿ ಪ್ರತಿಜ್ಞೆ ಕೈಗೊಂಡರೆ ಸಾಕು ಎಂದು ತಿಳಿಸಿ ಮತ್ತೆ ಆ ಮರದಬಳಿ ಬಂದಿರಲು, ನಂಬಿಯಣ್ಣನು ಪ್ರತಿಜ್ಞೆ ಮಾಡಲು ದೇವಾಲಯದ ಮುಂದಿದ್ದನು. ಪ್ರತಿಜ್ಞೆಗೆ ಬೇರೆ ವ್ಯವಸ್ಥೆಯಾದುದನ್ನು ಕಂಡ ನಂಬಿಯಣ್ಣ ಶಿವನೇ ಇದೆಲ್ಲವನ್ನು ಮಾಡಿದನೆಂದು ಮನದಲ್ಲಿ ಕೋಪಿಸುತ್ತ ಸಿಡಿಮಿಡಿಗೊಳ್ಳುತ್ತ ಅತ್ತೆಯ ಮುಂದೆ ಪ್ರತಿಜ್ಞೆ ಕೈಗೊಳ್ಳುವನು.

ಪೆರಿಯ ಪುರಾಣದಲ್ಲಿ ಶಿವನು ಬ್ರಾಹ್ಮಣ ವೇಷದಲ್ಲಿ ಸಂಕಿಲಿಯ ಕನಸಿನಲ್ಲಿ ಬಂದು ನಂಬಿಯನ್ನು ಮದುವೆಯಾಗೆಂದು ತಿಳಿಸುವನು. ರಗಳೆಯಲ್ಲಿ ಶಿವ ಜಂಗಮರೂಪು ಧರಿಸಿ ಸಂಕಿಲಿಯ ತಂದೆ–ತಾಯಿಯರಾದ ಈಶಾನಸೆಟ್ಟಿ-ಶಿವದೇವಿಯರ ಮನೆಗೆ

ಬಂದು ತನ್ನ ಮಗ ನಂಬಿಯಣ್ಣನಿಗಾಗಿ ಸಂಕಿಲಿಯನ್ನು ಬೇಡುವನು. ಪೆರಿಯಪುರಾಣದ ಪ್ರಕಾರ ಸಂಕಿಲಿಯ ತಂದೆ ವೇಳಾಳ (=ಶೂದ್ರ) ಕುಲದ ತಿರುಜ್ಞಾಯಿರ್ ಕಿಟಿವರ್ ಎನ್ನುವವರು. (ತಾಯಿಯ ಹೆಸರು ಅಲ್ಲಿ ಹೇಳಲಾಗಿಲ್ಲ.) ಶಿವ ಸಂಕಿಲಿಯ ತಂದೆ–ತಾಯಿಯರನ್ನು ಭೇಟಿಮಾಡುವುದೇ ಇಲ್ಲ. ಸಂಕಿಲಿಯನ್ನು ಶಿವ ಪ್ರತ್ಯಕ್ಷ ಕಾಣುವುದೂ ಇಲ್ಲ. ಅವಳ ಕನಸಿನಲ್ಲಿ ಕಾಣಿಸಿಕೊಂಡು ಅವಳೊಡನೆ ಮಾತನಾಡುವನು. ತಾನು ನಂಬಿಯಾರೂರನೆ ಕೈಹಿಡಿಯಬೇಕಾದರೆ ಅವನು ತಿರುವತ್ತಿಯೂರಲ್ಲಿ ಸದಾ ಇರುವವನಾಗಬೇಕು ಎಂಬ ಶರತ್ತನ್ನು ಸಂಕಿಲಿ ವಿಧಿಸುವಳು. ನಂಬಿಯಾರೂರನಿಗೆ ಪರವೆಯೊಡನೆ ಸಂಬಂಧವಿರುವುದು ಸಂಕಿಲಿಗೆ ಗೊತ್ತಿರುವುದಿಲ್ಲ. ರಗಳೆಯಲ್ಲಿ ಸಂಕಿಲಿಯನ್ನು ನಂಬಿಯಣ್ಣನಿಗೆ ಕೇಳಲು ಹೋಗುವ ಪ್ರಸಂಗ ತೀರಾ ಸಹಜವಾಗಿದೆ. ಈಗಾಗಲೇ ಒಂದು ಹೆಣ್ಣಿನ ಸಂಬಂಧ ಹೊಂದಿರುವ ತನ್ನ ಮಗನಿಗಾಗಿ ಮತ್ತೊಂದು ಹೆಣ್ಣನ್ನು ಕೇಳಲು ಗಂಡಿನ ತಂದೆಯಾದ ಶಿವ ಹೆಣ್ಣು ಹೆತ್ತವರ ಮನೆಗೆ ಬರುವನು. ಶಿವನೇ ಹೆಣ್ಣು ಕೇಳಲು ಬಂದಾಗ ಶಿವದೇವಿ ಹಿಂದುಮುಂದು ನೋಡದೆ ಉತ್ಸಾಹದ ಭರದಲ್ಲಿ ಒಪ್ಪಿಗೆ ನೀಡುವಳು. ಅವಳ ಉತ್ಸಾಹವನ್ನು ಶಿವನೇ ತಡೆದು, ತನ್ನ ಅತಿಕಾಮಿ ಮಗನು ಹೊಂದಿರುವ ಮೊದಲ ಸಂಬಂಧದ ವಿವರವನ್ನು ಮುಚ್ಚುಮರೆಯಿಲ್ಲದೆ ತಿಳಿಸುವನು. ಅಷ್ಟೇ ಅಲ್ಲ, ಚಾಂಚಲ್ಯ ಮನದವನಾದ ನಂಬಿಯಿಂದ ಸಂಕಿಲಿಯನ್ನು ಅಗಲಿ ಹೋಗಲಾರೆನೆಂಬ ಪ್ರತಿಜ್ಞೆ ಪಡೆಯುವಂತೆ ಸಲಹೆಯನ್ನು ನೀಡುವನು. ಪೆರಿಯಪುರಾಣ ಹಾಗೂ ರಗಳೆಯಲ್ಲಿ ಸಮಾನವಾಗಿರುವ ಅಂಶ ಶಿವನೇ ಇಲ್ಲದ ದೇವಾಲಯದಲ್ಲಿ ಪ್ರತಿಜ್ಞೆ ತೊಡುವ ನಂಬಿಯಣ್ಣನ ಪೂರ್ವನಿಶ್ಚಿತ ಸಂಚನ್ನು ಶಿವ ವ್ಯರ್ಥಗೊಳಿಸುವುದು. ಪೆರಿಯಪುರಾಣದಲ್ಲಿ ನಂಬಿಯ ಸಂಚನ್ನು ಸಂಕಿಲಿಗೆ ಶಿವನು ಹೇಳಿದರೆ, ರಗಳೆಯಲ್ಲಿ ಶಿವ ಶಿವದೇವಿಗೆ ತಿಳಿಸುವನು. ಪೆರಿಯಪುರಾಣದಲ್ಲಿ ಶಿವ ತಿರುವತ್ತಿಯೂರ ಭಕ್ತರ ಕನಸಿನಲ್ಲಿ ಕಾಣಿಸಿಕೊಂಡು ಅವರ ಮೂಲಕ ನಂಬಿ-ಸಂಕಿಲಿಯರ ವಿವಾಹದ ಏರ್ಪಾಟು ಮಾಡುವನು. ರಗಳೆಯಲ್ಲಿ ಇವರಿಬ್ಬರಿಗೆ ವಿವಾಹವಾದ ಸೂಚನೆ ಎಲ್ಲೂ ಬರುವುದಿಲ್ಲ. ನಂಬಿ-ಸಂಕಿಲಿಯರನ್ನು ಒಂದುಗೂಡಿಸುವ ಪ್ರಸಂಗ ಪೆರಿಯಪುರಾಣದಲ್ಲಿ ಸಾಮಾನ್ಯರೀತಿಯಲ್ಲಿ ಬಂದಿದ್ದರೆ, ರಗಳೆಯಲ್ಲಿ ನೈಜವಾಗಿ ಸನ್ನಿವೇಶಕ್ಕೆ ತಕ್ಕಂತೆ ಪಾತ್ರಗಳು ಜೀವತಾಳುತ್ತವೆ, ಲವಲವಿಕೆಯಿಂದ ಕೂಡಿದ ಪಾತ್ರಗಳು ಸನ್ನಿವೇಶಕ್ಕೆ ಕಳೆಕಟ್ಟುತ್ತವೆ. ಕೈಲಾಸದ ಶಿವ ಮರ್ತ್ಯಮಾನವ ಪಾತ್ರವಾಗುವನು. ಮಾನವ ಸಂಬಂಧಗಳು ಶಿವನ ಲೀಲಾವಿಲಾಸದಿಂದಾಗಿ ಇನ್ನಷ್ಟು ಗಟ್ಟಿಗೊಳ್ಳುತ್ತವೆ, ಮಧುರವಾಗುತ್ತವೆ. ಹರಿಹರನ ಶಿವ ಕಾರುಣ್ಯಮಯಿ, ಭಕ್ತರ ಬಂಧುವಾದರೂ ತನ್ನ ಭಕ್ತರು ಮಾಡಿದ್ದೆಲ್ಲವೂ ಸರಿಯೆನ್ನುವವನಲ್ಲ. ಅವನ ಲೀಲೆ, ಅವನು ನ್ಯಾಯಪಕ್ಷಪಾತಿ ಎಂಬುದನ್ನು ದೃಢಪಡಿಸುತ್ತದೆ. ಶಿವ ಹಾಗೂ ನಂಬಿಯ ಸಂಬಂಧ ಎಷ್ಟು ಮಧುರವಾದುದು, ಆತ್ಮೀಯವಾದುದು ಎಂಬುದನ್ನು ಹರಿಹರ ತನ್ನ ಕೃತಿಯುದ್ದಕ್ಕೂ ಸಾದರ

ಪಡಿಸುವನು. ಈ ದೇವ-ಭಕ್ತನ ಅನುಪಮ ಮೈತ್ರಿ ರಗಳೆಯ ಜೀವಾಳವಾಗಿದೆ. ಪರಿಣಾಮದ ದೃಷ್ಟಿಯಿಂದ ನೋಡಿದಾಗ ರಸೋತ್ಕಟ ಸನ್ನಿವೇಶಗಳಲ್ಲಿ ಇದು ಓದುಗನ ಮನಸ್ಸನ್ನು ಗಾಢವಾಗಿ ಮೀಟುತ್ತದೆ. ಹರಿಹರನ ಕೃತಿಯ ಯಶಸ್ಸಿನ ಗುಟ್ಟು ಇಲ್ಲಿ ಅಡಗಿದೆ.

ಪೆರಿಯ ಪುರಾಣದಲ್ಲಿ ನಂಬಿ-ಸಂಕಿಲಿಯರ ವಿವಾಹಾನಂತರದ ಶೃಂಗಾರ ಸನ್ನಿವೇಶದ ವರ್ಣನೆ ಬರುವುದೇ ಇಲ್ಲ. 'ಯಾಳ್' ವಾದ್ಯಕ್ಕಿಂತ ಸವಿಯಾದ ಮಾತು, ಅವಳ ಸುಂದರವಾದ ದಂತಪಂಕ್ತಿ, ಕಿವಿಗಳಲ್ಲಿನ ಮೀನಿನಂತಿರುವ ಆಭರಣ, ಸಣ್ಣ ಮಾವಿನಕಾಯಿಯಂತಿರುವ ಕಣ್ಣು, ಚಂದನರಸದಿಂದ ಲೇಪಿತವಾದ ಸ್ತನಗಳು–ಇವುಗಳಿಂದ ಕೂಡಿದ ಸಂಕಿಲಿಯನ್ನು ನಂಬಿಯು ಅಪ್ಪಿ ಕ್ಷಣವೊಂದು ಯುಗವಾಗಿ ಯುಗವೊಂದು ಕ್ಷಣವಾಗಿ ಮೈಮರೆತನು. ಇಷ್ಟರಿಂದಲೇ ಈ ದಂಪತಿಗಳ ಶೃಂಗಾರಮಯ ಬಾಳ್ವೆಯ ಚಿತ್ರವನ್ನು ನಾವು ಕಲ್ಪಿಸಿಕೊಳ್ಳಬೇಕು. ಹರಿಹರನಲ್ಲಿ ಹಾಗಿಲ್ಲ. ರಸಿಕಕವಿಯಾದ ಅವನು ಕಾವ್ಯವು ರಮಣೀಯವಾಗಲು ಶೃಂಗಾರವನ್ನು ಸಂದರ್ಭೋಚಿತವಾಗಿ ಬಳಸಿಕೊಳ್ಳುವನು. ನಂಬಿಯಣ್ಣ ಅಭಿನವ ಮನ್ಮಥನಾಗಿ ರಗಳೆಯಲ್ಲಿ ಚಿತ್ರಿತನಾಗಿರುವುದರಿಂದ ಅವನ ಪ್ರಣಯ ಸನ್ನಿವೇಶಗಳು ಶೃಂಗಾರರಸ ಭರಿತವಾಗಿವೆ. ರಗಳೆಯ ಹದಿನಾಲ್ಕನೆಯ ಸ್ಥಲದ ಪೂರ್ವಾರ್ಧವೆಲ್ಲ ಶೃಂಗಾರಕ್ಕೇ ಮೀಸಲಾಗಿದೆ. ಕಾಮಕುತೂಹಲಚಿತ್ತನಾದ ನಂಬಿಯಣ್ಣ ತುಂಬುರನ ಕೈವಿಡಿದು ಶಿವದೇವಿಯರ ಅರಮನೆಗೆ ಬರುತ್ತಿರಲು ವಸಂತರಾಜನನ್ನು ಮಧುದೂತಿ ಇದಿರುಗೊಳ್ಳುವಂತೆ ಅವರನ್ನು ರತಿಮಂಗಳೆ ಇದಿರುಗೊಳ್ಳುವಳು. ಕೇಳೀವನದ ಕೃತಕಾಚಳದ ನಡುವಿರುವ ಸೆಜ್ಜೆಮನೆಯ ಹಂಸತೂಳದ ತಣ್ಣೆಳಲ ತಳ್ಪದಲ್ಲಿ ಅವರನ್ನಿರಿಸಿ ರತಿಮಂಗಳೆ ಸಖೀಜನಗಳ ನಡುವೆ ಹೂವಿನ ಹಸೆಯಲ್ಲಿ ಉಸಿರುಹಿಡಿದಿದ್ದ ಸಂಕಿಲಿಯಲ್ಲಿಗೆ ಬಂದು "ಏಳೇಳ್ ನಿನ್ನ ಮನೋರಥಂ ಸಜ್ಜೆಯ ಮನೆಯೊಳಾಸೆಗೆಯ್ವುತ್ತದೆ ನಡೆ" ಎಂದು ನುಡಿಯುವಳು. ಆ ಮಾತು ಕೇಳುತ್ತಿದ್ದಂತೆಯೇ 'ಹರಣಂ ಬಂದು ಕರಣಂ ಕಳೆಯೇಱಿ' ಸಂಕಿಲಿನಾಚಿಯು ಘಳಿಲನೆ ಎದ್ದು ಕುಳಿತುಕೊಳ್ಳುವಳು. ಅವಳನ್ನು ಅಲಂಕರಿಸಲು ಹೊರಟು ರತಿಮಂಗಳೆ ಹೀಗೆನ್ನುವಳು : "ಎಲೆ ಮುಗ್ಧೆ ನಿನ್ನವಯವಂಗಳ ಚೆಲ್ವಿಂಗಾಭರಣಂ ಮಱೆ, ನಿನ್ನ ಸೌಕುಮಾರ್ಯಕ್ಕೆ ಹೂದೊಡಿಗೆ ಹೊಱೆ, ನಿನ್ನ ಮುಖಮಂಡಲಕ್ಕೆ ಶಶಿಮಂಡಲಮುಪ್ಪಾರತಿಯ ಪಾತ್ರೆ, ನಿನ್ನ ಲೋಚನಕ್ಕೆಳಮಿಂಚು ಹೊಱಗು, ನಿನ್ನ ನಳಿತೋಳ್ಗೆಳಲತೆ ಮಾಡಿ ಮಿಕ್ಕವು, ನಿನ್ನ ಕೊರ್ವಿದ ಕುಚಂಗಳ್ಗೆ ಪೊಣರ್ವಕ್ಕಿ ಗವಸಣಿಗೆ, ನಿನ್ನ ನಡುವಿಂಗೆ ನಳಿನತಂತು ನಿರೋಧಂ, ನಿನ್ನ ಬೆರಲ್ಗೆರಲಂಬಾಗದ ವಸ್ತು, ನಿನ್ನ ನಾಭಿವಳಯಕ್ಕೆ ಪೂಗೊಳಂ ಪುಸಿ ನಿನ್ನ ನಿತಂಬಕ್ಕೆ ಪುಳಿನಸ್ಥಳಂ ಪಳಿವು, ನಿನ್ನ ಬಟ್ಟದೊಡೆಗೆ ಬಾಳೆ ಬಹಿಷ್ಕಾರಂ, ನಿನ್ನ ಕಿಱುದೊಡೆಗೆ ಕಾಮನ ದೊಣೆ ತೊಣೆಯಲ್ಲಂ, ನಿನ್ನಪದತಳಕ್ಕೆ

ಕೆಂದಾವರೆ ಕರ್ಕಶಂ ಇಂತು ನಿನ್ನ ರೂಪು ಯೌವನಮಪ್ರತಿಹತಪ್ರಾಯಂ ಸಿಂಗರಂ ಸೊಗಸದು ಕೇಳ್ ನಿನ್ನ ನಂಬಿಯಣ್ಣಂ ಮಾಳ್ಪ ಶಿವಪೂಜಾರಸಪೂರಿತ ಕುಸುಮ ಕರಂಡಗೆಯಂತಿರ್ದ ನಿನಗೆ ನಿಸ್ಸಾರವಸ್ತುಗಳುಪಮಾನಲ್ಲ" ಎನ್ನುವಳು (ಸ್ಥ. 14 ಸಾ. 12-22). ಆ ಹೊಗಳಿಕೆಯ ಮಾತು ಕೇಳಿದ ಸಂಕಲಿ ಇದ್ದಂತೆಯೇ ಎದ್ದು ಕೈಗೊಟ್ಟ ರತಿಮಂಗಳೆಯನ್ನು ನೆಮ್ಮಿ ಇಂದುಮುಖಿಯರು ಮಾಂದಳಿರ ಹಾವುಗೆಯನ್ನಿಡಲು ಮೆಟ್ಟಿ 'ಮಯ್ಗೆ ಮಯ್ಯಂತಪ್ಪ' ಸಪ್ಪುರವನಟ್ಟು ಮೆಲ್ಲಮೆಲ್ಲನೆ ಮದನ ಕೇಳೀಗೃಹಕ್ಕೆ ನಡೆದುಬರುವಳು. ಕೆಲಸದ ನೆವದಿಂದ ರತಿಮಂಗಳೆ ಕೆಳದಿಯರೆಲ್ಲರನ್ನು ಹೊರಗೆ ಕಳುಹಿಸಿ ತಾನೂ ದೇವಿಯರ ಸಿರಿಮುಡಿಗೆ ಹೂತರುವೆನೆಂದು ಹೇಳಿ ಮೆಲ್ಲನೆ ಅಲ್ಲಿಂದ ಸರಿಯುವಳು. ತುಂಬುರನೂ ದೇವರ ಪಡಿವೊನ್ನಗಳನ್ನು ಬೇಡುವ ನೆವದಿಂದ ಬೀಳ್ಕೊಂಡು ಹೋಗುವನು. ಕಾಮಕೇಳಿಯಲ್ಲಿ ತಮ್ಮನ್ನು ತಾವೇ ಮರೆತ ಆ ಪ್ರೇಮಿಗಳು ದ್ವೈತಾದ್ವೈತಸುಖಿಗಳಾಗಿ 'ಸಂಕಿಲಿಯಲ್ಲದುದೆಲ್ಲಂ ಗಂಡು ನಂಬಿಯಣ್ಣನಲ್ಲದುಳಿದುದೆಲ್ಲಂ ಹೆಣ್ಣಾಗಿ' ತೋರಲು ಮಾಸಗಳು ನಿಮಿಷಗಗಳಾಗಿ ಪರಿಜನರನ್ನೂ ಕೊನೆಗೆ ಶಿವನನ್ನೂ ಮರೆತು ಮೂರುವರುಷ ಕಳೆಯುವರು. ಹರಿಹರ ಆ ಪ್ರೇಮಿಗಳು ತಮ್ಮ ರತಿಸುಖದ ಆನಂದವನ್ನು ಮಾನಸಪೂಜೆಯ ಮೂಲಕ ಶಿವನಿಗೆ ಮುಟ್ಟಿಸುತ್ತಿದ್ದರೆಂದು ವರ್ಣಿಸುವನು. ಭಾವುಕ ಕವಿಗೆ ರತಿ ಕ್ರೀಡೆಯೂ ಒಂದು ಬಗೆಯ ಪೂಜೆಯೆ. ರತಿಸುಖದ ಪರಮಾನಂದದಲ್ಲಿ ಮತ್ತೆ ಮತ್ತೆ ಮೂರ್ಛೆಹೋಗುತ್ತಿದ್ದ ಅವರನ್ನು ಶಿವ ಕರುಣೆಯಿಂದ ಎಚ್ಚರಿಸಿ ರತಿ ಕ್ರೀಡೆಯ 'ಅರ್ಚನೆ'ಯನ್ನು ಅವರಿಂದ ಕೈಗೊಳ್ಳುತ್ತಿದ್ದನಂತೆ (ಸ್ಥ. 14 ಸಾ. 61-62). ರತಿಕ್ರೀಡೆಯಲ್ಲಿ ತನ್ಮಯರಾಗಿ ಅದ್ವೈತಸ್ಥಿತಿಗೇರುವ ಪ್ರೇಮಿಗಳ ಕ್ರಿಯೆಯನ್ನು ಭಕ್ತನ ಅರ್ಚನೆಯ ಅದ್ವೈತಸ್ಥಿತಿಗೆ ಹೋಲಿಸುವ ಭವ್ಯ ಕಲ್ಪನೆ ಹರಿಹರನಂತಹ ಅಪ್ರತಿಮ ಭಕ್ತಕವಿಗೆ ಮಾತ್ರ ಸಾಧ್ಯ. (ಸಶೇಷ)

ವಿಜಾಪುರ ಜಿಲ್ಲೆಯ ಶಾಸನಗಳು : ಸಾಮಾನ್ಯ ವಿವೇಚನೆ

ಬಿ. ಆರ್. ಹಿರೇಮಠ

ವಿಜಾಪುರ ಜಿಲ್ಲೆಯ ಪೂರ್ವಕ್ಕೆ ಗುಲ್ಬರ್ಗಾ, ಪಶ್ಚಿಮಕ್ಕೆ ಬೆಳಗಾವಿ, ದಕ್ಷಿಣಕ್ಕೆ ಧಾರವಾಡ, ಉತ್ತರಕ್ಕೆ ಸೊಲ್ಲಾಪುರ, ವಾಯುವ್ಯಕ್ಕೆ ಸಾಂಗಲಿ, ಆಗ್ನೇಯಕ್ಕೆ ರಾಯಚೂರು ಜಿಲ್ಲೆಗಳಿವೆ. ಈ ಜಿಲ್ಲೆಯ ಒಟ್ಟು ಕ್ಷೇತ್ರ ೬೫೭೭.೯ ಚದುರ ಮೈಲು. ದಕ್ಷಿಣೋತ್ತರ ವಿಸ್ತೀರ್ಣ ಸುಮಾರು ೧೧೦ ಮೈಲು. ಪೂರ್ವ–ಪಶ್ಚಿಮ ೯೦ ಮೈಲು.

ಈ ಜಿಲ್ಲೆಯು ಪಶ್ಚಿಮ ಕರಾವಳಿಯಿಂದ ೧೩೧ ಮೈಲು ಅಂತರದಲ್ಲಿದೆ. ಇದರ ಭೂಮಿಯು ಪಶ್ಚಿಮದ ಕಡೆಗೆ ಎತ್ತರವಾಗಿಯೂ ಪೂರ್ವದ ಕಡೆಗೆ ಇಳುಕಲಾಗಿಯೂ ಇದೆ. ಕೃಷ್ಣಾ, ಘಟಪ್ರಭಾ, ಮಲಪ್ರಭಾ, ಭೀಮಾ ಎಂಬ ನಾಲ್ಕು ದೊಡ್ಡ ನದಿಗಳೂ ನವಲಿ, ಸಿಂದ, ಹಬಳಿ, ಸೊಗಲಿ ಎಂಬ ಸಣ್ಣ ನದಿಗಳೂ ಡೋಣಿ ಎಂಬ ಪ್ರಸಿದ್ಧವಾದ ಹಳ್ಳವೂ ಮುಚಖಂಡಿ, ಮಮದಾಪುರ, ಭೂತನಾಳ, ಅರೆಶಂಕರ, ಶಿರೂರ, ರಾಮನಹಳ್ಳಿ, ಮುಖನಾಪುರ, ನಾಗಠಾಣ, ಕುಮಟಗಿ, ಕಳಸಕೊಪ್ಪ, ಕೆಂದೂರ, ರಾಮತೀರ್ಥ ಎಂಬ ಹಿರಿಯಕೆರೆಗಳೂ ಈ ಜಿಲ್ಲೆಯಲ್ಲಿವೆ. ಸಂಗಮ, ಬಾಗೇವಾಡಿ. ಇಂಗಳೇಶ್ವರ, ಬಂಥನಾಳ, ಹರಳಯ್ಯನಗುಂಡ, ಶಿವಯೋಗ ಮಂದಿರ, ಮಹಾಕೂಟ, ಬನಶಂಕರಿ, ಬಬಲಾದಿ, ಸೀತಿಮನಿಗಳು ಪರಮಪುಣ್ಯಕ್ಷೇತ್ರಗಳು. ಬದಾಮಿ, ಐಹೊಳೆ, ಪಟ್ಟದಕಲ್ಲು, ಮಹಾಕೂಟ, ವಿಜಾಪುರ ಮುಂತಾದವು ಐತಿಹಾಸಿಕ ಸ್ಥಳಗಳು.

ಕನ್ನಡ ಕವಿಗಳಾದ ರನ್ನ, ನಾಗಚಂದ್ರ, ಕುಮಾರವಾಲ್ಮೀಕಿ, ಅಗ್ಗಳ, ಸಂಸ್ಕೃತ ಕವಿ ರವಿಕೀರ್ತಿಯರಿಗೆ ಜನ್ಮ ನೀಡಿದ ಜಿಲ್ಲೆಯಿದು. ವೀರಶೈವ ಪರಮಾವತಾರವೆನಿಸಿದ ಬಸವಣ್ಣನವರೂ ಬಸವ ಪೂರ್ವಯುಗದ ವೀರಶೈವ ಚಲನವಲನಗಳಿಗೆ ನೇತಾರನಾದ ಕೊಂಡಗುಳಿ ಕೇಶಿರಾಜನೂ ಹಲವುಜನ ಶರಣರೂ ದಾಸಪರಂಪರೆಯ ಕಾಖಂಡಕಿ ಮಹಿಪತಿದಾಸರೂ ಬಾಗಲಕೋಟೆಯ ಪ್ರಸನ್ನ ವೆಂಕಟದಾಸರೂ ಈ ಜಿಲ್ಲೆಯವರು.

ವಿಜಾಪುರ ಜಿಲ್ಲೆಯನ್ನು ವಿಜಾಪುರ, ಇಂಡಿ, ಸಿಂದಗಿ, ಬಾಗೇವಾಡಿ, ಮುದ್ದೇಬಿಹಾಳ, ಹುನಗುಂದ, ಬಾಗಲಕೋಟ, ಬದಾಮಿ, ಮುಧೋಳ, ಜಮಖಂಡಿ, ಬೀಳಗಿ ಎಂದು ಹನ್ನೊಂದು ತಾಲೂಕುಗಳನ್ನಾಗಿ ವಿಂಗಡಿಸಿದ್ದಾರೆ.

ಈ ಜಿಲ್ಲೆಯ ಪ್ರಾಚೀನ ಚಿತ್ರವನ್ನು ಕಾಣಬಯಸುವವರಿಗೆ ಇಲ್ಲಿಯ ಹಳ್ಳಿಹಳ್ಳಿಗಳಲ್ಲಿ ಚೆಲ್ಲುವರಿದ ಶಾಸನಗಳು ಪ್ರಮುಖ ಸಾಮಾಗ್ರಿಗಳಾಗಿವೆ. ಇಂದು ಅನೇಕ ಊರುಗಳ ಹೆಸರು ತಮ್ಮ ಮೂಲರೂಪವನ್ನು ಬದಲಿಸಿಕೊಂಡುದೂ ವಿದ್ವಾಂಸರು ಪ್ರಸರುಕ್ತ ಗೊಳ್ಳದಂತೆ, ಒಂದೂ ಉಳಿಯದಂತೆ ಶಾಸನಗಳನ್ನು ಪರಿವೀಕ್ಷಣೆ ಹಾಗೂ ಪ್ರಕಟಣೆ ಮಾಡದಿರುವುದೂ ಈ ಜಿಲ್ಲೆಯ ಶಾಸನಾಧ್ಯಯನಕ್ಕೆ ಅಡ್ಡಿಯಾಗಿದೆ. ಈ ಎಲ್ಲ ತೊಡಕುಗಳನ್ನು ಲಕ್ಷ್ಯದಲ್ಲಿಟ್ಟುಕೊಂಡು ಈ ಲೇಖನವನ್ನು ಬರೆಯಲಾಗಿದೆ. ಎರಡನೆಯದಾಗಿ ಶಾಸನಗಳು ಪ್ರತ್ಯಕ್ಷವಾಗಿ ನಡೆದ ಬಿಡಿ ಘಟನೆಗಳ ಸ್ಪಷ್ಟವಾದ ಹೆಜ್ಜೆಗಳೇ ಹೊರತು, ಒಂದು ಜನಾಂಗದ ಇಡೀ ಚರಿತ್ರೆಯಲ್ಲ. ಹೀಗಾಗಿ ಅಗಣಿತ ಶಾಸನಗಳಲ್ಲಿ ಚೆಲ್ಲಾಪಿಲ್ಲಿಯಾದ ನೂರಾರು ಬಗೆಯ ಸಾವಿರಾರು ಘಟನೆಗಳನ್ನು ಒಂದೆಡೆಗೆ ಸಂಚಯಮಾಡಿಕೊಂಡು ಒಂದು ಚೌಕಟ್ಟಿನಲ್ಲಿ ಎರಕ ಹೊಯ್ಯಬೇಕಾಗುತ್ತದೆ. ಅಂದಮಾತ್ರಕ್ಕೆ ಶಾಸನಗಳಲ್ಲಿ ಕಂಡುಬರುವುದೆಲ್ಲ ನೂರಕ್ಕೆ ನೂರರಷ್ಟು ಸತ್ಯವೆಂದು ತಿಳಿಯಲಾಗದು. ಶಾಸನಗಳ ತುಂಬ ಏನೇ ಅತಿಶಯೋಕ್ತಿ, ಪ್ರಶಂಸೆಗಳು ಹೆಣೆದುಕೊಂಡು ನಿಂತರೂ ಗರ್ಭದಲ್ಲಿರುವ ಘಟನೆ ಮಾತ್ರ ಸತ್ಯಕ್ಕೆ ದೂರವಾಗಲಾರದು. ಹೀಗಾಗಿ ಉಳಿದ ದಾಖಲೆಗಳಿಗಿಂತ ಶಾಸನಗಳನ್ನು ಪ್ರಾಮಾಣಿಕ ಆಧಾರಗಳೆಂದು ಪರಿಗಣಿಸಬೇಕಾಗುತ್ತದೆ. ಈ ಹಿನ್ನೆಲೆಯಲ್ಲಿ ವಿಜಾಪುರಜಿಲ್ಲೆಯ ಶಾಸನಗಳು ತಿಳಿಯಪಡಿಸುವ ಅನಂತ ಮುಖಗಳನ್ನು ಅರಿಯಬಹುದು.

ವಿಜಾಪುರಜಿಲ್ಲೆಯ ಶಾಸನಗಳ ಚಿತ್ರ ಹೀಗಿದೆ :

	ತಾಲೂಕು	ಗ್ರಾಮಗಳ ಸಂಖ್ಯೆ	ಶಾಸನವಿದ್ದ ಗ್ರಾಮಗಳ ಸಂಖ್ಯೆ	ತಾಲೂಕಿನ ಒಟ್ಟು ಶಾಸನಗಳು	ತಾಲೂಕಿನ ಪ್ರಕಟಿತ ಶಾಸನಗಳು	ತಾಲೂಕಿನ ಅಪ್ರಕಟಿತ ಶಾಸನಗಳು
1	ವಿಜಾಪುರ	111	20	120	84	36
2	ಇಂಡಿ	124	36	89	76	13
3	ಸಿಂದಗಿ	150	30	97	92	5
4	ಬಾಗೇವಾಡಿ	121	27	80	78	2
5	ಜಮಖಂಡಿ	70	15	43	36	7
6	ಮುಧೋಳ	81	8	27	2	25
7	ಮುದ್ದೇಬಿಹಾಳ	157	39	73	71	2
8	ಬೀಳಗಿ	66	12	21	20	1
9	ಬದಾಮಿ	159	29	340	316	24
10	ಬಾಗಲಕೋಟ	93	17	33	31	2
11	ಹುನಗುಂದ	169	19	138	112	26
		1301	252	1061	918	143

ವಿಜಾಪುರ ಜಿಲ್ಲೆಯ ಒಟ್ಟು ಹಳ್ಳಿಗಳ ಸಂಖ್ಯೆ 1601. ಈಗಿನ ಮಟ್ಟಿಗೆ ಶಾಸನಗಳಿರುವ ಗ್ರಾಮಗಳು 252. ಈ ಗ್ರಾಮಗಳಲ್ಲಿ ಲಭಿಸಿದ ಶಾಸನಗಳು 1091. ಇವುಗಳಲ್ಲಿ ೯೧೮ ಶಾಸನಗಳು ಪ್ರಕಟವಾಗಿವೆ, 143 ಶಾಸನಗಳು ಇನ್ನೂ ಪ್ರಕಟಗೊಳ್ಳಬೇಕಾಗಿದೆ.[1] ವ್ಯವಸ್ಥಿತವಾದ ಪರಿವೀಕ್ಷಣೆಯಿಂದ ಈ ಶಾಸನಗಳ ಸಂಖ್ಯೆ ಇಮ್ಮಡಿಗೊಳ್ಳುವುದರಲ್ಲಿ ಯಾವ ಸಂದೇಹವೂ ಇಲ್ಲ.

ವಿಜಾಪುರ ಜಿಲ್ಲೆ ಈಗಿನಂತೆ ಆಡಳಿತ ವಿಭಾಗಗೊಂಡುದು ಬ್ರಿಟಿಶರ ಆಳಿಕೆಯಲ್ಲಿ ಮತ್ತು ಸ್ವಾತಂತ್ರ್ಯೋತ್ತರ ಕಾಲದಲ್ಲಿ. ಆದರೆ ಪ್ರಾಚೀನಕಾಲದಲ್ಲಿ ಈ ಜಿಲ್ಲೆಯಲ್ಲಿದ್ದ ರಾಜಕೀಯ ವಿಭಾಗಗಳು ಬೇರೊಂದು ರೀತಿಯವೆಂದು ಶಾಸನಗಳಿಂದ ವೇದ್ಯವಾಗುತ್ತದೆ. ಅವುಗಳನ್ನು ಗುರುತಿಸುವುದು ಈ ಜಿಲ್ಲೆಯ ಶಾಸನ ಪರಿವೀಕ್ಷಣ ಕಾರ್ಯ ಸಮಗ್ರವಾಗದ ಹೊರತು ಸಾಧ್ಯವಿಲ್ಲ. ಈ ಜಿಲ್ಲೆಯ ಶಾಸನಗಳಲ್ಲಿ ಉಲ್ಲೇಖಗೊಂಡ ರಾಜಕೀಯ ವಿಭಾಗಗಳು : ಕರಹಡ–4000, ಕೂಂಡಿ–3000 ಹಲಸಿಗೆ–12000, ಬನವಸೆ–12000, ತರ್ದವಾಡಿ–1000, ಆಳಂದಿ–1000, ಹಗರಟ್ಟಿಗೆ–300, ಕೆಲವಡಿ–3000, ತರಿಕಾಡು–300, ಬೇಲೂರು–141, ಕಿಸುಕಾಡು–70, ಬಾಗಡಿಗೆ–70, ಬಾಗೆ–50, ಹನಗಂಡಿ-30, ಕರಿವಿಡಿ-30, ಕುಮ್ಮಸಿಗೆ–30, ಬಾಗೇವಾಡಿ-30, ಎಳಮೆಲೆ–30, ಮುತ್ತಿಗೆ–30, ಅಂಕುಲಗೆ–30, ಮುಳಗುಂದ-30, ಹೆಬ್ಬಾಳ–28, ನರೆಯಂಗಲ್–12, ತುಂಗಳ–12, ಸಿಂದಗಿ–12, ಕಿಸುವೊಳಲ್-7. ಇವುಗಳಲ್ಲಿ ಕೆಲವು ಈ ಜಿಲ್ಲೆಗೆ ಒಳಪಟ್ಟುವಲ್ಲ; ಕೇವಲ ಉಲ್ಲೇಖಿತವಾದುವು. ಮಿಕ್ಕವುಗಳಲ್ಲಿ ಯಾವುದರಲ್ಲಿ ಯಾವ ವಿಭಾಗ ಸಮಾವೇಶವಾಗಿತ್ತೆಂದು ಎಲ್ಲ ಕಡೆಗೂ ಹೇಳಲು ಸಾಧ್ಯವಾಗದು.

ಇಷ್ಟು ಹಿನ್ನೆಲೆಯೊಂದಿಗೆ ಈ ಜಿಲ್ಲೆಯ ಪ್ರಾಚೀನ ಮತ್ತು ಮಧ್ಯಕಾಲೀನ ರಾಜಕೀಯ, ಧಾರ್ಮಿಕ, ಸಾಹಿತ್ಯಿಕ, ಸಾಮಾಜಿಕ ಮೊದಲಾದ ಸಂಗತಿಗಳ ಪರಿಚಯವನ್ನು ಶಾಸನಗಳ ಮೂಲಕ ಹೀಗೆ ಅರಿಯಬಹುದು :

ರಾಜಕೀಯ : ಕನ್ನಡ ನಾಡನ್ನು ಆಳಿದವರಲ್ಲಿ ಶಾತವಾಹನ, ಕದಂಬ ಹಾಗೂ ಗಂಗರು ಪ್ರಮುಖರು. ಕನ್ನಡ ನಾಡಿನಲ್ಲಿ ಮುಂದೆ ನಿರ್ಮಾಣವಾಗುವ ರಾಜಕೀಯ ಸಾರ್ವಭೌಮತ್ವಕ್ಕೆ ತಳಹದಿ ಹಾಕಲ್ಪಟ್ಟ ಇವರ ಶಾಸನಗಳು ಈ ಜಿಲ್ಲೆಯಲ್ಲಿ ದೊರಕುವುದಿಲ್ಲ. ಈ ಅರಸುಮನೆತನಗಳನ್ನು ಬಿಟ್ಟರೆ ಮುಂದೆ ಬಾದಾಮಿ ಚಾಲುಕ್ಯ, ರಾಷ್ಟ್ರಕೂಟ, ಕಲ್ಯಾಣ ಚಾಲುಕ್ಯ, ಕಳಚುರಿ, ಯಾದವ, ಸಿಂದ, ವಿಜಯನಗರ, ಮೊಗಲ (ಔರಂಗಜೇಬ), ಬಹಮನಿ (ಅಲ್ಲಾವುದ್ದೀನ ಅಹ್ಮದ) ಮತ್ತು

---

1. ಡಾ. ಎಂ. ಎಂ. ಕಲಬುರ್ಗಿ (ಸಂ) : ವಿಜಾಪುರ ಜಿಲ್ಲೆಯ ಶಾಸನ ಸೂಚಿ, ಪ್ರಸ್ತಾವನೆ-ಪುಟ xiii.

ಬ್ರಿಟಿಶರು ಮೊದಲಾದ ಚಕ್ರವರ್ತಿ, ಸಾಮಂತ, ಮಾಡಲೇಶ್ವರರ ಶಾಸನಗಳು ವಿಪುಲವಾಗಿ ದೊರೆಯುತ್ತವೆ.

ಬಾದಾಮಿಯ ಚಾಲುಕ್ಯರಲ್ಲಿ ಒಂದನೆಯ ಪುಲಕೇಶಿ, ಒಂದನೆಯ ಕೀರ್ತಿವರ್ಮ ಮಂಗಲೀಶ, ಇಮ್ಮಡಿ ಪುಲಕೇಶಿ, ವಿನಯಾದಿತ್ಯ, ವಿಜಯಾದಿತ್ಯ, ಇಮ್ಮಡಿ ವಿಕ್ರಮಾದಿತ್ಯರ ಉಲ್ಲೇಖಗಳನ್ನು ಈ ಜಿಲ್ಲೆಯ ಶಾಸನಗಳು ಒದಗಿಸುತ್ತವೆ. ಕರ್ನಾಟಕದ ರಾಜಕೀಯ ಚರಿತ್ರೆಯಲ್ಲಿ ಬಾದಾಮಿ ಚಾಲುಕ್ಯರ ಸ್ಥಾನ ಹಿರಿದಾದುದು. ಇಡೀ ಕರ್ನಾಟಕವನ್ನೆಲ್ಲ ವ್ಯಾಪಿಸಿ, ಉತ್ತರಕ್ಕೂ ಮೈಚಾಚಿ ಅಖಿಲಭಾರತದ ಪ್ರಸಿದ್ಧಿ ಪಡೆದ ವಂಶವಿದು. ಬಾದಾಮಿಯ ಒಂದು ಶಾಸನವು ಒಂದನೆಯ ಪುಲಕೇಶಿಯ ವಿಷಯವಾಗಿ, ಅವನು ಬದಾಮಿಯ ಕೋಟೆಯನ್ನು ನಿರ್ಮಿಸಿ, ಅಶ್ವಮೇಧಯಾಗ ಹಾಗೂ ಹಿರಣ್ಯಗರ್ಭದಾನ ಮಾಡಿದನೆಂದು ತಿಳಿಸುತ್ತದೆ. ಬದಾಮಿ ಚಾಲುಕ್ಯರ ರಾಜಕೀಯ ಜೀವನದ ಸಂಪೂರ್ಣ ವಿವರಗಳನ್ನು ತಿಳಿಸುತ್ತದೆ, ರವಿಕೀರ್ತಿಯ ಶಾಸನ. ಕುಬ್ಜ ಕವಿಯು, ಕದಂಬರನ್ನು ಕುರಿತು ಬರೆದ ತಾಳಗುಂದದ ಶಾಸನದಷ್ಟೆ ಪ್ರಸಿದ್ಧವಾಗಿದೆ, ಚಾಲುಕ್ಯರನ್ನು ಕುರಿತು ಬರೆದ ರವಿಕೀರ್ತಿಯ ಈ ಐಹೊಳೆಯ ಶಾಸನ, ಇಮ್ಮಡಿ ಪುಲಕೇಶಿಯವರೆಗಿನ ಚಾಲುಕ್ಯವಂಶಾವಳಿ ಹಾಗೂ ಆ ಆ ರಾಜರ ರಾಜಕೀಯ ಪರಾಕ್ರಮದ ಪುರಾವೆಗಳನ್ನೂ ಒದಗಿಸಿ, ಕರ್ನಾಟಕದ ರಾಜಕೀಯ ಚರಿತ್ರೆಗೆ ಮೊಟ್ಟಮೊದಲು ಅಖಿಲಭಾರತದ ಮಟ್ಟದ ಮಹತ್ವ ಬಂದುದು ಇಮ್ಮಡಿ ಪುಲಕೇಶಿಯಿಂದ ಎಂಬ ರೀತಿಯಲ್ಲಿ ಈ ಶಾಸನ ಆತನ ಅದ್ರಿಸದೃಶ ವ್ಯಕ್ತಿತ್ವವನ್ನು ಚಿತ್ರಿಸುತ್ತದೆ.

ಈ ಜಿಲ್ಲೆಯಲ್ಲಿ ಬದಾಮಿ ಚಾಲುಕ್ಯರ ತರುವಾಯ ದೊರೆಯುವ ಶಾಸನಗಳೆಂದರೆ ರಾಷ್ಟ್ರಕೂಟರವು. ಒಂದನೆಯ ಅಮೋಘವರ್ಷ, ಮುಮ್ಮಡಿ ಕೃಷ್ಣ ಹಾಗೂ ಖೊಟ್ಟಿಗರ ಉಲ್ಲೇಖನಗಳು ಈ ಜಿಲ್ಲೆಯ ಕೆಲವು ಶಾಸನಗಳಲ್ಲಿ ಕಂಡು ಬಂದರೂ ಅಲ್ಲಿ ರಾಜಕೀಯ ಮಹತ್ವದ ಸಂಗತಿಗಳು ಕಡಿಮೆ.

ಇಲ್ಲಿ ರಾಷ್ಟ್ರಕೂಟರ ತರುವಾಯ ಕಾಣುವ ಶಾಸನಗಳು ಕಲ್ಯಾಣ ಚಾಲುಕ್ಯರವು. ಈ ಜಿಲ್ಲೆಯ ಬಹುಪಾಲು ಶಾಸನಗಳು ಈ ವಂಶಕ್ಕೆ ಸಂಬಂಧಪಟ್ಟುವು. ತೈಲಪ, ಇರಿವಬೆಡಂಗ ಸತ್ಯಾಶ್ರಯ, ಒಂದನೆಯ ಜಗದೇಕಮಲ್ಲ, ಎರಡನೆಯ ಜಯಸಿಂಹ, ಒಂದನೆಯ ಸೋಮೇಶ್ವರ, ಎರಡನೆಯ ಸೋಮೇಶ್ವರ, ಆರನೆಯ ವಿಕ್ರಮಾದಿತ್ಯ, ಮೂರನೆಯ ಸೋಮೇಶ್ವರ, ಎರಡನೆಯ ಜಗದೇಕಮಲ್ಲ, ನಾಲ್ಕ

2. Karnatak Inscriptions Vol. II No 2.
8. Indian Anctiquary, Vrl VIII p 237.

ನೆಯ ಸೋಮೇಶ್ವರ ಮುಂತಾದವರ ಕಾಲದ ಶಾಸನಗಳಿವು. ಕನ್ನಡ ಶಾಸನಗಳ ವಸಂತ ಸಮಯವಾದ ಈ ಕಾಲದ ಶಾಸನಗಳು ಇವರ ರಾಜಕೀಯ ಜೀವನದ ಕೆಲವು ಸಾಮಾನ್ಯ ಅಂಶಗಳನ್ನು ತಿಳಿಸಿಕೊಡುತ್ತವೆ.

ಈ ಜಿಲ್ಲೆಯಲ್ಲಿ ಕಳಚುರಿ ಪೆರ್ಮಾಡಿ, ಬಿಜ್ಜಳ, ಸಂಕಮ ಸೋವಿದೇವ, ಮಲ್ಲಿಕಾರ್ಜುನರ ಉಲ್ಲೇಖಗಳನ್ನು ಕೆಲವು ಶಾಸನಗಳು ಸ್ಪಷ್ಟಪಡಿಸುತ್ತವೆ. ಇವುಗಳಲ್ಲಿ ಅಧಿಕ ಪ್ರಮಾಣದವು ದಾನಶಾಸನಗಳಾಗಿರುವುದರಿಂದ ರಾಜಕೀಯ ಮಹತ್ವದ ಸಂಗತಿಗಳು ವ್ಯಕ್ತವಾಗುವುದಿಲ್ಲ.

ಕಲ್ಯಾಣ ಚಾಲುಕ್ಯ ನಾಲ್ಕನೆಯ ಸೋಮೇಶ್ವರನ ಆಧಿಪತ್ಯವು ಯಾದವರ ಕೈವಶವಾಯಿತು. ಈ ವಂಶದಲ್ಲಿಯ ಭಿಲ್ಲಮ, ಜೈತುಗಿ, ಸಿಂಘಣ, ಕನ್ನರ, ರಾಮಚಂದ್ರರ ಉಲ್ಲೇಖಗಳನ್ನು ಕೆಲವೊಂದು ಶಾಸನಗಳು ತಿಳಿಸುತ್ತವೆ.

ಹಿಂದೂ ಧರ್ಮವನ್ನು ಸಂರಕ್ಷಿಸುವುದಕ್ಕಾಗಿಯೇ ಸ್ಥಾಪಿತವಾದ ವಿಜಯ ನಗರದ ಅಚ್ಯುತರಾಯ, ಸದಾಶಿವರಾಯ ಅರಸರ ಉಲ್ಲೇಖಗಳು ಏಳೆಂಟು ಶಾಸನಗಳಲ್ಲಿ ಮಾತ್ರ ಕಂಡುಬರುತ್ತವೆ. ಆದರೆ ರಾಜಕೀಯ ದೃಷ್ಟಿಯಿಂದ ಇವು ಯಾವುದೇ ಮಹತ್ವದ ಸಂಗತಿಗಳನ್ನು ತಿಳಿಸಲಾರವು.

ಈ ಜಿಲ್ಲೆಯ ಒಂದನೆಯ ಆದಿಲ್‌ಶಾಹಿ, ಎರಡನೆಯ ಇಬ್ರಾಹಿಂ ಆದಿಲ್ ಶಾಹಿ, ಮೊಗಲ ಔರಂಗಜೇಬ, ಬಹಮನಿ ಅಲ್ಲಾವುದ್ದೀನ ಆಹ್ಮದರ ಆಳಿಕೆಗೆ ಒಳಪಟ್ಟಿದ್ದಿತೆಂಬ ಅಂಶ–ಕೆಲವು ಶಾಸನಗಳಿಂದ ವ್ಯಕ್ತವಾಗುತ್ತದೆ. ಮುಂದೆ ಬ್ರಿಟಿಶ ಆಡಳಿತಕ್ಕೆ ಈ ಪ್ರದೇಶ ಒಳಗೊಂಡಿತು. ಈಸ್ಟ ಇಂಡಿಯಾ ಕಂಪನಿಯ ಆಳಿಕೆಯನ್ನು ಇಂಕಲ್ಲ[4], ಕೆಲೂರ[5] ಶಾಸನಗಳು ತಿಳಿಸುತ್ತವೆ. ವಿಜಾಪುರಜಿಲ್ಲೆಯಲ್ಲಿ ಶಾಸನಗಳು ಸಾಕಷ್ಟು ದೊರೆತರೂ ಅವುಗಳಲ್ಲಿ ಸಿಂಹಪಾಲು ದತ್ತಿ ಶಾಸನಗಳು.

ಧಾರ್ಮಿಕ : ಕರ್ನಾಟಕ, ಅನೇಕ ಧರ್ಮಗಳಿಗೆ ಆಶ್ರಯ ನೀಡಿದೆ. ಇಲ್ಲಿ ಬೌದ್ಧ, ಜೈನ, ಶೈವ, ವೈದಿಕ, ವೀರಶೈವ ಹಾಗೂ ಇಸ್ಲಾಂ ಧರ್ಮಗಳು ತಮ್ಮ ಬಮಕನ್ನು ನಡೆಸಿದುದಕ್ಕೆ ಈ ಜಿಲ್ಲೆಯ ಹಲವು ಶಾಸನಗಳಲ್ಲಿ ಆಧಾರವಿದೆ. ಕರ್ನಾಟಕದಲ್ಲಿ ಬೌದ್ಧಧರ್ಮ, ಅಶೋಕನ ಕಾಲಕ್ಕೆ ಅಂದರೆ ಕ್ರಿ. ಪೂ. 300 ರಲ್ಲಿ ಪ್ರವೇಶಿಸಿತು. ಈ ಧರ್ಮದ ಉಲ್ಲೇಖಗಳು ಈ ಜಿಲ್ಲೆಯ ಶಾಸನಗಳಲ್ಲಿ ದೊರೆಯುವುದು ತೀರ ಅಲ್ಪ. ಕ್ರಿ. ಶ. 1184ರ ತಾಳಿಕೋಟೆ ಶಾಸನದಲ್ಲಿ ವಿರೂಪರಸನೆಂಬ ಶಿವಭಕ್ತನನ್ನು "ಬೌದ್ಧ ಸಮಯ ವಿಧ್ವಂಸನ ಪ್ರವೀಣಂ" ಎಂದು ಹೇಳಿದ್ದರೆ,

4 South Indian Inscription, Vol. XV No. 271.
5 South Indian Inscriptions, Vol. XV No. 273, 274.
6 South Indian Inscriptions, Vol. XV No. 56.

ಕ್ರಿ. ಶ. 1125ರ ತೇರದಾಳ ಶಾಸನ[7] ಮಿಕ್ಕ ದೇವಾಲಯಗಳ ಜೊತೆ ಬೌದ್ಧ ದೇವಾಲಯವೂ ಅಲ್ಲಿದ್ದುದಾಗಿ ತಿಳಿಸುತ್ತದೆ.

ಹರಿಗೃಹದಿಂ ಹರಗೃಹದಿಂ
ಸುರಗೃಹದಿಂದರುಹಗೃಹದೆ ಬೌದ್ಧಾಲಯದಿಂ
ಗೊರವರ ಸವಣರ ಬೌದ್ಧರ
ನೆರವಿಗಳಿಂದಿಂಡಿನಾಡೆ ಸೊಗಯಿಸಿ ತೋರ್ಕುಂ ||

ಎಂಬ ಶಾಸನ ಪದ್ಯ[8] (ಕ್ರಿ.ಶ.೧೧೯೭), ಇಂಡಿಯದಲ್ಲಿ ಬೌದ್ಧ ದೇವಾಲಯ ಮತ್ತು ಬೌದ್ಧ ಸಮಾಜಗಳಿದ್ದುದಕ್ಕೆ ಆಧಾರ ನೀಡುತ್ತದೆ. ಲೋಕಾಪುರವು ಹರಿ, ಹರ, ಜಿನ, ಬೌದ್ಧದೇವಾಲಯಗಳಿಂದ ಒಪ್ಪುತ್ತಿದ್ದಿತೆಂಬ ಉಲ್ಲೇಖ ಅಲ್ಲಿಯ ಶಾಸನ ವೊಂದರಲ್ಲಿ ಬರುತ್ತದೆ.

ಬೌದ್ಧಧರ್ಮದ ತರುವಾಯ ಹೆಸರಿಸಬೇಕಾದುದು, ಜೈನ ಧರ್ಮ. ಕ್ರಿ.ಪೂ. ದಲ್ಲಿಯೇ ಕರ್ನಾಟಕವನ್ನು ಪ್ರವೇಶಿಸಿದ ಇದು ವಿಜಾಪುರ ಜಿಲ್ಲೆಯಲ್ಲಿ ಇದ್ದುದಕ್ಕೆ ಆಧಾರವೆಂದರೆ ಮಂಗಲೀಶನಿಂದ ನಿರ್ಮಿತವಾದ ಗುಹಾಂತರ್ದೇವಾಲಯ, ರವಿಕೀರ್ತಿಯಿಂದ ನಿರ್ಮಿತವಾದ ಮೇಗುತಿ ಜಿನಾಲಯ. ಅಂದಿನಿಂದ ಜೈನಧರ್ಮ ಈ ಜಿಲ್ಲೆಯಲ್ಲಿಯೂ ಪ್ರಮುಖವಾಗಿ ಬೆಳೆದುಬಂದಿತು. ಹಲವಾರು ಶಾಸನಗಳಲ್ಲಿ ಬರುವ ಇಂಗಳೇಶ್ವರದ ಬಳಿಯ, ಚಂದ್ರಕವಾಟಾನ್ವಯ ಎಂಬ ಮಾತುಗಳಿಂದ ಸುಪ್ರಸಿದ್ಧ ಜೈನ ಶಾಖೆಗಳಿಗೆ ಈ ಜಿಲ್ಲೆಯ ಇಂಗಳೇಶ್ವರ, ಚಾಂದಕವಟೆ ಉಗಮಸ್ಥಾನಗಳೆಂದು ವೇದ್ಯವಾಗುತ್ತದೆ. ಮಾಘನಂದಿ, ಅರ್ಹ ನಂದಿ, ಹರಿಷೇಣ, ನೇಮಿದೇವ, ಶ್ರೀಕರದೇವರು ಈ ಜಿಲ್ಲೆಯ ಶಾಸನಗಳಲ್ಲಿ ಕಂಡುಬರುವ ಮುನಿಗಳು. ತೇರದಾಳ, ಅನಗವಾಡಿ, ಲೋಕಾಪುರ, ಆಲ ಗೂರಗಳು ಜೈನಧರ್ಮದ ಸ್ಥಾನಗಳಾಗಿದ್ದವು. ಜಿನಧರ್ಮಧುರಂಧರನಾದ ಗೋಂಕಿ ದೇವರಸನ ಉಲ್ಲೇಖ ಅನೇಕ ಶಾಸನಗಳಲ್ಲಿ ಕಂಡುಬರುತ್ತದೆ.

ವೈದಿಕಧರ್ಮ ಈ ನಾಡಿನಲ್ಲಿ ಸದಾ ಜಾಗ್ರತವಾಗಿದೆ. ಈ ಧರ್ಮದ ಉಲ್ಲೇಖ ಬರುವುದು ಅಗ್ರಹಾರಗಳ ವಿಷಯದಲ್ಲಿ. ರೂಪಿಗೆ "ಹದಿನೆಂಟು ಅಗ್ರಹಾರಗಳಲ್ಲಿ ಒಂದಾಗಿದ್ದಿತು. ಈ ಹದಿನೆಂಟು ಅಗ್ರಹಾರಗಳ ವಿಷಯ ಇನ್ನೂ ನಿಗೂಢವಾಗಿ ನಿಂತಿದೆ. ಸಾಲೋಟಗಿ, ಬಾಗೇವಾಡಿ, ಕಡ್ಲೇವಾಡ, ಜಮಖಂಡಿ, ಕೊಂಡ ಗುಳಿ, ಮುತ್ತಗೆ, ಮನಗೂಳಿ, ಇಂಗಳೇಶ್ವರ, ಮಲಘಾಣಗಳು ಈ ಜಿಲ್ಲೆಯ ಪ್ರಮುಖವಾದ ಅಗ್ರಹಾರಗಳು.

---

7 Karnatak Inscriptions, Vol. V No. 21.
8 South Indian Inscriptions, Vol. XVIII No. 363. ವಿಜಾಪುರ

ವೀರಶೈವ ಧರ್ಮದ ಉದಯಕ್ಕೆ ಮುಂಚಿತವಾಗಿ ಶೈವಧರ್ಮವು ಪ್ರಬಲವಾಗಿದ್ದಿತು. ಅಸಂಖ್ಯಾತ ರಾಜ, ಮಾಂಡಲಿಕರಿಂದ ಮನ್ನಣೆಯನ್ನು ಪಡೆದ ನಕುಲೀಶ-ಪಾಶುಪತ, ಕಾಳಾಮುಖ ಯತಿಗಳಿಗೆ ಸಂಬಂಧಪಟ್ಟ ಹೇರಳ ಶಾಸನಗಳು ಇಲ್ಲಿ ದೊರೆಯುತ್ತವೆ. ನಕುಲೀಶ-ಪಾಶುಪತ ಶೈವರ ತಪಸ್ಸು ಅತ್ಯಂತ ಕಠೋರವಾದುದು. ಸಾಲೋಟಗಿ ಶಾಸನ[9] ಅಮರೇಶ್ವರ ದೇವರ ತಪಸ್ಸಿನ ವರ್ಣನೆಯನ್ನು

ಸ್ಮರನದಟರ್ಗಿತಕ್ಕಳಿದುದೆಯ್ದೆ ಸೆವಿಂದ್ರಿಯವೋಡಿಹೋದವಾ
ಗರವೆನಿಸಿರ್ಪಮೇಳು ಬಸನಂ ದೆಸೆಗೆಟ್ಟವು ತಾಮಸಂರಜಂ
ಸರಧಿಯನತ್ತ ದಾಂಟಿದವೆನಲ್ಕಮರೇಶ್ವರದೇವನೊಳಾರ್ಸರಿ
ದೊರೆ ಪಾಟಿ ಪಾಸಟಿ ಮುನೀಶ್ವರರೀ ಧರಣೀತಳಾಗ್ರದೊಳ್ ॥

ಎಂದೂ ಮುತ್ತಗಿ ಶಾಸನ[10] ರುದ್ರಶಕ್ತಿಮುನಿಯ ತಪಸ್ಸಿನ ಮಹಿಮೆಯನ್ನು

ಅರೆವೆಣ್ಣಾಕ್ರಿತಿಯಂ ಕರಂ ಬಳಿಯನಾಗಿರ್ದ ಹರಂ ಭೀತಿಯಿಂ
ಸಿರಿಯುತ್ತುಂಗ ಘನಸ್ತನಾದ್ರಿಗಳಟಿಂ ಬೇರ್ಪೊರ್ಕ್ಕಡಂಗಿರ್ದನಂ
ನರಸಿಂಗಂ ಕುಸ್ಮಾಯಧುಂಗಗಿದೆನಿಪ್ಪಾ ಕಾಮನಂ ತೂಳ್ದಿ ಸತ್
ಚರಣಾ ಪೂತಸಿ ರುದ್ರಶಕ್ತಿ ಮುನಿಪಂ ಬೆಂಕೊಂಡನೆಂಗುಂ ಜಗಂ ॥

ಎಂದೂ ತಿಳಿಸುತ್ತವೆ. ಸಾಲೋಟಗಿ, ಇಂಗಳೇಶ್ವರ, ಸಂಗಮ, ಬಾಗೇವಾಡಿ ಮುತ್ತಗಿ, ತಾಳಿಕೋಟೆ, ಯಾಳವಾರ, ಮನಗೂಳಿ ಮುಂತಾದವುಗಳು ಪ್ರಮುಖ ಶೈವಕೇಂದ್ರಗಳಾಗಿದ್ದವು. ಒಟ್ಟಿನಲ್ಲಿ ಶೈವಧರ್ಮ ಈ ಜಿಲ್ಲೆಯ ತುಂಬ ಗಾಢವಾಗಿದ್ದಿತೆಂದು ತಿಳಿದುಬರುತ್ತದೆ.

ಕರ್ನಾಟಕದ ಇತಿಹಾಸದಲ್ಲಿ ವೀರಶೈವವೊಂದು ಹೊಸಬೆಳಕು. ಈ ಧರ್ಮದ ಪುಣ್ಯವ್ಯಕ್ತಿಗಳಾದ ರೇವಣಸಿದ್ಧ, ಬಸವಣ್ಣ, ಮಾಚಯ್ಯ, ಭೋಗಣ್ಣ, ವೈಜಕವ್ವೆ, ಗುಡ್ಡವ್ವೆ, ಸುಗ್ಗಲದೇವಿ, ಕೊಂಡಗುಳಿ ಕೇಶಿರಾಜ, ನೆಲವಿಗೆ ಶಾಂತಯ್ಯರನ್ನು ಕುರಿತ ಶಾಸನಗಳು ಈ ಜಿಲ್ಲೆಯಲ್ಲಿ ಕಾಣಸಿಗುತ್ತವೆ. ಸೊನ್ನಲಿಗೆಯ ಸಿದ್ಧರಾಮನಿಗೆ ಸಂಬಂಧಿಸಿದ 24 ಶಾಸನಗಳಲ್ಲಿ 10 ಶಾಸನಗಳು (ಚೂರಗಿ, ಸಂಖ, ಕಪ್ಪನಿಂಬರಗಿ, ಗುಂಡಕರ್ಜಗಿ, ಟಾಕಳಿ, ಘಡಕೇನೂರ, ಜತ್ತಗಿ, ತಡವಳ, ಯಂಡಹಳ್ಳಿ, ಚಡಚಣ) ಈ ಜಿಲ್ಲೆಯಲ್ಲಿ ಲಭಿಸುತ್ತವೆ. ಘಡಕೇನೂರ ಶಾಸನ[11] ಸಿದ್ಧರಾಮನ ದಿವ್ಯ ವ್ಯಕ್ತಿತ್ವವನ್ನು "......ಆತ್ಮಜ್ಯೋತಿ ನಿದರ್ಶನ ಸ್ವಚ್ಛಂದ ಮೃತ್ಯುಂಜ[ಯ]ಮೆಂಬ ದಸಪ್ರತ್ಯಯ ಪ್ರಬುದ್ಧನುಂ ಸಿದ್ಧಕುಳ ವಾರ್ಧಿವರ್ಧನ

9 South Indian Inscriptions Vol XX No. 179
10 South Indian Inscriptions, Vol XV No. 104
11 South Indian Inscriptions, Vol XV No. 190

ಸುಧಾಕರನುಂ......" ಎಂದು ಮುಂತಾಗಿ, ಆತನ ಘನತೆಯನ್ನು ಹೇಳುತ್ತದೆ. ಬಸವಣ್ಣನವರ ಕುರಿತಾದ ಒಂದೇ ಒಂದು ಶಾಸನ[12] ಗುಡಿಹಾಳ-ಕುಂಟೋಜಿಯದು. ಏಕಾಂತರಾಮಯ್ಯನ ಪವಾಡ ದಾನಚಿಂತಾಮಣಿ ಗುಡ್ಡವ್ವೆ, ಸುಗ್ಗಲದೇವಿಯರನ್ನು ಕುರಿತು ತಾಳಿಕೋಟೆ, ವಿಜಾಪುರ, ದೇವೂರ ಶಾಸನಗಳು ಸ್ಪಷ್ಟವಾದ ಸಾಮಗ್ರಿ ಒದಗಿಸುತ್ತವೆ. ಇವರಲ್ಲದೆ ಬಾಣ, ಮಯ್ಯೂರ, ಕಾಳಿದಾಸ, ಗುಂಡಯ್ಯ, ಭೋಗಣ್ಣ, ಕೊಂಡಗುಳಿ ಕೇಶಿರಾಜರನ್ನು ಕುರಿತು ಹಿಪ್ಪರಗಿ, ತಾಳಿಕೋಟೆ, ಕೊಂಡಗುಳಿ ಶಾಸನಗಳು ತಿಳಿಸುತ್ತವೆ. ಒಟ್ಟಿನಲ್ಲಿ ಧಾರ್ಮಿಕಕ್ಷೇತ್ರಕ್ಕೆ ಸಲ್ಲಿಸಿದ ಮುಡಿಪನ್ನು ತಿಳಿಸಲು ಈ ಜಿಲ್ಲೆಯ ಶಾಸನಗಳು ಶಿಲಾದರ್ಪಣಗಳಾಗಿ ನಿಂತಿವೆ.

ಈ ಜಿಲ್ಲೆಯಲ್ಲಿ ಮುಸಲ್ಮಾನ ಅರಸರ ಶಾಸನಗಳು ಸಾಕಷ್ಟು ದೊರೆಯುತ್ತಿದ್ದರೂ ಧಾರ್ಮಿಕ ವಿಷಯದಲ್ಲಿ ಅವು ಗೌಣ ಸ್ಥಾನವನ್ನು ಹೊಂದಿವೆ. ವಿಜಾಪುರದ ಒಂದು ಶಾಸನದಲ್ಲಿ[13] ಕುರಾನಿನ ಕೆಲವೊಂದು ಉದ್ಧರಣೆಗಳು ಮಾತ್ರ ಕಂಡುಬರುತ್ತವೆ. ಮಸೀದಿಗಳಲ್ಲಿ ಶಿಲ್ಪಗಳು ಕಂಡರಿಸಲ್ಪಟ್ಟಿವೆ.

ಕರ್ನಾಟಕ, ಧರ್ಮಸಮನ್ವಯದ ಭೂಮಿ. ಈ ಮಾತಿಗೆ ಹೊರತಾಗದ ರೀತಿಯಲ್ಲಿ ಈ ಜಿಲ್ಲೆಯ ಕೆಲವು ಶಾಸನಗಳು ಈ ಸಮನ್ವಯವನ್ನು ಸಾರುತ್ತವೆ. ಬದಾಮಿಯ ಒಂದು ಶಾಸನ, ಬ್ರಹ್ಮ-ವಿಷ್ಣು-ಮಹೇಶ್ವರ ತ್ರಿಮೂರ್ತಿಗಳನ್ನು ಏಕಕಾಲದಲ್ಲಿ ಸ್ಥಾಪಿಸಿದುದನ್ನು ಹೇಳುತ್ತದೆ. ಸಾಲೋಟಗಿಯಲ್ಲಿದ್ದ ತ್ರೈಪುರುಷ ದೇವಾಲಯ ಇದಕ್ಕೆ ಇನ್ನೊಂದು ಉದಾಹರಣೆ. ಸಾಲವಾಡಗಿಯ ಶಾಸನದಲ್ಲಿ[14]

> ನಮಸ್ತುಂಗ ಶಿರಶ್ಚುಂಬಿ ಚಂದ್ರ ಚಾಮರ ಚಾರವೇ
> ತ್ರೈಲೋಕ್ಯ ನಗರಾರಂಭ ಮೂಲಸ್ತಂಭಾಯ ಸಂಭವೇ ॥

ಎಂಬ ಶಿವಸ್ತುತಿ,

> ಜಯತ್ಯಾವಿಷ್ಕೃತಂ ವಿಷ್ಣೋರ್ವರಾಹಂ ಕ್ಷೋಭಿತಾರ್ಣವಂ
> ದ...

ಎಂಬ ವಿಷ್ಣು ಸ್ತುತಿಗಳು ಕೂಡಿಯೇ ಬಂದಿವೆ. ಲೋಕಾಪುರ ಗ್ರಾಮವು ಹರಿ, ಹರ, ಜಿನ, ಬುದ್ಧ (ಚತುಸ್ಸಮಯ) ಮತಗಳ ಸಮನ್ವಯದಿಂದ ಕಂಗೊಳಿಸುತ್ತಿತ್ತೆಂದು ಅಲ್ಲಿಯ ಶಾಸನವೊಂದು[15] ತಿಳಿಸುತ್ತದೆ. ಬದಾಮಿಯ ಮೇಣ ಬಸದಿಯುಂತೂ ಜೈನ, ಶೈವ, ವೈಷ್ಣವ ಸಮನ್ವಯಕ್ಕೆ ಶಿಲ್ಪಸಾಕ್ಷಿ ಆಗಿದೆ. ಬೇರೆ ಬೇರೆ

---

12 South Indian Inscriptions, Vol XV No. 658
13 Annual Report on South Indian Epigraphy 1952-52 No. 38
14 South Indian Inscriptions Vol. XV No. 188
15 Kannada Research Institute Report 1942-43, No. 2.

ಧರ್ಮದವರು ವಿವಿಧ ಧರ್ಮದ ದೇವಾಲಯಗಳಿಗೆ ದತ್ತಿ ನೀಡಿದ ಸಂಗತಿಗಳಿಂದ, ಈ ಭಾವನೆ ಸಮಾಜದಲ್ಲಿ ಹಾಸು ಹೊಕ್ಕಾಗಿದ್ದಿತೆಂದು ವೇದ್ಯವಾಗುತ್ತದೆ. ಕನ್ನಡ ಜನತೆಯ ಅಂತರಂಗದಲ್ಲಿ ಧರ್ಮಸಹಿಷ್ಣುತೆಯ ಸ್ತರಗಳು ಕಂಡುಬಂದರೂ ಆಗೊಮ್ಮೆ ಈಗೊಮ್ಮೆ ಕೆಲವು ಧರ್ಮಗಳ ನಡುವೆ ಹೋರಾಟ, ದೂಷಣೆ ನಡೆದುದೂ ಗೋಚರಿಸುತ್ತದೆ. "...ಪರಸಮಯ ಗಿರಿವಜ್ರದಂಡರುಂ ಜಗದ ಲುದ್ದಂಡರುಂ ಜಿನ ಸಮಯ ವನದಹನ ದಾವಾನಳರುಂ...ಬೌದ್ಧ ಸಮಯ ವಿಧ್ವಂಸನ ಪ್ರವೀಣರುಂ ಬಗೆಯಲು ಜಾಣರುಂ ಅನ್ಯಸಮಯಿಗಳ ಬೆನ್ನಬಾರೆನೆತ್ತಿ ವರುಂ ಪರಸಮೂಹ ಘರಟ್ಟರುಂ ಪರಿಯಳಿಗೆ ಅಣಿಲೆವಾಡ ಉಣಕಲ್ಲ ಸಂಪಗಾವಿ ಅಬ್ಬಲೂರು ಮಾರುಡಿಗೆ ಅಣಂಪೂರು ಕರಹಾಡ ಕೆಂಭಾವಿ ಬಮ್ಮಕೂರು ಮೊದಲಾಗಿ ಅನಂತ ನಾನಾದೇಶಾಂತರದಲಿದಿರಾದ ಪರಸಮಯಿಗಳಂ ಪಡಲ್ವಡಿಸಿ ಲೋಕಮನಾ ಕಂಪಗೊಳಿಸಿ ಬಸದಿಗಳಂ ಹೊಸೆದಿಕ್ಕಿ ಶಿವಲಿಂಗ ಸಿಂಹಾಸನಮಂ ಕಣ್ಗೊಳ್ಸಿ ಚಲಮಂಮೆಱೆದು ಧೀರರೊಳು ನೆಱೆದು ಸ್ವರ್ಗ ಮರ್ತ್ಯ ಪಾತಾಳದೊಳನಂಗಾರಿಯ ಹೆಮ್ಮೆಯುಂ ತಮ್ಮ ಭೃತ್ಯಾಚಾರದ ತೊರ್ಮೆಯುಂ ತಳದಲಿಕ್ಕಿ ತೋರ್ಪಂತೆ ತೋರಿದ ಪುರಾತನ ನೂತನರೆನಿಸಿದ ಅಸಂಖ್ಯಾತ ಗಣಂಗಳ..." ಎಂಬ ಕ್ರಿ.ಶ. ೧೧೮೪ರ ತಾಳಿಕೋಟೆ ಶಾಸನವೊಂದು[16] ಇದಕ್ಕೆ ನಿದರ್ಶನ.

ಸಾಹಿತ್ಯಿಕ :

ಕವಿರಾಜಮಾರ್ಗಕಾರ ಹೇಳಿರುವ ತಿರುಳ್ಗನ್ನಡ ಪ್ರದೇಶದಲ್ಲಿ, ಈ ಜಿಲ್ಲೆಯ ದಕ್ಷಿಣ ಭಾಗ ಅಂತರ್ಗತವಾದರೂ ಆ ತಿರುಳ್ಗನ್ನಡವನ್ನು ಬೇರ್ಪಡಿಸಿ ತೋರಿಸ ಬಹುದಾದ ಮಹತ್ವದ ಅಂಶಗಳು ಇಲ್ಲಿಯ ಶಾಸನಗಳಲ್ಲಿ ಕಂಡುಬರುವುದಿಲ್ಲ.

ಸಾಹಿತ್ಯದ ದೃಷ್ಟಿಯಿಂದ ಶಾಸನ ಕ್ಷೇತ್ರವನ್ನು (ಅ) ನೃಪತುಂಗ ಪೂರ್ವ ಯುಗ (ಬ) ನೃಪತುಂಗೋತ್ತರ ಯುಗ ಎಂದು ವಿಭಾಗಿಸಿಕೊಳ್ಳಬಹುದು. ನೃಪತುಂಗಪೂರ್ವಯುಗದಲ್ಲಿ ಬದಾಮಿ, ಐಹೊಳೆ, ಪಟ್ಟದಕಲ್ಲು, ಮಹಾಕೂಟ, ಬನಶಂಕರಿ ಮೊದಲಾದ ಸ್ಥಳಗಳಿಗೆ ಸಂಬಂಧಿಸಿದ ಮೂರು ನೂರಕ್ಕೂ ಮೇಲ್ಪಟ್ಟ ಶಾಸನಗಳು ದೊರೆಯುತ್ತವೆ. ನೃಪತುಂಗೋತ್ತರಯುಗವನ್ನು 1) ರಾಷ್ಟ್ರಕೂಟ ಯುಗ 2) ಕಲ್ಯಾಣ ಚಾಲುಕ್ಯಯುಗ ಮತ್ತು ಹೊಯ್ಸಳಯುಗ 2) ವಿಜಯ ನಗರ ಯುಗಗಳೆಂದು ವಿಭಾಗಿಸಬಹುದು. ಈ ಜಿಲ್ಲೆಯಲ್ಲಿ ರಾಷ್ಟ್ರಕೂಟರ ಶಾಸನಗಳು ದೊರೆಯುವುದು ಕೈಮೇಲಿನ ಬೆರಳುಗಳಷ್ಟು ಮಾತ್ರ. ಕಲ್ಯಾಣ ಚಾಲುಕ್ಯರ ಶಾಸನಗಳು ಸಂಖ್ಯಾದೃಷ್ಟಿಯಿಂದ ಅಧಿಕವಿದ್ದಂತೆ ಸಾಹಿತ್ಯದೃಷ್ಟಿಯಿಂದ

---

16 South Indian Inscriptions, Vol. No. 56.

ಸಮೃದ್ಧವಾಗಿದ್ದರೂ ಒಂದೇ ತೆರನಾದ ಪಡಿಯಚ್ಚು ಕಂಡುಬರುತ್ತವೆ. ವಿಜಯ ನಗರದ ಶಾಸನಗಳಂತೂ ರಾಜಕೀಯ ವರದಿಗಳಂತೆ ಸಾಹಿತ್ಯ ವಿಹೀನವಾಗಿದೆ.

ಈ ಜಿಲ್ಲೆಯ ಅಧಿಕ ಸಂಖ್ಯೆಯ ಶಾಸನಗಳ ಭಾಷೆ, ಕನ್ನಡ. ಬದಾಮಿ, ಬಾಗಲಕೋಟ, ಶಿರೂರ, ಮಹಾಕೂಟ, ಇಲಕಲ್ಲ, ವಿಜಾಪುರ, ಜುಮನಾಳ, ಟಾಕಳಿ ಮೊದಲಾದ ಗ್ರಾಮಗಳ 15 ಶಾಸನಗಳ ಭಾಷೆ ಮಾತ್ರ ಸಂಸ್ಕೃತ; ಇವುಗಳಿಗೆ ಮುಡಿಯು ಮಾಣಿಕ್ಯ ರವಿಕೀರ್ತಿಯ ಐಹೊಳೆ ಶಾಸನ. ಜೀಳಗಿ, ನಾಗರಾಳ, ವಿಜಾಪುರ, ಬಿಜ್ಜರಗಿ ದೇವನಗಾಂವ, ಹಿಪ್ಪರಗಿಗಳಲ್ಲಿ 10 ಮರಾಠಿ ಶಾಸನಗಳಿವೆ. ಐಹೊಳೆ, ನಾಗರಾಳಗಳಲ್ಲಿ ಪೂರ್ವನಾಗರಿಯಲ್ಲಿ ಬರೆದ ಎರಡು ಶಾಸನಗಳಿವೆ. ಹಲಸಂಗಿ, ಹಾವಿನಹಾಳಗಳಲ್ಲಿ ಎರಡು ಉರ್ದು ಶಾಸನಗಳೂ ತದಲವಾಗ ಹಲಸಂಗಿ ಗಳಲ್ಲಿ ಎರಡು ಪರ್ಶಿಯನ್ ಹಾಗೂ ಒಂದು ಅರೇಬಿಕ್ ಶಾಸನವೂ ಜಮಖಂಡಿಯಲ್ಲಿ ಹಿಬ್ರೂ ಭಾಷೆಯಲ್ಲಿಯ ಒಂದು ತಾಮ್ರಪಟವಿದೆ. ಈ ಭಾಷಾವೈವಿಧ್ಯ ಹಾಗೂ ಲಿಪಿವೈವಿಧ್ಯಗಳನ್ನು ನೋಡಿದರೆ, ಈ ಜಿಲ್ಲೆಯ ಶಾಸನಗಳ ಭಾಷಾ ಅಧ್ಯಯನ ಮತ್ತು ಲಿಪಿ ಅಧ್ಯಯನ ಪ್ರಯೋಜನಕಾರಿ ಎನಿಸದಿರದು.

ಈ ಜಿಲ್ಲೆಯ ಪ್ರಥಮ ಕನ್ನಡ ಶಾಸನವಾದ, ಬಹುಶಃ ಕನ್ನಡದ ಪ್ರಥಮ ಶಾಸನವಾದ ಕ್ರಿ.ಶ. 597–609ರ ಮಂಗಲೀಶನ ಶಾಸನದಲ್ಲಿ; ವಿಜಯಾದಿತ್ಯಾದಿಗಳ ಶಾಸನಗಳಲ್ಲಿ ಪೂರ್ವದ ಹಳಗನ್ನಡದ ಗದ್ಯವನ್ನು ಮತ್ತು ಬರೆವಣಿಗೆಯ ರೀತಿಯನ್ನು ಗಮನಿಸಿದಾಗ ಕನ್ನಡ ಶಾಸನ ಉತ್ತಮಿಕೆಗೆ ಹಂಬಲಿಸುವ ಕಾಲವಿದು ಎನಿಸುತ್ತದೆ. ಈ ಹವಣಿಕೆ ಫಲಕಾರಿಯಾದುದು ಒಂಬತ್ತನೆಯ ಶಾಸನದಲ್ಲಿ. ಈ ತರುವಾಯದ ಶಾಸನಗಳು ಮೊದಲ ಮತ್ತು ಕೊನೆಯ ಶ್ಲೋಕಗಳನ್ನು ಬಿಟ್ಟರೆ, ಮಿಕ್ಕ ಶಾಸನ ಗಳಂತೆ ಗದ್ಯ–ವೃತ್ತ–ಕಂದಗಳಿಂದ ಕೂಡಿ, ಚಂಪೂ ರೂಪ ಧರಿಸಿಕೊಂಡಿವೆ. ವಿಜಾಪುರ, ಕಲ್ಲೇವಾಡ, ಇಂಗಳೇಶ್ವರ, ಮಂಟೂರ, ಕೊಣ್ಣೂರ, ಸಾಲೋಟಗಿ, ಮನಗೂಳಿ, ಮಲಘಾಣ, ಮಂಕಣಿ, ಯರಗಲ್ಲ, ಹೀರೇಬೇವಿನೂರು, ಕುಲಕೇರಿ, ಮುತ್ತಗಿ ಶಾಸನಗಳು ಇದಕ್ಕೆ ನಿದರ್ಶನ. ಮುತ್ತಗೆಯ ಒಂದು ಶಾಸನದಲ್ಲಿ[17] ಬರುವ

> ಎನಸುಂ ಕಣ್ಗೆಯ್ದೆ ಚೆಲ್ವಂ ಪಡೆವುದು ವಿಚಳತ್ತೂರ್ಮಿಪಾಠೀನ ಸಂಘಟ್ಟನ ಪಾಥೋ ದಂತಿ ದಂತಾಹತ ಮಕರಕರಕ್ಷೋಭಿ ಸಂಜಾತ ಕಲ್ಲೋಳ ನಿಕಾಯಕ್ಷಿಪ್ತ ಮುಕ್ತಾನಿಕರ ಮುರುತರೊಡ್ಡೀನ ಫೇನ ಬ್ರಜಾಸ್ಫಾಳನ ಕೌದ್ರುಸ್ಫಾರ ಧೀರಾರವ ವಿಜಿತ ಘನ ಧ್ವಾನಂ ಅಂಭೋ ನಿಧಾನಂ ।। ಎಂಬ ಸಮುದ್ರ ವರ್ಣನೆ,
>
> ಗಗನ ಪ್ರೋಚ್ಚುಂಬಿ ನಾನಾಮಣಿಗಣ ವಿಳಸತ್ಕೂಟ ಕೋಟಿಪ್ರಭಾ ಭಾಸಿಗಳನ್ಮಂದಾರ ಪುಷ್ಪಪ್ರಕರ ಸುರಭಿ ಗಂಧಿಸ್ಥಳೀ ಸಂಚರದ್ದೇವಗಣಂ ಕಣ್ಗೆಯ್ದೆ ಚೆಲ್ವಂ ಪಡೆವುದು ವರವಿದ್ಯಾಧರೀ ಚಾರುವೀಣಾ ಪ್ರಗತ ಪ್ರಸ್ತುತ್ಯಮಂದ್ರಧ್ವನಿ ಲಲಿತ ದರೀರುಂದ-

---

17 Epigragphia Indica Vol. XV p. 34–36.

ಹೇಮಾಚಳೇಂದ್ರ–ಎಂಬ ಹೇಮಾಚಲ ವರ್ಣನೆ.

ಅಭಿಮಾನೋನ್ನತ ಮಂದರಾದ್ರಿಗೋಟೆಯಂ ಕಟ್ಟಿತ್ತು ವಾರಾಂಗನಾ
ಸುಭಗತ್ವಂ ಮದನಂಗನಾದರಣೆಯುಂ ಮಾಡಿತ್ತು ಶಶ್ವದ್ವಚೋ
ವಿಭವಂ ಕರ್ಣನನೇಳಿಸಿತ್ತನಿಸುವಂ ಮಾಣಿಕ್ಯವಲ್ಲೀಪುರ
ಪ್ರಭುವಿಖ್ಯಾತ ಹರೀತ ಗೋತ್ರವಿಲಸಲ್ಲಕ್ಷ್ಮೀಧವಂ ಮಾಧವಂ ।।

ಎಂಬ ಪುರಪ್ರಭು ಮಾಧವನ ವರ್ಣನೆ ಮೊದಲಾದವುಗಳ ಶೈಲಿ, ಈ ಜಿಲ್ಲೆಯ ಶಾಸನಗಳಲ್ಲಿ ಸಾಕಷ್ಟು ದೊರೆಯುತ್ತವೆ.

ಕ್ರಿ.ಶ. 1094 ರ ಕನ್ನೊಳ್ಳಿ ಶಾಸನದ [18] "ಸ್ವಸ್ತ್ಯನವರತ ಪರಮ ಕಲ್ಯಾಣಾಭ್ಯುದಯ ಸಹಸ್ರಫಲಭೋಗ ಭಾಗಿನಿ ದ್ವಿತೀಯ ಲಕ್ಷ್ಮೀಸಮಾನೆ ಕಳಹಂಸಯಾನೆ ಕಲಿಕಾಲ ಸರಸ್ವತಿ ಪ್ರತ್ಯಕ್ಷ ಪಾರ್ವತಿ ಪರಿವಾರ ಸಮುದ್ಧರಣೆ ಧಾತ್ರಿಜನ ರಕ್ಷಾಮಣಿ ಸಾಹಸ ವಿದ್ಯಾಧರಿ ಸಕಳ ಕಳಾವತಿ ಶ್ರೀಮತ್ ತ್ರಿಭುವನಮಲ್ಲ ವಿಶಾಲವಕ್ಷಸ್ಥಳ ನಿವಾಸಿನಿಯರಪ್ಪ ಪಟ್ಟಮಹಾದೇವಿ......" ಮೊದಲಾದ ನಾನಾ ಮಾದರಿಯ ಗದ್ಯದಲ್ಲಿ, ಅದೇ ಆದೆತನ ತೋರಿಬಂದು ಚಂಪೂವಿನ ಪಾಂಡಿತ್ಯಪದರ ಮಾಸವರಿಕೆಯಾಗುತ್ತದೆ. ಜೊತೆಗೆ

ತಾವರೆ ನೆಯಿದಲುಂ ಕೊಸಗು ಸಂಪಗೆ ಮಲ್ಲಿಗೆ ಮೊಲ್ಲೆಯಲ್ಲಿಯುಂ
ತೀವಿದ ಪೆರ್ಗೊಟಂ ಕೆಱೆಯು ಬಾವಿಯೊಪ್ಪದ ದೇವತಾಚಯಂ
ಪೂವಿನ ತೋಂಟಮುಂ ಕಟವೆಗದ್ದೆಯ ರಾಟಣನಲ್ಲಿಗಲ್ಲಿಗಂ
ಬಾವಿಸಿ ನೋಡಲಿಂದ್ರನ ಪುರಕ್ಕೆಣೆಯಾದುದು ಸಿಂದಿಕಾಪುರಂ ।।

ಎಂಬ ಸರಳ ರಚನೆಗಳು ಕ್ವಚಿತ್ ಮಿಂಚುತ್ತವೆ.[19]

ಅಕ್ಷರವೃತ್ತ, ಕಂದಗಳನ್ನು ಬಿಟ್ಟರೆ ಕಂಡುಬರುವ ಮಾತ್ರಾವೃತ್ತವೆಂದರೆ ಕ್ರಿ.ಶ. 1557 ರ ಯಾಳವಾರ ಶಾಸನದಲ್ಲಿಯ[20]

ಹರಣ ಗಿರಿಜಾವರನ ಕರುಣಾ
ಕರನ ದುರಿತಾಂತರನ ಗಂಗಾ
ಧರನ ಫಣಿಕುಂಡಲನ ಭವಭಯ ಹರನ ಶಂಕರನ॥
ನೀಲಗಳ ನಿಗಮ ಸ್ವರೂಪನ
ನೀಲಕಂಠಾಭರಣ ಭಸ್ಮೋ
ದ್ಧೂಳಿತಾಂಗನ ಚಿತ್ರಕಾಯನ ಚಿನ್ಮಯಾಂಬರನ ।
ಶೂಲವಿಧಿಯ ಕಪಾಲ ಸಿರಿ ಭೂ
[–ಲಲ] ಹಿ ದಶಭುಜದ ಗೌರಿಯ
ಲೋಲನಂಘ್ರಿಯ ಅರ್ಚಿಪ ವಿಜಯಪುರ ಸೀಮೆಯೊಳು ॥

18 South Indian Inscriptions, Vol XX No 61.
19 South Indian Inscriptions Vol XX No 80.
20 South Indian Inscriptions, Vol XX No 691

ಎಂಬ ಒಂದೂವರೆ ಭಾಮಿನಿ ಷಟ್ಪದಿ, ಕರ್ನಾಟಕದ ಶಾಸನಪ್ರಪಂಚದಲ್ಲಿಯೇ ತೋರಿಬಂದ ಪ್ರಥಮ ಮಾತ್ರಾಗಣ ಷಟ್ಪದಿಯಿದು. ಕರ್ನಾಟಕದ ಶಾಸನಗಳಲ್ಲಿ ಕಂಡುಬರುವ ಅಂಶಗಣ ಘಟಿತ ವೃತ್ತಗಳೆಂದರೆ ತ್ರಿಪದಿ, ಷಟ್ಪದಿ, ಪಿರಿಯಕ್ಕರ. ಇವುಗಳಲ್ಲಿ ಪ್ರಾಚೀನತಮ ತ್ರಿಪದಿಗಳನ್ನೊಳಗೊಂಡಿದೆ ಬದಾಮಿಯ ಕಪ್ಪೆ ಅರಭಟ್ಟನ ಶಾಸನ[21]. ಈವರೆಗೆ ಭೀಮಸಮುದ್ರ, ಅಮ್ಮಿನಬಾವಿ, ಗಂಗಾಪುರ ಶಾಸನಗಳಲ್ಲಿ ಒಂದೊಂದರಂತೆ ಸಿಕ್ಕ ಮೂಲಘಟ್ಟಗಳಿಗೆ ಇಂಡಿ ತಾಲೂಕಿನ ಚಡಚಣ ಶಾಸನ[22] ಮೂರು ಮೂಲಷಟ್ಪದಿಗಳನ್ನು ನೀಡಿ ಆ ಸಂಖ್ಯೆಯನ್ನು ಆರಕ್ಕೇರಿಸಿದೆ.

ಈ ಜಿಲ್ಲೆಯ ಹಲವು ಶಾಸನಗಳು, ಶಾಸನಕವಿಗಳನ್ನು ಮತ್ತು ಶಾಸನೋಕ್ತ ಕವಿಗಳನ್ನು ಹೆಸರಿಸಿವೆ. ಅಚಲನ್, ರವಿಕೀರ್ತಿ, ನಾಗಚಂದ್ರ ಶಾಸನಕವಿ ಪ್ರಮುಖರು ನಾರಾಯಣ ಗಜಾಂಕುಶನೊಬ್ಬ ಶಾಸನೋಕ್ತಕವಿ. ನಾಗಚಂದ್ರನ ಕಾವ್ಯಗಳ ಕೆಲವು ಪದ್ಯಗಳು ನೇರವಾಗಿ ಇಲ್ಲವೆ ಅಲ್ಪ ವ್ಯತ್ಯಾಸದಿಂದ ಬಾಬಾನಗರ, ವಿಜಾಪುರ ಮತ್ತು ಶ್ರವಣಬೆಳ್ಗೊಳ ಶಾಸನಗಳಲ್ಲಿ ತೋರುತ್ತವೆ. ನಾರಾಯಣ ಗಜಾಂಕುಶನು ಬಹುಶಃ ಪಂಪನ ಸಮಕಾಲಿನ ಕನ್ನಡ ಕವಿ. ದುರ್ಗಸಿಂಹನು "ವಿಜೀತಾರಿ ದಂಡ ನಾಯಕಂ ಗಜಾಂಕುಶಂ" ಎಂದು ಇವನನ್ನೇ ಕರೆದಿರಬೇಕು. "ವಿಜಯತಾಂ ರವಿ ಕೀರ್ತಿಃ ಕವಿತಾಶ್ರಿತ ಕಾಳಿದಾಸ, ಭಾರವಿ ಕೀರ್ತಿಃ" ಎಂದು ಹೇಳಿಕೊಂಡ ರವಿಕೀರ್ತಿ ಕೀರ್ತಿಶಾಲಿಕವಿ. ಕಾಳಿದಾಸ, ಭಾರವಿಗಳ ಕಾಲನಿರ್ಣಯಕ್ಕೆ ಅವಶ್ಯವಾದ ಅಂಶಗಳನ್ನು ಒದಗಿಸಿದ, ಸಂಸ್ಕೃತದಲ್ಲಿ ಮಹೋನ್ನತ ಶಾಸನ ಬರೆದ ಇವನಿಗೆ ಭಾರತೀಯ ಮಹತ್ವವಿದೆ. ಮನಗೂಳಿ, ಶಿರೂರ ಒರೇಬೇವಿನೂರು, ಮಂಕಣಿ ಮೊದಲಾದ ಗ್ರಾಮಗಳಲ್ಲಿರುವ ಶಾಸನಗಳಲ್ಲಿಯ ಕಾವ್ಯಾಂಶಗಳನ್ನು ಗಮನಿಸಿದಾಗ ಆ ಅನಾಮಧೇಯ ಕವಿಗಳ ಕಾವ್ಯಶಕ್ತಿ ಬೆರಗುಗೊಳಿಸುತ್ತದೆ.

ಸಾಮಾಜಿಕ : ಪ್ರಾಚೀನ ಮತ್ತು ಮಧ್ಯಕಾಲೀನ ಕನ್ನಡಿಗರದು ಧರ್ಮ ಮತ್ತು ರಾಜಧರ್ಮಗಳ ಮೇಲೆ ನಿಂತ ಸಮಾಜ. ಈ ಎರಡೂ ಪಕ್ಷಗಳಿಂದ ಆಹಾರ, ಅಭಯ, ಭೈಷಜ್ಯ, ವಿದ್ಯಾದಾನ ಮತ್ತು ಸಮರೋದ್ಯೋಗ ನಡೆದುದಕ್ಕೆ ನೂರು ನೂರು ಉದಾಹರಣೆಗಳು ಈ ಜಿಲ್ಲೆಯ ಶಾಸನಗಳಲ್ಲಿ ಸಿಗುತ್ತವೆ. ಅಗ್ರಹಾರ, ದೇವಾಲಯ ಜೀರ್ಣೋದ್ಧಾರ, ದೇವರ ಅಂಗಭೋಗ, ರಂಗಭೋಗ, ಮಠ, ದಾಸೋಹ, ಅರವಟ್ಟಿಗೆ, ಪುರಾಣವೃತ್ತಿ-ಹೀಗೆ ವಿವಿಧ ಉದ್ದೇಶಗಳಿಗಾಗಿ ಹೊಲ, ತೋಟ, ಗ್ರಾಮ, ಗಾಣ ನೀಡಿದ ; ತೆರಿಗೆಯಿಂದ ಮುಕ್ತಮಾಡಿದ ದಾನಶಾಸನಗಳು ಅಂದಿನ ಜನಾಂಗದ ಮನೋಧರ್ಮಕ್ಕೆ ಹಿಡಿದ ಕನ್ನಡಿಯಾಗಿವೆ. ಚೆಂನಬ್ರಹ್ಮೇಶ್ವರ ದೇವರ ಪುನಃ ಪ್ರತಿಷ್ಠೆಯಂ ಮಾಡಿ ಅಂಗ-ರಂಗ ಭೋಗಕ್ಕೆ, ಚೈತ್ರ-ಪವಿತ್ರಕ್ಕೆ,

---

21 Indian Antiquary, Vol X P 61

22 South Indian Inscriptions, Vol XX No 133.

ಕುಮ್ಮಟಗೆಯ ಅಶೇಷ ಮಹಾಜನಂಗಳು ಬಿಟ್ಟ ಭೂದಾನದ ವಿಷಯ ಕುಮಟಗಿಯ ಶಾಸನದಲ್ಲಿ[23] ; ದಕ್ಷಿಣ ವಾರಣಾಸಿಯೆನಿಸಿದ ಕಡಲೇವಾಡದ ಸೋಮನಾಥ ದೇವರ ಅಂಗ ರಂಗಭೋಗ ಜೀರ್ಣೋದಾ ರಕ್ಕೆ, ತಪೋಧನರ ಅಶನ-ಆಚ್ಛಾದನಗಳಿಗಾಗಿ ಸ್ಥಾನಾಚಾರ್ಯ ಸೋಮರಾಶಿದೇವರಿಗೆ ದತ್ತಿ ನೀಡಿದ ಸಂಗತಿ ಕಡ್ಲೇವಾಡ ಶಾಸನದಲ್ಲಿ[23A] ಬಂದರೆ, "ವಿಜಯಾದಿತ್ಯ ಸತ್ಯಾಶ್ರಯ ಶ್ರೀಪ್ರಿಥ್ವೀವಲ್ಲಭ ಮಹಾರಾಜಾಧಿರಾಜ ಪರಮೇಶ್ವರ ಭಟಾರರಾ ಪ್ರಾಣವಲ್ಲಭೆ ವಿನಾಪೊಟಿಗಳೆನ್ಬೊರ್ ಸೂಳೆಯರ್ ......ಇಲ್ಲಿಯ ಹಿರಣ್ಯಗರ್ಭಮಿಟ್ಟು ಎಲ್ಲಾ ದಾನಂಗೊಟ್ಟು ದೇವನಾ ಪೀಠಮಾನ್ ಕಿಸುವಿಗೆ ಕಟ್ಟಿ ಬೆಳ್ಳಿಯಾ ಕೊಡೆಯಾನೇಱಿಸಿಯೆ ಮಂಗಲುಳ್ಳೆ ಅಷ್ಟಶತಂ ಕ್ಷೇತ್ರಂಗೊಟ್ಟೊಳ್" ಎಂಬ ಮಾತು ಜನಸಾಮಾನ್ಯರ ದಾನಗುಣಕ್ಕೆ ಪ್ರಧಾನ ಉದಾಹರಣೆ ಆಗಿದೆ[24]. ಇದೇ ರೀತಿ ಮುಮ್ಮುರಿದಂಡ, ನಕರ, ಸೆಟ್ಟಿ, ಸೆಟ್ಟಿಗುತ್ತ ಬಣಂಜಿಗ, ಮೂಲಿಗ, ತೆಲ್ಲಿಗ, ಒಕ್ಕಲಿಗರು ನೀಡಿದ ದಾನವನ್ನು ಊರೂರಿನ ಶಾಸನಗಳು ಉಲ್ಲೇಖಿಸುತ್ತವೆ. "ಶ್ರೀಮತ್ತ್ರಿಭುವನಮಲ್ಲ ದೇವರರ್ಧಾಂಗಿ ಲಕ್ಷ್ಮಾದೇವಿಯರುಂ...... ಬೇಡಗಿಯ ತಮ್ಮ ಕಂಕೇಶ್ವರದೇವರ್ಗ್ಗೆ ಪೂಜೆ ಪುರಸ್ಕಾರಕ್ಕಂ ಭೂಮಿಯುಂ ನಿವೇಶನಮುಂ ಪೂದೋಟಮುಂ" ಬಿಟ್ಟರೆಂಬ[25] ; ಅಕ್ಕಾದೇವಿಯು ವಿಕ್ರಮಪುರದ ಗುಣದ ಬೆಡಂಗಿ ಜಿನಾಲಯದ ಜೀರ್ಣೋದ್ಧಾರ, ಗಂಧ-ಧೂಪ-ದೀಪಗಳಿಗೆ[26] ದಾನಕೊಟ್ಟರೆಂಬ ಉಲ್ಲೇಖಗಳು ಸ್ತ್ರೀಯರ ಔದಾರ್ಯಕ್ಕೆ ಸಾಕ್ಷಿಯಾಗಿವೆ.

ವಿದ್ಯಾದಾನ ಸಾಮಾನ್ಯವಾಗಿ ಇದು ಬ್ರಾಹ್ಮಣರಿಗೆ ದತ್ತಿಯಾಗಿ ಕೊಟ್ಟ 'ಅಗ್ರಹಾರ' ಗ್ರಾಮಗಳಲ್ಲಿ ನಡೆಯುತ್ತಿದ್ದಿತು. ಈ ಜಿಲ್ಲೆಯಲ್ಲಿ ಜಮಖಂಡಿ, ಕೊಂಡಗುಳಿ, ಬಾಗೇವಾಡಿ, ಮುತ್ತಗೆ, ಮಸಗೂಳಿ, ಇಂಗಳೇಶ್ವರ, ರೂಗಿ ಮೊದಲಾದವು ಸುಪ್ರಸಿದ್ಧ ಅಗ್ರಹಾರಗಳಾಗಿದ್ದವು. ಕಡ್ಲೇವಾಡ, ಸಾಲೋಟಗಿಗಳಲ್ಲಿ ಘಟಿಕಾಸ್ಥಾನಗಳಿದ್ದವು. ಜಮಖಂಡಿ, ಸಂಗಮಗಳಲ್ಲಿ ಬ್ರಹ್ಮಪುರಿಗಳಿದ್ದವು. ಸಾಲೋಟಗಿ ಘಟಿಕಸ್ಥಾನದ ವಿದ್ಯಾರ್ಥಿಗಳಿಗೆ ೨೭ ಮನೆ, ಅವರದೀಪದ ವ್ಯವಸ್ಥೆಗೆ ೧೨ ನಿವರ್ತನ ಭೂಮಿ ದಾನವಾಗಿಕೊಟ್ಟುದು ತಿಳಿದು ಬರುತ್ತವೆ. ಊರೊಳಗಿನ ದೇವಾಲಯಗಳೂ ವಿದ್ಯಾಸ್ಥಾನಗಳಾಗಿದ್ದುವೆಂಬುದಕ್ಕೆ ಕಲಿದೇವರ ದೇವಾಲಯವನ್ನು ಕುರಿತ ಮಸಗೂಳಿ ಶಾಸನದ[27] "ಇದು ವೇದತ್ರಯ

---

23 South Indian Inscriptions, Vol. XX No. 129.
23a South Indian Incription, Vol. XX No. 127.
24 Indian Antiquary, Vol. X p. 103.
25 South Indian Inscription, Vol. XX No. 94.
26 South Indian Inscriptions, Vol. XI-i No. 80.
26a Epigraphia Indica, Vol. iv p. 57.
27 Epigraphia Indica, Vol. V p. 28.

ತತ್ವಧಾಮಂ'' ಎಂಬ ಮಾತು ಸಾಕ್ಷಿಯಾಗಿದೆ. ಸ್ತ್ರೀಯರೂ ವಿದ್ಯಾದಾನವನ್ನು ಪ್ರೋತ್ಸಾಹಿಸುತ್ತಿದ್ದುದಕ್ಕೆ ಕಟಗೇರಿ ಶಾಸನದ[28] ತ್ರಿಭುವನಮಲ್ಲದೇವರ ಆರನೆಯ ವಿಕ್ರಮಾದಿತ್ಯ ರಾಣಿ ಚಂದಲದೇವಿಯು ಶಾಸ್ತ್ರ ಖಂಡಿಕ ಮತ್ತು ಋಗ್ವೇದ ಖಂಡಿಕಕ್ಕೆ ದತ್ತಿ ಕೊಟ್ಟಳೆಂಬ ಹೇಳಿಕೆಯನ್ನು ನೋಡಬಹುದು. ಕೊಂಡಗುಳಿ ಶಾಸನದ[29] ಪಿರಿಯ ಗ್ರಂಥಂಗಳಂ ಪೇಳ್ವ, 'ಕಿಱಿಯ ಗ್ರಂಥಂಗಳಂ ಯಾಜ್ಞವಲ್ಕ್ಯ ಸಹಿತ ಪೇಳ್ವ' 'ಅಕ್ಷರ ವ್ಯಾಕರಣ ರೂಪಾವತಾರಮಿಂತಿನಿತುಂ ಪೇಳ್ದು ಬಾಲಶಿಕ್ಷೆಯಂ ಮಾರ್ಪ' ಉಪಾಧ್ಯಾಯರಿಗೆ ದಾನ ನೀಡಿದ ಮಾತನ್ನು ಗಮನಿಸಿದಾಗ 'ರೂಪಾವತಾರ'ವೆಂಬ ಬೌದ್ಧ ವ್ಯಾಕರಣ ಬೋಧನೆ ತೀರ ಅಪರೂಪದ ಹೇಳಿಕೆಯಾಗಿದೆ.

ವಿದ್ಯಾದಾನ, ಭೂದಾನಗಳ ಜೊತೆಗೆ ಒಂದನೆಯ ಪುಲಕೇಶಿ ಮಾಡಿದ ಹಿರಣ್ಯಗರ್ಭದಾನವನ್ನು ; ವಿಕ್ರಮಾದಿತ್ಯನ ಉಪನಯನದಲ್ಲಿ ; ಚಾಲುಕ್ಯ ಸತ್ಯಾಶ್ರಯನು ಪುತ್ರೋತ್ಸವ ಕಾಲದಲ್ಲಿ ನೀಡಿದ ದಾನಗಳನ್ನು ಇಲ್ಲಿ ಲಕ್ಷಿಸಬೇಕು. ನರ್ತನ, ವಾದ್ಯ, ಋಗ್ವೇದ, ಪುರಾಣ ಅಧ್ಯಯನಗಳಿಗಾಗಿ ದಾನ ಬಿಟ್ಟ ವಿಷಯವನ್ನು ತಿಳಿಸುತ್ತದೆ ಕಲಕೇರಿ ಶಾಸನ.[29]

ಆ ಕಾಲದ ಪರಮ ಮೌಲ್ಯಗಳಲ್ಲಿ ಶೌರ್ಯವೂ ಒಂದು. ಇದನ್ನು ಪುರಸ್ಕರಿಸುವ ಹಲವು ಶಾಸನಗಳಲ್ಲಿ ಕೇಶವ ದೇವನೆಂಬವನನ್ನು "ಮಲೆವರ ಗಂಡ ಮಚ್ಚರಿಪರ ಗಂಡ ತೊಂಡಪ್ಪವರ ಗಂಡ ದರ್ಪದೊಳ್ ಕಲಿಗಳ ಗಂಡ ಕೂರದವರ ಗಂಡ ಸೆನಿಸಿಪ್ಪರ ಗಂಡ ವೀರದೊಳ್ ನಲಿವರ ಗಂಡ ಮುಂದೆ ಬಿರುದರೆಂಬ ಗಂಡ ರಣಯಿಕ ಗಂಡ ತಾಂಫಲಿಗರ ಗಂಡ'' ಎಂದು ಕೀರ್ತಿಸುವ ಮುಂಕಣಿ ಶಾಸನ (ಕ್ರಿ.ಶ. 1206)[30]ವನ್ನು ನೋಡಬಹುದು. ಇವುಗಳ ಜೊತೆಗೆ ಹುಂಡರ್ಗಲ್ಲ, ಕೋಲೂರ, ಬೇವೂರ ಶಾಸನಗಳು ವೀರರ ಪರಾಕ್ರಮವನ್ನು ಪ್ರಕಟಿಸಿವೆ. ಇವುಗಳಿಗೆ ಕಳಶ ಪ್ರಾಯವಾದುದು ಬಾದಾಮಿಯ ಕಪ್ಪೆ ಅರಭಟ್ಟನ ಶಾಸನ.

ಶೌರ್ಯ ಪುರುಷರಿಗಷ್ಟೇ ಸೀಮಿತ ವಾದುದಲ್ಲ. ನೀಲಗುಂದ ಶಾಸನದಲ್ಲಿ[31] ತೊಱಗರೆಯ ಸಾಮಂತನ ಹೆಂಡತಿ ಜಾಗಲದೇವಿಯು ನೀಲಗುಂದದ ಚಾವಗಾವುಂಡ ಹೊಲ್ಲಗಾವುಂಡರ ಜೊತೆ ಕಾದಿ ಪರಾಕ್ರಮ ಮೆರೆದ ಉಲ್ಲೇಖ ಇದೆ. ಮುಧೋಳ ತಾಲ್ಲೂಕಿನ ಆಲಗುಂಡಿಯಲ್ಲಿ ಶಾಸನವುಳ್ಳ (ಬರೆಹವಿರುವ) ಒಂದು ಮಾಸ್ತಿಕಲ್ಲಿದೆ. ಇದಲ್ಲದೆ ಪುರುಷರ ನಿಷಧಿಗಲ್ಲುಗಳು ಹಲವು ಸಿಗುತ್ತವೆ. ಅವುಗಳಲ್ಲಿ "ಸ್ವಸ್ತಿ

---

28 South Indian Inscriptions, Vol. XI-ii No. 142.

29 Epigraphia Indica, Vol. XXXVII P. 189

30 South Indian Inscriptions, Vol. XV No. 155.

31 South Indian Inscriptions, Vol. XI-ii No. 188

ಶ್ರೀಮತ್ ಇಂಗಳೇಶ್ವರದ ತೀರ್ಥದ ಬಸದಿಯ ಆಚಾರ್ಯರು ದೇವಚಂದ್ರ ಭಟ್ಟಾರಕ ದೇವರ ಗುಡ್ಡ ಬಮ್ಮಗಾವುಂಡನ ಪುತ್ರ ಭೋಗಗಾವುಂಡನ ನಿಶಧಿ" ಎಂಬ ತಮ ದಡ್ಡಿ ಶಾಸನವನ್ನು[32] ಇಲ್ಲಿ ಹೆಸರಿಸಬಹುದು. ಇದರಂತೆ ಸ್ತ್ರೀಯರೂ ನಿಷಧಿ ಮರಣ ಹೊಂದಿದ್ದರೆಂಬುದಕ್ಕೆ ಇಂಗಳೇಶ್ವರ, ದೇವೂರ, ಕರಡಿ ನಿಷಧಿ ಶಾಸನಗಳು ಸಾಕ್ಷಿಯಾಗಿವೆ. ವೀರಗಲ್ಲು, ಮಾಸ್ತಿ ಕಲ್ಲುಗಳ ಈ ಜಿಲ್ಲೆಯಲ್ಲಿ ಕಡಿಮೆ ಸಿಗುವುದಕ್ಕೆ ವೀರಶೈವರ ಸಮಾಧಿ ರಚನೆಯೇ ಕಾರಣವಾಗಿರಬಹುದು.

ವಿದ್ಯಾಭ್ಯಾಸ ಹೆಚ್ಚಾಗಿ ಬ್ರಾಹ್ಮಣರ ಕೈವಶವಾಗಿದ್ದರೆ ವ್ಯಾಪಾರ ಮೊದಲಾದ ಆರ್ಥಿಕ ರಂಗ ಸೆಟ್ಟಿ–ಬಣಂಜಿಗ, ಸೆಟ್ಟಿಗುತ್ತ, ಮುಮ್ಮುರಿದಂಡ, ನಕರ, ವಡ್ಡವ್ಯವಹಾರಿ, ಗವರೆ, ಗಾತ್ರಿಗ, ಅಯ್ಯಾವೊಳೆ ಐನೂರ್ವರು ಎಂಬ ವರ್ತಕ ಪ್ರಕಾರದವರ ಸ್ವಾಮ್ಯಕ್ಕೆ ಒಳಪಟ್ಟಿತ್ತು. ಐಹೊಳೆಗ್ರಾಮ, ಐದುನೂರು ಸದಸ್ಯರುಳ್ಳ "ಅಯ್ಯಾವೊಳೆಯ ಐನೂರ್ವರು" ಎಂಬ ವರ್ತಕ ಮಹಾ ಸಂಘದ ಕೇಂದ್ರ ಸ್ಥಳವಾಗಿದ್ದಿತು. ದಕ್ಷಿಣ ಭಾರತದ ತುಂಬ ಕಂಡುಬರುವ "ಅಯ್ಯಾವೊಳೆಯ ಐನೂರ್ವರು" ಉಲ್ಲೇಖ ಈ ಜಿಲ್ಲೆಯ ಶಾಸನಗಳಲ್ಲಿದೆ. "ಸತ್ಯ ಶೌಚಚಾರು ಚರಿತ್ರ ನಯವಿನಯ ವಿಜ್ಞಾನರುಂ ವೀರಬಣಂಜು ಪ್ರತಿ ಪಾಳನರುಂ ವಿಶಾಲ ವಕ್ಷಸ್ಥಳರುಂ ಭುವನ ಪರಾಕ್ರಮರುಂ ಭಲ್ಲುಂಕಿದಂಡ ಹಸ್ತರುಂ ಎಂಟು ನಾಡ ಪದಿನಜುವರುಂ ಹುನವನಿಗರುಂ ಮೂವತ್ತಾಜು ಬೀಡಿನ ಮುಂಮುರಿದಂಡಂಗಳುಂ ಕಡಲೆವಾಡದ ಮನೆಯಲು ಮಹಾನಾಡಾಗಿರ್ದು ಕಡಲೆವಾಡ ಶ್ರೀಸ್ವಯಂಭೂ ಸೋಮನಾಥ ದೇವರ ಅಂಗಭೋಗಕ್ಕೆ ಬಿಟ್ಟ ಧರ್ಮದ ಅಂಗಡಿ" ಎಂಬ ಮಾತುಗಳನ್ನು ನೆನೆದಾಗ ವರ್ತಕರ ಆಚಾರ ಶುದ್ಧಿ, ಧರ್ಮಬುದ್ಧಿಗಳ ಮನವರಿಕೆಯಾಗದಿರದು ಈ "ಅಯ್ಯಾವೊಳೆಯ ಐನೂರ್ವರ" ಸಂಗತಿ ಅಭ್ಯಾಸಯೋಗ್ಯ ವಿಷಯವಾಗಿದೆ.

ಕ್ರಿ.ಶ. 1161ರ ಮನಗೂಳಿ ಶಾಸನದಲ್ಲಿ[33] ಬರುವ

ಮನುಮಾರ್ಗಕ್ಕೆ ಮಣಿಪ್ರದೀಪವೆನಿಸಿತ್ತಾಚಾರ ಸಂಪತ್ತಿ ಸ
ಜ್ಜನ ಹರ್ಷಾಬ್ಧಿಗೆ ಚಂದ್ರಲಕ್ಷ್ಮಿಯೆನಿಸಿತ್ತೌದಾರ್ಯವುಗ್ರದ್ವಿಷ
ದ್ವನ ಪಾರದ್ರಿಗೆ ಬಲ್ಪು ವಜ್ರವೆನಿಸಿತ್ತೆಂದೆಂದು ಬಾಹ್ಯೋಪರಂ
ಜನರೇ ಬಾಪ್ಪು ಮಣಂಗವಳ್ಳಿಯ ಮಹೀದೇವರ್ಕಳಯ್ನೂರ್ವರುಂ ॥

ವಿಜಾಪುರ ಶಾಸನದಲ್ಲಿ[34] ಬರುವ

ತಾವರೆ ನೆಯಿದಲುಂ ಕೊಸಗು ಸಂಪಗೆ ಮಲ್ಲಿಗೆ ಮೊಲ್ಲೆಯಲ್ಲಿಯುಂ
ತೀವಿದ ಪೆರ್ಗೊಟಿಂ ಕೆಱೆಯು ಬಾವಿಯೊಪ್ಪುವ ದೇವತಾಚಯಂ

32 South Indian Inscriptions, Vol. XV No. 598
33 Epigraphia India, Vol. P. 9
34 South Indian Inscriptions, Vol. XX No. 80

ಪೂವಿನ ತೋಂಟಮುಂ ಕಬುವೆ ಗದ್ದೆಯ ರಾಟಣವಲ್ಲಿಗಲ್ಲಿಗಂ
ಭಾವಿಸಿ ನೋಡಲಿಂದ್ರನ ಪುರಕ್ಕೆಣೆಯಾದುದು ಸಿಂದಿಕಾಪುರಂ ॥

ಎಂಬ ಮೇಲಿನ ಪದ್ಯಗಳ ಹಿನ್ನೆಲೆಯಲ್ಲಿ ನೋಡಿದಾಗ ಅಂದಿನ ಜನ ಜೀವನ ಸುಖಮಯವಾಗಿದ್ದಿತೆಂದು ಹೇಳಬೇಕಾಗುತ್ತದೆ.

ವಿಜಾಪುರ ಜಿಲ್ಲೆಯ ಸಮಗ್ರ ಶಾಸನಗಳ ಅಧ್ಯಯನ ಒಂದು ಮಹಾಪ್ರಬಂಧ (Thesis)ಕ್ಕೆ ಯೋಗ್ಯವಾದ ವಿಷಯ. ಇಂತಹ ವಿಶಾಲ ಪರಿಧಿಯುಳ್ಳ ವಿಷಯವನ್ನು ಈ ಲೇಖನದ ಚೌಕಟ್ಟಿನೊಳಗೆ ಹೊಂದಿಸುವಲ್ಲಿ ವಿವೇಚಿಸುವಲ್ಲಿ ಅದೆಷ್ಟೋ ವಿವರ ಮತ್ತು ಉಲ್ಲೇಖಗಳನ್ನು ಕೈಬಿಡಬೇಕಾಯಿತು. ವಸ್ತುಸ್ಥಿತಿ ಹೀಗಿದ್ದರೂ ಅಲ್ಲಲ್ಲಿ ಹಂಚಿಹೋಗಿದ್ದ ಮಹತ್ವದ ಅಂಶಗಳನ್ನು ಸಂಕಲಿಸಿ ಒಂದು ಸಮಗ್ರ ಚಿತ್ರ ಕೊಡಲು ಇಲ್ಲಿ ಪ್ರಯತ್ನಿಸಿದ್ದೇನೆ. ಇದರಿಂದ ವಿಜಾಪುರ ಜಿಲ್ಲೆಯ ಪ್ರಾಚೀನ ಮತ್ತು ಮಧ್ಯಕಾಲೀನ ಜನರ ಬದುಕಿನ ಒಂದು ಸ್ಥೂಲ ಪರಿಚಯ ವಾಗುವುದೆಂದು ಭಾವಿಸಿದ್ದೇನೆ.

ಇಲ್ಲಿಯವರೆಗೆ ಪರಿವೀಕ್ಷಣೆಯಾದ ಈ ಜಿಲ್ಲೆಯ ಸರ್ವ ಶಾಸನಗಳು ಪ್ರಕಟವಾಗಬೇಕು. ಇನ್ನೂ ಪರಿವೀಕ್ಷಣೆ ಮಾಡಲಾರದ ಪ್ರದೇಶದ ಪರಿವೀಕ್ಷಣಾಕಾರ್ಯ ತೀವ್ರ ನಡೆಯಬೇಕು. ಪತ್ರಿಕೆ ಹಾಗೂ ಶಾಸನ ಸಂಪುಟಗಳಲ್ಲಿ ಜಿಲ್ಲಾ ಜಿಲ್ಲೆಯಾಗಿ ಪ್ರಕಟವಾದ ಶಾಸನಗಳನ್ನು ತಾಲೂಕುವಾರು ಸಂಪುಟಗಳನ್ನಾಗಿ ಹೊರತರುವಂತಾಗಲಿ. ಮರುಪರಿವೀಕ್ಷಣೆ ಮತ್ತು ಪ್ರಕಟಿತ ಶಾಸನಗಳ ಸರಿಯಾದ, ಸರ್ವ ದೃಷ್ಟಿಯ ಅಧ್ಯಯನ, ಅರ್ಥವಿವರಣೆಗಳ ಕಾರ್ಯ ಅತ್ಯವಶ್ಯ ನಡೆಯಬೇಕಾಗಿದೆ. ಪ್ರಾಚೀನಕಾಲದಲ್ಲಿ ಈ ಪ್ರದೇಶದ ಜನರು ನಂಬಿದ ಆದರ್ಶ, ಬದುಕಿನ ಮೌಲ್ಯಗಳನ್ನು ತಿಳಿಸುವ ಈ ಶಾಸನ ಸಂಪತ್ತು ನೈಸರ್ಗಿಕ ಆಘಾತ, ಜನರ ಅಂಧಶ್ರದ್ಧೆಗಳಿಂದ ಹಾಳಾಗಿಹೋಗುವ ಮೊದಲು ಒಂದೆಡೆ ಸಂಗ್ರಹಿಸಿ, ಸಂರಕ್ಷಿಸುವಂತಾಗಲಿ.

ಬಸವಣ್ಣನವರು ನಂದಿಯ ಅವತಾರವಲ್ಲ

ಹಂ. ನಂ. ವಿಜಯಕುಮಾರ್

ಮನುಷ್ಯನಾಗಿ ಹುಟ್ಟಿಬಂದ ವ್ಯಕ್ತಿ ತನ್ನ ಸಾಧನೆಯ ಮಹತ್ವದಿಂದ ಮಹಾನುಭಾವಿಯಾದ ಎಂಬುದಕ್ಕೆ ಬಸವಣ್ಣನ ಜೀವನವೇ ಸಾಕ್ಷಿ. ಆದರೆ ಆತ ಏರಿದ ಘನತರವಾದ ಎತ್ತರವನ್ನು ಸಾಮಾನ್ಯರಾದ ನಾವು ಏರಲು ಸಾಧ್ಯವಿಲ್ಲವೆಂಬ ಕುಬ್ಜ ಮನಸ್ಸಿನವರು ಆ ಮಹಾನುಭಾವಿಯನ್ನು ಅವತಾರಪುರುಷನೆಂದು, ಕಾರಣಿಕನೆಂದು ಬಣ್ಣಿಸಿ ತೃಪ್ತಿಪಟ್ಟುಕೊಟ್ಟುಕೊಳ್ಳುತ್ತಾರೆ. ಬಸವಣ್ಣನನ್ನು ಒಬ್ಬ ಮನುಷ್ಯನನ್ನಾಗಿ ಕಾಣಲು ಈ ಮನಸ್ಸಿನವರೆಗೆ ಸಾಧ್ಯವೇ ಇಲ್ಲ. ಯಾಕೆಂದರೆ ಅವನ ಸಾಧನೆ ಅಷ್ಟೊಂದು ಮಹತ್ವದಾದ್ದರಿಂದ ಅದನ್ನು ನಾವು ಸಾಧಿಸಲಾರೆವೆಂಬ ಅಭಿಪ್ರಾಯ ಇವರದು. ಕಣ್ಣೆದುರಿಗಿರುವ ಬಸವಣ್ಣನ ಜೀವನವನ್ನು ಉದಾಹಾರಣೆಯಾಗಿಟ್ಟುಕೊಳ್ಳದೆ ವೈಭವೀಕರಿಸಿಬಿಡುತ್ತಾರೆ.

ಬಸವಣ್ಣನ ಮೇಲೆ ಕಾವ್ಯ ಬರೆದ ಹರಿಹರ–ಪಾಷಂಡಿ ಭೂಮಿಯೊಳು ಶುಭಕ್ತಿಭಯನಾರಂಭಿಸಿ ಸಾಮರ್ಥ್ಯಂ ಬಿತ್ತಿ ಪ್ರತ್ಯಕ್ಷಂಗಳಂ ಬೆಳೆದು ಗಣಪರ್ವಂ ಮಾಡಲೆಂದು ಬಂದ ಕಾರಣಿಕ ಬಸವ–ಎಂದು ಬರೆಯುತ್ತಾನೆ. ಬಸವಣ್ಣ ಕಾರಣಿಕ ಪುರುಷ. ಶಿವಭಕ್ತಿಯ ಬೆಳೆ ತೆಗೆಯಲು ಬಂದವನು. ಇದಕ್ಕೆ ಮುಂಚೆ, ಹರಿಹರನ ಪ್ರಕಾರ ಕೈಲಾಸದಲ್ಲಿ ಒಂದು ಒಡ್ಡೋಲಗ ನೆರೆದಿರುತ್ತದೆ. ಅಲ್ಲಿ ಶಿವನ ಪ್ರಸಾದವಾದ ಸಂಪಗೆಯೆಸಳನ್ನು ಎಲ್ಲರಿಗೆ ಕೊಟ್ಟು ಗಜಮುಖನಿಗೆ ಕೊಡದೆ ಕೊಟ್ಟನೆಂದು ಹೇಳುತ್ತಾನೆ. ಮರೆತು ಮಾಡಿದ ಈ ಮರೆವಿನ ತಪ್ಪಿಗೆ ಬಸವಣ್ಣನಿಗೆ ಭೂಲೋಕದಲ್ಲಿ ಒಂದು ಜನ್ಮ ಬರುತ್ತದೆ. ಧರಣಿಯೊಳು ವೃಷಭಮುಖ ಹುಟ್ಟೆಂದ ಬೆಸಸುತಿರೆ–ಬಸವಣ್ಣ ಬಾಗೆವಾಡಿಯಲ್ಲಿ ಜನ್ಮ ತಳೆದ. ಅಗ್ರಹಾರದ ಅಪ್ರತಿಮ ಭಕ್ತರಾದ ಮಾದರಸ–ಮಾದಲಾಂಬಿಕೆಯರಿಗೆ ನಂದಿಯೇ ಜನ್ಮ ತಳೆದ. ನಂದಿಯ ಅನುಗ್ರಹದಿಂದುಟ್ಟಿದ ಕಾರಣ, ಹರನಿತ್ತಪೆಸರೆ ವಂಶಾವಳಿಯ ಹೆಸರಾಗೆ ಬಸವ ಎಂದು ನಾಮಕರಣ ಮಾಡಿದರಂತೆ. ಹರಿಹರನ ಅಭಿಪ್ರಾಯ ಇಷ್ಟು: ನಂದಿಯೇ ಅವತಾರವೆತ್ತಿ ಬಸವನಾಗಿ ಬಂದ. ಮಾದರಸ ದಂಪತಿಗಳು ನಂದಿಯನ್ನು ಪ್ರಾರ್ಥಿಸಿದ ಕಾರಣ, ನಂದಿಯ ಅನುಗ್ರಹದಿಂದುಟ್ಟಿದವನಿಗೆ ನಂದಿಯ ಹೆಸರನ್ನೇ ಬಸವ (ವೃಷಭ) ಇಡಲಾಯಿತು.

ಭೀಮಕವಿ, ಷಡಕ್ಷರಿಯರ ಅಭಿಪ್ರಾಯವೂ ಇದೆ. ಒಂದಂಶ ಮಾತ್ರ ಬೇರೆ. ದೇವಲೋಕದಲ್ಲಿ ಮಾಡಿದ ತಪ್ಪಿಗೆ ಇಲ್ಲಿ ಜನ್ಮ ತಳೆಯಲಿಲ್ಲ–ಮರ್ತ್ಯವನಿಮ್ಮಡಿಸಿ ಪಾವನವನೆಯ್ದಿಸು ಒಮ್ಮೆಯುಂ ನೀ ಬಸವನಾಮದಿಂದೆನಲು...ನಿಮ್ಮಾಜ್ಞೆಯನ್ನು ಮುಂಡೆಯೊಳಾಂತು ನಡೆವೆನು–(ಭೀಮಕವಿ–ಬಸವಪುರಾಣ ಕಾಂಡ 1 ಸಂ 2 ಪ 39) ಶಿವ ಕಳುಹಿಸಲು ಮರ್ತ್ಯವನ್ನು ಪಾವನ ಮಾಡಲು ನಂದಿಯೇ ಅವತರಿಸಿದ ನಂತೆ. ಭೀಮಕವಿಯ ಪ್ರಕಾರ–ಶರಣರೊಳು ಸಲೆಸಂದ ದಾಸೋಹಿ ತಿಂಗಳಂ ಸೂಡಿದವನ ಸರ್ವೋತ್ತುಂಗ ವಾಹನ ಈಶ್ವರನ ಗಣಪುಂಗವರ್ಗೇರುವ ಮಹಾ ಸಿಂಹಾಸನಂ ಬಸವ–(ಕಾಂಡ 1 ಸಂಧಿ 1 ಪದ್ಯ 32) ಬಸವಣ್ಣ ಶಿವ ಏರುವ ವಾಹನ ವಂತೆ. ನಂದಿರ್ದ ತನ್ಮಹಾರಾಜಂಗಭಿಮುಖವಾಗಿ ಕರಕಮಳಂಗಳ ಮುಗಿದು ದೇವ ಬಿನ್ನಪವೆಂದಿಂತೆಂದ (S. K. Inscription 102. ಸಾಲು 34 ರಿಂದ 36).

...ಆ ಮಠದೋಳೇನಾನುಂ ಧರ್ಮಮಂ ದೇವರ್ಮಾಡಿದೊಡದು ಚಂದ್ರಾರ್ಕರ ಸ್ಥಾಯಿಯಾಗಿ ನಡೆವುದೆಂಬುದಮದನೆ ಮನದೆಗೊಂಡು ಬಿಜ್ಜಲದೇವ ಮಹೀಪಾಳಂ ದಕ್ಷಿಣ ಕೇದಾರೇಶ್ವರ ದೇವರಂಗಭೋಗಕ್ಕಂ ತಪೋಧನರಾಹಾರದಾನಕ್ಕಂ ಖಂಡ ಸ್ಫುಟಿತ ಜೀರ್ಣೋದ್ಧಾರಕ್ಕಂ ಶಿಷ್ಟೇಷ್ಟ ಸಂತರ್ಪಣಕ್ಕಮದಾ 6ನೆಯ ವಿಷು ಸಂವತ್ಸರದ ಪುಷ್ಯದಮಾವಾಸ್ಯೆ ಸೂರ್ಯಗ್ರಹಣದಂದು ಗೌತಮಾಚಾರ್ಯರ ಶಿಷ್ಯರಪ್ಪ ವಾಮಶಕ್ತಿ ಪಂಡಿತ ದೇವರ ಕಾಲಂ ಕರ್ಚಿ ಮೂರುಂಬಾಡದೊಳಗಣ ಕಿರುಗೇರಿಯಂ ತ್ರಿಭೋಗಾಭ್ಯಂತರಂ ಧಾರಾಪೂರ್ವಕಂ ಮಾಡಿ ಕೊಟ್ಟನ್... (S. K. 102 ಸಾಲು 44 ರಿಂದ 48).

ಬಸವಣ್ಣ ಕಲ್ಯಾಣದಲ್ಲಿ ವಚನಕಾರರ ಸಂಘಟನೆಯಿಂದ ಬ್ರಾಹ್ಮಣ ಧರ್ಮದ ಜಾತಿವ್ಯವಸ್ಥೆಯ ವಿರುದ್ಧ ಚಟುವಟಿಕೆ ನಡೆಸಿ ನಾಡಿನ ಅನೇಕ ಭಾಗದಿಂದ ಅಸಂಖ್ಯಾತರು ತನ್ನ ಕಡೆಗೆ ಬರುವಂತೆ ಮಾಡಿಕೊಂಡರೆ ಬಿಜ್ಜಳ ತನ್ನ ಬಳಿಯ ಬಸವಣ್ಣನ್ನೂ ಬಿಟ್ಟು ಕ್ರಿ.ಶ. 1164ರಲ್ಲಿ ಬಳ್ಳಿಗಾವೆಯ ವಾಮಶಕ್ತಿ ಪಂಡಿತರ ಪಾದ ಪೂಜೆ ಮಾಡಿ ದತ್ತಿಬಿಟ್ಟಿದ್ದಾನೆ. ಚಕ್ರವರ್ತಿಯ ನೆರಳಿನಲ್ಲಿದ್ದುಕೊಂಡೇ ಬಸವ ಈ ಥರದ ಆಚರಣೆಗಳನ್ನು ವಿರೋಧಿಸುತ್ತಿದ್ದಾನೆ. ಬಸವಣ್ಣ ಇತರ ಪ್ರಗತಿಪರ ವ್ಯಕ್ತಿಗಳಿಗೆ ನಾಯಕನಾಗಿ, ಅವತಾರಿಯಾಗಿ ಕಂಡರೆ ಬಿಜ್ಜಳ ತನ್ನ ಪಾಲಿಗೆ ತನ್ನ ಕೈಕೆಳಗಿನ ಭಂಡಾರಿ ನರಮಾನವ. ಬಿಜ್ಜಳನಿಗೆ ಧರ್ಮ ಗುರು ಕಾಳಾಮುಖ ಪಂಥದ ಕೋಡಿಯ ಮಠದ ವಾಮಶಕ್ತಿ ಪಂಡಿತನೇ ಹೊರತು ಎಲ್ಲವನ್ನೂ ಕಟ್ಟಿಕೊಂಡು ಗೃಹಸ್ಥನಾಗಿದ್ದ ಬಸವಣ್ಣ ಧರ್ಮ ಗುರು ಆಗಿರಲಿಲ್ಲ. ಅಲ್ಲಮಪ್ರಭುವೂ ಬಿಜ್ಜಳನಿಗೆ ಗುರು ಆಗಲಿಲ್ಲ. ವಾಮಶಕ್ತಿ ಪಂಡಿತನಿಗೆ ಪಾದ ಪೂಜೆ ಮಾಡಿ ಮುಂದೆ ಸೋವಿದೇವನೂ ದತ್ತಿ ಬಿಡುತ್ತಾನೆ. ಚೆನ್ನಬಸವಣ್ಣ, ಮರುಳ ಶಂಕರದೇವರು,

ಬಸವಣ್ಣ ನರನಲ್ಲವೆಂದೂ, ಅವತಾರಿಯೆಂದೂ ಬಿಜ್ಜಳನ ಈ ವರ್ಗದ ಧೋರಣೆಯವರಿಗೆ ಉತ್ತರ ರೂಪದಲ್ಲಿ ವಚನ ಬರೆದಿರಬೇಕು.

ಇತಿಹಾಸದ ಪ್ರಕಾರ ಬಸವಣ್ಣ ಮನುಷ್ಯನೇ. ಆತ ಅವತಾರಿಯಾಗಿಲ್ಲ ಉದ್ಧರಿಸಲು ಬಂದವನೂ ಅಲ್ಲ. ಮನುಷ್ಯನಾಗಿ ಬಂದವನು ವಿಚಾರದ ಎತ್ತರಕ್ಕೆ ಏರಿ ಮಹಾ ಮಾನವತಾವಾದಿಯಾದ. ಮಹಾ ಅನುಭವಿಯಾದ. ಇದನ್ನು ಸಮರ್ಥಿಸಲು ಅರ್ಜುನವಾಡದ ಶಿಲಾಶಾಸನ ನನ್ನ ನೆರವಿಗೆ ಬರುತ್ತದೆ.

ಸಂಗನ ಬಸವನಗ್ರಜಂ
ಲಿಂಗೈಕ್ಯಂ ದೇವರಾಜ ಮುನಿಪನ ತನಯಂ
ಜಂಗಮಂ ಪರುಷಂ ಶರಣರ
ಸಂಗಂ ಪ್ರಿಯನುತನೆನಿಪ್ಪ ಕಲಿದೇವರಸಂ

ಈ ಪದ್ಯದ ಪ್ರಕಾರ ಬಸವಣ್ಣನಿಗೆ ಒಬ್ಬ ಅಣ್ಣ ದೇವರಾಜನೆಂಬುವನು ಇದ್ದ. ಅವನಿಗೆ ಕಲಿದೇವನೆಂಬ ಮಗನಿದ್ದನು. ಈತ ಶರಣರಸಂಗ ಇತ್ಯಾದಿ ವರ್ಣಿತದಾಗಿರುವುದರಿಂದ ಈತನೂ ಬಸವಣ್ಣನ ಚಳವಳಿಯಿಂದ ಆಕರ್ಷಿತವಾಗಿ ವೀರಶೈವನಾಗಿದ್ದಿರಬೇಕು.

ಬಸವ ನಿನಗೊಬ್ಬ ಅಣ್ಣ, ಬಸವ ನಿನಗೊಬ್ಬಳೆ ಅಕ್ಕ
ಬಸವ ನಿನ್ನ ಹೆಸರು ಅಮರಾತು। ಜಗಕೆಲ್ಲ ಬಸವ ಕಲ್ಯಾಣ ಹೆಸರಾತು.

(ಕನ್ನಡ ಜನಪದ ಗೀತೆಗಳು. ಪುಟ ೨೩೧ ಪದ್ಯ ೭)

ಈ ಜನಪದ ಕಾವ್ಯವೂ ಬಸವಣ್ಣನಿಗೆ ಒಬ್ಬ ಅಣ್ಣ, ಒಬ್ಬ ಅಕ್ಕ ಇದ್ದ ಸಂಗತಿಯನ್ನು ಹೇಳುತ್ತವೆ. ಬಸವಣ್ಣನಿಗೆ ಮುಂಚೆಯೇ ಮಾದರಸ ಮಾದಲಾಂಬಿಕೆಯರಿಗೆ ದೇವರಾಜ ಮತ್ತು ಅಕ್ಕ ನಾಗಮ್ಮ ಎಂಬ ಇಬ್ಬರು ಮಕ್ಕಳು ಇದ್ದಾರೆ ಎಂದಮೇಲೆ ಪುತ್ರಾರ್ಥಕಾರಣ ಮಾದರಸ ಮಾದಲಾಂಬಿಕೆಯರು ನಂದಿಯನ್ನು ಪ್ರಾರ್ಥನೆ ಮಾಡಿ ವೃಷಭ ನೋಂಪಿ ಮಾಡುವ ಅಗತ್ಯ ಬೀಳುವುದೇ ಇಲ್ಲ. ಈ ಮುಂಚೆ ಗಂಡುಮಗು ಹೆಣ್ಣುಮಗಳು ಇಬ್ಬರೂ ಇದ್ದಾರೆ. ದೇವರಾಜ ಅಪಮನಸ್ಸಿಗೂ ಒಳಗಾಗಿಲ್ಲ. ಯಾಕೆಂದರೆ ಅರ್ಜುನವಾದ ಶಿಲಾಶಾಸನದ ಪ್ರಕಾರ ದೇವರಾಜನಿಗೆ ಒಬ್ಬ ಮಗ ಕಲಿದೇವ ಇದ್ದನು. ಕವಿಗಳು ಹೇಳುವ ವೈಭವ ನೋಂಪಿಯ ಕಥೆ ಕಾವ್ಯ ಸತ್ಯವೇ ಹೊರತು ಲೋಕಸತ್ಯವಲ್ಲ. ತಮ್ಮ ಕಾವ್ಯದ ನಾಯಕ ಜನ್ಮ ತಳೆಯಲು ಒಂದು ಉದ್ದೇಶ ಇದೆ. ಮತ್ತು ಸಾಮಾನ್ಯರಿಗೆ ಅಷ್ಟಾಗಿ ಹುಟ್ಟಿಲ್ಲ. ದಾಸಮಾಡಿದ ಕಾರಣ ಹುಟ್ಟಿದ ಇತ್ಯಾದಿ ವೈಭವೀಕರಣ ಮಾಡುವುದು ಕವಿಗಳಿಗೆ ಅಗತ್ಯವಾಯಿತು. ಅದಕ್ಕಾಗಿಯೇ ಕೈಲಾಸದ ಕಥೆಯನ್ನು ಕಟ್ಟಿದರು. ಭೂಲೋಕದ ಅವನತಿ ಪ್ರಸ್ತಾಪ ಎತ್ತಿದರು. ಅವಕಾಶಕ್ಕೆ ಇದು ತಕ್ಕ ಸಮಯ ಎಂಬ ವಾತಾವರಣವನ್ನು

ಕವಿಗಳು ಕಾವ್ಯದಲ್ಲಿ ಸೃಷ್ಟಿಸಿ ಅದಕ್ಕೆ ಅನುಗುಣವಾಗಿ ಕಥೆ ಕಟ್ಟುತ್ತಾ ಹೋದರು. ಆದ್ದರಿಂದಲೇ ಬಿಜ್ಜಳ ಇವರಿಗೆ ಶತ್ರು, ಕಾವ್ಯಸತ್ಯ. ಅವನೂ ಕೂಡ ಬಸವಣ್ಣನನ್ನು ಒರೆಹಚ್ಚಲು ಬಂದ ದುಷ್ಟಶಕ್ತಿ.

ನಿಸರ್ಗದತ್ತ ಮನುಷ್ಯ ಸೃಷ್ಟಿಯನ್ನು ಕವಿಗಳು ಅವತಾರವಾಗಿ ಕಂಡಿದ್ದಾರೆ. ಬಸವಣ್ಣನ ಅಣ್ಣನ ಹೆಸರು ದೇವರಾಜ. ಅಂದಮೇಲೆ ತಮ್ಮನ ಹೆಸರು ಬಸವಣ್ಣ ಅಲ್ಲ ಬಸವರಾಜ. ತಂದೆತಾಯಿಗಳು ಬಸವರಾಜ ಎಂದು ಇಟ್ಟ ಆಕಸ್ಮಿಕದ ಈ ಹೆಸರ ಬೆಂಬಲದಿಂದ ಬಸವ ವೃಷಭ (ನಂದಿಗೆ) ತಳಕು ಹಾಕಿ ಬಸವ ನಂದಿಯ ಅವತಾರವೆಂತಲೂ ಆದ್ದರಿಂದ ನಂದಿಯ ಹೆಸರನ್ನೇ ಇಡಲಾಯಿತೇದೂ ಕವಿಗಳು ಕಥೆ ಕಟ್ಟಿದರು.

> ಸಾಕ್ಷಾತ್ ಪರಬ್ರಹ್ಮನೆ ಇಹಸಂಸಾರಿಯಾಗಿ ಬಂದನೆಂದರಿವುದು...
> ಈ ಮತ್ಸರದ ವರಕಿ ಪ್ರಾಣಿಗಳು ಜರೆವರು...ಕೂಡಲ ಚನ್ನಸಂಗಮ
> ದೇವರಲ್ಲಿ ಬಸವೇಶ್ವರ ದೇವರು ಸಾಕ್ಷಿಯಾಗಿ—ಚೆನ್ನಬಸವಣ್ಣ ೧೧೧೮

ತನ್ನ ಈ ವಚನದಲ್ಲಿ ಚೆನ್ನಬಸವಣ್ಣ ಪರಬ್ರಹ್ಮ, ದೇವರು ಎಂದು ಪ್ರಸ್ತಾಪಿಸಿದ್ದಾನೆ. ಬಸವಣ್ಣ ಬಸವರಾಜ ಅಲ್ಲ ಬಸವೇಶ್ವರ ದೇವರು ಅಂದರೆ ವಚನಕಾರರೂ ಕೂಡ ತಮ್ಮನ್ನು ಅವತಾರಿಗಳೆಂದೇ ಭಾವಿಸಿದ್ದರು. ಆತ ನರನಲ್ಲವೆಂದು ಪ್ರಸ್ತಾಪಿಸಿ ಬಸವೇಶ್ವರ ದೇವರೆಂದು ಕರೆದಿದ್ದಾರೆ. ಈ ಬಸವೇಶ್ವರ ದೇವರು ಎಂಬ ಹೆಸರು ಹರಿಹರನಿಗೆ ಬೇಕಾಯಿತು. ತನ್ನ ಕೃತಿಗೆ ಬಸವರಾಜ ದೇವರ ರಗಳೆ ಎಂದು ಹೆಸರು ಕೊಟ್ಟ. ಬಸವ, ರಾಜ ಅಲ್ಲ ಅವನ ತಂದೆ ಇಟ್ಟ ಹೆಸರೇ ಬಸವರಾಜ. ಈ ಬಸವರಾಜ, ದೇವರಾದ. ಆದ್ದರಿಂದ ಹರಿಹರನ ರಗಳೆ ಬಸವರಾಜ ದೇವರ ರಗಳೆ ಎಂಬ ಶೀರ್ಷಿಕೆ ಪಡೆಯಿತು.

ಇತಿಹಾಸದ ಬೆನ್ನು ಹತ್ತಿ ಹೋದರೆ ಲೋಕ ಸತ್ಯವಾದ ಚರಿತ್ರೆಯ ಘಟನೆಗಳು ಹೇಗೆ ಕವಿಯ ಕಾವ್ಯದಲ್ಲಿ, ಉತ್ಪ್ರೇಕ್ಷೆಯ ಭಾವನಾಲೋಕದ ಭವ್ಯ ವ್ಯಕ್ತಿಗಳು ದೇವರಾಗಿ ಮುಂದೆ ಬಂದು ನಿಲ್ಲುತ್ತಾರೆ. ಸಂಶೋಧಕನ ಗುದ್ದಲಿಗೆ ಸಿಕ್ಕ ಶಾಸನಗಳಿಂದ ಮರೆಯಾದ ಕಥೆಯನ್ನು ಮತ್ತೆ ಕಟ್ಟಿಕೊಡುವ ಪ್ರಯತ್ನ ಇದು.

ಒಟ್ಟಾರೆ ಹೀಗೆ ಹೇಳಬಹುದು. ವಚನಕಾರರು ತಮ್ಮನ್ನು ತಾವು ಅವತಾರಿಗಳೆಂದು ಭಾವಿಸಿದ್ದರೂ ಅವರ ಸಮಕಾಲೀನರು ಹಾಗೆ ಭಾವಿಸಲಿಲ್ಲ. ವಚನಕಾರರ ಅನುಯಾಯಿಗಳಾದ ಕವಿಗಳು ಆ ಆಧಾರವಿಡಿದು ಅವತಾರಿಗಳೆಂದು ಚಿತ್ರಿಸಿದರು. ಶಾಸನಗಳು ನಮ್ಮ ನೆರವಿಗೆ ಬಂದುದರಿಂದ ಅವರು ನಮ್ಮ ಹಾಗೆ ಮಾನವರೆಂದೂ ಸಾಮಾನ್ಯ ಮನುಷ್ಯ ಆ ಎತ್ತರ ಏರಿದ ಘಟನೆ ನಮಗೆ ದಾರಿದೀಪಕಾಗಿ

ಬೆಳಕ ಹೆಜ್ಜೆಗಳಾಗಿವೆಯೆಂದು ನಾವು ಆ ದಾರಿಯಲ್ಲಿ ಕ್ರಮಿಸಲು ಪ್ರಯತ್ನಿಸ ಬಹುದಾಗಿದೆ. ಅವರು ದೇವರು, ಅವತಾರಿ ಎಂಬ ಕಥೆಯನ್ನು ಅತ್ತ ಇಟ್ಟು ಈ ದಾರಿಬೆಳಕಲ್ಲಿ ನಡೆಯಲು ದೃಷ್ಟಾಂತ ನಮ್ಮ ಮುಂದಿದೆ. ಮಾನವ ಪ್ರಯತ್ನಕ್ಕೆ ಇದೊಂದು ಅಗ್ಗಳಿಕೆ. ಅವತಾರಿಯಲ್ಲ ಎಂದು ನಾವು ಕುಬ್ಜರಾಗುವ ಬದಲು ಧೋರಣೆ ಬದಲಾಯಿಸಿಕೊಳ್ಳಲು ಈ ತೋರು ಬೆಳಕು ಬೆಳಕಾಗಿದೆ.

ಅದು ಅವತಾರದ ಹಿನ್ನೆಲೆಯಾದರೆ ಇತ್ತ ಭೂಲೋಕದಲ್ಲಿ ಮಾದರಸ ಮಾದಲಾಂಬಿಕೆಯರು ಪ್ರಪ್ರಾರ್ಥಕಾರಣ ವೃಷಭನೋಂಪಿಯನ್ನು ಮಾಡಿದರಂತೆ. ಒಮ್ಮೆ ನಂದಿಯನ್ನು ಮಾದರಸ ಹೀಗೆ ಪ್ರಾರ್ಥನೆ ಮಾಡುತ್ತಾನೆ.

– ನಂದಿಕೇಶ್ವನ ಅನಾಥಬಂಧುವೆ ತಂದೆ ನಿನ್ನವೊಲೀಶಭಕ್ತಿಯ... ಕಂದನಂ ನೀವಿತ್ತೊಡೆ...ನಿಮ್ಮಯ ಪೆಸರನಿಕ್ಕುವೆ. (ಬಸವಪುರಾಣ ಕಾಂಡ 1, ಸಂಧಿ 2, ಪದ್ಯ 54) ಮಾದಲಾಂಬಿಕೆ ನಂದಿಗೆ ಪ್ರಾರ್ಥನೆ ಮಾಡಿದ್ದಾಳೆ. ನೀನು ಕಂದನನ್ನು ಕೊಟ್ಟರೆ ನಿನ್ನ ಹೆಸರನ್ನೇ ಇಡುತ್ತೇನೆಂದು. ಆ ಪ್ರಕಾರ ಶಿಶು ಜನನವಾಗಲು ಬಸವ ಎಂದು ಹೆಸರಿಡಲಾಯಿತಂತೆ.

ಷಡಕ್ಷರಿಯ ಬಸವರಾಜ ವಿಜಯದಲ್ಲಿ ನಂದಿಯನ್ನು ಪ್ರಾರ್ಥಿಸುವುದು ಮಾದಲಾಂಬಿಕೆಯಲ್ಲ ಮಾದರಸ––ನಿನ್ನಪ್ಪಸುತನಂ ಮನ್ಮಥ ವೃಷೇಂದ್ರ ಕೂರ್ತು ಕರುಣಿಪುವುದೆನಗಂ ನಿನ್ನಯ ಪೆಸರಿಟ್ಟಪೆನು. (ಬಸವರಾಜವಿಟು. ಸಂಧಿ 2. ಪದ್ಯ 36 ಪುಟ 26) ನಂದಿಯ ನೋಂಪಿಯನ್ನು ಮಾಡಿದ ಕಾರಣ ದೇವಲೋಕದ ಶಿವ ನನುಜ್ಞೆಯಂತೆ—ಮನುಜ ಲೋಕದೊಳ್ ಬಸವನಾಮದಿನುದ್ಭವಿಸಿದವನು ನಂದಿ. ಹೀಗೆ ಎಲ್ಲ ಕವಿಗಳೂ ನಂದಿಯೇ ಅವತಾರವೆತ್ತಿ ಬಂದನೆಂತಲೂ, ನಂದಿಯನ್ನು ತಂದೆ ತಾಯಿಗಳು ಪ್ರಾರ್ಥಿಸಿದ್ದರಿಂದ ನಂದಿಯೇ ಮಗನಾಗಿ ಹುಟ್ಟಲು ನಂದಿಯ ಹೆಸರನ್ನೇ ಇಡಲಾಯಿತೆಂದು ಬರೆಯುತ್ತಾರೆ.

ಈ ಕಥೆಗಳನ್ನು ಅಲ್ಲಗಳೆಯಲು ನಮಗೆ ಅರ್ಜುನವಾಡ ಶಿಲಾಶಾಸನ ನೆರ ವಾಗುತ್ತದೆ. ಬರೀ ಈ ಕಾವ್ಯದ ಕಥೆಯ ಜೊತೆಗೆ ಚೌಡದಾನಪುರದ ಶಾಸನ ಕೂಡ ಕಾವ್ಯ ಹೇಳುವ ಕಥೆಯನ್ನು ಸಮರ್ಥಿಸುತ್ತದೆ.

ಎನೆ ಕೇಳ್ದದ್ರಿಜೆ ಶಿವ ಜಗಕ್ಕೇ ಮಾರ್ಗಮಂ ತೋಳ ಬೇಳ್ಕೆನಲಂದಾ ಪ್ರಭು ನಂದಿನಾಥನ ವೇಗ ನೋಡಲ್ಕೆ ಶ್ರೀಸಂಗಮೇಶ್ವರನ ಪುತ್ರಂ ಬಸವಯ್ಯ ಬಂದನದರಿಂ (ಕ್ರಿ. ಶ. 1263 ರ ಚೌಡದಾನಪುರಶಾಸನ) ಶಾಸನಗಳಲ್ಲಿ ಶಿವಶರಣರು ಪುಟ 62) ಪಾರ್ವತಿ ಇಚ್ಛೆಯ ಮೇರೆಗೆ ಶಿವನೇ ನಂದಿನಾಥನನ್ನು ಶಿವಮಾರ್ಗವನ್ನು ಬೆಳಗಲು ಭೂಲೋಕಕ್ಕೆ ಕಳುಹಿಸಿದನಂತೆ. ಆ ಕಾರಣ ಬಸವಯ್ಯ ಬಂದನಂತೆ.

ವಚನಕಾರರು ಕೂಡ ಸ್ವತಃ ಅಲ್ಲಮಪ್ರಭು, ಬಸವಣ್ಣನವರೂ ನಂದಿಯೇ ಬಸವನಾಗಿ ಅವತರಿಸಿದನೆಂದೂ ಬಸವಣ್ಣ ಕಾರಣಿಕನೆಂದೂ ಹೇಳುತ್ತಾರೆ. ಬಸವ

ಸಾಮಾನ್ಯ ಮನುಷ್ಯನಲ್ಲವೆಂತಲೂ, ಅವತಾರಿ, ಕಾರಣಿಕನೆಂತಲೂ ಪ್ರಸ್ತಾಪಿಸುತ್ತಾರೆ.

1) ಶರಣ ಬಸವಣ್ಣನನು ಲೋಕದವರು ಮರ್ತ್ಯರೆಂದರೆ ಅಘೋರ ತಪ್ಪದು ಕಾಣಾ—ಮರುಳ ಶಂಕರದೇವ–404. ಸ. ಪು. ವ. 2.

2) ಹರನಿರೂಪದಿಂದ ಧರೆಗೆ ಬಸವಣ್ಣನವತರಿಸಿದ ಕಾರಣ ಸದಾಚಾರವೆಂಬುದು ಧರೆಗೆ ವಿಖ್ಯಾತವಾಯಿತ್ತು–ಶಂಕರದಾಸಿಮಯ್ಯ (ಶೂ.ಸಂ. 890).

3) ಬಸವಣ್ಣನು 770 ಅಮರಗಣಂಗಳು ಸಹಿತ ಮರ್ತ್ಯಕ್ಕೆ ಬಂದನಂ ಒಂದು ಕಾರಣದಲ್ಲಿ – ಅ.ವ.ಚಂ. 1148 - ಅಲ್ಲಮಪ್ರಭು.

4) ಮರ್ತ್ಯಲೋಕ ಶಿವಲೋಕವೆಂಬುವು ನಿಚ್ಚಣಿಕೆಯಾದವು. ದೇವಾ ನೀವೀ ಕಲ್ಯಾಣಕ್ಕೆ ಬಂದವತರಿಸಿದಲ್ಲಿ ಸತ್ಯ ಶರಣರೆಲ್ಲರನು ಪಾವನವ ಮಾಡಲೆಂದು ಬಂದಡೆ ಜನ್ಮದಲ್ಲಿ ಬಂದನೆಂದು ನುಡಿಯ ಬಹುದೇ ? ನಿಮಗೆ ಭವಉಂಟೆಂದು ಮನದಲ್ಲಿ ಹಿಡಿದಡೆ ಸಂಗನ ಬಸವಣ್ಣ ನಿಮ್ಮ ಶ್ರೀಪಾದದಾಣೆ-ಚೆನ್ನಬಸವಣ್ಣನ ವಚನ 782.

5) ಕರ್ತನಟ್ಟಿದರೆ ಮರ್ತ್ಯದಲ್ಲಿ ಮಹಾಮನೆಯ ಕಟ್ಟಿದೆ ಸತ್ಯ ಶರಣರಿಗೆ ತೊತ್ತು ಭೃತ್ಯನಾಗಿ ಬದುಕಿದೆನು. ಕರ್ತನ ಬೆಸನು ಮತ್ತೆ ಬರಲೆಂದಟ್ಟಿದಡೆ ಕೂಡಲ ಸಂಗಮದೇವರ ನಿರೂಪಕ್ಕೆ ಮಾಗಿ ಪ್ರಸಾದವೆಂಬೆನು–ಬಸವಣ್ಣನವರ ವಚನ–1062.

ಐದು ಜನ ವಚನಕಾರರು ಬಸವಣ್ಣ ಅವತಾರಿಯೆಂದು ಹೇಳುತ್ತಾರೆ. ನಂದಿಯೇ ಬಸವನಾಗಿ ಬಂದನೆಂದು ಹೇಳದಿದ್ದರೂ ಶಿವಕಳುಹಿಸಿದ ಕಾರಣ 770 ಗಣಂಗಳು ಮರ್ತ್ಯರಕ್ಕೆ ಬಂದರೆಂದೂ ಅವರಲ್ಲಿ ಬಸವಣ್ಣನೂ ಒಬ್ಬ ಅವತಾರಿಯೆಂದು ಪ್ರಸ್ತಾಪಿಸುತ್ತಾರೆ. ಬಸವಣ್ಣನನ್ನು ನರನೆಂದು ಕರೆಯಬಾರದೆಂದು ಚೆನ್ನ ಬಸವಣ್ಣ, ಮರುಳ ಶಂಕರದೇವರು ಹೇಳುತ್ತಾರೆ. ಬಸವಣ್ಣನನ್ನು ನರನೆಂದು ಕರೆದವರು ಯಾರು ? ಬಸವಣ್ಣನ ಸಮಕಾಲದಲ್ಲಿ ಬಿಜ್ಜಳನ ಗುರುಗಳಾದ ವಾಮಶಕ್ತಿ ಪಂಡಿತರು, ಇತರ ವಿಪ್ರರು ಬಸವಣ್ಣನನ್ನು ನರನೆಂದು ಕರೆದು ಅವರಿಗೆ ವರ್ತನೆ ಮಾಡುವಂತೆ ವರ್ತನೆ ಮಾಡಿದ್ದಾರೆ. ಇದಕ್ಕೆ ಇವರು ಉತ್ತರ ಕೊಡುತ್ತಾರೆ. ಭೀಮಕವಿ ಕೂಡ ಬಸವನಿಳೆಗುದಯಿಸಿದ ಮಾತ್ರದೊಳು ನರಜಾತನೆನಬಹುದೆ ಎನ್ನುತ್ತಾನೆ. ಇದೇ ಮಾತನ್ನು ಗೂಳೂರು ಸಿದ್ಧವೀರಣ್ಣೊಡೆಯ ಶೂನ್ಯ ಸಂಪಾದನೆ ಕೃತಿಯಲ್ಲಿ ಬರೆಯುತ್ತಾನೆ.

ಶಿಕಾರಿಪುರದ 103 ನೇ ಶಾಸನ ಬಿಜ್ಜಳ ಕಾಳಾಮುಖ ಪರಂಪರೆಯ ಧರ್ಮ ಗುರುವಾದ ವಾಮಶಕ್ತಿ ಪಂಡಿತದೇವರ ಪಾದಪೂಜೆ ಮಾಡಿ ದತ್ತಿಬಿಟ್ಟ ಸಂಗತಿಯನ್ನು ಹೇಳುತ್ತದೆ. ಕಲ್ಯಾಣದ ದಕ್ಷಿಣ ದಿಗ್ಭಾಗವನ್ನು ಸಾಧಿಸಲು ದಂಡಯಾತ್ರೆ ಬಂದವನು ಬನವಸೆರಾಜಧಾನಿ ಬೆಳ್ಳುಗಾವೆಯಲ್ಲಿ ತಂಗಿದನಂತೆ. ಬನವಸೆಯ ಮಹಾ ಪ್ರಧಾನನಾದ ಕಸಪಯ್ಯ ಧರ್ಮಸೇವೆ ಮಾಡುವ ಕಾರ್ಯ ಪ್ರಸ್ತಾಪಿಸಿದಾಗ ಆಚಂದ್ರಾರ್ಕ ಸ್ಥಾಯಿಯಾಗಿ ಉಳಿಯಲು ಬಿಜ್ಜಳ ದತ್ತಿಬಿಟ್ಟನಂತೆ.

–ದಕ್ಷಿಣ ದಿಗ್ಭಾಗವಂ ಸಾಧಿಸಲೆಂದು ಬಿಜ್ಜಲರಾಜಂ ಬಿಜಯಂಗೆಯ್ದು ಬೆಳ್ಳುಗಾವೆಯೊಳು ಬೀಡಂ ಬಿಟ್ಟು ಸುಖಸಂಕಥಾ ವಿನೋದದಿಂದವಿರ್ಪುದುಮನಿ ಬರುವೊಂದಾಗಿ ಬಂದು ಕುಳ್ಳಿರ್ದ ಕೇಡಿಯಂ ಮರದ ಧರ್ಮಪ್ರಸಂಗಮಂ ಮಾರ್ಪುದುಮಾಂ ಪ್ರಸ್ತಾವದೊಳು ಕಸಪಯ್ಯ ನಾಯಕನೆದ್ದು

ಆಧಾರ ಗ್ರಂಥಗಳು

1) ಎಪಿಗ್ರಾಫಿಕ ಕರ್ನಾಟಕಾನ, ಶಿವಮೊಗ್ಗ ಸಂಪುಟ.
2) ಭೀಮಕವಿಯ ಬಸವಪುರಾಣ
3) ಷಡಕ್ಷರಿಯ ಬಸವರಾಜವಿಜಯ.
4) ಹರಿಹರನ ಬಸವರಾಜ ದೇವರ ರಗಳೆ ಸಂ. ಟಿ. ಎಸ್. ವೇಕಣ್ಣಯ್ಯ
5) ಬಸವಣ್ಣನವರ ವಚನಗಳು : ಸಂ. ಆರ್. ಸಿ. ಹಿರೇಮಠ.
6) ಚೆನ್ನಬಸವಣ್ಣನವರ ವಚನಗಳು : ಸಂ. ಆರ್. ಸಿ. ಹಿರೇಮಠ
7) ಅಲ್ಲಮನ ವಚನ ಚಂದ್ರಿಕೆ : ಸಂ. ಎಲ್. ಬಸವರಾಜು.
8) ಸಕಲ ಪುರಾತನರ ವಚನಗಳು. ಭಾಗ 2 : ಸಂ. ಎಂ. ಎಸ್. ಸುಂಕಾಪುರ
9) ಕನ್ನಡ ಜಾನಪದ ಗೀತೆಗಳು : ಡಾ. ಬಿ. ಎಸ್. ಗದ್ಗೀಮಠ.
10) ಶಾಸನಗಳಲ್ಲಿ ಶಿವಶರಣರು : ಎಂ. ಎಂ. ಕಲ್ಬುರ್ಗಿ.

ಭಾರತೀಯ ಸಂಸ್ಕೃತಿಯಲ್ಲಿ ವೀಳ್ಯೆಯ ಮಹತ್ವ

ಅರವಿಂದ ಮಾಲಗತ್ತಿ

> ವೀಳ್ಯೆಯದೆಲೆ ಎಂದರೆ ಇಂಡಿಯನ್ನರಿಗೆ ಅಚ್ಚುಮೆಚ್ಚು.
> ಯುರೋಪಿಯನ್ನರಿಗೆ ಯುರೋಪಿನಲ್ಲಿ ರೊಟ್ಟಿ
> ಎಷ್ಟು ಅವಶ್ಯಕವೋ ಅದಕ್ಕಿಂತ ಹೆಚ್ಚು ಆವಶ್ಯಕ ಇಲ್ಲಿ
> ವೀಳ್ಯೆಯದೆಲೆ.
>
> **—ವೆಂಡೆಲ್‌ಸೊಲ್**

ಗಿಡ-ಬಳ್ಳಿಗಳ ತಪ್ಪಲಗಳ ಆಕಾರಗಳು ನಾನಾ ರೀತಿ. ಭರ್ಜಿಯಂತೆ ಕಣಗಿಲೆ ಎಲೆ ತೋರಿದರೆ ಉದ್ದವಾದ ನಳಿಕೆಯಂತೆ ಈರುಳ್ಳಿಯ ಎಲೆ ಗೋಲಾಕಾರವಾಗಿ, ತಾವರೆಎಲೆ ಇನ್ನು ಕೆಲವು ಅಂಡಾಕಾರವಾಗಿ, ಅವಕ್ಕಿಂತ ಬಿನ್ನವಾಗಿ ಬಾಳೆ, ಎಕ್ಕಿ, ಹೊನ್ನಿ, ಬನ್ನಿ, ಆಲದ ಮುಂತಾದ ಹಲವಾರು ಬಗೆಯ ಆಕೃತಿಯಲ್ಲಿವೆ. ಇಂತವು ಎಲ್ಲರೀತಿ ಎಲೆಗಳಿಗೂ ಬೆಲೆ ಇರದಿದ್ದರೂ ಭಾರತೀಯ ಸಂಸ್ಕೃತಿಯಲ್ಲಿ ಕೆಲವೊಂದು ಎಲೆಗಳಿಗೆ ಮಹತ್ವದ ಸ್ಥಾನವಿರುವದು ನಾವು ಗಮನಿಸದೇ ಇರಲಾಗದು. ಇಂತಹ ಎಲೆಗಳಲ್ಲಿ ಕೆಲವು ಸೇವನೆಗೆ ಮೀಸಲಾದರೆ, ಇನ್ನು ಕೆಲವು ಸಾಂಪ್ರದಾಯಿಕ ಪದ್ಧತಿಗಳಿಗೆ ಒಗ್ಗೂಡಿಕೊಂಡು ಬಳಕೆ ಮಾಡಿಕೊಳ್ಳುತ್ತ ಬಂದಿರುವದು ಗಣನೀಯ ವಿಷಯ.

ಬಾಳೆ, ಆಲ (ಪತ್ರೋಳಿಗಳಿಗಾಗಿ) ಇಂಥವು ಊಟದ ಎಡೆಗಳಿಗಾಗಿ ಬಳಸಿದರೆ ಮಾವಿನ ಎಲೆಗಳನ್ನು ಬಾಗಿಲಿಗೆ ತೋರಣಗಳಿಗಾಗಿ, ಬನ್ನಿಯ ಎಲೆಯನ್ನು ವಿಜಯದಶಮಿಯಂದು ಬಂಗಾರವೆಂದೂ ಬಳಸುತ್ತೇವೆ. ಆದರೆ ವೀಳ್ಯೆಯ ಎಲೆ ಇವೆಲ್ಲವುಕ್ಕಿಂತಲೂ ವಿಶಿಷ್ಟವಾದ ಸ್ಥಾನವನ್ನು ಗಿಟ್ಟಿಸಿಕೊಂಡಿದೆ. ಇದಕ್ಕೆ ನಾವು 'ಎಲೆಗಳರಾಜ' ಎಂದು ಕರೆಯಬಹುದು. ಭಾರತೀಯ ಸಂಸ್ಕೃತಿಯಲ್ಲಿ ವೀಳ್ಯೆಯ ಎಲೆಗೆ ದೊರಕಿದ ಸ್ಥಾನ-ಮಾನ ಬೇರೆ ರಾಷ್ಟ್ರಗಳಲ್ಲಿ ದೊರಕಿರಲಿಕ್ಕಿಲ್ಲ. ಅಷ್ಟೇ ಅಲ್ಲ, ನಮ್ಮ ಸಂಸ್ಕೃತಿಯಲ್ಲಿಯೇ ಹೋಲಿಸಿ ನೋಡಲಾಗಿ ಇದರ ಜೊತೆಗೆ ಸರಿ-ಸಮ ಕಟ್ಟುವ ಬೇರೊಂದು ವಸ್ತು ದೊರಕಲಿಕ್ಕಿಲ್ಲವೇನೊ ಎನಿಸುತ್ತದೆ.

ವೀಳ್ಯೆಯ ಎಲೆಗಳಲ್ಲಿ ಹಲವಾರು ಬಗೆಗಳಿವೆ[1] : ಮದ್ರಾಸ್ ಎಲೆ, ಅಂಬಾಡಿ ಎಲೆ, ಕಣ್ಣಗ ಎಲೆ ಮುಂತಾದವು. ಇವೆಲ್ಲವುಗಳಲ್ಲಿ ಶ್ರೇಷ್ಠವಾದುದು ಬಿಳಿ ಎಲೆ.

---

1 ಕನ್ನಡ ವಿಶ್ವಕೋಶ (ಬೆಂಗಳೂರು) : ಸಂ.-9, ಪುಟ-221.

ಇದೇ ವೀಳ್ಯೆಯ ಎಲೆಯಾಗಿ ಬಳಕೆಯಾಗುತ್ತಿದೆ. ಕರೆ ಎಲೆ ಯಾವ ಕಾರ್ಯಕಲಾಪಗಳಲ್ಲಿಯೂ ಬಳಕೆಯಾಗುವುದಿಲ್ಲ.

ಬೆಟೆಲ್=ವೀಳ್ಯೆಯದೆಲೆ. ಈ ಬಗ್ಗೆ ಪಂಜೆ ಮಂಗೇಶರಾಯರ ಅಭಿಪ್ರಾಯ ಹೀಗಿವೆ : ವೀಳ್ಯೆ ಶಬ್ದದ ಇತರ ರೂಪಗಳು ಬೇರೆ ಬೇರೆ ಭಾಷೆಗಳಲ್ಲಿ ಈ ರೀತಿ ಇವೆ : ವೀಳ್ಯ (ಕನ್ನಡ), ಬುಳ್ಯ (ತುಳು), ವೀಡೋ (ಕೊಂಕಣಿ), ವೀಟಿ (ತೆಲುಗು), ಬೀಡಾ (ಹಿಂದಿ), ಬೆತ್ತಿಲ (ಮರಾಠಿ), ವೀಟಿ (ಸಂಸ್ಕೃತ).

ವೀಳ್ಯ (ಕ), ಬುಳ್ಯ (ತು), ವೀಡೋ (ಕೊಂ), ಇವು ಸುಣ್ಣ ತೀಡಿ ಅಡಿಕೆ ಬೆರಸಿ ತಯಾರಿಸಿದ ಪದಾರ್ಥವನ್ನು ಕುರಿತ ಆಯಾ ಭಾಷೆಯ ಶಬ್ದಗಳು. ಬರಿಯ ಎಲೆಯನ್ನು ಕುರಿತವುಗಳಲ್ಲ. ಆದರೆ ಸಂಸ್ಕೃತದಲ್ಲಿ ವೀಟಿ ಎಂದರೆ ಎಲೆಯೆಂದೂ, ತಾಂಬೂಲವೆಂದೂ ಅರ್ಥವಾಗುತ್ತದೆ ಎಂಬುದಾಗಿ ಹೇಳಿದ್ದಾರೆ.[2] ಆದರೆ ವೀಳ್ಯ (ಕ) ವೀಡೋ (ಕೊಂ) ಈ ಪದಗಳು ಸುಣ್ಣತೀಡಿ ಅಡಕೆ ಬೆರಸಿ ತಯಾರಿಸಿದ ಪದಾರ್ಥಗಳಿಗೆ ಬಳಕೆಯಾಗುವದು ಎಂಬುವದು ಅಷ್ಟೊಂದು ಸರಿಯಲ್ಲ. ಈ ಪದಗಳು ಸಾಂಪ್ರದಾಯಕ ಕಾರ್ಯಕ್ರಮ ನಡೆದಾಗ ವೀಳ್ಯೆಯೊಂದಿಗೆ ಅಡಿಕೆ ಇಟ್ಟು ಕೊಡುವುದಕ್ಕೆ ಬಳಕೆಯಾಗುತ್ತವೆ. ಆದರೆ ಸುಣ್ಣ ಕಾಚು ತೀಡಿ ಕೊಟ್ಟಾಗ ವೀಳ್ಯೆ ಎಂದು ಕರೆಯುವದು ಈಗ ಕಂಡು ಬರುವುದಿಲ್ಲ. ಹಳೆಯ ಕನ್ನಡ ಕಾವ್ಯಗಳಲ್ಲಿ ವೀಳ್ಯೆ ಎಂದು ಬಳಕೆಯಾಗುವ ಸಂದರ್ಭದಲ್ಲಿ ತಾಂಬೂಲವೆಂದೇ ಬಳಸಿರುವುದು ನೋಡುತ್ತೇವೆ. ಡಚ್ಚ ಭಾಷೆಯಿಂದ ಬಂದಿದೆ ಎನ್ನುವ 'ತಾಂಬೂಲ' ಪದ ಅದಕ್ಕೆ ಬಳಕೆಯಾಗುವ ಸಮನ್ವಯ ಪದ.

ಎಲೆಯ ಬಳಕೆಯಾಗುವ ಕೆಲವೊಂದು ಗುಣಲಕ್ಷಣಗಳಿಂದ ಇದು ಬಲಿ ಪದ್ಧತಿಯ ಬೆಳವಣಿಗೆಯ ಘಟ್ಟವೇನೋ ಎನಿಸುತ್ತದೆ. ದೇವ ಇಷ್ಟಾರ್ಥವನ್ನು ಪೂರ್ತಿಗೊಳಿಸಬೇಕು ಎಂದು, ದೇವರು ಕೂಡಾ ಆಹಾರ ಸೇವನೆಗೈಯುತ್ತವೆಂದು ತನ್ನಂತೆಯೇ ತನ್ನ ಲಕ್ಷಣಗಳನ್ನು ಒಗ್ಗೂಡುವಂತೆ ದೇವತೆಯನ್ನು ನಿರ್ಮಿಸಿ ಅದಕ್ಕೆ ಅಗಾಧ ಶಕ್ತಿಯನ್ನು ಕೊಟ್ಟಿದ್ದಾನೆ. ಮನುಷ್ಯರ ಬಲಿ, ಪ್ರಾಣಿ ಬಲಿ ಕೊಡುವದು ಹಿಂದಿನಿಂದಲೇ ಓದುತ್ತ, ಕೇಳುತ್ತ, ನೋಡುತ್ತ ಬಂದಿದ್ದೇವೆ. ಮಾನವ ಬೆಳವಣಿಗೆ ಹೊಂದುತ್ತ ತನ್ನ ಬೆಳವಣಿಗೆಗೆ ತಕ್ಕಂತೆ ತನ್ನ ಕಾರ್ಯಾಚರಣೆಯಲ್ಲಿಯೂ ಬದಲಾ

---

2 ಶ್ರೀ ಪಂಜೆಯವರ ನೆನಪಿಗಾಗಿ : ಹರ್ಷ ಮುದ್ರಣಾಲಯ, ಪುತ್ತೂರು.
ಉದ್ಧರಣೆ : ಪ್ರವಾಸಿ ಕಂಡ ಇಂಡಿಯಾ : ಸಂಪುಟ-3, ಪುಟ-468,
–ಎಚ್. ಎಲ್. ನಾಗೇಗೌಡ.

0 ಇದೇ ಲೇಖಕರ–ಹಿಂದೂ ದೇಶದಲ್ಲಿ ತಾಂಬೂಲ ಪದ್ಧತಿ : ಬಳಕೆ. [ಲೇಖನ ನೋಡಿ.]

ಪಡೆಯನ್ನು ಹೊಂದಿದ್ದಾನೆ. ದೇವರನ್ನು ಒಲಿಸಿಕೊಳ್ಳಲು ಮೊದಲು ನರಬಲಿ ಅದರ ಇನ್ನೊಂದು ಘಟ್ಟವಾಗಿ ಪ್ರಾಣಿ ಬಲಿ, ಮತ್ತೆ ಅದರಲ್ಲಿಯೇ ಬೆಳವಣಿಗೆ ಘಟ್ಟಗಳಾಗಿ ಮೊದಲು ಕೋಣ, ನಂತರ ಕುರಿ, ಕೋಳಿ ಈ ರೀತಿ ಇಳಿಕೆಯ ಕ್ರಮಕ್ಕೆ ಬಂದು ನಿಂತಿದೆ. ಇದು ಕೇವಲ ಮಾಂಸಾಹಾರಿಗಳಿಗೆ ಮಾತ್ರ ಸೀಮಿತ. ಆದರೆ ಸಸ್ಯಾಹಾರಿಯ ಜನ ಪೂಜೆಯ ಸಂದರ್ಭದಲ್ಲಿ ಸಸ್ಯಗಳನ್ನು ಬಳಸುವದು ಕಂಡು ಬರುತ್ತದೆ. ಉದಾ : ಕರಕಿ, ವೀಳ್ಯೆಯ ಎಲೆ, ಮಾವಿನ ತೋರಣ, ಇವು ಬಳಸುವ ದನ್ನು ನೋಡುತ್ತೇವೆ. ಇಲ್ಲಿ ಒಂದು ಸಸ್ಯವೂ ಒಂದು ಜೀವ ಎನ್ನುವದು ಮರೆಯುವಂತಿಲ್ಲ. ಆದ್ದರಿಂದ ಈ ಎಲೆಯ ಬಳಕೆಯ ಹಲವು ಅಂಶಗಳಲ್ಲಿ ಇದು ಒಂದಾಗಿದೆ ಎಂದು ಹೇಳಬಹುದು.

ಎಲೆಯ ಬಳಕೆ ನಮ್ಮ ನಾಡಿನ ಹಲವಾರು ಭಾಗಗಳಲ್ಲಿ ಹಲವಾರು ರೀತಿಯಲ್ಲಿ ಬಳಕೆಯಾಗಿದೆ. ಇವೆಲ್ಲವನ್ನು ಒಂದೆಡೆಗೆ ಕಲೆಹಾಕುವುದು ಕಷ್ಟಸಾಧ್ಯ. ವೀಳ್ಯೆಯ ಎಲೆ ಹೆಚ್ಚು-ಕಡಿಮೆ ಶುಭ ಹಾಗೂ ಅಶುಭ ಎರಡೂ ಸಂದರ್ಭಗಳಲ್ಲಿ ಬಳಸುವದು ಕಂಡುಬರುತ್ತದೆ. ಹೆಚ್ಚಾಗಿ ಶುಭಸಂದರ್ಭಗಳಲ್ಲಿಯೇ ಸೀಮಿತ.

ಕಾರ್ಯಕ್ರಮದ ಆರಂಭ ಮತ್ತು ಅಂತ್ಯದ ವೀಳ್ಯೆಗಳು :

ವೀಳ್ಯೆಯದ ಎಲೆ ಇಲ್ಲದೆ ಹೋದರೆ ಯಾವ ಕಾರ್ಯಕ್ರಮ ಜರುಗುವುದಿಲ್ಲ ವೇನೋ ಎನ್ನುವಂತೆ ನಮ್ಮ ಸಂಸ್ಕೃತಿಯ ಪ್ರತೀಕವಾಗಿ ಬಿಟ್ಟುಬಿಡದೇ ಬಳಕೆ ಯಾಗುವುದನ್ನು ನೋಡುತ್ತೆವೆ. ಮನೆಯ ಇಲ್ಲವೆ ಸಮಾಜದ ಯಾವುದೇ ಕಾರ್ಯ ಕ್ರಮವಿರಲಿ, ವೀಳ್ಯೆ ಬೇಕು. ಬಂದ ಜನರಿಗೆ ಗೌರವಸೂಚಕವಾಗಿ ಕೊಡುವುದು ಎನ್ನುವದು ಪ್ರತೀತಿ. ಇದು ಕೇವಲ ಈಗಷ್ಟೇ ಬಳಕೆಯಲ್ಲಿದೆ ಎಂದಲ್ಲ, ಈ ರೀತಿ ಒಂದೆಯೂ ನಡೆಯುತ್ತಿದ್ದವು ಎನ್ನುವದನ್ನು ಕನ್ನಡದ ಕಾವ್ಯಗಳಲ್ಲಿ ಗಮನಿಸ ಬಹುದು. ಪಂಪ ಭಾರತದಲ್ಲಿ —

"...ಪೂರ್ವಸಂಭಾವಣಾರ್ಥವೆಂತ್ತಿ ಮಧುಪರ್ಕ
ವೇತ್ರಾಸನ ತಾಂಬೂಲದಾನಾದಿಗಳಿಂ ಸಂತಸಂಬಡಿಸಿ...[3]

ಎಂದು ಮುಂತಾಗಿ ಹೇಳಲಾಗಿದೆ. ಸಭೆಯ ಮೊದಲು ಬಳಸುವ ಈ ಮರ್ಯಾದೆ ವೀಳ್ಯೆಗೆ "ಅಗ್ರತಾಂಬೂಲ"ವೆಂದು ಕರೆಯುವರು. ಇದರಂತೆ ಸಭೆಯನ್ನು ಮುಗಿಸಿ ಕೊಂಡು ಬೀಳ್ಕೊಡುವಾಗ ಕೊಡುವ ವೀಳ್ಯೆ ಇದ್ದವು ಎನ್ನುವದು ರತ್ನಾಕರನ ಭರತೇಶ ವೈಭವದಲ್ಲಿ ಕಾಣಬಹುದು :

---

3 ಪಂಪ ಭಾರತ ಎಂಬ ವಿಕ್ರಮಾರ್ಜುನ ವಿಜಯ : ಡಾ. ಕೆ. ಎ. ಪುಟ್ಟಪ್ಪ. (ಮೊದಲಭಾಗ) ಪು-2, ಪದ್ಯ-53.

"ತಾಂಬೂಲ ವಸ್ತ್ರಭೂಷಣವಿತ್ತು ನವಿರಾಜ
ತುಂಬಿದ ಜನವ ಬೀಳ್ಕೊಟ್ಟ"[4]

(ಪಂಜೆ ಮಂಗೇಶರಾಯರು ಬೀಳ್ಕೊಡು ಪದ, ವೀಳ್ಯೆಕೊಳ್ಳು ಎಂಬುದೇ ಬೀಳ್ಕೊಳ್ಳು ಮತ್ತು ವೀಳ್ಯೆ ಕೊಡು ಎಂಬುದು ಬೀಳ್ಕೊಡು ಎಂದು ಹೀಗೇತಕ್ಕೆ ಆಗಿರಬಾರದು ?* ಎಂದು ಪ್ರಶ್ನಿಸುತ್ತಾರೆ. ಇದು ಒಪ್ಪಬೇಕಾದುದೇ ಎನಿಸುತ್ತದೆ.)

1925ರಲ್ಲಿ ಆಫ್ರಿಕಾದಿಂದ ಭಾರತಕ್ಕೆ ಬಂದ ಪ್ರವಾಸಿ 'ಮಾಲ್ಡೀವ್ ದ್ವೀಪ' ತನ್ನ ಪ್ರವಾಸ ಕಥನದಲ್ಲಿ ಈ ವೀಳ್ಯೆಯ ಸಂಪ್ರದಾಯ ಕುರಿತು : 'ಇಲ್ಲಿಗೆ ಹಡಗುಗಳು ಬಂದರೆ ಸಾಮಾನ್ಯವಾಗಿ ಅಕ್ಕಪಕ್ಕದ ದ್ವೀಪದ ಜನರು ಸಣ್ಣ ದೋಣಿಯಲ್ಲಿ ಒಂದು ವೀಳ್ಯೆಯದೆಲೆ ಮತ್ತು ತೆಂಗಿನಕಾಯಿ ಕೊಟ್ಟು ಸ್ವಾಗತಿಸುತ್ತಾರೆ' ಎಂದು ಹೇಳಿದ್ದಾನೆ.[5] ಇಂಥ ಪದ್ಧತಿಗಳು ನಮ್ಮಲ್ಲಿ ಇನ್ನೂ ಇಲ್ಲದಿಲ್ಲ. ಭಜನಾ ಮೇಳಗಳನ್ನು ಒಂದೂರಿಂದ ಇನ್ನೊಂದು ಊರಿಗೆ ಕರೆತರಬೇಕಾದರೆ ಇಲ್ಲವೆ ಡೊಳ್ಳು ಮೇಳಕ್ಕೆ ಕರೆಯಬೇಕಾದರೆ, ಪಂದ್ಯಗಳಿಗೆ ಆಹ್ವಾನಿಸಬೇಕಾದರೆ ಗ್ರಾಮಗಳಲ್ಲಿ ಎಲೆ ಕಾಯಿ ಕೊಟ್ಟು ಬರುವ ಸಂಪ್ರದಾಯವಿದೆ. ಎಲೆ ಕಾಯಿ ತೆಗೆದುಕೊಂಡವರು ಸಮಾರಂಭಕ್ಕೆ ಬಂದೇ ಬರುತ್ತಾರೆ. ವೀಳ್ಯೆಯನ್ನು ಸ್ವೀಕರಿಸುವುದು ಎಂದರೆ ಪ್ರತಿಜ್ಞೆಯೇ ಮಾಡಿದಂತೆ ಎಂದು ಹೇಳುವರು.

ಸಮಾರಂಭದ ವೀಳ್ಯೆಗಳು

ಜನಪದದಲ್ಲಿ ಯಾವುದೇ ಸಮಾರಂಭಗಳಾಗಲಿ ವೀಳ್ಯೆ ಇಲ್ಲದೆ ನಡೆಯುವದಿಲ್ಲ. ಮದುವೆಯಂತಹ ಸಂದರ್ಭಗಳಲ್ಲಿಯೂ ವೀಳ್ಯೆಗಳು ಇಲ್ಲದೆ ಹೋದಾಗ, ಮುಹೂರ್ತ ಮೀರುತ್ತಿದ್ದರೂ ವೀಳ್ಯೆಯ ಎಲೆಯನ್ನು ತರಿಸಿ ಕಾರ್ಯಕ್ಕೆ ಮುಂದಾಗುತ್ತಾರೆ. ಆರತಿಯನ್ನು ಬೆಳಗುವ ಕಳಸಕ್ಕಾಗಿ ಎಲೆಗಳನ್ನು ಬಳಸುವರು. ಇಂಥವುಗಳಿಗೆ ಕಳಸದೆಲೆ ಎಂದೂ, ಮಕ್ಕಳಿಗೆ ಜವಳವನ್ನು ತೆಗೆಸುವಾಗ ಕತ್ರಿಎಲೆ ಎಂದೂ ಎರಡು ಎಲೆಗಳನ್ನು ಕತ್ತರಿಯ ಆಕಾರದಲ್ಲಿ ಹಿಡಿದು ಕತ್ತರಿಸಿದಂತೆ ನಟಿಸಿ, ನಂತರ ಕತ್ತರಿಯಿಂದ ಕತ್ತರಿಸುವರು. ಇದರಿಂದ ನಂಜಾಗುವದಿಲ್ಲ ಎಂಬ ನಂಬಿಕೆ ಇದೆ. ಇಂತಹ ವೀಳ್ಯೆಯ ಎಲೆಗಳನ್ನು ಮದುವೆ ಆಗದೇ ಇದ್ದ ಹೆಣ್ಣುಮಕ್ಕಳು ತಿನ್ನ

---

4 ಭರತೇಶ ವೈಭವ ಸಂಗ್ರಹ : ತ. ಸು. ಶಾಮರಾಯ, 341-1

* ಪಂಜೆಯವರ ನೆನಪಿಗಾಗಿ : ಹರ್ಷ ಮುದ್ರಣ ಪ್ರಕಟನಾಲಯ, ಪುತ್ತೂರು.
ಉದ್ಧರಣೆ : ಪ್ರವಾಸಿ ಕಂಡ ಇಂಡಿಯಾ, ಸಂಪುಟ-3. ಪುಟ-468, ಎಚ್. ಎಲ್. ನಾಗೇಗೌಡ.

5 ಪ್ರವಾಸಿ ಕಂಡ ಇಂಡಿಯಾ, ಸಂಪುಟ-2. ಪುಟ-108, ಎಚ್. ಎಲ್. ನಾಗೇಗೌಡ.
E.C. VII, TI 26, 1275.

ಬಾರದು ಎನ್ನುವ ನಂಬಿಕೆ ಇದ್ದರೂ ಅದು ಬಳಕೆಯಲ್ಲಿ ಆಗಲೇ ಬಂದಾಗಿದೆ. ಸಮಾಜದ ಕೆಲವೊಂದು ಕಾರ್ಯಕ್ರಮಗಳಲ್ಲಿ ಸಮಾಜದ ವ್ಯಕ್ತಿಗೆ ವೀಳ್ಯೆ ಸಿಗದೇ ಹೋದರೆ ಜಗಳಕ್ಕೆ ನಿಲ್ಲುತ್ತಾರೆ. ಎಲೆ ಇರದಿದ್ದರೂ ಎಲೆಯ ತುಂಬಾದರೂ ಕೊಡಬೇಕು ಎನ್ನುವ ಮಾತು ಆಡದೇ ಇರಲಾರರು. ಕೆಲವು ಅಹಿತಕರ ಘಟನೆಯಿಂದ ವೀಳ್ಯೆ ದೊರೆಯದೆ ಹೋದಾಗ ಜೀವವನ್ನೇ ಬಿಟ್ಟವರು ಹಲವಾರು ಜನ ಗ್ರಾಮಗಳಲ್ಲಿ ಕಥೆಯಾಗಿ ನಿಂತಿದ್ದಾರೆ.

ರಣ ವೀಳ್ಯೆಗಳು

ಸೇನಾಪತಿಗಳು ತೀರಿಕೊಂಡಾಗ ಆಗಿಂದಾಗಲೇ ಮತ್ತೊಬ್ಬ ವೀರನಿಗೆ ವೀಳ್ಯೆಯನ್ನು ಕೊಟ್ಟು ಆ ಗುಂಪಿಗೆ ನಾಯಕನನ್ನಾಗಿ ಮಾಡಿ ಯುದ್ಧಕ್ಕೆ ಕಳಿಸುವುದು, ಗೋವುಗಳನ್ನು ರಕ್ಷಣೆ ಮಾಡುವುದಕ್ಕೆ ಊರಜನ ಕುದುರೆಗಳ ರಕ್ಷೆಗೆ ವೀರನೊಬ್ಬನನ್ನು ಕರೆದು ವೀಳ್ಯೆಯನ್ನು ಕೊಟ್ಟು ರಕ್ಷಣೆಯ ಕಾರ್ಯ ವಹಿಸಿಕೊಡುತ್ತಿದ್ದರು ಎನ್ನುವಂಥವು ತಿಳಿದ ವಿಷಯ ಇಂಥ ವಿಷಯಗಳು ವೀರಗಲ್ಲುಗಳಲ್ಲಿ ವ್ಯಕ್ತವಾಗಿರುವದು ನೋಡಬಹುದು. ಕ್ರಿ.ಶ. 1275ರಲ್ಲಿ ವೀರಗಲ್ಲೊಂದರಿಂದ ಶತ್ರುಗಳು ಬಂದು ದಾಳಿ ಮಾಡಿ ಆಳು ಕುದುರೆಗಳನ್ನು ನಾಶ ಮಾಡಿದಾಗ 'ಸಿರಿಗ' ನೆಂಬುವನು 'ವೀಳ್ಯೆಯಂ ಕಳೆದುಕೊಂಡು ಜವಾದಿ ಸಿರಿಗಂಧ'ಗಳನ್ನು ಲೇಪನ ಮಾಡಿಕೊಂಡು ಯುದ್ಧಕ್ಕೆ ಹೊರಡುತ್ತಾನೆ ಎಂಬ ವಿಷಯ ತಿಳಿಯುತ್ತದೆ.[6]

ಆಯುಧಗಳೊಂದಿಗೆ ಹೋರಾಡುವಾಗ ಅಲಂಕೃತವಾದ ಗುರಾಣಿಗಳು (ಡಾಲಗಳು) ಬಳಸುವದು ಕಾಣುತ್ತದೆ. ಇಂಥಹ ಕೆಲವೊಂದು ಗುರಾಣಿಗಳಲ್ಲಿ ವೀಳ್ಯೆಯನ್ನು ಕೊರೆದ ಚಿತ್ರಗಳನ್ನು ನೋಡಬಹುದು.[7] ಇಂಥಹ ಗುರಾಣಿಗಳು ಕೇವಲ ವೀಳ್ಯೆಯನ್ನು ಸ್ವೀಕರಿಸಿ ಹೋರಾಡುವವರಿಗೆ ಮಾತ್ರ ಸೀಮಿತವಾಗಿರಬೇಕು; ಇಲ್ಲವೆ ವೀಳ್ಯೆಯನ್ನು ತೆಗೆದುಕೊಂಡು ವೀರಮರಣವನ್ನಪ್ಪಿದವರ ಸ್ಮಾರಕಗಳಾಗಿರಬೇಕು ಎಂದು ಊಹಿಸದೆ ಇರಲಾಗದು. ಸ್ಮಾರಕಗಳಾಗಿ ಗಂಟೆಗಳನ್ನು ಕಟ್ಟುವದು ಗಮನಿಸಬಹುದು.*

ವೀಳ್ಯೆಯ ಹಕ್ಕುಗಳು

ಕುಟುಂಬದಲ್ಲಿ ಮನೆಯ ಒಡೆಯ, ಸಮಾಜದಲ್ಲಿ ಸಮಾಜದ ಮುಖಂಡ (ಶಟೇಗಾರ) ಊರಲ್ಲಿ ಊರಗೌಡ ಅಥವಾ ಪಾಟೀಲರಿಗೆ ಸಂಬಂಧಿಸಿರುತ್ತದೆ.

---

6 ಉದ್ಧರಣೆ : ಕರ್ನಾಟಕದ ವೀರಗಲ್ಲುಗಳು : ಆರ್. ಶೇಷಶಾಸ್ತ್ರಿ. ಪುಟ–156.

7 ಕರ್ನಾಟಕ ವೀರಗಲ್ಲುಗಳು : ಆರ್. ಶೇಷಶಾಸ್ತ್ರಿ (ಚಿತ್ರ : 128-129)

* ಸಾದತ್ತಿ ತಾಲ್ಲೂಕಿನ ಮುನವಳ್ಳಿಯಲ್ಲಿ ಇಂಥಹದೊಂದು ಗಂಟೆ ಕಟ್ಟಿರುವುದು ಕಾಣುತ್ತೇವೆ.

ಯಾವದೇ ಸ್ಥಿತಿಯಲ್ಲಿ ಕಾರ್ಯಕ್ರಮದ ವೀಳ್ಯೆಗಳು ತಮಗೆ ಬರದೇ ಹೋದಾಗ ಮನೆಯ ಒಡೆಯ ಘಟೀಗಾರನ ಹತ್ತಿರ ವಾದಿಸುತ್ತಾನೆ. ಊರಿಂದ ವೀಳ್ಯೆಗೆಗಳು ಬೇರೆ ಊರಿಗೆ ಹೋಗುವುದುಂಟು. ಆಗ ಗೌಡನ ಕಾರಸ್ಥಾನ. 'ವೀಳ್ಯೆಯ ಕ್ಕಾಗಲಿ ಅಥವಾ ಬೇರೆಯವರ ಮರ್ಯಾದೆಗಾಗಲಿ ಸಮಾನ ಹಕ್ಕುಗಳ ಗ್ರಾಮಾಧಿಕಾರಿ ಗಳು ತಮ್ಮ ಹಕ್ಕನ್ನು ಬೇರೆ ಗ್ರಾಮಾಧಿಕಾರಿಗೆ ಮಾರಬಹುದು. ಹಾಗೆ ಮಾರಿದರೆ ಬಂದ ಹಣವನ್ನು ಎಲ್ಲ ಅಧಿಕಾರಿಗಳು ಹಂಚಿಕೊಳ್ಳಬೇಕು'[8] ಎನ್ನುವ ಸಂಪ್ರದಾಯ ಇರುವದನ್ನು 1584ರಲ್ಲಿ ಭಾರತಕ್ಕೆ (ಗೋವಾ) ಬಂದ ಪ್ರವಾಸಿ ಡಾಂ ದುಆರ್ತೆ ದ ಮೆನೇಜಿಸ್ (ವೈಸ್‌ರಾಯ್) ಸ್ಪಷ್ಟವಾಗಿ ಹೇಳಿದ್ದಾನೆ. ಆದರೆ ಈ ಪದ್ಧತಿ ಈಗ ಅಷ್ಟೊಂದು ಕಂಡುಬರುವದಿಲ್ಲ. ಮಧುರೆಯ ನಾಯಕ ಬಸ್ನಾಗ (ವಿಜಯನಗರ) ರಾಜನ ವೀಳ್ಯೆಯದ ಊಳಿಗವನು ಆತನು ಬಸ್ನಾಗ ರಾಜನಿಗೆ ವರ್ಷಕ್ಕೆ ಆರು ಲಕ್ಷ ಪಗೋಡಗಳ ಪಾಗದಿ ಸಲ್ಲಿಸುತ್ತಿದ್ದಾನೆ[9] ಎಂದು (1616ರಲ್ಲಿ) ಕೋಚೀನದಿಂದ ಭಾರತಕ್ಕೆ ಬಂದ ಇನ್ನೊಬ್ಬ ಪ್ರವಾಸಿ ಮಾನುಯೆಲ್ ಬ್ರರ್‍ಾಡಾಸ್‌ನಿಂದ ತಿಳಿಯುತ್ತದೆ.

ವೀಳ್ಯೆಯ ಬಳಕೆ

ವೀಳ್ಯೆಯದ ಎಲೆಯನ್ನು ಕೇವಲ ಕಾರ್ಯಕ್ರಮದಲ್ಲಿ ಅಷ್ಟೇ ಬಳಸದೆ ಇನ್ನೂ ಕೆಲವು ಸಂದರ್ಭಗಳಲ್ಲಿ ಬಳಸುವುದು ಕಾಣುತ್ತೇವೆ. ವೀಳ್ಯೆಯಲ್ಲಿ ಕ್ಯಾಲ್ಸಿಯಂ, ರಂಜಕ, ಕೆರೋಟೀನ್, ಪೊಟ್ಯಾಸಿಯಂ, ನೈಟ್ರೇಟ್, ಪ್ರೋಟೀನು, ಗ್ಲುಕೋಸ್, ಕೊಬ್ಬು-ಮುಂತಾದ ಪದಾರ್ಥಗಳು ಇರುವದರಿಂದ ಇದನ್ನರಿತಿರಬಹುದಾದ ನಮ್ಮ ಪೂರ್ವಜರು ಹಿಂದಿನ ಕಾಲದಿಂದಲೂ ಈ ಎಲೆಯನ್ನು ಔಷಧಿಗಾಗಿ ಬಳಸು ವುದು ಈಗಲೂ ಹೊಟ್ಟೆನೋವಿಗೆ, ಗಂಟಲುನೋವಿಗೆ, ಎದೆಯ ರೋಗಕ್ಕೆ, ಕೆಮ್ಮಿಗೆ, ಕುರುವಿಗಾಗಿ—ಹಲವಾರು ಬಾಧೆಗಳಿಗೆ ಇತರ ವಸ್ತುಗಳೊಂದಿಗೆ ಬಳಸುವರು.

ಅಡಿಗೆಗಳಿಗಾಗಿಯೂ ಇದನ್ನು ಬಳಸುವದು ಅತಿ ಕಡಿಮೆ. ಪೇಟ್ಟಾಗಿ ಬೆಣ್ಣೆಯನ್ನು ಕಾಯಿಸುವಾಗ ಬಳಸುತ್ತಾರೆ. ಆದರೆ ಗರ್ಸಿಯಾ-ದ-ವರ್ತ ಎಂಬ (1535) ಪ್ರವಾಸಿ ಇಂಡಿಯಾದಲ್ಲಿ ಆಹಾರಕ್ಕೆ ಬೇತ್ರೆ (ವೀಳ್ಯೆಯದೆಲೆ) ಯನ್ನು ಸೇರಿಸಿ ಉಪಯೋಗಿಸುವದು ಸಾಮಾನ್ಯವಾಗಿದೆ[10] ಎಂಬುವದನ್ನು ಜ್ಞಾಪಿಸುತ್ತಾನೆ.

---

8 ಪ್ರವಾಸಿ ಕಂಡ ಇಂಡಿಯಾ : ಎಚ್. ಎಲ್. ನಾಗೇಗೌಡ, ಸಂಪುಟ-2, ಪುಟ-481.
9 —ಅದೇ— ಸಂಪುಟ-4, ಪುಟ-165.
10 —ಅದೇ— ಸಂಪುಟ-2, ಪುಟ-449.

ಕೇವಲ ಶುಭಸಂದರ್ಭಗಳಲ್ಲಿ ಅಷ್ಟೇ ಅಲ್ಲದೆ ಇದನ್ನು ಕೆಲವೊಂದು ಅಶುಭ ಸಂದರ್ಭಗಳಾದ, ತೀರಿಕೊಂಡಾಗ, ಸಹೋದರರ ಮನೆ ಮುರಿಯುವಾಗ(ಸಮಾಜಕ್ಕೆ ಹೇಳದೆ ಮನೆಯಲ್ಲಿ ಸಹೋದರರು ಬೇರೆಯಾದರೆ ಎಲ್ಲ ಸಹೋದರರಿಗೂ ಬೇರೆ ಬೇರೆ ವೀಳ್ಯ ದೊರೆಯುದು, ಒರಿಯ ಸಹೋದರನಿಗೆ ಮಾತ್ರ ಲಭ್ಯ) ಇಂಥದ ಸಂದರ್ಭಗಳಲ್ಲಿ ಕೊಚಿತವಾಗಿ ಬಳಕೆಯಾಗುತ್ತದೆ.

ಪ್ರ. ತಿ. ನ. ಅವರ ಭಗವದ್ಗೀತೆಯ ಅನುವಾದ

ಮಂ. ಮಾಧವ ಪೈ

ಭಗವನ್ನಾರಾಯಣನ ಪೂರ್ಣಾವತಾರನಾದ ಶ್ರೀಕೃಷ್ಣನು ಅರ್ಜುನನಿಗೆ ಉಪದೇಶಿಸಿದ ಗೀತೆಯೂ ಆತನ ಮಹಿಮೆಯಂತೆಯೇ ಲೋಕೋತ್ತರವೂ ವಿಶ್ವಮಾನ್ಯವೂ ಆದ ಮಹಾಕೃತಿಯಾಗಿದೆ. ಭಾರತೀಯರಿಗಂತೂ ಅದು ಮಹತ್ತರ ಧರ್ಮಗ್ರಂಥವಾಗಿದೆ. ಅದಕ್ಕೆ ಕಾರಣವಿಲ್ಲದಿಲ್ಲ: "ಇಲ್ಲಿ ಏನಿರುವುದೊ ಅದೇ ಬೇರೆ ಕಡೆಯಲ್ಲಿದೆ; ಇಲ್ಲಿಲ್ಲದಿರುವುದು ಇನ್ನೆಲ್ಲಿಯೂ ಇಲ್ಲ" ಎಂಬುದಾಗಿ ಮಹಾಭಾರತವನ್ನು ಕುರಿತು ಹೇಳಿರುವುದನ್ನು ಮಹಾಭಾರತದಲ್ಲಿಯೇ ಭಗವಂತನು ಅರ್ಜುನನಿಗೆ ಉಪದೇಶಿಸಿದ ಈ ಗೀತೆಗೂ ಅನ್ವಯಿಸಬಹುದು. ಏಕೆಂದರೆ ಯುಕ್ತಾಹಾರ ವಿಹಾರ, ಸಾತ್ವಿಕತೆ, ಅನಾಸಕ್ತಿ, ಸುಖದುಃಖಾದಿ ದ್ವಂದ್ವಸಮತ್ವ ಇತ್ಯಾದಿ ಸಾಧನಗಳೂ ಜ್ಞಾನ, ಕರ್ಮ, ಭಕ್ತಿ ಮೊದಲಾದ ಮಾರ್ಗಗಳೂ ಪ್ರಾಸಂಗಿಕವಾದ ಇನ್ನೆಷ್ಟೋ ವಿಷಯಗಳೂ ಇದರಲ್ಲಿ ಬಂದಿರುವುದರಿಂದ ಲೌಕಿಕಜೀವನವನ್ನೂ ಪಾರಮಾರ್ಥಿಕ ಸಾಧನೆಯನ್ನೂ ಯಶಸ್ವಿಯಾಗಿ ನಡೆಸಲಿಕ್ಕೂ ಆಗಿಂದಾಗ ಉದ್ಭವಿಸುವ ಸಮಸ್ಯೆಗಳನ್ನೂ ಸಂಶಯಗಳನ್ನು ಪರಿಹರಿಸಿ ಶಾಂತಿಯನ್ನು ಹೊಂದಲಿಕ್ಕೂ ಸಹಾಯಕವಾಗಿರುವ ಒಂದೇ ಒಂದು ಗ್ರಂಥವು ಯಾವುದೆಂದು ಕೇಳಿದರೆ ಈ ಭಗವದ್ಗೀತೆಯೆಂದೇ ನಿರಾತಂಕವಾಗಿ ಹೇಳಬಹುದು ಎಂದು ಗುರುಹಿರಿಯರು ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ.ಇಂತಹ ಈ ಭಗವದ್ಗೀತೆಯ ಅಂತರ್ಗತವಾದ ಉಪದೇಶಗಳ ಸಂಪೂರ್ಣ ಜ್ಞಾನವನ್ನು ಸಂಪಾದಿಸಿಕೊಂಡವರು ಬಹುಸ್ವಲ್ಪ ಮಂದಿಯಾದರೂ ಗೀತೆಯ, ದೇಶ-ಕಾಲ ಸಂದರ್ಭಗಳನ್ನು ತಿಳಿಯದ ಭಾರತೀಯರು ಬಹಳ ಕಡಿಮೆಯೆಂದೇ ಹೇಳಬಹುದು. ಗೀತೆಯ ಜ್ಞಾನವನ್ನು ಜೀರ್ಣಿಸಿಕೊಂಡ ವಿದ್ವಾಂಸರು ಅದರಲ್ಲಿನ ಆ ಜ್ಞಾನಗಂಗೆಯನ್ನು ಜನಸಾಮಾನ್ಯರವರೆಗೂ ಹರಿಯಿಸಿ, ಅವರಿಗೂ ಅದರ ಆಸ್ವಾದ ಮಾಡಿಸಬೇಕೆಂಬ ಬಯಕೆಯಿಂದ ತಮ್ಮ-ತಮ್ಮ ಭಾಷೆಯಲ್ಲಿ ಅದರ ಅನುವಾದವನ್ನು ಮಾಡಿದರೆ, ಇನ್ನುಕೆಲವರು ತಮ್ಮ ಬದುಕಿನಲ್ಲಿ ಯಾವುದೋ ಒಂದು ಅಶಾಂತಿಯ ತುಟ್ಟತುದಿಯಲ್ಲಿದ್ದಾಗ, ಮನಸ್ಸಿಗೆ ಸಾಂತ್ವನವನ್ನು ಬದುಕಿನಲ್ಲಿ ಉತ್ಸಾಹವನ್ನೂ ಧೈರ್ಯವನ್ನೂ ನೀಡಿದುದರ ಫಲವಾಗಿ, ಅದು ಸಂಸ್ಕೃತವರಿಯದವರಿಗೂ ಅವರ ಬದುಕಿನಲ್ಲಿ ಅಂತಹ ಅಶಾಂತಿಯುಟ್ಟವೊದಗಿ ಬಂದಾಗ ಅವರಿಗೂ ಸಾಂತ್ವನ, ಧೈರ್ಯೋತ್ಸಾಹವನ್ನು ನೀಡುವಂತಾಗಲಿ ಎಂಬ ಸದುದ್ದೇಶದಿಂದಲೂ ಅನುವಾದ ಮಾಡಿದ್ದುಂಟು. ಹೀಗಾಗಿ ಜಗತ್ತಿನ ಪ್ರಮುಖ ಭಾಷೆಗಳಲ್ಲಿ ಗೀತೆಯ ಅನುವಾದ

ವಾಗಿದೆ. ಆ ಅನುವಾದಗಳಲ್ಲಿ ಕೆಲವು ಗೀತೆಯಲ್ಲಿನ ಪ್ರತಿಯೊಂದು ಶ್ಲೋಕದ ಪದಶಃ ಅನುವಾದವಾಗಿದ್ದರೆ, ಕೆಲವು ಅದರ ಭಾವಾನುವಾದವಾಗಿವೆ. ಕೆಲವರು ಪದ್ಯರೂಪದಲ್ಲಿ ಅನುವಾದಿಸಿದ್ದರೆ ಇನ್ನು ಕೆಲವರು ಗದ್ಯರೂಪದಲ್ಲಿ ಅನುವಾದಿಸಿದ್ದಾರೆ. ಇನ್ನು ಕೆಲವರು ಟೀಕಾರೂಪದಲ್ಲಿಯೂ ಬರೆದುದುಂಟು.

ವಿಶ್ವದ ಪ್ರಮುಖ ಭಾಷೆಗಳಲ್ಲಿ ಅನುವಾದವಾದಂತೆಯೇ ಕನ್ನಡ ಭಾಷೆಯಲ್ಲಿಯೂ ಗೀತೆಯು ಅನುವಾದವಾಗಿದೆ. ಇದುವರೆಗಿನ ಕನ್ನಡ ಸಾಹಿತ್ಯದಲ್ಲಿ ನಮಗೆ ದೊರಕಿರುವ ಗೀತಾನುವಾದ ಸು. ೧೬೫೦ರಲ್ಲಿದ್ದ ನಾಗರಸ ಎಂಬಕವಿ ಭಾಮಿನಿ ಷಟ್ಪದಿಯಲ್ಲಿ ಅನುವಾದಿಸಿದ 'ಭಗವದ್ಗೀತೆ' ಎಂಬುದು ಮೊತ್ತಮೊದಲನೆಯದು. ಆಮೇಲೆ ಸು. ೧೭೫೦ರಲ್ಲಿ ಕವಿಯ ಹೆಸರು ಸ್ಪಷ್ಟವಾಗಿ ತಿಳಿದುಬರದ ಭಾಮಿನಿ ಷಟ್ಪದಿಯಲ್ಲಿಯೇ ಅನುವಾದಿಸಿದ ಭಗವದ್ಗಿತೆ ದೊರಕಿದೆ. ಮುಂದೆ ಹದಿನೆಂಟನೆಯ ಶತಮಾನದ ಉತ್ತರಾರ್ಧದ ನಂತರ ಹತ್ತೊಂಬತ್ತನೆಯ ಶತಮಾನದವರೆಗೆ ಮುಮ್ಮಡಿ ಕೃಷ್ಣರಾಜ, ಅ. ಕೃಷ್ಣಪ್ಪ, ಕೊ. ಅಪ್ಪಯ್ಯ, ನಂದಳಿಕೆ ಲಕ್ಷ್ಮೀನಾರಾಣಪ್ಪ, ಹರಿದಾಸ, ಗ್ಯಾರೆಟ್ ಮೊದಲಾದವರು ಅನುವಾದ ಮಾಡಿದ್ದುಂಟು. ಅದೇರೀತಿ ರಾಮಕೃಷ್ಣ, ರಾಜಕಂಠೀರವ, ಶ್ರೀನಿವಾಸಾಚಾರ್, ಅನುಪಮಾನಂದಯೋಗಿ, ಚಿಕ್ಕುಪಾಧ್ಯಾಯ, ವೆಂಕಟಕೃಷ್ಣ ಮುಂತಾದವರು ಟೀಕಾ ಬರೆದುದೂ ಉಂಟು.

ಈ ಪರಂಪರೆ ಇಪ್ಪತ್ತನೆ ಶತಮಾನದ ಇಂದಿಗೂ ಬೆಳೆದುಬಂದು ಎಮ್. ಅನಂತರಾವ್, ಬಡೆಕ್ಕಿಲ ವೆಂಕಟರಮಣಭಟ್, ಅಮ್ಮೆಂಬಳ ಚನ್ನಕೇಶವ, ಪದ್ಯರೂಪದಲ್ಲಿಯೂ ಬನ್ನಂಜೆ ರಾಮಾಚಾರ್ಯ ಮುಂತಾದವರು ಗದ್ಯರೂಪದಲ್ಲಿಯೂ ಅನುವಾದಮಾಡಿದ್ದರೆ, ಶ್ರೀವೆಂಕಟೇಶಭೀಮರಾವ್ಆಲೂರ, ಶ್ರೀವಾಸುದೇವಾಚಾರ್ಯ ಮತ್ತು ಶ್ರೀನಿವಾಸಾಚಾರ್ಯಕೇರೂರ ಇವರುಕೂಡಿ ಲೋಕಮಾನ್ಯ ಬಾಳ ಗಂಗಾಧರ ತಿಳಕರವರ ಮರಾಠಿ ಗೀತಾರಹಸ್ಯದ ಭಾಷಾಂತರ ಮಾಡಿದ್ದುಂಟು. ಶ್ರೀ ಸ್ವಾಮಿಕೃಷ್ಣಾನಂದಭಾರತಿಯವರ 'ಜ್ಞಾನೇಶ್ವರೀಗೀತಾಮೃತ', ಸ್ವಾಮಿ ಸೋಮನಾಥಾನಂದಜಿಯವರ 'ಗೀತಾಭಾವಧಾರೆ' ಮತ್ತು ಡಿ. ವಿ. ಗುಂಡಪ್ಪ ಅವರ 'ಶ್ರೀಮದ್ಭಗವದ್ಗೀತಾ ತಾತ್ಪರ್ಯ ಅಥವಾ ಜೀವನಧರ್ಮಯೋಗ' ಮೊದಲಾದ ಗ್ರಂಥಗಳು ಭಗವದ್ಗೀತೆಯ ಮೌಲಿಕ ವ್ಯಾಖ್ಯಾನಗಳಾಗಿವೆ. ಹೀಗೆ ಎಷ್ಟೋ ಮಹನೀಯರು ಭಗವದ್ಗೀತೆಯನ್ನು ಒಂದಲ್ಲ ಒಂದು ವಿಧದಿಂದ ಕನ್ನಡ ಜನತೆಗೆ ಪರಿಚಯಮಾಡಿಕೊಡಲು ಶ್ರಮಿಸಿದ್ದುಂಟು. ಅಂತಹರಲ್ಲಿ ಒಬ್ಬರು ಶ್ರೀ ಪು. ತಿ. ನರಸಿಂಹಾಚಾರ್ಯರು. ಅವರು 'ಭಗವದ್ಗೀತೆ'ಯೆಂಬ ಹೆಸರಿನಲ್ಲಿಯೇ ಪದ್ಯರೂಪವಾಗಿ ಅನುವಾದಿಸಿದ್ದಾರೆ.

ಆಗಲೇ ಕನ್ನಡದಲ್ಲಿ ಹಲವು ಅನುವಾದಗಳಿರುವಾಗ ಶ್ರೀ.ಪು.ತಿ. ನರವರು ಮತ್ತೊಮ್ಮೆ ಏಕೆ ಈ ಅನುವಾದ ಮಾಡಿದರು? ಎಂಬ ಪ್ರಶ್ನೆ ಏಳಬಹುದು. ಅದಕ್ಕೆ ಅವರ ಉದ್ದೇಶವನ್ನು ಮನಗಂಡರೆ ನಮಗೆ ಉತ್ತರ ದೊರಕೀತು–''ಕನ್ನಡದ ಜನ ಇನ್ನುಮುಂದೆ ಸಂಸ್ಕೃತದಿಂದ ನೇರವಾಗಿ ತಮ್ಮ ಬಾಳುವೆಯನ್ನು ಹಸನು ಮಾಡಿಕೊಳ್ಳುವ ಸ್ಫೂರ್ತಿಯನ್ನು ಪಡೆಯುತ್ತಾರೆಯೋ ಇಲ್ಲವೋ ಹೇಳುವುದು ಕಷ್ಟ. ಸಂಸ್ಕೃತ ಹುಟ್ಟಿ ಬೆಳೆದು ಪುಷ್ಟವಾಗಿ ಸರ್ವಾಂಗ ಸೌಂದರ್ಯವನ್ನು ಪ್ರದರ್ಶಿಸಿ ಇದು ದೇವಭಾಷೆ ಎನಿಸುವಷ್ಟು ಉನ್ನತಿಗೇರಿ ಬಾಳಿದ ಕಾಲ ಬೇರೆ. ಧರ್ಮ, ಸಂಸ್ಕೃತಿ, ವಿದ್ಯೆ ಮತ್ತು ಕಲೆ ಇವುಗಳನ್ನು ಆತ್ಮಸ್ಫೂರ್ತಿ, ಪ್ರಚೋದನೆ ಮತ್ತು ಅಭಿಮಾನಗಳಿಂದ ಪೋಷಿಸಿ ಪ್ರವರ್ಧಮಾನಕ್ಕೆ ತರುವ ಸಂಸ್ಥಾವ್ಯವಸ್ಥೆಗಳು ಸದ್ಯಕ್ಕೆ ಕಾಣಬರುತ್ತಿಲ್ಲ. ಹೀಗಿರುವುದರಿಂದ ಒಂದೊಂದು ವೇಳೆ ನಮ್ಮ ಕಾರ್ಪಣ್ಯದಲ್ಲಿ ನಮ್ಮ ಮನಸ್ಸು ಕನಸಿಗೆ ಕೈಚಾಚುವಂತೆ ಹಳೆಯದನ್ನು ನೆನೆದು ಹಂಬಲಿಸುತ್ತದೆ, ನಿಜ. ಆದರೆ ಎಲ್ಲವನ್ನೂ ನುಂಗುವ ಕಾಲ ಯಾರಿಗೂ ಯಾವುದಕ್ಕೂ ಎಂದಿಗೂ ಬೆನ್ನು ತೋರಿಸದು. ಆದುದರಿಂದ ಅದರೊಂದಿಗೆ ಸ್ಪರ್ಧಿಸುವುದು ಹುಚ್ಚುತನ. ನಮ್ಮ ಕನ್ನಡ ಜನತೆ ಮತ್ತೆ ಯಾವುದನ್ನು ಬಿಟ್ಟಿದ್ದರೂ, ಬಿಟ್ಟರೂ, ಕನ್ನಡದ ಕೈ ಬಿಡುವ ಸಂಭವ ಕಡಿಮೆಯಾದುದರಿಂದ, ನಮ್ಮ ಆತ್ಮವನ್ನು ಸರ್ವಕಾಲದಲ್ಲಿಯೂ ಉದ್ಧರಿಸಿ ಕಾಪಾಡತಕ್ಕ ಕೆಲವು ಸಂಸ್ಕೃತ ಗ್ರಂಥಗಳ ಹುರುಳನ್ನು ಕನ್ನಡದಲ್ಲಿ ಹುದುಗಿಸಿ ಇಡುವುದು ಈಗಿನ ಸಂದರ್ಭದಲ್ಲಿ ಸಂಸ್ಕೃತ ಪ್ರೇಮಿಗಳಾದ ಕನ್ನಡಿಗರ ಕರ್ತವ್ಯವೆನ್ನಬಹುದು. ಭಗವದ್ಗೀತೆಯ ಈ ಕನ್ನಡ ಪದ್ಯಾನುವಾದದಲ್ಲಿ ಇಂಥ ಕರ್ತವ್ಯದ ಒಂದು ಹಂಬಲು ಒಂದು ರೀತಿಯಲ್ಲಿ ಕೊನೆಗೊಂಡಿದೆ.'' ಎಂದು ಬಿನ್ನಹದಲ್ಲಿ ಹೇಳಿಕೊಂಡಂತೆ ಅವರ ಕರ್ತವ್ಯವನ್ನು ಮಾಡಿದ್ದಾರೆ.

ಭಗವದ್ಗೀತೆಯ ಈ ಭಾಷಾಂತರದಲ್ಲಿ ಪು.ತಿ.ನರವರು ಮೂಲದಲ್ಲಿರುವ ಪ್ರತಿಯೊಂದು ಪದವನ್ನೂ ಅನುವಾದದಲ್ಲಿ ತರಬೇಕೆಂಬ ಆಸೆ, ಇದರ ಕನ್ನಡ ಅದಷ್ಟು ಸರಳವಾಗಿರಬೇಕೆಂಬ ಅಭಿಲಾಷೆ, ಇದು ವ್ಯಾಖ್ಯಾನವಾಗದೆ ಭಾಷಾಂತರವಾಗಿ ಮಾತ್ರ ಉಳಿದು ಮೂಲದಷ್ಟೇ ಅಡಕವಾಗಿರಬೇಕೆಂಬ ಬಯಕೆಗಳಿಂದ ಕೂಡಿ ಕಾರ್ಯ ಕೈಗೊಂಡಿದ್ದಾರೆ. ಅದರ ಫಲವಾಗಿ ಒಡಮೂಡಿಬಂದ ಭಾಷಾಂತರವನ್ನು ಒಂದೆರಡು ಮೂಲ ಶ್ಲೋಕಗಳೊಂದಿಗೆ ಹೋಲಿಸಿ ನೋಡಬಹುದು.

> ವಾಸಾಂಸಿ ಜೀರ್ಣಾನಿ ಯಥಾ ವಿಹಾಯ ನವಾನಿ ಗೃಹ್ಣಾತಿ ನರೋऽಪರಾಣಿ
> ತಥಾ ಶರೀರಾಣಿ ವಿಹಾಯ ಜೀರ್ಣಾನ್ಯನ್ಯಾನಿ ಸಂಯಾತಿ ನವಾನಿ ದೇಹೀ ॥೨.೨೨॥

ಗೀತೆಯ ಈ ಶ್ಲೋಕದ ಪ್ರತಿಯೊಂದು ಶಬ್ದ ಶಬ್ದವನ್ನೂ ಮೂಲದಲ್ಲಿದ್ದಂತೆಯೇ ಕನ್ನಡದಲ್ಲಿ ತಂದಿರುವ ಪು.ತಿ.ನರವರ ಪದ್ಯ ಈ ರೀತಿ ಇದೆ.

ಚಿಂದಿಯಾಗಿರುವಂಥ ಬಟ್ಟೆಗಳ ಬಿಸುಟು । ಬೇರೆ ಹೊಸ ಹೊಸವನ್ನೇ ಜನವುಡುವರೆಂತೋ।
ಜೀರ್ಣವಾಗಿಹ ದೇಹಗಳನಂತೆ ಬಿಸುಟು । ಬೇರೆ ಹೊಸ ಹೊಸವನ್ನು ದೇಹಿ ಧರಿಸುವನು ॥
(೨.೨೨)

ಇಲ್ಲಿ 'ವಾಸಾಂಸಿ ಜೀರ್ಣಾನಿ' ಎಂಬ ಮೂಲದ ಶಬ್ದಗಳಿಗೆ ಸಮರ್ಥವಾದ ಆಡು ನುಡಿ - 'ಚಿಂದಿಯಾಗಿರುವಂಥ ಬಟ್ಟೆಗಳ' ಎಂದು ಪ್ರಯೋಗಿಸಿದುದು ಗಮನಿಸತಕ್ಕ ಅಂಶ. ಇದೇ ಶ್ಲೋಕವನ್ನು ನಾಗರಸ ಭಾಮಿನಿಷಟ್ಪದಿಯಲ್ಲಿ ಅನುವದಿಸಿದುದರೊಂದಿಗೆ ಹೋಲಿಸಿ ನೋಡಿದಾಗ ಅನುವಾದದ ಸಾರ್ಥಕತೆ ಮನದಟ್ಟಾಗುತ್ತದೆ–

ಹಳೆಯ ವಸ್ತ್ರಂಗಳನುಳಿದು ಹೊಸ । ಕೆಲವು ವಸ್ತ್ರಂಗಳನು ಹೊದೆವಂ ।
ತಿಳಿಯ ಭೋಗದ ದೃಷ್ಟ ತೀರಲು ಜೀವನೀತನುವ ॥
ಕಳಚಿ ಹೊಸತಾದನ್ಯವಹ ತನು।ಗಳನು ತಾನೈದುತ್ತಿಹನು ನಿಜ ।
ತಿಳಿಯೆ ದೇಹಭ್ರಮಣೆ ಕೆಡುವುದು ಪಾರ್ಥಕೇಳೆಂದ ॥

'ವಾಸಾಂಸಿ ಜೀರ್ಣಾನಿ' ಎಂಬುದಕ್ಕೆ ನಾಗರಸ ಪ್ರಯೋಗಿಸಿದ ಶಬ್ದ 'ಹಳೆಯ ವಸ್ತ್ರಂಗಳು.' ಜೀರ್ಣಾನಿ ಎಂಬುದಕ್ಕೆ 'ಹಳೆಯ' ಎಂಬುದಕ್ಕಿಂತ 'ಚಿಂದಿಯಾದ' ಎಂಬ ಶಬ್ದ ಹೆಚ್ಚು ಸಮಂಜಸವಾದುದೂ ಅರ್ಥಗರ್ಭಿತವೂ ಆಗಿದ್ದು ಮೂಲವನ್ನು ಸಮರ್ಥವಾದ ರೀತಿಯಲ್ಲಿ ಪ್ರತಿನಿಧಿಸುತ್ತದೆ. ಹೀಗೆ ಇಡಿ ಶ್ಲೋಕಕ್ಕೆ ತಕ್ಕಂತೆ ಸಮರ್ಥವಾದ ಕನ್ನಡ ರೂಪ ಪು.ತಿ.ನರವರ ವೀರಚೌಪದಿಯಲ್ಲಿ ನಾಗರಸನ ಭಾಮಿನಿ ಷಟ್ಪದಿಗಿಂತ ಶ್ರೇಷ್ಠ ಮಟ್ಟದಲ್ಲಿ ಒಡಮೂಡಿದೆ. ಇದೇ ರೀತಿ ಹೊಸಗನ್ನಡದ ಇನ್ನಿತರರ ಅನುವಾದಗಳೂ ಉತ್ತಮ ರೀತಿಯಲ್ಲಾಗಿವೆಯೆಂಬುದನ್ನು ಕೆಳಗಿನ ಉದಾಹರಣೆಗಳಲ್ಲಿ ಕಾಣಬಹುದು.

೧. ಹರಕಾದ ತಮ್ಮ ಹಳೆಯುರಿವೆಗಳ ತೆಗೆದೆಸದು—
ನರರು ತಾವಿತರ ಹೊಸ ಬಟ್ಟೆಯುಡುವಂತೆ
ನವದೇಹಗಳನನುಕ್ರಮದೆ ಧರಿಸುವನವನು
ಸವೆದ ಮೊದಲಿನ ದೇಹ ಮಳಿದು ಪೋಪಂತೆ ॥
(ರಾವ್ ಸಾಹೇಬ ಎಂ. ಅನಂತರಾವ್—ಪದ್ಯಗೀತೆ)

೨. ಹರಕು ಬಟ್ಟೆ ಕಳೆದು ಮೇಲೆ ನರನು ಹೊಸದು ಧರಿಸುವಂತೆ
ಜರೆ ಶರೀರ ಕಳೆದು ದೇಹಿ ಹೊಸದ ಕೊಂಬನು ॥
(ಗೀತಾಯೋಗ-ಅಮೃತ ಚನ್ನಶಾಮ)

೩. ಬಟ್ಟೆ ಹಳತದು ಹರಿದೊಡನೆ ಹೊಸ । ಬಟ್ಟೆಯುಡುವೊಲು ಜೀರ್ಣದೇಹವ ।
ಬಿಟ್ಟು ಪೊಸತನುವಿಡಿವನವನನು ಕೊಲುವರಿಲ್ಲೆಂದ ॥
(ಗೀತಾಸಾರ-ಬಡೆಕಾಲ ವೆಂಕಟರಮಣಭಟ್)

ಸು. ೧೭೫೦ರಲ್ಲಿದ್ದ ಹೆಸರು ತಿಳಿಯದ ಕವಿಯು ಮಾಡಿದ ಭಾಷಾಂತರದ ಒಂದು ಪದ್ಯದೊಂದಿಗೆ ಪು.ತಿ.ನ.ರವರ ಭಾಷಾಂತರ ದೊಂದಿಗೆ ಹೋಲಿಸಿ ನೋಡೋಣ—

ದಾತವ್ಯಮಿತಿಯದ್ದಾನಂ ದೀಯತೇಽನುಪಕಾರಿಣೇ
ದೇಶೇಕಾಲೇಚ ಪಾತ್ರೇಚ ತದ್ದಾನಂ ಸಾತ್ತ್ವಿಕಂ ಸ್ಮೃತಮ್ ॥೧೭-೨೦॥

ಎಂಬೀ ಮೂಲ ಶ್ಲೋಕವನ್ನು ಹೆಸರು ತಿಳಿಯದೆ ಮಾಡಿದ ಅನುವಾದದ ಪರಿ ಈ ರೀತಿ ಇದೆ—

ಕೊಡಲಿಬೇಹುದು ದೇಶಕಾಲಗ । ಳೆಡೆಯರಿತು ಸತ್ಪಾತ್ರರುಗಳಲಿ ।
ತಡವ ಮಾಡದೆ ದಾನಗಳನೆಂದಾವ ವಸ್ತುವನು ॥
ಝುಡಿತೆಯಲಿಯುಪಕಾರವೆಣಸದೆ । ಸಡಗರದಲಿತರರಿಗೆ ನೀಡಲು ।
ಪೊಡವಿಯೊಳು ತದ್ದಾನ ಸಾತ್ವಿಕವೆನಿಸಿ ಕೊಂಬುದೆಲೈ ॥

ಇದನ್ನು ಪು.ತಿ.ನ.ರವರು ಮಾಡಿದ ಅನುವಾದ ಇಂತಿದೆ—

ಕೊಡಲು ಬೇಕಿಂದೆಂದು ಪ್ರತ್ಯುಪಕಾರಿಯಲ್ಲದಗೆ ।
ದೇಶಕಾಲವನಂತೆ ಪಾತ್ರವನರಿತು ಮಾಡುವ ದಾನ ಸಾತ್ವಿಕ ದಾನವೆನ್ನಿಪುದು
(೧೭-೨೦)

ಹೆಸರು ತಿಳಿಯದ ಕವಿಯೊಬ್ಬ ಮೂಲವನ್ನು ಅನುಸರಿಸಿ, ಅಲ್ಲಿಯ ಭಾಗವನ್ನು-ಅರ್ಥವನ್ನು–ಕನ್ನಡಕ್ಕೆ ತರಲು ಸುತ್ತುಗೊಂಡ ವಿಸ್ತೃತ ದಾರಿಯನ್ನು ಹಿಡಿದಿರುವುದು ಭಾಸವಾಗದೆ ಇರದು. ಆದರೆ ಪು. ತಿ. ನ.ರವರು ನೇರವಾಗಿ ಮೂಲವನ್ನು ಕನ್ನಡದಲ್ಲಿ ಭಟ್ಟಿಯಿಳಿಸುವುದರಲ್ಲಿ ಸಮರ್ಥರಾಗಿದ್ದಾರೆ.

ಮೂಲದ ಶ್ಲೋಕಗಳನ್ನು ಅನುವದಿಸುವಾಗ ಏಕರೀತಿಯ ಛಂದಸ್ಸನ್ನು ಅಳವಡಿಸಿಕೊಂಡು ನಾಗರಸ, ಹೆಸರು ತಿಳಿಯದ ಒಬ್ಬ ಕವಿ, ಅಮೃತ ಚನ್ನಶಾಮ, ಬಡೆಕ್ಕಿಲ್ ವೆಂಕಟರಮಣಭಟ್–ಮೊದಲಾದವರು ಹೊರಟಿದ್ದಾರೆ. ನಾಗರಸ, ನಿರರಕ್ಷರ ಕುಕ್ಷಿ, ಬಡೆಕ್ಕಿಲ್ ವೆಂಕಟರಮಣಭಟ್ಟ–ಇವರು ಭಾಮಿನಿ ಷಟ್ಪದಿಯನ್ನು ಹೊಂದಿಸಿಕೊಂಡಿದ್ದಾರೆ. ಅಮೃತ ಚನ್ನಶಾಮರು ಭೋಗ ಷಟ್ಪದಿಯನ್ನು. ಇದರಿಂದಾಗಿ ಅವರು ಕೆಲವೊಮ್ಮೆ ಮೂಲದ ಒಂದೊಂದು ಶ್ಲೋಕವನ್ನು ಒಂದೊಂದು ಭಾಮಿನಿ ಷಟ್ಪದಿಯ ಪದ್ಯಗಳಲ್ಲಿ ಭಾಷಾಂತರಿಸಿದರೆ, ಕೆಲವೊಮ್ಮೆ ಎರಡು ಶ್ಲೋಕಗಳನ್ನು ಒಂದೇ ಷಟ್ಪದಿಯಲ್ಲಿ ಅಡಗಿಸಿಬಿಟ್ಟಿದ್ದಾರೆ. ಪು.ತಿ.ನ. ರವರು ಒಂದೊಂದು ಶ್ಲೋಕವನ್ನು ಒಂದೊಂದೇ ಪದ್ಯವಾಗಿಸಿದ್ದಾರೆ. ಆದರೆ ಇಟ್ಟುಕೊಂಡ ಛಂದಸ್ಸು ಮಾತ್ರ ವಿವಿಧ, ಒಮ್ಮೆ ವೀರಚೌಪದಿಯನ್ನು ಅನುಸರಿಸಿದರೆ ಮತ್ತೊಮ್ಮೆ ದ್ವಿಪದಿಯನ್ನು ನಡೆಸಿದ್ದಾರೆ. ಮತ್ತೊಮ್ಮೆ ಮಗುದೊಂದೇ ಛಂದಸ್ಸನ್ನು ಅಳವಡಿಸಿಕೊಂಡಿರುವುದನ್ನು ಕೆಳಗಿನ ಉದಾಹರಣೆಗಳಲ್ಲಿ ಕಾಣಬಹುದು—

ತಂದೆ ನೀ ಲೋಕಕ್ಕೆ ಸಚರಾಚರಕ್ಕೆ
ನೀನಿದಕೆ ಪೂಜ್ಯನೈ ಹಿರಿಯರಿಗು ಹಿರಿಯು ।
ನಿನಗೆ ಸಮನೇ ಇಲ್ಲ ನಿನಗೆ ಮಿಗಿಲಾರು
ಮೂಜಗದೊಳೂ ಮಹಿಮೆಗೆಣೆಯಿಲ್ಲದವನೇ (೧೧-೪೩)

ಇದು ವೀರ ಚೌಪದಿಯಲ್ಲಿ ನಡೆಗೊಂಡಿರುವಂತಹದು.

"ಧರ್ಮಕೆಡೆಯಾದ ಕುರುಕ್ಷೇತ್ರದೊಳು ಹೋಣರ ಲುಜ್ಜಾಗಿಸಿ ನೆರೆದಿಹ
ನನ್ನ ಪುತ್ರರೂ ಪಾಂಡು ಪುತ್ರರೂ ಏನನೆಸಗಿದರು ಸಂಜಯ" ॥ ೧-೧ ॥

ಇಲ್ಲಿ ಮೂರು+ಐದರ ಮಂದಾನಿಲ ಪ್ರಭೇದದ ಲಯವನ್ನು ಅನುಸರಿಸಿದ್ದರೆ

"ಮನ ಮನೆಯಾಗಲು ಮರುಕಕೆ ಕಣ್ಣೊಳು ಕಂಬನಿ ತುಂಬುತ ನೆರೆಯಾಗೆ
ಇಂತೀ ಪರಿಯೊಳು ದುಃಖಿಸುವಾತಗೆ ನುಡಿದನು ಮಧುಸೂದನ ನಿಂತು" ॥ ೨-೧ ॥

ಎಂದು ಅಂತ್ಯದಲ್ಲಿ ಮುಡಿಪನ್ನುಪಯೋಗಿಸಿ ಮಂದಾನಿಲ ಲಯದಲ್ಲಿ ಮುಂದು ವರಿದಿದ್ದಾರೆ.

"ನುಡಿವಾಗ ಕಂಗಳನು ಮುಚ್ಚಿ ತೆರೆವಾಗ
ಇಂತು ಗೈವಾಗೆಲ್ಲ ವರ್ತಿಸುತಲಿಹವು
ಇಂದ್ರಿಯಾರ್ಥಗಳೊಳಗೆ ಇಂದ್ರಿಯಂಗಳಿವು
ಎಂದು ನಿರ್ಧರಗೊಂಡು ತತ್ತ್ವಜ್ಞನಾಗಿ

ಏನನೂ ಗೈಯನೆಂದರಿವುದಾಯೋಗಿ ॥ ೫-೯ ॥ ಎಂಬೀ ಪದ್ಯದಲ್ಲಿ ವೀರಚೌಪದಿಯ ನಡಿಗೆಯಲ್ಲಿ ಪಂಚಪಾದಗಳು ಹೆಣೆದುಕೊಂಡಿವೆ. ಇನ್ನು ಹದಿನೇಳನೆಯ ಅಧ್ಯಾಯ ಸಂಪೂರ್ಣವಾಗಿ—

"ಶಾಸ್ತ್ರವಿಧಿಗಳ ಮೀರುತಾದೊಡೆ ಶ್ರದ್ಧೆಯೊಡಗೂಡಿ
ಪೂಜಿಸುವ ಜನಕಾವನಿಷ್ಠೆಯು, ಸಾತ್ವಿಕವೊ ರಾಜಸವೊ ಕೃಷ್ಣ ತಾಮಸವೊ ಏನು"
॥ ೧೭-೧ ॥

ಈ ರೀತಿ ಪ್ರಥಮಪಾದ ಕಿರಿಸಾಲಾಗಿ, ದ್ವಿತೀಯಪಾದ ಹಿರಿಸಾಲಾಗಿರುವಂತ ಎರಡೆರಡು ಸಾಲುಗಳಲ್ಲಿ ಒಂದೊಂದು ಶ್ಲೋಕವನ್ನೂ ಅನುವಾದಿಸಿಕೊಂಡು ಬಂದಿದ್ದಾರೆ. ಸಾಮಾನ್ಯವಾಗಿ ಮೂಲದಲ್ಲಿ ಶ್ಲೋಕ ಛಂದಸ್ಸಿನಲ್ಲಿರುವುದನ್ನು ತಾವೂ ಎರಡು ಸಾಲುಗಳಲ್ಲಿ ಹೇಳಿದ್ದಾರೆ. ಉಳಿದವುಗಳನ್ನು ಬೇರೆ ಬೇರೆ ಛಂದಸ್ಸನ್ನು ಅನುಸರಿಸಿ ಹೋಗಿದ್ದಾರೆ.

ತೇತಂ ಭುಕ್ತ್ವಾ ಸ್ವರ್ಗಲೋಕಂ ವಿಶಾಲಂ
ಕ್ಷೀಣೇ ಪುಣ್ಯೇ ಮರ್ತ್ಯಲೋಕಂ ವಿಶಂತಿ
ಏವಂ ತ್ರಯೀ ಧರ್ಮಮನುಪ್ರಪನ್ನಾ
ಗತಾಗತಂ ಕಾಮಕಾಮಾ ಲಭಂತೇ ॥ ೬-೨೧ ॥

ಮೂಲದ ಈ ತ್ರಿಷ್ಟುಬೆ ಛಂದಸ್ಸಿಗೆ ಪು.ತಿ.ನ ರವರು ಬಳಸಿದ ಛಂದಸ್ಸು ಈ ರೀತಿ ಇದೆ.

ಬಿತ್ತರದ ಆ ದೇವಲೋಕದ ಭೋಗಗಳನನುಭವಿಸುತ
ಕ್ಷಯಿಸಿ ಹೋಗಲು ಪುಣ್ಯವೀಜನ ಮರ್ತ್ಯಲೋಕವ ಹೋಗುವರು
ಈ ತರದಿ ವೇದೋಕ್ತ ಧರ್ಮವು ಕರ್ಮಠರು ನೆರೆ ನೆಮ್ಮುತ
ಕಾಮಗಳ ಬಯಸುತ್ತ ಪಡೆವರು ಹೋಗಿ ಬರುವಾ ಗತಿಯನು ॥ ೯-೨೧ ॥

ಇಲ್ಲಿ ಅನುಸರಿಸಿದ ಛಂದೋಗತಿ ಐದು + ಐದು + ನಾಲ್ಕು + ಐದು + ಐದು + ಗುರು – ಈ ರೀತಿಯ ಮಾತ್ರಾಗಣವನ್ನು ಹೊಂದಿಕೊಂಡಿದೆ. ಹೀಗೆ ವಿವಿಧ ರೀತಿಯ ಛಂದೋ ಬಳಕೆಯನ್ನು ಕೈಗೊಂಡು ಪ್ರಯೋಗ ನಡೆಸಿರುವುದು ಮೆಚ್ಚುವಂತಹದು.

ಮೂಲದಲ್ಲಿರುವ ಪ್ರತಿಯೊಂದು ಪದವನ್ನೂ ಅನುವಾದದಲ್ಲಿ ತರಬೇಕೆಂಬ ಆಸೆಯನ್ನಿಟ್ಟುಕೊಂಡಿದ್ದರೂ ಅದರ ಕನ್ನಡ ಆದಷ್ಟು ಸರಳವಾಗಿರಬೇಕೆಂಬ ಅಭಿಲಾಷೆಯನ್ನು ಹೊಂದಿದ್ದ ಪು. ತಿ. ನರವರು ಇಟ್ಟುಕೊಂಡ ಅಭಿಲಾಷೆಯಂತೆ ಸರಳವಾಗಿಯೇ ಅನುವದಿಸಿದ್ದಾರೆ. ಕೆಲವು ಶ್ಲೋಕಗಳು ಎಷ್ಟು ಸರಳವಾದ ಕನ್ನಡದಲ್ಲಿ ಒಡಮೂಡಿವೆಯೆಂದರೆ ಇನ್ನು ಅದಕ್ಕಿಂತ ಸರಳವಾಗಿ ಹೇಳಲು ಸಾಧ್ಯವೇ ಇಲ್ಲ ಎಂಬಷ್ಟು ಮಟ್ಟಿನಲ್ಲಿವೆ–

ನೈವ ಕಿಂಚತ್ಕರೋಮೀತಿಯುಕ್ತೋ ಮನ್ಯೇತ ತತ್ತ್ವವಿತ್
ಪಶ್ಯನ್ ಶೃಣ್ವನ್ ಸ್ಪೃಶನ್ ಜಿಘ್ರನ್ನಶ್ನನ್ಗಚ್ಛನ್ಸ್ವಪನ್ ಶ್ವಸನ್ ॥ 5.8 ॥

ಈ ಮೂಲ ಶ್ಲೋಕದ ಕನ್ನಡಾನುವಾದದಲ್ಲಿ ಬಂದ ಸರಳತೆಯನ್ನು ವಿವೇಚಿಸಿ –

ನೋಳ್ಪಾಗ ಕೇಳ್ಪಾಗ ಮುಟ್ಟುತಿರುವಾಗ । ಮೂಸಿನೋಡುವ ವೇಳೆ ತಿನ್ನುತಿರುವಾಗ।
ಉಸಿರಾಡುತಿರುವಾಗ ನಿದ್ದೆಗೆಯ್ವಾಗ । ನಡೆವಾಗ ಬಿಡುವಾಗ ತೆಗೆದುಕೊಳುವಾಗ ॥5.8 ॥

ಅನುವಾದದಲ್ಲಿ ಪು. ತಿ. ನರವರ ಸರಳತೆಯ ಸ್ಪಷ್ಟತೆಯೆ ಬೇರೆ. ಬೇರೆ ಕವಿಗಳು ಮಾಡಿದ ಅನುವಾದದೊಂದಿಗೆ ಹೋಲಿಸಿ ನೋಡುವುದಕ್ಕಾಗಿ ಈ ಕೆಳಗೆ ಕೊಟ್ಟಿರುವುದನ್ನು ಗಮನಿಸಿ

ಯದ್ಯದಾಚರತಿ ಶ್ರೇಷ್ಠಸ್ತತ್ತದೇವೇತರೋ ಜನಃ
ಸಯತ್ಪ್ರಮಾಣಂ ಕುರುತೇ ಲೋಕಸ್ತದನು ವರ್ತತೇ ॥ 3.21 ॥

ಮೂಲದ ಈ ಶ್ಲೋಕದ ಕನ್ನಡಾನುವಾದಗಳು ಈ ರೀತಿ ಇವೆ–

ನಾಗರಸ—

ಆವುದಾವುದನುತ್ತಮರುನಿ । ತ್ಯಾವಳಿಯೊಳಾಚರಿಪರದನೇ
ತಾವು ಬಿಡದಾಚರಿಸುವರು ಮಾನವರು ಮುದದಿಂದ ॥
ಆವನುತ್ತಮ ಪುರುಷತಾ ಬಳಿ । ಕಾವಮತದಲಿ ನಡೆಯುತಿಹನದ
ಭಾವಿಸುತ ಮನುಜರುಗಳನು ವರ್ತಿಸುತಲಿಹರೆಂದ ॥

ಎಂ. ಅನಂತರಾವ್—

ಜನರಿತರರಾಚರಿಸುವರು ಮಹಾತ್ಮರು ಮಾಡಿದುದನು
ಅನುಸರಿಸುವುದು ಲೋಕಮವರಾ ಪ್ರಮಾಣವಾದುದನು ॥

ಅಮೃತಚನ್ನಶಾವು—

ಯಾವಯಾವುದನ್ನು ಶ್ರೇಷ್ಠನಾಚರಿಸುವನದನೆಯುದನೆ
ತಾವು ಇತರ ಜನರು ಆಚರಿಪರು ಬಿಡದೆಯೆ ।
ಯಾವುದನ್ನು ತಾ ಪ್ರಮಾಣಮಾಡಿ ತೋರಿಸುವನದನ್ನು
ತಾವು ಲೋಕವಂತೆ ಅನುಸರಿಸುತ ನಡೆವುದು ॥

ಬಡೆಕ್ಕಿಲ್ ವೆಂಕಟರಮಣ ಭಟ್ಟ—

ಬಲ್ಲಿದವರಾಚರಣೆಯನು ಕಂ । ಡೆಲ್ಲವನು ಕಲಿಯುವರು ಮಿಕ್ಕವ
ರೆಲ್ಲರದರಿಂ ಮಾಳ್ಪುದಾ ಬಲ್ಲವರು ಮಾಳ್ಪುದನು ॥

ಪು. ತಿ. ನ—

ಉತ್ತಮನಾವಾವುದನೆಸಗುವನೋ ಅದನದನೇ ಮಿಕ್ಕುಳಿದ ಜನ
ಆತನು ಸರಿಯೆಂದೊಪ್ಪಿದ ನಡೆಯನೆ ಅನುವರ್ತಿಸುವುದು ಈ ಲೋಕ ॥

ಇದೇರೀತಿ—

ಎಂದೆಂದಿಳಿತಕೆಸಲ್ಪುದೊ ಧರ್ಮವು ಅಧರ್ಮಕಪ್ಪದೊ ಏಳಿಗೆಯು ।
ಆಯಾ ಸಮಯದಿ ನನ್ನನು ನಾನೇ ಸೃಷ್ಟಿಸಿಕೊಂಬೆನು ಭಾರತನೇ ।। 4.7 ॥
ಸಾಧುಜನರ ಸಂರಕ್ಷಣೆ ಮಾಡಲು ನಾಶವಗೈಯಲು ದುಷ್ಟರನು ।
ಧರ್ಮವನಳ್ಳಾಡದವೊಲು ನಿಲ್ಲಿಸೆ ಯುಗ ಯುಗದಲ್ಲೂ ಹುಟ್ಟುವೇನು ॥ 4.8 ।।

ಎಂಬೀ ಪದ್ಯಗಳನ್ನು ನೋಡಿದಾಗ ಪು. ತಿ. ನರವರಲ್ಲೂ ಸರಳತೆ, ಸ್ಪಷ್ಟತೆ, ಸಂಕ್ಷಿಪ್ತತೆಗಳು ಸಮರ್ಥರೂಪದಲ್ಲಿ ಮುಪ್ಪುರಿಗೊಂಡಿರುವುದನ್ನು ಕಾಣಬಹುದು. ಆದರೆ ಕೆಲವೆಡೆಯಲ್ಲಿ ಅವರು ಆ ಹಿರಿಮೆಯನ್ನು, ಅಭಿಲಾಷೆಯನ್ನು ನೆರವೇರಿಸಿ ಕೊಳ್ಳುವುದರಲ್ಲಿ ಅಸಮರ್ಥರಾದಂತೆ ತೋರುತ್ತದೆ. ಅದಕ್ಕೆ ಮುಖ್ಯ ಕಾರಣ ವೆಂದರೆ ಅವರಿಟ್ಟುಕೊಂಡ ಧೋರಣೆ. ಅದೇ- 'ಇದು ವ್ಯಾಖ್ಯಾನವಾಗದೆ ಭಾಷಾಂತರ ವಾಗಿ ಮಾತ್ರ ಉಳಿದು ಮೂಲದಷ್ಟೇ ಅಡಕವಾಗಿರಬೇಕೆಂಬ ಬಯಕೆ". ಈ ಬಯಂಕೆ ಯಿಂದಾಗಿ ಕೆಲವೆಡೆ ಮೂಲದಲ್ಲಿದ್ದ ಶಬ್ದವನ್ನೇ ಅನುವಾದದಲ್ಲಿ ಬಳಸಿದ್ದಾರೆ. ಇದರಿಂದಾಗಿ ಸಂಸ್ಕೃತಬಾರದವರು ಅದನ್ನು ಓದಿದಲ್ಲಿ ಅವರಿಗೆ ಅದು ಅರ್ಥವಾಗು ವುದು ಕಷ್ಟವಾಗಿ ಪರಿಣಮಿಸುತ್ತದೆ. ಮೂಲದಲ್ಲಿ ಇದ್ದುದುದನ್ನೆಲ್ಲಾ ಒಂದೂ ಬಿಡದೆ ಕನ್ನಡಕ್ಕೆ ತರಲು ಹೋಗಿ, ಅವುಗಳ ಸ್ಪಷ್ಟಾರ್ಥಕ್ಕೆ ಕುಂದು ಬಂದಿರುವುದೂ ಉಂಟು. ಉದಾಹರಣೆಗೆ –

ಏವಮುಕ್ತೋ ಹೃಷಿಕೇಶೋ ಗುಡಾಕೇಶೇನ ಭಾರತ
ಸೇನಯೋರು ಭಯೋರ್ಮಧ್ಯೇ ಸ್ಥಾಪಯಿತ್ವಾರಥೋತ್ತಮಮ್ ।। 1.24 ।।

ಎಂಬೀ ಮೂಲಶ್ಲೋಕವನ್ನು –

ಗುಡಾಕೇಶನಾ ಹೃಷಿಕೇಶನಿಗೆ ಇಂತು ಬಿನ್ನವಿಸೆ, ಭಾರತ ।
ಆತನಾ ತೇರನಿರ್ದಳದ ನಡುವೆ, ದ್ರೋಣಭೀಷ್ಮರುಗಳಂತೆಯೇ ॥

ಎಂದು ಅನುವಾದಿಸಿ, ಮೂಲ ಶ್ಲೋಕದಲ್ಲಿ ಬರುವ ಭಾರತ ಎಂಬ ಶಬ್ದವನ್ನು ಇಲ್ಲಿಯೂ ಉಪಯೋಗಿಸಿದ್ದಾರೆ. ಆದರೆ ಇಲ್ಲಿ ಭಾರತ ಶಬ್ದವನ್ನು ಯಾವುದಕ್ಕೆ ಅನ್ವಯಿಸಿಕೊಳ್ಳಬೇಕು ? ಅದರರ್ಥವೇನು ? ಅಥವಾ ಅದು ಸಂಬೋಧನಾತ್ಮಕ ಶಬ್ದವೇ ಎಂಬುದು ಸ್ಪಷ್ಟವಾಗದೆ ಅರ್ಥದೋಷಕ್ಕೆ ಕಾರಣವಾಗಿದೆ. ಇದೇ ಶ್ಲೋಕವನ್ನು ಅಮೃತಚನ್ನಶಾಮರು-

ನರಪಕೇಳ:, ಗುಡಾಕೇಶನೊರೆದ ರೀತಿ ಹೃಷಿಕೇಶ
ನೆರಡು ಸೇನೆಮಧ್ಯೆರಥವ ನಿಲ್ಲಿಸುತ್ತಲಿ ಎಂದು ಭಾರತ ಎಂಬುದಕ್ಕೆ 'ನರಪ'

ಎಂದು ಅನುವಾದಿಸಿದ್ದರೆ ಎಂ. ಅನಂತರಾವ್‌ರವರು—

ಹರಿಯೊಂದಿಗಿಂತು ಪೇಳಲು ಗುಡಾಕೇಶಂ ।
ಎರಡು ದಳಗಳ ಮಧ್ಯದಲಿ ಹೃಷಿಕೇಶಂ ।।

ಎಂದು ಅನುವಾದಿಸಿ ಕ್ಲಿಷ್ಟತೆ ಬಾರದಂತೆ ಭಾರತ ಶಬ್ದವನ್ನು ಬಿಟ್ಟುಬಿಟ್ಟಿದ್ದಾರೆ. ಪು.ತಿ.ನ. ರವರೂ ಹಾಗೆಯೇ ಮಾಡಬಹುದಿತ್ತು. ಇದೇರೀತಿ ಇನ್ನೊಂದು ಉದಾಹರಣೆಯನ್ನು ನೋಡಬಹುದು—

ಯಥಾದೀಪೋ ನಿವಾತಸ್ಥೋನೇಂಗತೇ ಸೋಪಮಾ ಸ್ಮೃತಾ
ಯೋಗಿನೋ ಯತಚಿತ್ತಸ್ಯ ಯುಂಜತೋಯೋಗಮಾತ್ಮನಃ ॥೬–೧೯॥

ಎಂಬುದು ಮೂಲ ಶ್ಲೋಕ. ಇದನ್ನು—

ಗಾಳಿಯಿಲ್ಲದೆಡೆ ಅಲುಗದೆ ಉರಿಯುವ ದೀಪದ ಬಗೆಯುನು ನೆನೆಯಿಪುದು ।
ಯೋಗದಿ ತನ್ನಾತ್ಮವನೊಡಗೂಡಿಪಯೋಗಿಯ ಯತಚಿತ್ತನ ನೆರವು ।।

ಎಂದು ಅನುವಾದಿಸುವಲ್ಲಿ 'ಯತಚಿತ್ತಸ್ಯ' ಎಂಬ ಶಬ್ದವನ್ನು ಮೂಲದಲ್ಲಿದ್ದಂತೆಯೇ ಇಲ್ಲಿಯೂ ಪ್ರಯೋಗಿಸಿದ್ದಾರೆ. ಆ ರೀತಿ ಪ್ರಯೋಗಿಸಬಾರದು ಎಂದಲ್ಲ. ಆದರೆ ಹಾಗೆ ಪ್ರಯೋಗಿಸಿದರೆ, ಸಂಸ್ಕೃತ ಬಾರದವರು ಅದನ್ನು ಅರ್ಥೈಸಿಕೊಳ್ಳುವುದು ಹೇಗೆ ? ಎಂಬುದೇ ಪ್ರಶ್ನೆ. ಇಂತಹ ಸಂದರ್ಭದಲ್ಲಿ ಅನುವಾದಕರು ವ್ಯಾಖ್ಯಾನಾತ್ಮಕ ಅನುವಾದಕ್ಕೆಡೆಗೊಟ್ಟರೆ ಉದ್ದೇಶ ಸಫಲವಾಗುವುದು, ಓದುಗರಿಗೂ ಅರ್ಥಸ್ಪಷ್ಟವಾಗುವುದು. ಈ ಕಾರ್ಯವನ್ನು ಮೂಲದಲ್ಲಿದ್ದಂತೆಯೇ ಅನುವಾದಿಸಬೇಕೆಂಬ ಧ್ಯೇಯ-ಧೋರಣೆಯನ್ನು ಪು.ತಿ.ನರವರಂತೆಯೇ ಇಟ್ಟುಕೊಂಡು ಗೀತೆಯನ್ನು ಅನುವಾದಿಸಿದ ಎಂ. ಅನಂತರಾವ್‌ರವರು ಮಾಡಿದ್ದಾರೆ—

ಉರಿಯು ಕದಲದೆ ಗಾಳಿಯಿಲ್ಲದಾ ತಾಣದಲಿ
ಮೆರೆಯುತಿಹ ದೀವಿಗೆಯು ಸಾಮ್ಯದುಪಮೆಯುನು
ಇತ್ತು ಹೋಲಿಸುವರೈ ತನ್ನ ಮನವಂ ಪಳಗಿ
ಸುತ್ತಾತ್ಮಯೋಗ ಸಾಧಿಸುವ ಯೋಗಿಯನು ।।

ಇದೇರೀತಿ ಅಮೃತ ಚನ್ನಶಾಮರು

ವಾತಹೀನವಾದ ಸ್ಥಾನದಲ್ಲಿ ಇರುವ ದೀಪವದುವು
ವೀತಚಲನವುಳ್ಳದಾಗಿ ಹೇಗೆ ಇರುವುದೊ
ರೀತಿಯಿದೇ ಉಪಮೆತಾನು ಆತ್ಮಯೋಗಯುಕ್ತನಾಗಿ
ಚಿತ್ತನಿಯತನಾದ ಯೋಗಿಗವಗೆ ಸಲ್ಪುದು

ಎಂದು ಅನುವದಿಸಿದ್ದರೆ ಬಡೆಕ್ಕಿಲ್ ವೆಂಕಟರಮಣ ಭಟ್ಟರು—

ಅಳಿದುಮನಸಿನ ಸಕಲಕಾಮನೆ
ಗಳು ಸುಳಿವ ಸುಳಿಗಾಳಿಗೊಳ್ಳದ
ನಿಳಯದೊಳಗೇಕಪ್ರಕಾರದೊಳುರಿವ ಸೊಡರಂತೆ ।
ಅಳುಕದಾತ್ಮಧ್ಯಾನ ಚಿಂತನೆ
ಯೊಳಗೆ ಚಿತ್ತದವೃತ್ತಿಸಂದೆಡೆ
ಗೊಳುವುದಾರೊಳಗವರೆಯುಕ್ತರು ಪಾರ್ಥಕೇಳೆಂದ ।।

ಎಂದು ವ್ಯಾಖ್ಯಾನಾತ್ಮಕವಾಗಿ ಅನುವಾದಿಸಿದ್ದಾರೆ. ಹೀಗೆ ಪು.ತಿ.ನರವರೂ ಇಂತಹ ಎಡೆಗಳಲ್ಲಿ ವ್ಯಾಖ್ಯಾನಾತ್ಮಕವಾಗಿ ಅನುವಾದ ಮಾಡಿದ್ದಾರೆ ಇನ್ನು ಹೆಚ್ಚು ಸಾರ್ಥಕ ವಾಗುತ್ತಿತ್ತು ಎಂದು ಹೇಳಬಹುದು.

ಇನ್ನು ಕೆಲವೆಡೆ ಪ್ರಯೋಗಿಸಿದ ಕೆಲವು ಶಬ್ದಗಳು ಅರ್ಥಕ್ಕೆ ಕುಂದಿಲ್ಲವಾದರೂ 'ತ್ರೋಳವನೆ' (ತ್ರೋಳುಗಳುಳ್ಳವನು) ೧೧.೪೬ 'ಅವ್ರೊಳು'; (ಅವುಗಳಲ್ಲಿ) ೭.೧೨ ; 'ಕಾಂತೇಯನೇ (ಕೌಂತೇಯ—ಕುಂತಿಪುತ್ರನೇ) ೧೬-೨೦ ; ಮುಂತಾದ ಶಬ್ದಗಳನ್ನು ಓದುವಾಗ ಏಕೋ ಏನೋ ಒಂದು ರೀತಿಯಲ್ಲಿ ಮನಸ್ಸಿಗೆ ಕುಟುಕಿದಂತಾಗುತ್ತದೆ ಯೆಂದು ಅನಿಸುತ್ತದೆ.

ಆರನೇ ಅಧ್ಯಾಯದಲ್ಲಿ ಇಪ್ಪತ್ತಾರನೆಯ ಶ್ಲೋಕವಾದ ಮೇಲೆ ಬರುವ ಈ ಕೆಳಗೆ ಸೂಚಿಸಿದ ನಾಲ್ಕು ಶ್ಲೋಕಗಳು ಕಾಣಬರುತ್ತಿಲ್ಲ—

ಪ್ರಶಾಂತಮನಸಂ ಹ್ಯೇನಂಯೋಗಿನಂ ಸುಖಮುತ್ತಮಮ್
ಉಪೈತಿ ಶಾಂತರಜಸಂ ಬ್ರಹ್ಮಭೂತಮಕಲ್ಮಷಮ್ ।।೬-೨೭।।

ಯುಂಜನ್ನೇವಂ ಸದಾತ್ಮಾನಂ ಯೋಗೀವಿಗತಕಲ್ಮಷಃ
ಸುಖೇನ ಬ್ರಹ್ಮಸಂಸ್ಪರ್ಶಮತ್ಯಂತಂ ಸುಖಮಶ್ನುತೇ ॥೬-೨೮।।

ಸರ್ವಭೂತಸ್ಥಮಾತ್ಮಾನಂ ಸರ್ವಭೂತಾನಿ ಚಾತ್ಮನಿ
ಈಕ್ಷತೇ ಯೋಗಯುಕ್ತಾತ್ಮಾ ಸರ್ವತ್ರ ಸಮದರ್ಶನ ॥ ೬.೨೯ ॥

ಯೋ ಮಾಂ ಪಶ್ಯತಿ ಸರ್ವತ್ರ ಸರ್ವಂಚಮಯಿ ಪಶ್ಯತಿ
ತಸ್ಯಾಹಂ ನಪ್ರಣಶ್ಯಾಮಿ ಸ ಚ ಮೇ ನ ಪ್ರಣಶ್ಯತಿ ॥ ೬.೩೦ ॥

ಇವುಗಳನ್ನು ಏಕೆ ಅನುವದಿಸದೆ ಬಿಟ್ಟಿರೋ ತಿಳಿಯದು.

ಪು.ತಿ.ನರವರ ಅನುವಾದದಲ್ಲಿ ಕಾಣಬರುವ ವಿಶೇಷತೆಯೊಂದೆಂದರೆ ಕೃಷ್ಣಾರ್ಜುನರಲ್ಲಿದ್ದ ಆತ್ಮೀಯತೆಯ ಚಿತ್ರಣ, ಗೀತೆಯನ್ನು ಬೋಧಿಸುವ ಕೃಷ್ಣನು ಆತ್ಮೀಯ ಮಿತ್ರನಂತೆ ಬೋಧಿಸುತ್ತಾನಾದರೆ, ಆತ್ಮೀಯ ಭಾವವನ್ನು ತಾಳಿ, ಅನನ್ಯ ಶರಣತೆಯಿಂದ ವರ್ತಿಸಿ ಆಲಿಸಿ, ಪ್ರಶ್ನಿಸಿ ತಿಳಿದುಕೊಳ್ಳುವ ಅರ್ಜುನ ನಮ್ಮ ಕಣ್ಣೆದುರು ನಿಲ್ಲುತ್ತಾನೆ.

ಚಂಚಲವಯ್ಯಾ ಮನವಿದು ಕೃಷ್ಣ, ಜೀವನ ಕಡೆವುದು ಬಲ್ಲಿತದು ।
ದೃಢವಾದುದು, ನನಗಿದ ಹಿಡಿದಿಡುವುದು ಗಾಳಿಯ ತೆರೆದೊಳು ದುಸ್ಸಾಧ್ಯ ॥ ೬.೩೪ ॥

ಚಂಚಲವಯ್ಯಾ ಎಂಬಲ್ಲಿ 'ಅಯ್ಯಾ' ಎಂಬುದು ಅರ್ಜುನನ ನಿಸ್ಸಹಾಯಕತೆಯನ್ನು ಸಮರ್ಥವಾಗಿ ಚಿತ್ರಿಸಲು ಸಹಾಯಕವಾಗಿ ಪರಿಣಮಿಸಿದರೆ ಅದಕ್ಕೆ ಕೃಷ್ಣನು-

ಚಂಚಲವೈ ಮನ, ನಿಸ್ಸಂಶಯ, ಇದ ನಿಗ್ರಹಿಸುವುದೂ ಕಡುಕಷ್ಟ
ಆದೊಡೆ ಅಭ್ಯಾಸಕು ವೈರಾಗ್ಯಕು ಇದು ದಕ್ಕುವುದೈ ಕೌಂತೇಯ ॥ ೬.೩೫ ॥

ಎಂದುತ್ತರಿಸುವಲ್ಲಿಯೂ ಕೃಷ್ಣನಿಗೆ ಅರ್ಜುನನ ಮೇಲಿರುವ ಆತ್ಮೀಯತಾಭಾವವನ್ನು ಒಡಮೂಡಿಸುತ್ತದೆ. ಇದೇ ರೀತಿ– "ಹೋಗನು ಅಪ್ಪಾ ದುರ್ಗತಿಗೆ" "(೬.೪೦), "ನಿಯತಾತ್ಮರು ತಿಳಿಯುವರಯ್ಯಾ" (೮.೨), "ಆ ಪರಮ ಪುರುಷ ದೊರೆಯುವನೈಯ್ಯಾ ಅನನ್ಯಭಕ್ತಿಗೆ ಓ ಪಾರ್ಥ" (೮.೨೨) ; "ಕೊನೆಯಿಲ್ಲವಯ್ಯಾ ಎಲೆ ಪರಂತಪ" (೧೦.೪೦) ಎಂಬಲ್ಲಿಯೂ ನೋಡಬಹುದು. ಹಾಗೆಯೇ ಕೃಷ್ಣನು ವಿಶ್ವರೂಪವನ್ನು ತೋರಿಸಿದನೆಂದು ಸಂಜಯನು ಧೃತರಾಷ್ಟ್ರನೊಂದಿಗೆ ಹೇಳುವಾಗಿನ ಅವನ ಬೆರಗು-"ಪರಮರೂಪವನು ತೋರಿದನಯ್ಯಾ ಪಾರ್ಥನಿಗೆ" (೧೧.೯) ಎಂಬ ನುಡಿಗಳಲ್ಲಿ ಸಮರ್ಥನೀಯವಾಗಿ ಪಡಿಮೂಡಿರುವುದನ್ನು ಕಾಣಬಹುದು. ಅದೇರೀತಿ ನಮ್ಮ ಪ್ರಬಲ ಶತ್ರುಯಾರು ? ಎಂಬುದನ್ನು ಒತ್ತಿ ಹೇಳುವ ರೀತಿಯೂ ಆಕರ್ಷಕವಾಗಿದೆ–

ಕಾಮವಿದಯ್ಯಾ ಕೋಪವಿದಯ್ಯಾ, ರಜೋಗುಣದೊಳಗೆ ಹುಟ್ಟಿದುದು ।
ಹೊಟ್ಟೆಬಾಕನಿದು ಮಹಾಪಾಪಿಯಿದು ಶತ್ರುವಿದೆನ್ನುತ ತಿಳಿ ಇಹದಿ ॥ ೩.೩೭ ॥

ಹೀಗೆ ಪು.ತಿ.ನರವರು ತಾವು ಇಟ್ಟುಕೊಂಡ ಹಂಬಲುಗಳಿಗೆ ಸಿಕ್ಕಿ ಈ ಕೃತಿ ನಿರ್ಮಾಣದಲ್ಲಿ ಬಹುವಾಗಿ ಕ್ಲೇಶಪಟ್ಟಿರುವಂತೆ, ಸುಖಕರವಾಗಿಯೂ ದುಡಿದಿದ್ದಾರೆ. ಅವರ ಕ್ಲೇಶಗಳೆಲ್ಲ ಕೃತಿಯ ಪೂರ್ಣತೆಯಲ್ಲಿ ಸುಖಕರವಾಗಿ ಪರಿಣಮಿಸಿವೆ. ಭಾಷಾಂತರದಲ್ಲಿ ಅವರ ಉದ್ದೇಶ ಮೂಲವನ್ನು ಮರೆಸುವುದಲ್ಲವೆಂದೂ, ಅದನ್ನು ಪ್ರಕಾಶಗೊಳಿಸುವ ಉದ್ಯಮವೆಂದರೆ ಸೂರ್ಯನಿಗೆ ದೀವಟಿಗೆ ಹಿಡಿದಂತೆಯೇ ಸರಿ, ಎಂದೂ ಹೇಳಿಕೊಂಡು, ಹಾಗಾದರೆ ಈ ಭಾಷಾಂತರವೇಕೆ ಎಂದರೆ ಯಾತ್ರೆಮಾಡಿ ಬಂದವರು ತಮ್ಮ ಬಂಧುಮಿತ್ರರೊಡನೆ ಕಲೆತು ಉತ್ಸವವನ್ನು ಆಚರಿಸುವುದು ನಮ್ಮ ಸಂಪ್ರದಾಯವಲ್ಲವೆ ? ಎಂದು ತಿಳಿಸಿದಂತೆ ಉತ್ಸವವನ್ನು ವಿಜೃಂಭಣೆಯಿಂದ ನೆರವೇರಿ

ಸಿದ್ದಾರೆಂಬುದರಲ್ಲಿ ಸಂಶಯವಿಲ್ಲ. ದೋಷ ಹುಡುಕಲು ಹೊರಟವರಿಗೆ ಉತ್ಸವದಲ್ಲಿ ಒಂದೆರಡು ದೋಷಗಳಾದರೂ ಸಿಗದೆ ಇರಲಾರದು. ಆದರೆ ವಿಶಾಲ ಮನಸ್ಸಿನಿಂದ, ಪೂರ್ಣದೃಷ್ಟಿಯಿಂದ ಅವಲೋಕಿಸಿದಾಗ ಪು.ತಿ.ನರವರ ಈ ಉತ್ಸವ ಮಂಗಲಪ್ರದವಾಗಿ ಮೆರೆದಿದೆ ಎಂದು ಹೇಳದೆ ಗತ್ಯಂತರವಿಲ್ಲ. ''ಶ್ರೀವಾಸುದೇವನ ಕೃಪೆಯೊಳು ಕನ್ನಡದೊಳೀಪರಿಯು" ಅನುವಾದ ಮಾಡಿ ಕನ್ನಡಿಗರಿಗೆ ಗೀತಾಮೃತವನ್ನುಣಬಡಿಸಿದ ಪು.ತಿ.ನರವರು ಧನ್ಯರು. ''ಕೃಷ್ಣ ಕರುಣೆಸೆ ಮೂಡಿದೀ ಕೃತಿ ಕೃಷ್ಣಗರ್ಪಣ''ಮಾಡಿ ಪಾವನರಾಗಿ ಕನ್ನಡಿಗರ ಕೃಪೆಗೆ ಪಾತ್ರರಾಗಿದ್ದಾರೆ. ಶರದಪ್ರಿಯರಾದ ಅವರು ಶಾರದೆಯ ಕೃಪೆಗೂ ಒಳಗಾಗಿ ಶ್ರೀಕೃಷ್ಣ ಪಡೆದು ಕನ್ನಡನಾಡು, ಪರಮಾತ್ಮನ ಗೀತಾಮೃತವನ್ನು ಆಸ್ವಾದಿಸಿ ಪುನೀತರಾಗಿದ್ದಾರೆ. ಅಂತವರನುಡಿ, ಜನರಲ್ಲಿ ಸಿರಿ ವಿಜಯ ವಿಭೂತಿಯೂ ನೆಲೆಯ ನೀತಿಯೂ ನೆಲೆಸುವಂತಾಗಲಿ.

ಎತ್ತ ಯೋಗೀಶ್ವರನು ಕೃಷ್ಣನೊ, ಎತ್ತ ಪಾರ್ಥಧನುರ್ಧರ।
ಅತ್ತಲೇ ಸಿರಿ ವಿಜಯ ಭೂತಿಯೂ ನೆಲೆಯ ನೀತಿಯೂ ಎಂಬೆನಾ ।। ೧೮.೭೮ ।।

ಅಡುಳಿ

ಡಾ. ತಿ. ಕೃಷ್ಣೇಗೌಡರು ಪದದ ಅರ್ಥವನ್ನು ಅದರ ಸಾಂಸ್ಕೃತಿಕ ಮೌಲ್ಯತವನ್ನು ಕುರಿತು ಆಲೋಚಿಸಿದ್ದಾರೆ. ಅಲ್ಲದೆ ಹಾಸನ ಜಿಲ್ಲೆಯಲ್ಲಿ ಬಳಕೆಯಲ್ಲಿದ್ದ ಶಬ್ದವೆಂದೂ ಅದನ್ನು ಕರೆದಿದ್ದಾರೆ.

(ಸಂ॥ ಸಂ. 3 ಜುಲೈ-ಸೆಪ್ಟೆಂಬರ್ 1982)

ನನ್ನ ಗಮನಕ್ಕೆ ಬಂದಿರುವಂತೆ ಆ ಸುತ್ತಮುತ್ತಲ ಪ್ರದೇಶದಲ್ಲಿ ಈ ಶಬ್ದ ಜನಪದದಲ್ಲಿ ಇನ್ನೂ ಜೀವಂತವಾಗಿದೆ. ಆದರೆ ಕೃಷ್ಣೇಗೌಡರು ಗ್ರಹಿಸಿರುವ ಅರ್ಥಕ್ಕಿಂತ ಸ್ವಲ್ಪ ಭಿನ್ನ ಎಂಬುದು ನನ್ನ ಅಭಿಪ್ರಾಯ. ಮದುವೆಯ ಸಂದರ್ಭದಲ್ಲಿ ಗಂಡಿನ ಜೊತೆಯಲ್ಲಿ ಅಥವಾ ಹೆಣ್ಣಿನ ಜೊತೆಯಲ್ಲಿ ; ಗಂಡಿನ ಅಥವಾ ಹೆಣ್ಣಿನ ಇಲ್ಲವೆ ಚಿಕ್ಕಪ್ಪ ದೊಡ್ಡಪ್ಪಂದಿರ ಮಕ್ಕಳೋ, ಆತ್ಮೀಯರೋ ಇರುತ್ತಾರೆ. ಗಂಡು ಹೆಣ್ಣಿನ ಅನಿಸಿಕೆಗಳನ್ನೆಲ್ಲಾ ಸಂಕೋಚವಿದ್ದಾಗ ಸಂಬಂಧಪಟ್ಟವರಿಗೆ ತಿಳಿಸಲು ಇವರೇ ರಾಜಮಾರ್ಗ. ಸ್ವಲ್ಪಮಟ್ಟಿಗೆ ಗಂಡು/ಹೆಣ್ಣಿನ ಸೇವೆ ಕೂಡ ಮಾಡಬಹುದು. ಹೆಣ್ಣು ಅಥವಾ ಗಂಡಿಗೆ ಆತ್ಮೀಯ ವ್ಯಕ್ತಿ ಎಂಬ ಕಾರಣದಿಂದ ಊಟೋಪಚಾರ ಮಾತುಕತೆಗಳಲ್ಲಿ ಈ ವ್ಯಕ್ತಿಗೆ ಗಂಡು/ಹೆಣ್ಣುಗಳಂತೆಯೇ ಪ್ರಾಮುಖ್ಯತೆಯಿರುತ್ತದೆ. ಈ ಆತ್ಮೀಯ ವ್ಯಕ್ತಿಯನ್ನು ಅಡುಳಿಗಂಡು/ಅಡುಳಿ ಹೆಣ್ಣು ಎಂದು ಕರೆಯುತ್ತಾರೆ.

'ಅಡುಳಿ ಹೆಣ್ಣು ಬಂತು ಬಡಿದು ಉಳಿಕಾಯಿಸಿ' ಎನ್ನುವುದು ಜಾಣ್ಣುಡಿ. ಮೀನು ನೀರಿನಲ್ಲಿರುತ್ತದೆ ಗಾಳಕ್ಕೆ ಸಿಕ್ಕಿ ಹೊರಬಂದಾಗ ಎಷ್ಟೇ ಒದರಾಡಿದರೂ ಅಸಹಾಯಕ. ಆದ್ದರಿಂದ ಅದನ್ನು ಬಡಿದು ಹುಳಿ (ಸಾರು) ಮಾಡುತ್ತಾರೆ. ಅಡುಳಿಹೆಣ್ಣು ತೌರಿನಿಂದ ದೂರವಾಗಿ ಹೇಗೋ ಬಂದುಬಿಟ್ಟಿದ್ದಾಳೆ. ಆಕೆಯನ್ನು ಈಗ ಮದುವೆ ಮಾಡಿಕೊಂಡರೂ ಆದೀತು ಎನ್ನುವ ಭಾವ. ಆದರೆ ಆ ಹೆಣ್ಣು ಧೈರ್ಯದಿಂದ ಅಂತಹ ಸಂದರ್ಭ ಎದುರಿಸಬಹುದು ಇಲ್ಲವೆ ಗೆಳತಿಯ ಸೆರಗಿನಲ್ಲಿ ಮುಖ ಮುಚ್ಚಿಕೊಂಡು ಆಕೆಯ ಬೆಂಬಲ ಬೇಡಬಹುದು. (ಹೀಗೆ ಅಡುಳಿಯಾಗಿ ಬಂದವಳನ್ನು ಹಿಡಿದು ಮದುವೆ ಮಾಡಿರುವ ಸಂದರ್ಭ ತೀರ ಕಡಿಮೆ. ಆದರೆ ಮುಂದೆ ಅದೇ ಮನೆಗೆ ಇಲ್ಲವೆ ಊರಿಗೆ ಸೊಸೆಯಾಗಿ ಬಂದಿರುವ ನಿದರ್ಶನಗಳಿವೆ. ಆದ್ದೃಷ್ಟದಿಂದ ಇಂಥ ಸಂದರ್ಭ ಒಳ್ಳೆಯ ಮಾರುಕಟ್ಟೆ.

ಇನ್ನು ಈ ಶಬ್ದಕ್ಕೆ ಅರ್ಥ ಹಚ್ಚುವಾಗ ಕಿಟ್ಟೆಲನ ಮತ್ತು ಚಿದಾನಂದ ಮೂರ್ತಿಯವರ ಎರಡೂ ಅರ್ಥಗಳನ್ನು ಉಳಿಸಿಕೊಂಡೂ ಅರ್ಥೈಸಬಹುದು ಅಟ್ಟು+ಉಳಿ ಎಂದರೆ ಮಾಡಿಮಿಕ್ಕದ್ದು. ಅಟ್ಟು+ಉಂಬಳಿ ಮಾಡಿದ್ದು+ ಕೊಟ್ಟದ್ದು. ಅಟ್ಟು ಎಂದರೆ ಕಳಿಸು ಎನ್ನುವ ಅರ್ಥವಿರುವಂತೆ ಮಾಡು ಎಂಬ ಅರ್ಥವಿದೆ.

“ಅಟ್ಟಮೇಲೆ ಒಲೆ ಉರೀತು ಕೆಟ್ಟ ಮೇಲೆ ಬುದ್ಧಿ ಬಂತು” ಅಡಿಗೆ ಆದ ಮೇಲೆ ಒಲೆ ಚೆನ್ನಾಗಿ ಉರಿಯುತ್ತದಂತೆ. ಸೌದೆಯಲ್ಲಿ ಅಡಿಗೆ ಮಾಡುವವರಿಗೆಲ್ಲಾ ಗೊತ್ತು. ಅಡಿಗೆ ಆಗುವಷ್ಟರಲ್ಲಿ ಸೌದೆ ಒಲೆ ಎರಡೂ ಕಾವು ಬಂದು ಚೆನ್ನಾಗಿ ಉರಿಯುತ್ತದೆ ಇಲ್ಲಿ ಒಲೆಯನ್ನು ಕಳಿಸಿ ಎಂದು ಅರ್ಥೈಸಿದರೆ ಸರಿಬರುವುದಿಲ್ಲ. ಹೀಗೆಯೆ ಸ್ವಲ್ಪ ಅಶ್ಲೀಲವಾಗಿ ಕಂಡರೂ ‘ಅಡಿಸಿಕೊಂಡು ಹೇಳಬೇಡ ಕಳಕೊಂಡು ಹುಡುಕಬೇಡ’ ಎನ್ನುವುದು ಇನ್ನೊಂದು ಗಾದೆ. ಇಲ್ಲಿಯೂ ‘ಅಡು’ ಎನ್ನುವುದಕ್ಕೆ ಇರುವ ಅರ್ಥ ಸ್ಪಷ್ಟವಾಗಿದೆ. ಜನ್ನನ ಯಶೋಧರ ಚರಿತೆಯ ಒಂದನೆಯ ಅವತಾರದಲ್ಲಿ ‘ನೆತ್ತರಾ ಕೂಳ್ಗಳನಡುತಿಹ ವೀರರೆತ್ತ ನೋಡಿಪ್ಪುಡಮುದದೊಳ್’ ಎಂದು ಬಳಸಿದೆ. ಇಲ್ಲಿಯೂ ನೆತ್ತರ ಅನ್ನವನ್ನು ಮಾಡುತ್ತಿರುವ ವೀರರೂ ಎನ್ನುವುದು ಸರಿಯಾದ ಅರ್ಥವೆಂದು ನಂಬಿದ್ದೇವೆ.

ಅಂದಾಗ ಅಡುಳಿ ಎನ್ನುವುದರ ಭಾವಾರ್ಥ ಪ್ರಸ್ತುತ ಸನ್ನಿವೇಶದಲ್ಲಿ ಹೀಗೆ ಬರುತ್ತದೆ. ಮದುವಣಿಗ ಅಥವಾ ಮದುವಣಿಗಿತ್ತಿ ಕಷ್ಟಪಟ್ಟು ನಿಶ್ಚಯ ಮಾಡಿದವು. ಜೊತೆಯಲ್ಲಿರುವವರು ನಿಶ್ಚಯ ಮಾಡಬಹುದಾಗಿದ್ದ, ಮಾಡಬಹುದಾದ ಹೆಣ್ಣು: ಮತ್ತೊಂದು ರೀತಿಯಲ್ಲಿ ಹೇಳುವುದಾದರೆ ಕಷ್ಟಪಟ್ಟು ಗೊತ್ತುಮಾಡಿದ ಗಂಡು ಅಥವಾ ಹೆಣ್ಣು ಒಂದಾದರೆ ಉಂಬಳಿಯಾಗಿ, ಕೊಡುಗೆಯಾಗಿ, ಬಂದಿರುವವು ಈ ಜೊತೆಯಲ್ಲಿರುವವು ಎನ್ನುವ ಅರ್ಥ ಬರುತ್ತದೆ. ಹಿಂದೆ ವಧುಗೆ ‘ತೆರ’ (ವಧುದಕ್ಷಿಣೆ, ಶುಲ್ಕ) ಕೊಡುತ್ತಿದ್ದ ಕಾಲದಲ್ಲಿ ಒಂದು ವಧು ತೆರ ಕೊಟ್ಟು ತಂದದ್ದು. ಜೊತೆಯಲ್ಲಿರುವುದು ಉಂಬಳಿಯಾಗಿ ಬಂದದ್ದು ಎಂಬ ಭಾವ ವ್ಯಕ್ತವಾಗುತ್ತದೆ. ಹಾಗೆ ನೋಡಿದಾಗ ಅಡುಳಿ ಎನ್ನುವುದು ಗಂಡಿನ ಜೊತೆಯ ವ್ಯಕ್ತಿಗಿಂತ ಹೆಣ್ಣಿನ ಜೊತೆಯಲ್ಲಿರುವ ವ್ಯಕ್ತಿಗೆ ಹೆಚ್ಚು ಅನ್ವಯವಾಗುತ್ತಿತ್ತು. ವರನಿಗೆ ಶುಲ್ಕ ಕೊಡಬೇಕಾಗಿ ಬಂದಿರುವ ಕಾಲದಲ್ಲಿ ಅಷ್ಟರಮಟ್ಟಿಗೆ ಅರ್ಥ ಕಳೆದುಕೊಂಡಿದೆ.

ಇನ್ನು ಹೆಣ್ಣಿನ ಜೊತೆ ಕೂಡುವ ಹಸು ಕರು ಎಮ್ಮೆ ಇತ್ಯಾದಿಗಳಿಗೆ ಬಳ್ಳುಳ್ಳಿ, ಬೆಳ್ಳುಳ್ಳಿ ಎಂಬ ಪದ ಈಗಲೂ ಬಳಕೆಯಲ್ಲಿದೆ. ಬಳ್ಳುಳ್ಳಿ ಅಥವಾ ಬೆಳ್ಳುಳ್ಳಿ ಎಂಬ ಶಬ್ದ ಬಳುವಳಿ ಎಂಬುದರ ರೂಪಾಂತರ ಎನ್ನಲು ಅಡ್ಡಿಯಿಲ್ಲ ಇಲ್ಲಿಯೂ

ಭಾವಾರ್ಥವೇ ಪ್ರಧಾನ. ಹೆಣ್ಣು ದೊಡ್ಡ ಗಂಟು ಅದನ್ನು ಕೊಡುತ್ತಿದ್ದೇವೆ ಅದಕ್ಕೆ ತೆರ ಕೊಟ್ಟಿದ್ದಾರೆ ಬಳ್ಳುಳ್ಳಿ ಉಂಬಳಿಯಾಗಿ ; ಪುಕ್ಕಟೆ ಕೊಡುವ ಕೊಡುತ್ತಿರುವ ವಸ್ತು ; ಇನ್ನೂ ಆಳವಾಗಿ ಯೋಚಿಸಿದರೆ ಹಿಂದೆ ಮದುವೆ ಸಾಮಾನುಗಳನ್ನು ದೊಡ್ಡ ದೊಡ್ಡ ಸಂತೆಗಳಲ್ಲಿ ಕೊಳ್ಳುತ್ತಿದ್ದರು. ಆಗ ಮದುವೆಯ ಸಾಮಾನುಗಳ ಬೆಲೆ ದೊಡ್ಡಗಂಟು, ಆಗ ಮದುವೆಗೆ ಬೇಕಾಗುವ ಬೆಳ್ಳುಳ್ಳಿ ತೀರ ಅಲ್ಪ ಅದನ್ನು ಪುಕ್ಕಟೆ ಕೊಟ್ಟುಬಿಡುತ್ತಿದ್ದರು ಅಂಗಡಿಯವರು. ಹಾಗೆ ಮಗಳೆಂಬ ದೊಡ್ಡ ವಸ್ತುವಿಗೆ ಹೋಲಿಸಿದಾಗ ಹಸು, ಕರು, ಎಮ್ಮೆ ಇತ್ಯಾದಿ ವಸ್ತುಗಳು ಬೆಳ್ಳುಳ್ಳಿ ಮಾತ್ರ. ಆದ್ದರಿಂದ ಶ್ರೀಯುತರ ಲೇಖನದ ಎರಡನೇ ಪ್ಯಾರಾದಿಂದ ಮುಂದಕ್ಕೆ ಅಡುಳಿ ಎಂದಿರುವ ಕಡೆ ಬಳ್ಳುಳ್ಳಿ ಅಥವ ಬೆಳ್ಳುಳ್ಳಿ ಎಂದು ಬರೆದುಕೋಂಡು ಓದಿದರೆ ಸಮಂಜಸ ಅರ್ಥ ಬರುತ್ತೆ.

—ಮ.ಲಿ.ಮ.

ಗುಬ್ಬಿಯ ಮಲ್ಲಣ್ಣ (1430)ನ 'ಕಾಲಜ್ಞಾನತಂತ್ರಟೀಕೆ'–ಒಂದು ಟಿಪ್ಪಣಿ

ಅಮರಗುಂಡದ ಮಲ್ಲಿಕಾರ್ಜುನನ ವಂಶಪರಂಪರೆಗೆ ಸೇರಿದವ ಗುಬ್ಬಿಯ ಮಲ್ಲಣ್ಣ. ಈತನ ಕಾಲವನ್ನು ಕವಿಚರಿತೆಕಾರರಾದ ಶ್ರೀ ಆರ್. ನರಸಿಂಹಾಚಾರ್ಯರು 'ಸು. 1475 ಎಂದಿದ್ದಾರೆ.೧ ಶ್ರೀ ಎಂ. ಆರ್. ಶ್ರೀನಿವಾಸಮೂರ್ತಿಗಳು ಲಕ್ಕಣ ದಂಡೇಶನ 'ಶಿವತತ್ವ ಚಿಂತಾಮಣಿ' ಯಲ್ಲಿ ಈತನನ್ನು ಹೆಸರಿಸಿರುವುದನ್ನು ಉಲ್ಲೇಖಿಸಿ 'ಗುಬ್ಬಿಯ ಮಲ್ಲಣ್ಣನ ಕಾಲವನ್ನು ೧೪೭೫ಕ್ಕೆ ಬದಲು ... ೧೪೨೮ ಅಥವಾ ೧೪೩೦' ಎಂದು ಅಭಿಪ್ರಾಯಪಟ್ಟಿದ್ದಾರೆ.೨

ಕವಿಚರಿತೆಕಾರರು ಈತನ—

(೧) ಗಣಭಾಷ್ಯರತ್ನಮಾಲೆ

(೨) ವಾತುಲ ತಂತ್ರ ಟೀಕೆ–ಗಳನ್ನು ಹೆಸರಿಸಿದ್ದಾರೆ.೩

ಗುಬ್ಬಿಮಲ್ಲಣ್ಣ ವರರುಚಿಕೃತ 'ಏಕಾಕ್ಷರ ನಿಘಂಟು'ವಿಗೆ ಟೀಕೆ ರಚಿಸಿದ ಸಂಗತಿ ಈಗಾಗಲೇ ಬೆಳಕಿಗೆ ಬಂದಿದ್ದು ಇದು ಆತನ ಮೂರನೆಯ ಕೃತಿಯಾಗಿದೆ.೪

ಗುಬ್ಬಿಮಲ್ಲಣ್ಣ 'ವಾತುಲಾಗಮ' ಟೀಕೆಯ ಚತುರ್ಥ ಪಟಲವಾದ ವರ್ಗಭೇದಪಟಲ' ದಲ್ಲಿನ ಶ್ಲೋಕ 24-ರ ಟೀಕೆಯಲ್ಲಿ ತಾನು ಈಮೊದಲೆ ರಚಿಸಿದ್ದ 'ಕಾಲಜ್ಞಾನತಂತ್ರಟೀಕೆ'ಯ ಬಗೆಗೆ ಉಲ್ಲೇಖಿಸಿದ್ದಾನೆ—

ಸೂಕ್ಷ್ಮತ್ವಾಧ್ಯೋಪರೂಪತ್ವಾನ್ನಾದಮಿತ್ಯಭಿಧೀಯತೆ
ಚರಾಚರಾದಿ ಭೂತೇಷು ಜೀವರೂಪಂ ಹೃದಿಸ್ಥಿತಂ
ತಸ್ಮಾದ್ಗುಹ್ಯಮಿದಂ ಪ್ರೋಕ್ತಂಪರಂ ಭಾವಾತ್ಪರಸ್ಥಿತಾ

॥ ಟೀಕು ॥ ಈ ವಾತುಲಾಗಮದಲ್ಲಿಯ ಕಾಲಜ್ಞಾನತಂತ್ರದಲ್ಲಿ ಶುದ್ಧ ಪ್ರಸಾದ ಬೀಜವಾದಂಥ ಕುಂಡಲಿನೀ ಶಕ್ತಿ ತ್ರಿಭೇದವಾಗಿಪ್ಪುದನು ನಿರೂಪಿಸಿಹೆನು. ಇದರಿಂದ ಸದ್ಯದಲ್ಲಿ ಗುಬ್ಬಿಯ ಮಲ್ಲಣ್ಣ 3 ಟೀಕಾಕೃತಿಗಳನ್ನು ಹಾಗೂ ವಚನ ಸಂಕಲನವೊಂದನ್ನು ಮಾಡಿರುವುದರ ಬಗೆಗೆ ತಿಳಿದುಬಂದಿದೆ. ಈತನ ಟೀಕಾಕೃತಿಯ ಪ್ರತಿಯನ್ನು ಹುಡುಕಬೇಕಾಗಿದೆ.

ಅಡಿ ಟಿಪ್ಪಣಿಗಳು

೧ ಕರ್ಣಾಟಕ ಕವಿಚರಿತೆ, ದ್ವಿತೀಯಸಂಪುಟ, ಬೆಂಗಳೂರು, 1919, ಪುಟ 101.

೨ ಗುಬ್ಬಿಯ ಮಲ್ಲಣ್ಣ ಮತ್ತು ತೋಂಟದ ಸಿದ್ಧೇಶ್ವರರ ಕಾಲವಿಚಾರ : ಪ್ರಬುದ್ಧಕರ್ಣಾಟಕ, 30.1, 1958, ಪುಟ 21.

೩ 1. ರಂತೆ, ಪುಟ 101-104.

೪ ಶಿವಣ್ಣ ಎಸ್ : ಗುಬ್ಬಿಮಲ್ಲಣ (1430)ನ ಏಕಾಕ್ಷರ ನಿಘಂಟು ಟೀಕೆ ಒಂದು ಟಿಪ್ಪಣಿ ಸಾಧನೆ, 2.3, 1973, ಪುಟ 150-52.

೫ ಕನಕಪುರದ ಶ್ರೀ ಬಿ. ನಂಜುಂಡಪ್ಪನವರ ಸ್ವಹಸ್ತಪ್ರತಿ. ಪುಟ 141.

ಎಸ್. ಶಿವಣ್ಣ

ಕುಟೀಚಕ (ಒಂದು ಟಿಪ್ಪಣಿ)

ಶ್ರೀ ಕುವೆಂಪು ಅವರು 'ಕುಟೀಚಕ' ಎಂಬ ಕವನ ಸಂಕಲನವನ್ನು ಪ್ರಕಟಿಸಿದ್ದಾರಷ್ಟೆ ! ಸಂಕಲನದ ಶೀರ್ಷಿಕೆಯನ್ನೇ ಹೊತ್ತ ಕವನದ ಅಡಿ ಟಿಪ್ಪಣಿಯಲ್ಲಿ ಕವಿ, ಶ್ರೀರಾಮಕೃಷ್ಣವಚನ ವೇದವನ್ನು ಉದ್ಧೃತ ಮಾಡಿದ್ದಾರೆ. ಅದು ಹೀಗಿದೆ :(ಪುಟ 54)- "ಸಾಧಕರಲ್ಲಿ ಎರಡು ವಿಧ : ಕುಟೀಚಕ ಬಹೂದಕ...ಸಾಧಕರಲ್ಲಿ ಕೆಲವರಿದ್ದಾರೆ. ಅವರು ಬಹಳ ತೀವ್ರವಾಗಿ ಯಾತ್ರೆ ಮಾಡುತ್ತಾರೆ; ಅವರು ಒಂದೇ ಜಾಗದಲ್ಲಿ ಬಹಳಕಾಲ ಇರಲಾರರು ; ಅವರು ಅನೇಕ ತೀರ್ಥಸ್ಥಾನಗಳ ನೀರನ್ನು ಕುಡಿಯಬೇಕು. ಅವರೇ ಬಹೂದಕರು. ತೀರ್ಥ ಸ್ಥಾನಗಳನ್ನೆಲ್ಲ ಸುತ್ತಿ ತೃಪ್ತರಾದಾಗ ಅವರು ಯಾವುದಾದರೂ ಒಂದು ಪ್ರದೇಶದಲ್ಲಿ ಕುಟೀರ ಕಟ್ಟಿಕೊಂಡು ವಾಸಿಸಲಾರಂಭಿಸುತ್ತಾರೆ. ಬಳಿಕ ನಿಶ್ಚಿಂತರಾಗಿ, ಚೇಷ್ಟಾ ಶೂನ್ಯರಾಗಿ ಭಗವಚ್ಚಿಂತನೆ ಮಾಡಲಾರಂಭಿಸುತ್ತಾರೆ. ಅವರೇ ಕುಟೀಚಕರು."

ಇಲ್ಲಿ ಸಂನ್ಯಾಸ ಧರ್ಮದ ಹಂತಗಳಲ್ಲಿ ಬಹೂದಕ ಎನ್ನುವುದೇ ಮೊದಲನೆಯದು, ಅನಂತರ ಕುಟೀಚಕ ಎಂದು ಗೃಹೀತ ಹಿಡಿದಿರುವಂತೆ ತೋರುತ್ತದೆ. ಅಲ್ಲದೆ ಬಹೂದಕಳಿನಿಗಿಂತ ಕುಟೀಚಕ ಶ್ರೇಷ್ಠ ಎಂದೂ ಧ್ವನಿತವಾಗುತ್ತದೆ. ಈ ಅರ್ಥದ ಅನುಸಂಧಾನದಿಂದಲೇ ಕವಿ, ''ಸಾಕು ಈ ಬಹೂದಕ ಆಗು ನೀ ಕುಟೀಚಕ, ಓ ನನ್ನ ಮಾನಸಾ" ಇತ್ಯಾದಿ ಬರೆಯುತ್ತಾರೆ.

'ಕುಟೀಚಕ' ಎಂಬ ಪಾರಿಭಾಷಿಕ ಶಬ್ದಕ್ಕೆ ಶಾಸ್ತ್ರದ ವ್ಯಾಖ್ಯಾನ ಬೇರೆಯೇ ಇರುವಂತೆ ತೋರುತ್ತದೆ. ಸಂನ್ಯಾಸದಲ್ಲಿ ಕುಟೀಚಕ, ಬಹೂದಕ ಹಂಸ, ಪರಮಹಂಸ ಎಂದು ನಾಲ್ಕು ಹಂತಗಳು. ತನ್ನ ಕುಟೀರದಲ್ಲೇ ನೆಲಸಿ, (ಕುಟ್ಯಾಂ ಚರತಿ) ಸಂಸಾರದ ಜವಾಬ್ದಾರಿಯನ್ನು ಮಗನಿಗೆ ವಹಿಸಿ ತನ್ನ ಸರ್ವಕಾಲವನ್ನೂ ಅಧ್ಯಾತ್ಮ ಸಾಧನೆಗೆ ವಿನಿಯೋಗಿಸುವವನು ಕುಟೀಚಕ. ಬಹೂದಕನಾದರೋ ಈ ಕುಟೀರದ ಹಂಬಲವನ್ನೂ ತೊರೆದು ತೀರ್ಥಯಾತ್ರಾ ಸ್ಥಳಗಳನ್ನು ಸಂದರ್ಶಿಸುತ್ತಾ ಸಾಧನೆಯಲ್ಲಿ ನಿರತನಾದ ಪರಿವ್ರಾಜಕ. ವೈರಾಗ್ಯದ ತೀವ್ರತೆಯಲ್ಲಿ ಇದು ಕುಟೀಚಕನಿಗಿಂತ ಮೇಲಿನ ಹಂತ. ಏರುವೆಯ ಗತಿಯಲ್ಲಿ ಮತ್ತೂ ಮೇಲಿನವು ಹಂಸ-ಪರಮ ಹಂಸ, ಎಂಬ ಸಿದ್ಧರದು. ಮಹಾಭಾರತದ ಈ ಶ್ಲೋಕವನ್ನು ಗಮನಿಸಬಹುದು :

> "ಚತುರ್ವಿಧಾ ಭಿಕ್ಷವಸ್ತೇ ಕುಟೀಚಕ ಬಹೂದಕೌ
> ಹಂಸ : ಪರಮಹಂಸಶ್ಚ ಯೋಯ : ಪಶ್ಚಾತ್ ಸ ಉತ್ತಮ :॥" ।

ಇಲ್ಲಿ ''ಪಶ್ಚಾತ್ ಸ ಉತ್ತಮ" : ಎಂಬುದು ಗಮನಿಸಬೇಕಾದ ಮಾತು. ಸಂನ್ಯಾಸದ ವಿವಿಧ ಹಂತಗಳನ್ನು ಶ್ಲೋಕ ಸೂಚಿಸುವುದಲ್ಲದೇ ಅವುಗಳಲ್ಲಿ ಕ್ರಮವಾದ ಏರಿಕೆಯ ಹಂತಗಳನ್ನೂ ನಿರ್ದೇಶಿಸುತ್ತದೆ. ಈ ಪ್ರಕಾರ ಕುಟೀಚಕ ಮೊದಲಹಂತದ ಸಾಧಕ, ಬಹೂದಕ ಅನಂತರದವನು.

ಕವಿಯು ''ಕುಟೀಚಕ'' ಕವನದಲ್ಲಿ ಶಾಸ್ತ್ರದ ಈ ಅರ್ಥ ತಿರುವು ಮುರುವಾದಂತೆ ತೋರುತ್ತದೆ.

[1. ವಿವರಣೆಗೆ Sanskrit–English Dictionary–V. S. APte– ಪುಟ 152 ನೋಡಬಹುದು]

— ಎ. ಎಸ್. ವೇಣುಗೋಪಾಲ ರಾವ್

'ನಾಗವಾಸ' ಪಾರಿಭಾಷಿಕ ಪದದ ಪರಿಚಯ

ಉತ್ಖನನ

ಪ್ರಾಚೀನ ಅನೇಕ ಆಚಾರ ವಿಚಾರಗಳು, ವಸ್ತು ಒಡವೆಗಳು ಮಾನವನ ಸ್ಮೃತಿ ವಸುಂಧರೆಯಿಂದ ಮಾಯವಾಗುತ್ತಿವೆ, ಭೂಮಿಯಿಂದ ಅಗೆದು ತೆಗೆದ

ಅವಶೇಷಗಳು ಮಾನವ ಕುಲಗಳನೇಕ ಒಂದಾನೊಂದು ಕಾಲದಲ್ಲಿ ಅಸ್ತಿತ್ವದಲ್ಲಿದ್ದುದನ್ನು ತಿಳಿಸುವಂತೆ, ಆ ಜನಾಂಗಗಳು ಬದುಕಲು ಬಳಸುತ್ತಿದ್ದ ಸಾಧನ ಸಾಮಗ್ರಿಗಳ ಬಗ್ಗೆ ಕಲೆ ಭಾಷೆ ನಗರ ವಿಜ್ಞಾನಗಳ ಬಗ್ಗೆ ತಿಳಿಸುತ್ತವೆ. ಮಣ್ಣು ಪಾಲಾಗಿ ಹೋಗಿರುವ ಪ್ರಾಚೀನರ ಕಥೆಗಳನ್ನು ಅವಶೇಷಗಳು ಕಿವಿಗಳು ಗಡಚಿಕ್ಕುವಂತೆ ಘೋಷಿಸುತ್ತಲಿವೆ. ಪ್ರಾಚೀನ ಸಾಹಿತ್ಯ ವಸುಂಧರೆಯು ಇಂಥ ಅನೇಕ ವಿಷಯಗಳನ್ನು ಹುದುಗಿಸಿಟ್ಟುಕೊಂಡುದುಂಟು. ಕೆಲವರ ಕಣ್ಣುಗಳು ನೀರವ ಶಬ್ದಗಳ ಮೌನಮುದ್ರೆಯನ್ನೊಡೆದು, ಅಲ್ಲಿ ಹೊತ್ತುಕೊಂಡಿರುವ ನಿಧಿ ನಿಧಾನವನ್ನು ಹೊರತೆಗೆಯುತ್ತವೆ. ಇದನ್ನು ಶ್ವೇತಾಶ್ವತರ ಉಪನಿಷತ್ತಿನ (2.1) ಮಾತಿನಲ್ಲಿ ಹೇಳಬೇಕೆಂದರೆ ಪೃಥ್ವಿಯಿಂದ ಅಗ್ನಿಯನ್ನು ಮೇಲಕ್ಕೆತ್ತುವುದು, ಇಂಥ ಕಾರ್ಯದಿಂದ ಪ್ರಾಚೀನ ಮಾನವನ ಅಂತರಂಗದ ಸಂಪದವು ತನ್ನ ಸಾವಿರ ಮುಖಗಳನ್ನು ತೋರಿಸುತ್ತದೆ. ಇದು, ಪ್ರಾಚೀನ ಸಾಹಿತ್ಯ ವಸುಂಧರೆಯ ಉತ್ಖನನ. ಮನೋವಿಜ್ಞಾನಿಗಳು, ಭಾಷಾವಿಜ್ಞಾನಿಗಳು, ಅನುಭಾವ ವಿಜ್ಞಾನಿಗಳು, ತತ್ತ್ವಜ್ಞಾನಿಗಳು, ಚರಿತ್ರಕೋವಿದರು, ಸೌಂದರ್ಯ ಮೀಮಾಂಸಕರು, ಹೀಗೆ ನಾನಾ ವಿಜ್ಞಾನಿಗಳು ಇಂದು ಈ ಉತ್ಖನನದ ಕಾರ್ಯದಲ್ಲಿ ನಿರತರಾಗಿದ್ದಾರೆ. ಇವರೆಲ್ಲರ ಪ್ರಯತ್ನದಿಂದ ಜ್ಞಾನವಿಜ್ಞಾನಗಳ ಅಭಿವೃದ್ಧಿ, ಮತ್ತು ಪ್ರತಿಷ್ಠಾಪನೆ. ಈ ಕಾರ್ಯದಲ್ಲಿ ಒಬ್ಬೊಬ್ಬರದೂ ಒಂದು ಪಾಲು. ಪ್ರಸ್ತುತ ಲೇಖನವು ಸಮಯದ ಮಾತೊಂದರ ಮೌನಮುದ್ರೆಯನೊಡೆವ ಕಾರ್ಯ ಕೈಕೊಂಡಿದೆ.

ನಾಗವಾಸ

ಶುದ್ಧ ಶೈವ ಮತ್ತು ವೀರಶೈವರ ಧಾರ್ಮಿಕ ಚಿಹ್ನೆಗಳಲ್ಲಿ ಇಷ್ಟಲಿಂಗವೂ ಒಂದು. ಇಷ್ಟ ಲಿಂಗವು ಅವರ ಆಧ್ಯಾತ್ಮ ವಿಜ್ಞಾನ ಅಥವ ಕರಸ್ಥಲ ಜ್ಯೋತಿ ವಿಜ್ಞಾನವ ಕರಣ ಮತ್ತು ಸಿದ್ಧಿ, ಉಳಿದ ಶೈವ ಸಂಪ್ರದಾಯಗಳಿಂದ ಇವರೀರ್ವರನ್ನೂ ಪ್ರತ್ಯೇಕಿಸುವ ವಿಶಿಷ್ಟ ವಿಜ್ಞಾನ ತತ್ತ್ವ. ಇದರ ಆಕರ ಸಾಹಿತ್ಯವೆಂದರೆ ಆಗಮಗಳು, ವಚನಗಳು, ಮತ್ತು ನಿಜಗುಣರ ವಿವೇಕ ಚಿಂತಾಮಣಿ, ಹಾಗೂ ಸಮಯದ–ಮಾತು. ಶುದ್ಧ ಶೈವರು, ವೀರಶೈವರು ಇಷ್ಟಲಿಂಗಿಗಳೆಂದು ಆಗಮಗಳು, ವಚನಗಳು, ನಿಜಗುಣರು ತಿಳಿಸುತ್ತಾರೆ.[1] ಇಷ್ಟಲಿಂಗ ಪದದ ತಾತ್ತ್ವಿಕ ಅರ್ಥವು ಶುದ್ಧಶೈವರಿಂದ ಭಿನ್ನವಾಗಿದೆ.[2] ಕಾರಣ ಇವರೀರ್ವರ ಇಷ್ಟಲಿಂಗಕ್ಕಿರುವ ಅರ್ಥವು ಭಿನ್ನ ಭಿನ್ನ. ಇದು ಆ ಶಬ್ದದ ಬಳಕೆಯಲ್ಲಿಯ ಅಂತರವನ್ನು ತೋರಿಸುತ್ತದೆ. ವಚನಕಾರರು ಇಷ್ಟ ಲಿಂಗ ಧಾರಣವನ್ನು ಕಡ್ಡಾಯಗೊಳಿಸಿದರು.

---

1. ಡಾ. ವ್ಹಿ. ಎಸ್. ಕಂಬಿ. ವೀರಶೈವ ದರ್ಶನ ಮೀಮಾಂಸೆ. ಸಂ. 1 ಪು. 46, 48 ಕುಮಾರೇಶ ಗ್ರಂಥ ಮಾಲೆ. ಧಾರವಾಡ (1973)
2. ಡಾ. ಫ್ಹಿ. ಎಸ್. ಕಂಬಿ —ಅದೇ— ಪು. ೩೨-40.

ಜನನದ ಆರಂಭದಿಂದ ಸಮಾಧಿ ಸ್ಥಿತಿಯಲ್ಲಿಯೂ ಆತನ ಜೊತೆಯಲ್ಲಿರುತ್ತದೆ. ವೀರ ಶೈವರು ಗರ್ಭದಲ್ಲಿಯ ಕೂಸಿಗೇ ಲಿಂಗಧಾರಣವನ್ನು ಮಾಡುವರು. ಜನನದ ನಂತರ ವೀರಶೈವ ಮಗುವಿಗೆ ಲಿಂಗಧಾರಣವನ್ನು ಮಾಡುವರು. ಅವರಿಗೆ ಧಾರಣ ಮಾಡಿದ ಇಷ್ಟಲಿಂಗವು ಗೋಪಿನಿಂದ (ಹುರಿಕಟ್ಟಾದ ದಾರದಿಂದ) ಹೆಣೆದದ್ದಾಗಲಿ ತಂಥೆ ಧರಿಸಿದ್ದಾಗಲಿ ಇದ್ದು; ಅದು ಕೊರಳಲ್ಲಿ ಧರಿಸಲು ಅನುಕೂಲವುಳ್ಳದಾಗಿರುತ್ತದೆ. ವಯಸ್ಕರೂ ಸಹಿತ ಇಂಥ ಲಿಂಗವನ್ನು ಕೊರಳಲ್ಲಿ ಧರಿಸಿರುವುದನ್ನು ಬೆಳಗಾಂವ ಮತ್ತು ಧಾರವಾಡ ಜಿಲ್ಲೆಗಳಲ್ಲಿ ನೋಡಬಹುದು. ಇನ್ನು ಕೆಲವರು ಕರಡಿಗೆಯಲ್ಲಿಟ್ಟುಕೊಂಡಾಗಲಿ; ವಸ್ತ್ರದಲ್ಲಿಟ್ಟುಕೊಂಡಾಗಲಿ ಕೊರಳಲ್ಲಿ ಧರಿಸಿಕೊಳ್ಳುವರು. ಕರಡಿಗೆ ಅಥವ ವಸ್ತ್ರಧರಿಸುವ ಈ ಇಷ್ಟಲಿಂಗದ ರಚನೆ, ಕೊರಳಲ್ಲಿ ಧರಿಸಲು ಸಿದ್ಧಗೊಳಿಸಿದ ಇಷ್ಟಲಿಂಗದರಚನೆ ಭಿನ್ನಭಿನ್ನವಾಗಿರುತ್ತವೆ. ಕರಡಿಗೆಯಲ್ಲಾಗಲಿ, ಬಟ್ಟೆಯಲ್ಲಾಗಲಿ ಇಡಲು ಮಾಡಿದ ಇಷ್ಟಲಿಂಗವನ್ನು ನಾಗವಾಸ ಎಂದು ಹೆಸರಿಸುವದಿಲ್ಲ. ಮಕ್ಕಳು, ಹಾಗೂ ಕೆಲವು ವಯಸ್ಕರು ಕೊರಳಲ್ಲಿ ಧರಿಸುವ ಲಿಂಗವನ್ನು ನಾಗವಾಸ ಎಂದು ಕರೆಯುವರು. ಅಲ್ಲಮ ಪ್ರಭುಗಳು ತಮ್ಮ ಒಂದು ವಚನದಲ್ಲಿ ಶಿವಯೋಗ ಸಿದ್ಧಿ ಸಂಪಾದಿಸಿದವರು. ಕೊರಳಲ್ಲಿ ಇಷ್ಟಲಿಂಗವನ್ನು ಅಂದರೆ ನಾಗವಾಸವನ್ನು–ಧರಿಸುತ್ತಿದ್ದರೆಂದು ಹೇಳಲು : "ಕೊರಳಲ್ಲಿ ನಾಗವತ್ತಿಗೆ ಇದೇಕೋ ಶರಣಂಗೆ ಗುಹೇಶ್ವರಾ ?" ಎಂದು ಪ್ರಶ್ನಿಸಿದ ಮಾತಿನಿಂದ ತಿಳಿದು ಬರುತ್ತದೆ. ನಾಗವಾಸ ಅಥವಾ ನಾಗವತ್ತಿಗೆ ಎಂದು ಇಷ್ಟಲಿಂಗವನ್ನು ಹೆಸರಿಸಿದುದರ ಔಚಿತ್ಯವೇನು ? ಎಂಬುದನ್ನು ಉತ್ತರಿಸಬೇಕಾಗುತ್ತದೆ.

ವಿವರಣೆ

1) ಲಿಂಗಧಾರಿಗಳು ಲಿಂಗವನ್ನು ಎರಡು ರೀತಿಯಿಂದ ಧರಿಸುವರು 1) ಲಿಂಗವನ್ನು ಶುದ್ಧ ಬಟ್ಟೆಯಲ್ಲಿಟ್ಟು ಅದಕ್ಕೆ ಕಂತೆ ಧರಿಸುವರು. ಅದು ಒಣಗಿದ ಮೇಲೆ, ಅದನ್ನು ಹುದುಗ–ಪಾವಡದಲ್ಲಿಟ್ಟು, ಕರಡಿಗೆಯಲ್ಲೊ, ಇಲ್ಲವೆ ವಸ್ತ್ರದಲ್ಲೊ ಇಟ್ಟು ಕೊರಳಲ್ಲಿ ಧರಿಸುವರು. 2) ಲಿಂಗವನ್ನು ನಾಗವಾಸದಲ್ಲಿಟ್ಟು, ಶುದ್ಧ ಬಟ್ಟೆಯನ್ನು ಹೊದಿಸಿ, ಹೊಲಿದು, ನಂತರ ಗೋಪಿನದಾರದಿಂದ ಹೆಣೆದು ಶಿವದಾರದಿಂದ ಕಟ್ಟಿ ಕೊರಳಲ್ಲಿ ಧರಿಸುವರು. ಇಲ್ಲಿ ಕರಡಿಗೆ ಅಥವಾ ವಸ್ತ್ರದ ಉಪಯೋಗ ವಿರುವುದಿಲ್ಲ. ಈ ಬಗೆಯ ಲಿಂಗಧಾರಣದ ಎರಡು ಬಗೆಯ ರೂಢಿಗಳು ಬೆಳಗಾಂವ ಮತ್ತು ಧಾರವಾಡ ಜಿಲ್ಲೆಯ ವೀರಶೈವರಲ್ಲುಂಟು. ಕರ್ನಾಟಕದ ಇನ್ನುಳಿದ ಜಿಲ್ಲೆಗಳಲ್ಲಿ ಈ ರೂಢಿಯು ಇದ್ದರೂ ಇರಬಹುದು. ಈ ರೂಢಿಯುವರಿಗೆ ಇಷ್ಟಲಿಂಗ ಧಾರಣೆಯೆಂದರೆ ನಾಗವಾಸಧಾರಣೆ.

2) ಇಷ್ಟ ಲಿಂಗವನ್ನು ನಾಗವಾಸವೆಂದು ಏಕೆ ಹೆಸರಿಸಿದರೆಂಬುದು ವಿಚಾರಾರ್ಹ ಪ್ರಶ್ನೆ. ಈ ಪ್ರಶ್ನೆಗೆ ಉತ್ತರವನ್ನು ನಾಗವಾಸವನ್ನು ಸಿದ್ಧಗೊಳಿಸಿದ

ವಿಧಾನದಿಂದ ವಾದವನ್ನು ಮಂಡಿಸಬಹುದು. ಇದು ಒಂದು ರೀತಿ. ಇನ್ನು ಯೋಗ ವಿಜ್ಞಾನದಿಂದಲೂ ವಾದವನ್ನು ಮಂಡಿಸಬಹುದು. ಇದು ಎರಡನೆಯ ರೀತಿ. ಇದರಂತೆಯೇ ಆಧ್ಯಾತ್ಮ ಶಾಸ್ತ್ರಕ್ಕನುಸರಿಸಿಯೂ ವಾದವನ್ನು ಮಂಡಿಸಬಹುದು. ಈ ವಿಧವಾದ ವಾದಗಳನ್ನು ಉಪಕರಣವಾದ, ಯೋಗವಿಜ್ಞಾನವಾದ ಮತ್ತು ವಸ್ತುವಿಜ್ಞಾನವಾದ ಎಂದು ಹೆಸರಿಸಬಹುದು.

ಅ) ಉಪಕರಣವಾದ

ನಾಗವಾಸ (ಕೊರಳಲ್ಲಿ ಕಟ್ಟಿಕೊಳ್ಳುವ ಇಷ್ಟಲಿಂಗ)ವನ್ನು ಸಿದ್ಧಪಡಿಸುವ ವಸ್ತುಗಳು, ಮತ್ತು ವಿಧಾನವು ಇಂತಿವೆ–ಲಿಂಗ, ಶುದ್ಧ ಬಟ್ಟೆಯ ತುಂಡು" 2 ಚೌರಸಾಕಾರವದ್ದು, ಬೇಕಾದಷ್ಟು ಗೋಪಿನದಾರ, ಸೂಜಿ ಹಾಗೂ ಎರಡು ಸೆಂಟಿ ಮೀಟರ ಸುತ್ತಳತೆಯ ತಾಮ್ರ ಇಲ್ಲವೆ ಬೆಳ್ಳಿಯ ತಂತಿ 4'' ಉದ್ದಳತೆಯದು. ಇವಿಷ್ಟು ಬೇಕಾದ ಉಪಕರಣಗಳು. ಇವುಗಳನ್ನು ಕೋಷ್ಟಕ ರೂಪದಲ್ಲಿ ಬರೆದು, ಅವುಗಳ ಮುಂದೆ ಸಾಧ್ಯವಿದ್ದಲ್ಲಿ ಆಯಾ ಹಂತಗಳ ಚಿತ್ರ ತೆಗೆದು ತೋರಿಸುವದು.

1) ಲಿಂಗ
2) ತಾಮ್ರ ಇಲ್ಲವೆ ಬೆಳ್ಳಿಯ ತಂತಿಯನ್ನು ನಾಗವಾಸ ಆಕಾರಗೊಳಿಸಿ ಲಿಂಗವನ್ನಿಡಲು ಅಣಿಗೊಳಿಸುವುದು.
3) ಈ ನಾಗಾಕಾರದಲ್ಲಿ ಲಿಂಗವನ್ನು ವಾಸಗೊಳಿಸಿದಾಗ
4) ಲಿಂಗವಿರುವ ನಾಗಾಕಾರದ ತಂತಿಗೆ ಬಟ್ಟೆ ಹೊದಿಸಿದಾಗ
5) ನಾಗವಾಸದಲ್ಲಿಯ ಬಟ್ಟೆ ಧರಿಸಿದ ಲಿಂಗವನ್ನು ಗೋಪಿನದಾರದಿಂದ ಹೆಣೆದಾಗ

ಈಗ ನಾಗವಾಸವು ಶಿವದಾರವನ್ನು ಪೋಣಿಸಿ ಧರಿಸಲು ಸಿದ್ಧವಾಯಿತು. ಈ ನಾಗವಾಸವನ್ನು ಗೋಪಿನ ದಾರದಿಂದ ಹೆಣೆಯುದಲೇ ಕಂಥೆಧರಿಸಿ ಕೊರಳಲ್ಲಿ ನಾಗವಾಸದಂತೆಯೇ ಕಟ್ಟಿಕೊಳ್ಳುವರು. ನಾಗಕಾರದ ವಾಸದಲ್ಲಿ ಲಿಂಗದ ವಾಸವಾಗಿರುವುದು ಇದರ ವೈಶಿಷ್ಟ್ಯ. ಇಂಥ ನಾಗವಾಸ ಧಾರಣೆಯೆಂದರೆ ಇಷ್ಟ ಲಿಂಗಧಾರಣೆ. ತಂತಿಯಿಂದ ಸಿದ್ಧಗೊಳಿಸಿದ ನಾಗಾಕಾರದ ವಾಸದಲ್ಲಿ ಲಿಂಗವಿರುವುದರಿಂದ, ಬಳಕೆಗನುಗುಣವಾಗಿ ನಾಗವಾಸ ಎಂಬ ಹೆಸರು ಇಷ್ಟಲಿಂಗ ಎಂಬ ಹೆಸರಿನ ಸಂವಾದಿ ಹೆಸರಾಗಿ ರೂಢಿಯಲ್ಲಿರುವುದು ಕಂಡುಬರುತ್ತದೆ. ಮಗುವಿಗೆ ನಾಗವಾಸ ಬೇಡವೆ ? ಎಂದರೆ ವೀರಶೈವ ಮಗು ಇಷ್ಟಲಿಂಗವನ್ನು ಕೊರಳಲ್ಲಿ ಧರಿಸಲು ಬೇಕಾದ ಕಾರಣ ಕರಡಿಗೆ, ವಸ್ತ್ರವಿಲ್ಲದಿದ್ದರೂ ನಾಗವಾಸವಾದರು ಬೇಕು ಎಂದರ್ಥ. ಕುಟೀರವಾಸ, ನಗರವಾಸ ಮುಂತಾದ ಪದಗಳಂತೆ ನಾಗವಾಸ ಪದ

ವಿದೆ. ಉಪಕರಣದ ಹೆಸರಿನಿಂದ ನಾಗವಾಸ ಎಂಬ ಪದವು ಇಷ್ಟಲಿಂಗದ ಪರ್ಯಾಯ ಪದಲಾಗಿದೆ.

ಆ) ಯೋಗ ವಿಜ್ಞಾನವಾದ

ಈ ಮೊದಲು ಮಂಡಿಸಿದ ವಾದವು (argument) ನಾಗವಾಸವೆಂಬುದು ಉಪಕರಣದಿಂದ ಬಂದುದೆಂದು ಗೊತ್ತಾಯಿತು. ಈ ನಾಗವಾಸವನ್ನು ಯೋಗ ವಿಜ್ಞಾನದ ದೃಷ್ಟಿಯಿಂದಲೂ ನೋಡುವುದು ಪ್ರಯೋಜನಕಾರಿಯೆಂದು ತಿಳಿದು ಬರುತ್ತದೆ. ಯೋಗಶಾಸ್ತ್ರದ ಹಲವಾರು ಗ್ರಂಥಗಳಲ್ಲಿ ಕುಂಡಿಲಿನಿಸರ್ಪ (ನಾಗ) ಬಳಕೆಯಲ್ಲಿದೆ. ಶೈವರ ಅಥವಾ ವೀರಶೈವರ ಯೋಗ ವಿಜ್ಞಾನದ ಪ್ರಕಾರ ಈ ನಾಗವು ಆಧಾರ ಚಕ್ರದಲ್ಲಿರುವ ಆಚಾರ ಲಿಂಗದ ಸುತ್ತಲು ಸುರಳಿ ಹಾಕಿಕೊಂಡಿರುವದೆಂದು ತಿಳಿದು ಬರುತ್ತದೆ. ಇಲ್ಲಿ ಲಿಂಗನ ವಾಸವು ನಾಗನ ಸುರಳಿಯಲ್ಲಿ. ಅಂದರೆ ಲಿಂಗನ ವಾಸವು ನಾಗವಾಸವು, ಅಂತರಂಗದ ಈ ನಾಗವಾಸವನ್ನು ಬಹಿರಂಗಕ್ಕೆ ತಂದು ಧರಿಸಿದಾಗ ಮೇಲೆ ಚಿತ್ರಿಸಿದ ಚಿತ್ರದ ನಂ. 2 ರಲ್ಲಿಯಂತೆ ನಾಗವಾಸವು ಸಿದ್ಧಗೊಂಡಿರುತ್ತದೆ. ಯೋಗವಿಜ್ಞಾನದ ಸತ್ಯವನ್ನು ಧರ್ಮ ವಿಜ್ಞಾನದ ಚಿಹ್ನೆಯಾಗಿ ಮಾರ್ಪಡಿಸಿ, ಆ ಅಂತರಂಗದ ಸತ್ಯವನ್ನು ಸಂಪಾದಿಸಲು ಸಾಧನವನ್ನಾಗಿ ಮಾಡಿಕೊಂಡುದೇ ನಾಗವಾಸ. ಈಗ ನಾಗವಾಸ ಎಂಬುದು ಅರ್ಥಪೂರ್ಣ ಹೆಸರೆಂಬುದು ಗೊತ್ತಾಗುತ್ತದೆ.

ಇ) ವಸ್ತು ವಿಜ್ಞಾನವಾದ

ಮೊದಲಿನವೆರಡು ಅನುಕ್ರಮವಾಗಿ ಉಪಕರಣವಾದ, ಮತ್ತು ಯೋಗ ವಿಜ್ಞಾನವಾದಗಳಾಗಿದ್ದರೆ ಮೂರನೆಯದು ವಸ್ತುವಿಜ್ಞಾನವಾದವಾಗಿದೆ. ಭಕ್ತನ ಅಂದರೆ ದೀಕ್ಷಾರ್ಥಿಯ ಸಹಸ್ರಾರದಲ್ಲಿಯ ಚಿಲ್ಲಿಂಗವನ್ನು ಕರಸ್ಥಲಕ್ಕೆ ತಂದು ಕೊಡಲಾಗುವದು. ದೀಕ್ಷಾಸಮಯದಲ್ಲಿ ಈ ಚಿಲ್ಲಿಂಗದಲ್ಲಿ ಪರಾಶಕ್ತಿ–ಕುಂಡಿಲಿನಿ ನಾಗ–ಸಮರಸ ಭಾವದಲ್ಲಿರುತ್ತದೆ, ಅಂದರೆ ಚಿಲ್ಲಿಂಗನು ಶಕ್ತಿ ಸಮೇತನಾಗಿ ಹಸ್ತದಲ್ಲಿರುವನು. ಯೋಗ ವಿಜ್ಞಾನವು ತೋರಿಸಿದ ಸತ್ಯವನ್ನೇ ವಸ್ತು ವಿಜ್ಞಾನ (Metaphysics)ವು ಬೋಧಿಸುತ್ತದೆ. ಶ್ವೇತಾಶ್ವತರ ಉಪನಿಷತ್ತು ಇದನ್ನು ಎತ್ತಿ ಹಿಡಿಯುವುದು ;[3] ವಚನ ಶಾಸ್ತ್ರವೂ ಇದನ್ನೇ ತಿಳಿಸುವುದು. ಈ ನಾಗನು ಬಯಲರೂಪ ಬಿಟ್ಟು ಪೂಜೆಗೊಳ್ಳಲು ಅಂದರೆ ಪರಶಿವನ ಸೃಷ್ಟಿಯಾಗಲು ಆಧಾರ. ಪರಶಿವನು ಶಕ್ತಿ ಸಮೇತನು ಎಂಬುದನ್ನೇ ನಾಗವಾಸ ಎಂಬ ಪದವು ತಿಳಿಸುತ್ತದೆ

3. ಸ್ವಾಮಿ ಆದಿದೇವಾನಂದ, ಶ್ವೇತಾಶ್ವತರೋಪನಿಷತ್ 1,3 ಶ್ರೀರಾಮಕೃಷ್ಣಾಶ್ರಮ, ಮೈಸೂರು 1962.

4. ಡಾ. ಪಿ. ಜಿ. ಹಳಕಟ್ಟಿ, ಶೂನ್ಯ ಸಂಪಾದನೆ ವಿಜಾಪುರ 1930.

ಶಕ್ತಿ ವಿಶಿಷ್ಟ ಪರಶಿವನೆಂಬ ಸಿದ್ಧಾಂತವನ್ನು ನಾಗವಾಸ ಪದವು ಬೋಧಿಸುತ್ತದೆ ಅತ್ಯಂತ ಸೂತ್ರರೂಪದಿಂದ.

ಮುಕ್ತಾಯ

ಧಾರ್ಮಿಕ ಚಿಹ್ನೆ ಇಷ್ಟಲಿಂಗವಾಗಿ, ಯೋಗದೃಷ್ಟಿಯಿಂದ ಪ್ರಾಣ ಲಿಂಗವಾಗಿ (ಅಗ್ನಿ ಲಿಂಗವಾಗಿ), ತತ್ತ್ವಜ್ಞಾನ ದೃಷ್ಟಿಯಿಂದ ಭಾವಲಿಂಗವಾಗಿರುವ ಪರಶಿವತತ್ತ್ವ ಸ್ವರೂಪಗಳ ನಾನಾ ಅರ್ಥಗಳನ್ನು ಗರ್ಭೀಕರಿಸಿಕೊಂಡಿರುವ ಕೆನಾಗವಾಸ ಪದವು ಎಂದು ಮೇಲಿನ ವಿವರಣೆಯಿಂದ ಸ್ಪಷ್ಟವಾಗುತ್ತದೆ. ನಾಗವಾಸದಂಥ ಪದವನ್ನು ಅಲ್ಲಮಪ್ರಭುದೇವರು ಒಂದು ವಚನದಲ್ಲಿ ಬಳಸಿದ್ದು, ಅದು ಇಂತಿದೆ.

ವಾದಕದ ಉತ್ಪತ್ತಿಯಾದ ಶತವತ್ರದಂತೆ–
ಸಂಸಾರ ಸಾಗರವ ಹೊಗದಿರಬೇಕು.
ಕಾಯವೇ ಪೀಠ, ಮನವೆ ಲಿಂಗವಾದಡೆ,
ಕೊರಳಲ್ಲಿ ನಾಗವತ್ತಿಗೆ ಇದೇಕೋ ಕರಣಂಗೆ ಗುಹೇಶ್ವರ ?

ಪ್ರಭುದೇವರು ಬಳಸಿದ ನಾಗವತ್ತಿಗೆ, ಬೆಳಗಾಂವ ಧಾರವಾಡ ಜಿಲ್ಲೆಗಳಲ್ಲಿ ಬಳಕೆಯಲ್ಲಿರುವ ಸಮಯದ ಪದ ನಾಗವಾಸ ಎಂಬವುಗಳು ಪ್ರಾದೇಶಿಕ ಭಿನ್ನತೆ ತೋರಿಸುತ್ತವೆ. ಅವುಗಳ ಅರ್ಥ ಇಷ್ಟಲಿಂಗವೆಂದೇ ಇರುತ್ತದೆ.

ಇಲ್ಲಿ ಬಳಸಿದ ಮೂರುಬಗೆಯ ವಾದಗಳು - ಉಪಕರಣವಾದ, ಯೋಗವಿಜ್ಞಾನವಾದ ಮತ್ತು ವಸ್ತುವಿಜ್ಞಾನವಾದಗಳು—ಸ್ಥೂಲರೂಪದ ವಿವರಣೆ, ಸೂಕ್ಷ್ಮರೂಪದ ವಿವರಣೆ ಮತ್ತು ಕಾರಣ ರೂಪದ ವಿವರಣೆಗಳಾಗಿ ಒಂದರಿಂದೊಂದು ಉಪರಿಯಾಗಿವೆ. ನಾಗವಾಸ ಪದದಲ್ಲಿ ಈ ಮೂರೂ ತತ್ತ್ವಗಳ ಅರ್ಥವು ಹುದುಗಿಕೊಂಡಿದೆ. ಈ ಮೂರೂ ವಾದಗಳು ನಾಗವಾಸ ಪದವನ್ನು ಸರಿಯಾಗಿ ಅರ್ಥೈಸುವಲ್ಲಿ ಯಶಸ್ವಿಯಾಗಿವೆಯೆಂದು ತೋರುತ್ತದೆ. ಮರೆತು ಹೋಗುತ್ತಿರುವ ನಾಗವಾಸ ಪದವು ಅತ್ಯಂತ ಅಪರೂಪದ ಹಾಗೂ ಔಚಿತ್ಯಮಯವಾದ ಪದವೆಂದು ಸ್ಪಷ್ಟವಾಗಿದೆ. ಪ್ರಾಜ್ಞ ಸಂಶೋಧಕರ ಗಮನವನ್ನು ಈ ಲೇಖನವು ಸೆಳೆದಿದ್ದಾದರೆ ಈ ಪರಿಚಯದ ಪ್ರಯತ್ನ ಸಾರ್ಥಕವಾಗುತ್ತದೆ.

ಎ. ಎಸ್. ಕಂಬಿ

---

5 ಡಾ. ಎಂ. ಎಸ್. ಸುಂಕಾಪುರ, ಡಾ. ಕಂಬಿಪ್ಪಿ ಎಸ್. ಡಾ. ವೀರಣ್ಣಾ ರಾಜೂರ, ಪ್ರಸಾದಿಸ್ಥಲದ ವಚನಗಳು, ಪು 345 ವ. 1124. ಕ. ವಿ. ವಿ., ಪಾವಟೆನಗರ ಧಾರವಾಡ-1977

ಈ ಸಂಚಿಕೆಯ ಲೇಖಕರು

ಯಶವಂತ ಡೋಂಗ್ರೆ	ಅಧ್ಯಾಪಕರು, ವಾಣಿಜ್ಯ ವಿಭಾಗ ಮಂಗಳೂರು ವಿಶ್ವವಿದ್ಯಾಲಯ ಮಂಗಳ ಗಂಗೊತ್ರಿ (ದ. ಕನ್ನಡ)
ಹನುಮಂತ	ಅಧ್ಯಾಪಕರು, ಕನ್ನಡ ವಿಭಾಗ ಸರ್ಕಾರಿ ಕಾಲೇಜು, ಚಿತ್ರದುರ್ಗ
ಜಿ. ಎಸ್. ಶಿವರುದ್ರಪ್ಪ	ಪ್ರಾಧ್ಯಾಪಕರು ಕನ್ನಡ ಅಧ್ಯಯನ ಕೇಂದ್ರ ಜ್ಞಾನಭಾರತಿ, ಬೆಂಗಳೂರು 56
ಎಸ್. ಎಸ್. ಹಿರೇಮಠ	ಕನ್ನಡ ವಿಭಾಗ, ವಿಜಯನಗರ ಕಾಲೇಜು ಹೊಸಪೇಟೆ
ಎಸ್. ಎನ್. ಶಿವರುದ್ರಸ್ವಾಮಿ	ಅಧ್ಯಾಪಕರು, ಚರಿತ್ರೆ ವಿಭಾಗ ಕಲ್ಪತರು ಕಾಲೇಜು, ತಿಪಟೂರು
ಎಂ. ಚಿದಾನಂದಮೂರ್ತಿ	ನಿರ್ದೇಶಕರು, ಕನ್ನಡ ಅಧ್ಯಯನ ಕೇಂದ್ರ ಜ್ಞಾನಭಾರತಿ, ಬೆಂಗಳೂರು 56
ಶ್ಯಾಮಸುಂದರ ಕೋಚಿ	ಸಂಶೋಧನ ವಿದ್ಯಾರ್ಥಿ ಕನ್ನಡ ಅಧ್ಯಯನ ಸಂಸ್ಥೆ ಮಾನಸಗಂಗೋತ್ರಿ, ಮೈಸೂರು-6
ಬಸವರಾಜ ಸಬರದ	ಕನ್ನಡ ಪ್ರಾಧ್ಯಾಪಕರು, ಕರ್ನಾಟಕ ಕಾಮರ್ಸ್ ಕಾಲೇಜ, ಬೀದರ್
ಚೆನ್ನಕ್ಕ ಎಲಿಗಾರ	ಶ್ರೀ ಮೃತ್ಯುಂಜಯ ಕಲಾ ವಾಣಿಜ್ಯ ಮಹಾವಿದ್ಯಾಲಯ, ಧಾರವಾಡ
ಎಸ್. ವಿದ್ಯಾಶಂಕರ್	ಅಧ್ಯಾಪಕರು, ಕನ್ನಡ ಅಧ್ಯಯನ ಕೇಂದ್ರ ಜ್ಞಾನಭಾರತಿ, ಬೆಂಗಳೂರು 56

ಬಿ. ಆರ್. ಹಿರೇಮಠ	ಅಧ್ಯಾಪಕರು, ಕನ್ನಡ ಅಧ್ಯಯನ ಪೀಠ ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ
ಹ. ನಂ. ವಿಜಯಕುಮಾರ	ಬಸವಪಥ, ಬಸವಭವನ ಬಸವೇಶ್ವರ ಸರ್ಕಲ್, ಬೆಂಗಳೂರು
ಅರವಿಂದ ಮಾಲಗತ್ತಿ	ಕನ್ನಡ ಅಧ್ಯಯನ ಪೀಠ ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ
ಮಂ. ಮಾಧವ ಪೈ	ಆರನೆಯ ಎಡ ಅಡ್ಡರಸ್ತೆ ರವೀಂದ್ರನಗರ, ಶಿವಮೊಗ್ಗ
ಮ. ಲಿ. ಮ.	ಕೇರಾಫ್ ಸಂಪಾದಕರು, ಸಾಧನೆ ಕನ್ನಡ ಅಧ್ಯಯನ ಕೇಂದ್ರ ಜ್ಞಾನಭಾರತಿ, ಬೆಂಗಳೂರು 56
ಎಸ್. ಶಿವಣ್ಣ	ಸಂಪಾದಕರು, ಹಸ್ತಪ್ರತಿ ವಿಭಾಗ ಕನ್ನಡ ಅಧ್ಯಯನ ಕೇಂದ್ರ ಜ್ಞಾನಭಾರತಿ, ಬೆಂಗಳೂರು 56
ಗೋವಿಂದ ಜಾಲಿಹಾಳ	ಅಧ್ಯಾಪಕರು, ತತ್ತ್ವಶಾಸ್ತ್ರ ವಿಭಾಗ ಜ್ಞಾನಭಾರತಿ, ಬೆಂಗಳೂರು 56
ಎ. ಎಸ್. ವೇಣುಗೋಪಾಲರಾವ್	ಕನ್ನಡ ವಿಭಾಗ, ಡಿ. ವಿ. ಎಸ್. ಕಾಲೇಜು, ಶಿವಮೊಗ್ಗ
ವ್ಹಿ. ಎಸ್. ಕಂಬಿ	ಅಧ್ಯಾಪಕರು, ಕನ್ನಡ ಅಧ್ಯಯನ ಪೀಠ ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ
ಬಿ. ಎ. ಸನದಿ	ಆಕಾಶವಾಣಿ, ಬೊಂಬಾಯಿ

ನಮ್ಮ ನಿಯತಕಾಲಿಕಗಳು

ಸೃಜನಾತ್ಮಕ ಮತ್ತು ಸಂಶೋಧನಾತ್ಮಕ ಹಾಗೂ ಜನಪ್ರಿಯ ಬರಹಗಳಿಂದ ಕೂಡಿದ ಸಾಹಿತ್ಯಕ, ಮಾನವಿಕ ಮತ್ತು ವೈಜ್ಞಾನಿಕ ಕ್ಷೇತ್ರಗಳಿಗೆ ಮೀಸಲಾದ

ಸಾಧನೆ
ಕನ್ನಡ ತ್ರೈಮಾಸಿಕ
ವಾರ್ಷಿಕ ಚಂದಾ 8-00 ರೂ.
(ವಿದ್ಯಾರ್ಥಿಗಳಿಗೆ) 5-00 ರೂ.
ಆಜೀವ ಚಂದಾ ಹಣ 100-00 ರೂ.
ಗಳನ್ನು ಎರಡು ಕಂತುಗಳಲ್ಲಿ ಒಂದು ವರ್ಷದ ಅವಧಿಯಲ್ಲಿ ಪಾವತಿ ಮಾಡಬಹುದು.

ವಿಜ್ಞಾನ ಭಾರತಿ
ಇಂಗ್ಲಿಷ್ ಅರ್ಧವಾರ್ಷಿಕ
ವಾರ್ಷಿಕ ಚಂದಾ 10-00 ರೂ.

ವಿದ್ಯಾ ಭಾರತಿ
ಇಂಗ್ಲಿಷ್ ಅರ್ಧವಾರ್ಷಿಕ
ವಾರ್ಷಿಕ ಚಂದಾ 10-00 ರೂ.

ಜನಪ್ರಿಯ ವಿಜ್ಞಾನ
ಕನ್ನಡದ ಏಕೈಕ ವಿಜ್ಞಾನ ಮಾಸಿಕ
ವಾರ್ಷಿಕ ಚಂದಾ 12-00 ರೂ.
(ವಿಶ್ವವಿದ್ಯಾಲಯದ ಅಧ್ಯಾಪಕರು ಮತ್ತು ವಿದ್ಯಾರ್ಥಿಗಳಿಗೆ 6-00 ರೂ.

ವಿವರಗಳಿಗೆ ವ್ಯವಹರಿಸಿ :

ನಿರ್ದೇಶಕರು
ಪ್ರಸಾರಾಂಗ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು-560 056